ಸಂವಾದ

ಜನವರಿ ೨೦೦೫
ರೂ. ೧೦

ಮೆಕಾಲೆ ಮಹಾತ್ಮೆ

●

ಧರ್ಮ ನಿರಪೇಕ್ಷತೆ ಕಾರ್ಯಸಾಧುವೆ ?

●

ವಾಜಪೇಯಿ ಶೀರ್ಷಾಸನ ಭಾಜಪ ವ್ಯಸನ



ಅತ್ತೆ ಮನೆ ಸುತ್ತ ಮುತ್ತ

●

ಮತಾಂತರವೂ ವೈದಿಕರ ಕುತಂತ್ರವೂ

ಬಾಬಾ ದತ್ತರ

ಗಿರಿಕಾರಣ

ಸಂವಾದ
ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೩
ಜನವರಿ ೨೦೦೫

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ...



- ಪತ್ರಗಳು ೩
- ಝುನ್ ಝುಲಕ್ ೪
  - ಕೆ.ವಿ. ಸುಬ್ಬಣ್ಣ
- ಅಂತರಂಗ ೫
- ಧರ್ಮ ನಿರಪೇಕ್ಷತೆ ಕಾರ್ಯಸಾಧುವೆ ? ೬
  - ಪದ್ಮಾಲಯ ನಾಗರಾಜ್
- ವಾಜಪೇಯಿ ಶೀರ್ಷಾಸನ, ಭಾಜಪ ವ್ಯಸನ ೮
  - ನಾ. ದಿವಾಕರ

- ಮತಾಂತರವೂ, ವೈದಿಕರ ಕುತಂತ್ರವೂ ೧೩
  - ಡಾ|| ಮಲ್ಲಿಕಾ ಘಂಟಿ
- ಬಾಬಾ ದತ್ತರ ಗಿರಿಕಾರಣ ೧೬
  - ಪ್ರೊ|| ರಹಮತ್ ತರೀಕೆರೆ
- 'ಅತ್ತೆ ಮನೆ' ಸುತ್ತ ಮುತ್ತ ೨೬
  - ಡಾ|| ಶೈಲಜ ಹಿರೇಮಠ

೨೨ ಚರ್ಚೆ: ಜಲಯೋಜನೆ? ರಾಜಕಾರಣ

1. ಪ್ರೊ|| ಚಂದ್ರಶೇಖರ ಪಾಟೀಲ
2. ಡಾ|| ಎಲ್. ಬಸವರಾಜು
3. ಶಿವಸುಂದರ್

- ನಾಗರಿಕತೆಯ ಬೇರು ಹುಡುಕುತ್ತಾ... ೩೧
  - ಎಂ. ವೆಂಕಟಸ್ವಾಮಿ
- ದಲಿತ್ ಡೈರಿ :
  ಮೆಕಾಲೆ ಮಹಾತ್ಮೆ ೩೪
  - ಚಂದ್ರಭಾನ್ ಪ್ರಸಾದ್
- ಸಾಮಾನ್ಯ ಚಿತ್ರಕ್ಕೆ ಚಿನ್ನದ ಚೌಕಟ್ಟು ೩೮
  - ಪ್ರೊ|| ಶಿವರಾಮಯ್ಯ
- ಹೊಸ ಪುಸ್ತಕ ೪೧
- ವಿವೇಕಾನಂದರ ವಿಚಾರಗಳು ೪೨
  - ಜ.ಹೊ. ನಾರಾಯಣಸ್ವಾಮಿ

ಕವನಗಳು :
- ಗಾಢಮೌನದ ಇರುಳು - ೧೨
- ಎಲೆಯೊಂದು ಹಣ್ಣಾದಾಗ - ೨೫
- ಕಲ್ಲು ಬಿರುಕಿನಲಿ ಹುಟ್ಟಿದ ಆಲ - ೪೦
- ಕವಿತೆ - ೨೧
- ಕರ್ತವ್ಯ - ೩೩

ಮುಖಪುಟ ಕಲೆ: ಕೆ.ಟಿ. ಶಿವಪ್ರಸಾದ್ ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

'ಸಂವಾದ'ದ ಲೇಖನಗಳು ಸಂಶೋಧಿತ ಸತ್ಯ ಸಂಗತಿಗಳು

ಮಾನ್ಯ ಸಂಪಾದಕರಿಗೆ,

ಜೆ.ಎಸ್.ಮಲ್ಲಿಕಾರ್ಜುನ ಅವರು ಅನುವಾದಿತ 'ಸಮಾಜವಾದದ ಮುಂದಿನ ದಾರಿಗಳು' ಎಂಬ ಚಿಂತನಾತ್ಮಕ ಲೇಖನದಲ್ಲಿ ಶೋಷಣೆಯ ವಿಭಿನ್ನ ರೂಪಗಳ ಕುರಿತು ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಹಾಗೂ ಮನೋಜ್ಞವಾಗಿ ಮೂಡಿಬಂತು. 'Socialism is not a power politics, it is a people pressure politics' ಎನ್ನುವ ಸತ್ಯ ಲೇಖನದಿಂದ ವೇದ್ಯವಾಯಿತು.

೧೯೯೧ರಲ್ಲಿ ಹೊಸ ಆರ್ಥಿಕ ನೀತಿ ಅನುಷ್ಠಾನವಾದ ನಂತರ ಶೋಷಕರು ಸಂಘಟಿತರಾಗುತ್ತಿರುವುದು ಹಾಗೂ ಶೋಷಿತರು ವಿಘಟಿತರಾಗುತ್ತಿರುವುದು ವ್ಯವಸ್ಥೆಯ ಹುನ್ನಾರವೇ ಹೊರತು ಮತ್ತೇನು ಅಲ್ಲ. ಅಭಿವೃದ್ಧಿ ರಾಷ್ಟ್ರಗಳು (USA, UK) ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಅವಿರತವಾಗಿ ಅಡ್ಡಗಾಲು ಹಾಕಲು ಪ್ರಯತ್ನಿಸುತ್ತಿರುವುದು ನಿಜಕ್ಕೂ ವಿಪರ್ಯಾಸದ ವಿಷಯ.

ಸುರಕ್ಷಿತ ಯುವಕರನ್ನು ಶೋಷಣೆಯ ವಿರುದ್ಧ ಸಂಘಟಿತ ಸಮರಶೀಲ ಹೋರಾಟ ಮಾಡಲು ಅಣಿಗೊಳಿಸಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಇಂದು ಅಧಿಕ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟ ಲೇಖಕರಿಗೆ ಈ ದಿಟ್ಟ ಲೇಖನವನ್ನು ಪ್ರಕಟಿಸಿದ ಕ್ರಾಂತಿಯ ಕಿಡಿ, ದಲಿತರ ಧ್ವನಿಯಾದ 'ಸಂವಾದ'ದ ಸಂಪಾದಕರಿಗೆ ಸಂಶೋಧನಾ ವಿದ್ಯಾರ್ಥಿಯಾದ ನನ್ನ ಸಹಸ್ರ ಅಭಿನಂದನೆಗಳು.

'ಸಂವಾದ'ದಲ್ಲಿ ಪ್ರಕಟಿತಗೊಳ್ಳುವ ಪ್ರತಿಯೊಂದು ಲೇಖನ ಸಂಶೋಧಿತ ಸತ್ಯ ಸಂಗತಿಗಳು ಎನ್ನುವುದು ಸಂತೋಷದ ಸುವಿಚಾರವೇ ಸರಿ.

ಶರಣಪ್ಪ ಸೈದಾಪೂರ, ಗುಲಬರ್ಗಾ

ಪತ್ರಾಗಾರ



ಪ್ರಬುದ್ಧ ವಿಚಾರವುಳ್ಳ ಪತ್ರಿಕೆ

ಆತ್ಮೀಯ ಹಿರಿಯರಾದ ಇಂದೂಧರ ಹೊನ್ನಾಪುರ ಅವರಿಗೆ ನಮಸ್ಕಾರಗಳು.

ತಿಂಗಳಿಗೊಮ್ಮೆ ಹೊಸತನ ಹೊತ್ತು ತರುವ ಪ್ರಬುದ್ಧ ವಿಚಾರವುಳ್ಳ ಮಾಸಿಕ ಪತ್ರಿಕೆ 'ಸಂವಾದ'ಕ್ಕೆ ಹೊಸ ವರ್ಷದ ಶುಭಾಶಯಗಳು.

ಎಂ. ಎಂ. ಮೇತ್ರಿ, ಗುಲಬರ್ಗಾ

ಬಿಡುಗಡೆಯ ಪುಟ್ಟ ಓಣಿ 'ಸಂವಾದ'

ಪ್ರೀತಿಯ ಹೊನ್ನಾಪುರ,

'ಪಾಂಚಾಲಿ', 'ಪಂಚಮ' ಬರುತ್ತಿದ್ದಾಗ ಆಗುತ್ತಿದ್ದ ಆನಂದವೇ ಈಗಲೂ ಆಗುತ್ತಿದೆ. ಜನಪ್ರಿಯ ಪತ್ರಿಕೆಗಳಲ್ಲಿ ಸಿಗದ ಮಾಹಿತಿ ಇಂಥಾ ಪತ್ರಿಕೆಗಳಲ್ಲೇ ಸಿಗುವಂತ ದರಿದ್ರ ಪರಿಸ್ಥಿತಿ ಈಗಲೂ ಮುಂದುವರಿಯುತ್ತಿರುವುದು ದೊಡ್ಡ ವಿಷಾದವೇ. ನಾವೆಲ್ಲ ಒಂದು ರೀತಿಯಲ್ಲಿ ಸಿನಿಕರಾಗುತ್ತಿರುವ ಹೊತ್ತಿನಲ್ಲಿ 'ಸಂವಾದ' ಒಂದು ಬಿಡುಗಡೆಯ ಪುಟ್ಟ ಓಣಿಯಂತೆ ಕಾಣುತ್ತಿದೆ.

ನಿಮಗೆ ಒಳ್ಳೆಯದಾಗಲಿ,

ನಿಮ್ಮ

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಕುರುಡು ಭಕ್ತಿಯ ಬಗ್ಗೆ ಕಣ್ತೆರೆಸಿದ ಲೇಖನ

ಗೌರವಾನ್ವಿತ ಸಂಪಾದಕರೇ,

ದೇವಾಲಯಗಳು ಅಸಮಾನತೆಗೆ, ಪಾರತಂತ್ರ್ಯಕ್ಕೆ ಪರ್ಯಾಯ ಹೆಸರುಗಳು ಹೇಗೆ ಎಂಬುದನ್ನು 'ವಚನಕಾರರೇಕೆ ದೇವಾಲಯ ವಿರೋಧಿಗಳು ಲೇಖನ' ತಿಳಿಸಿಕೊಟ್ಟಿದೆ.

ದೇವಸ್ಥಾನಗಳ ಬಗ್ಗೆ ಕುರುಡು ಭಕ್ತಿ ಪ್ರದರ್ಶಿಸುವ, ಪ್ರದರ್ಶಿಸುವಂತೆ ಮಾಡಿರುವ ಸನಾತನವಾದಿಗಳ ವಿರುದ್ಧ ೧೨ನೇ ಶತಮಾನದಲ್ಲೇ ಬಂಡೆದ್ದು ಅದನ್ನು ವಿರೋಧಿಸಿದ ವಚನಕಾರರ ಉದ್ದೇಶ ಇಂದಿಗೂ ಈಡೇರದಿರುವುದು ನಮ್ಮ ದೇಶದ ದುರಂತವಲ್ಲದೆ ಮತ್ತೇನು ?

ಶಿವರಾಜ್, ಕೊಳ್ಳೇಗಾಲ

ಲಾರ್ಡ್ ಮೆಕಾಲೆ ಮೊದಲಿನ ಗಾಂಧಿಯೇ ?

ಪ್ರೀತಿಯ ಸಂಪಾದಕರಿಗೆ,

'ಸಂವಾದ'ದ ಡಿಸೆಂಬರ್-೦೪ರ ಸಂಚಿಕೆಯ ದಲಿತ್ ಡೈರಿಯಲ್ಲಿ ಪ್ರಕಟವಾದ ಲೇಖನಕ್ಕೆ ನನ್ನ ಪ್ರತಿಕ್ರಿಯೆ.

ಲಾರ್ಡ್ ಮೆಕಾಲೆ ಭಾರತದ ದೇಶೀ ಶಿಕ್ಷಣ ನೀತಿಯನ್ನು ವಿರೋಧಿಸಿ ಪಾಶ್ಚಾತ್ಯ ಶಿಕ್ಷಣವನ್ನು ಪರಿಚಯಿಸಿದ (ಅಪ) ಕೀರ್ತಿಗೆ ಪಾತ್ರನಾಗಿದ್ದಾನೆ.

ಭಾರತದಲ್ಲಿ ಪಾಶ್ಚಾತ್ಯ ಶಿಕ್ಷಣ ಜಾರಿಗೆ ಬರದೆ ದೇಶೀ ಶಿಕ್ಷಣವೇ ಮುಂದುವರಿದಿದ್ದರೆ ದಲಿತರು-ದಮನಿತರು ಇಂದಿಗೂ ಸನಾತನವಾದಿಗಳ ಗುರುಕುಲಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಈ ನಿಟ್ಟಿನಲ್ಲಿ ಪಾಶ್ಚಾತ್ಯ ಯೂರೋಪಿಯನ್ ಶಿಕ್ಷಣ ಪದ್ಧತಿಯನ್ನು ಭಾರತದಲ್ಲಿ ಅಳವಡಿಸಲು ಅಂದಿನ ಬ್ರಿಟಿಷ್ ಪಾರ್ಲಿಮೆಂಟ್‌ಗೆ ಅದರ ಅಗತ್ಯತೆಯನ್ನು ಮನಗಾಣಿಸಿ ಅದರಲ್ಲಿ ಸಫಲವಾದ ಮೆಕಾಲೆ, ದಬ್ಬಾಳಿಕೆಗೆ ಒಳಗಾಗಿದ್ದವರನ್ನು ವಿಮುಕ್ತಿಗೊಳಿಸಿದ್ದಾರೆ.

ಗಾಂಧೀಜಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರೆ, ಮೆಕಾಲೆ ದಲಿತ-ದಮನಿತರಿಗೆ ಸ್ವಾತಂತ್ರ್ಯವನ್ನು ತಂದುಕೊಟ್ಟರು ಎಂಬುದರಲ್ಲಿ ಎರಡು ಮಾತಿಲ್ಲ.

ಯತೀಶ್ ಕುಮಾರ್, ಬೆಂಗಳೂರು

ಪರ್ಯಾಯ : ನೆಮ್ಮದಿಯ ಬದುಕಿಗೆ ನಾಂದಿ

ಮಾನ್ಯರೆ,

ಪ್ರಸ್ತುತದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಪ್ರಜಾಸತ್ತೆಯನ್ನು ಮೆಟ್ಟಿ ನಿಂತು ತಂತಮ್ಮ ಸ್ವಹಿತಾಸಕ್ತಿಯಲ್ಲಿ ಮುಳುಗಿವೆ.

ಇದಕ್ಕೆ ವಿರುದ್ಧವಾಗಿ ಪರ್ಯಾಯ ರಾಜಕಾರಣದತ್ತ ನಾಡಿನ ಬುದ್ಧಿ ಜೀವಿಗಳು ಪರ್ಯಾಯ ರಾಜಕಾರಣದ ಕಡೆಗೆ ದಾವಿಸುತ್ತಿರುವುದು ಸಂತಸದ ಸಂಗತಿ.

ಪರ್ಯಾಯ ರಾಜಕೀಯ ಪಕ್ಷವು ಬೆಳೆದು ಬಹು ಕಾಲದಿಂದ ಬಳಲಿ ಬೆಂಡಾಗಿರುವ ಬಹುಜನ ದುಡಿವ ವರ್ಗಕ್ಕೆ ನೆಮ್ಮದಿಯ ಬದುಕಿಗೆ ನಾಂದಿಯಾಗಲೆಂದು ಆಶಿಸುತ್ತೇನೆ.

ವಂದನೆಗಳು,

ದುದ್ದ ಶ್ರೀನಿವಾಸ್, ಹಾಸನ

ವಿಚಾರಗಳ ಅಂಚಿನಲ್ಲಿ ನಿಲ್ಲಿಸಿದ ವಿಶ್ಲೇಷಣೆ

ಮಾನ್ಯರೆ,

ದಲಿತ ಚಳವಳಿ ಮತ್ತು ಗಾಂಧಿ ಚಿಂತನೆಗಳ ವಿಶ್ಲೇಷಣೆ 'ಸಂವಾದ'ದ ನಿರಂತರ ಓದುಗನಾದ ನನನ್ನು ವಿಚಾರಗಳ ಅಂಚಿಗೆ ಕೊಂಡೊಯ್ದು ನಿಲ್ಲಿಸಿತು.

ಗಾಂಧೀಜಿಯವರ ಚಿಂತನೆ ಮತ್ತು ಅವರ ಸದಾಶಯಗಳನ್ನು ದಲಿತ ಚಳವಳಿಗಳು ಸ್ವೀಕರಿಸಿರುವ ಬಗ್ಗೆ ಸೂಕ್ಷ್ಮ ಚಿಂತನೆಯನ್ನು ನಡೆಸಿ ನಮಗೆ ಉಣಬಡಿಸಿದ ಲೇಖಕರಿಗೆ ಅಭಿನಂದನೆಗಳು.

ಕಮಲ ತನಯ, ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೪೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ, ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ಝೆನ್ ಅವಲೋಕನ ಕಥಾ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಕೆಂಪು ದಾಡಿ

ಒಬಕು ಎಂಬ ಶಿಷ್ಯ, ಗುರು ಹ್ಯುಕುಜೊನ ಹತ್ತಿರ ಹೋಗಿ ಹೀಗೆ ಪ್ರಶ್ನೆ ಮಾಡಿದ-

'ಬಹಳ ಹಿಂದಿನ ಕಾಲದಲ್ಲೊಮ್ಮೆ ಒಬ್ಬ ಗುರು, ತನ್ನ ಶಿಷ್ಯರ ಪ್ರಶ್ನೆಗಳಿಗೆ ಉತ್ತರ ಕೊಡುವಾಗ, ಅಸತ್ಯವಾದ ಉತ್ತರಗಳನ್ನು ಕೊಟ್ಟ ಕಾರಣಕ್ಕಾಗಿ ಐದುನೂರು ಸಲ ನರಿಯ ಜನ್ಮದಲ್ಲಿ ಹುಟ್ಟಿಬಂದ ಎನ್ನುತ್ತಾರಲ್ಲವೆ ? ಈಗ ಒಬ್ಬ ಗುರುವಿದ್ದಾನೆ ಎನ್ನೋಣ. ಅಖಂಡವಾಗಿ ಪ್ರಶ್ನೆಗಳನ್ನು ಕೇಳುತ್ತಲೇ ಹೋದರೂ ಆತ, ಅವೆಲ್ಲಕ್ಕೂ ಝೆನ್ ಜ್ಞಾನದ ಸತ್ಯವಾದ ಉತ್ತರಗಳನ್ನೇ ಕೊಡುತ್ತಾನೆ ಎನ್ನೋಣ; ಅಂಥವನಿಗೆ ಏನಾಗುತ್ತದೆ?'

'ಉತ್ತರ ಕೊಡುತ್ತೇನೆ. ಇಲ್ಲಿ, ನನ್ನ ಹತ್ತಿರಕ್ಕೆ ಬಾ' ಎಂದ. ಹ್ಯುಕುಜೊ.

ಶಿಷ್ಯ, ನೇರ ಗುರುವಿನ ಸಮೀಪಕ್ಕೆ ನಡೆದ, ತಟ್ಟನೆ, ಗುರುವಿನ ಕೆನ್ನೆಗೆ ಬಲವಾಗಿ ಒಂದು ಏಟು ಬಿಗಿದ. ಗುರು ತನಗೆ ಕೊಡುವ ಉತ್ತರ ಇದೇ ಎಂದು ಶಿಷ್ಯ ಅರಿತುಕೊಂಡಿದ್ದ; ತಾನೇ ಅದನ್ನು ಗುರುವಿಗೆ ಕೊಟ್ಟ.

ಹ್ಯುಕುಜೊ ಗಹಗಹಿಸಿ ನಕ್ಕು ಹೀಗೆ ಹೇಳಿದ-

'ಪರ್ಶಿಯನ್ನರಿಗೆ ಕೆಂಪು ದಾಡಿಯಿರುತ್ತದೆ ಎಂದು ನನಗೆ ಯಾವತ್ತಿನಿಂದಲೂ ಗೊತ್ತಿತ್ತು. ಈಗ, ಕೆಂಪು ದಾಡಿಯಿರುವ ಒಬ್ಬ ಪರ್ಶಿಯನ್ ಗೊತ್ತಾಗಿದ್ದಾನೆ.'

ಚಿಂದಿ ಮಕ್ಕಳು

ಗುರು ಯಮಒಕ, ಖಡ್ಗ ಕಲೆಯಲ್ಲಿ ನಿಷ್ಣಾತನಾಗಿದ್ದ. ಸ್ವಯಂ ಚಕ್ರವರ್ತಿಯೇ ಆತನನ್ನು ತನಗೆ ಶಿಕ್ಷಣ ಕೊಡಲಿಕ್ಕಾಗಿ ಬರಮಾಡಿಕೊಳ್ಳುತ್ತಿದ್ದ. ಆದರೆ, ಯಮಒಕ ಸದಾಕಾಲವೂ ಚಿಂದಿಬಟ್ಟೆಯನ್ನೇ ತೊಟ್ಟಿರುತ್ತಿದ್ದ. ಇದಕ್ಕೆ ಕಾರಣ, ಆತ ತನ್ನ ಇಡೀ ಮನೆಯನ್ನು ಬಡಬಗ್ಗರಿಗಾಗಿ ತೆರೆದಿಟ್ಟಿದ್ದ. ತನ್ನಲ್ಲಿ ಏನಿದ್ದರೂ ಅದನ್ನು ಬಡಬಗ್ಗರಿಗೆ ಕೊಟ್ಟುಬಿಡುತ್ತಿದ್ದ.

ಯಮಒಕ, ಹೀಗೆ ದಿನವೂ ಹಳೆಯ ಚಿಂದಿಯನ್ನು ತೊಟ್ಟು ತನ್ನ ಹತ್ತಿರ ಬರುತ್ತಿದ್ದುದನ್ನು ಕಂಡು ಚಕ್ರವರ್ತಿಗೆ ಕಿರಿಕಿರಿಯುಂಟಾಯ್ತು. ಒಂದು ದಿನ ಆತ, ಗುರುವಿಗೆ ಒಂದಿಷ್ಟು ಬಂಗಾರದ ನಾಣ್ಯಗಳನ್ನು ಕೊಟ್ಟ. ಮಗನೇ, ಈ ನಾಣ್ಯಗಳಿಂದ ಹೊಸಬಟ್ಟೆ ಕೊಂಡುಕೋ' ಎಂದ. ಯಮಒಕ, ಚಕ್ರವರ್ತಿಗೆ ಕೃತಜ್ಞತೆ ಹೇಳಿ ನಡೆದ.

ಮಾರನೆಯ ದಿನ ಮತ್ತೆ ಆತ ಚಿಂದಿಯನ್ನೇ ತೊಟ್ಟು ಬಂದ, 'ಹೊಸ ಬಟ್ಟೆಗಳನ್ನು ಕೊಂಡುಕೊಳ್ಳಲಿಲ್ಲವೆ ?' ಎಂದು ಚಕ್ರವರ್ತಿ ಕೇಳಿದ.

ಗುರು ಹೇಳಿದ--

'ಕೊಂಡುಕೊಂಡೆ, ಮಹಾಸ್ವಾಮಿ. ಆದರೆ ನನ್ನಷ್ಟು ಶ್ರೀಮಂತಿಕೆಯಿಲ್ಲದ ಮಹಾಸ್ವಾಮಿಯವರ ಅಸಂಖ್ಯ ಮಕ್ಕಳಿದ್ದಾರಲ್ಲ. ಅವರಿಗೆ ಕೊಟ್ಟುಬಿಟ್ಟೆ.'

ಈಗ ಹೇಳಿ

ಗುರು ಶುಜನ್, ಮುಂದೆ ಕೂತಿದ್ದ ಭಿಕ್ಷುಗಳ ಎದುರು ತನ್ನ ದಂಡವನ್ನು ಎತ್ತಿ ಹಿಡಿದು ಗಾಳಿಯಲ್ಲಿ ಆಡಿಸಿದ.

ಕೇಳಿದ-

'ನೀವು ಇದನ್ನು ದಂಡ ಎಂದ ಪಕ್ಷದಲ್ಲಿ ಇದರ ಭವಿಷ್ಯದ ಅವಸ್ಥಾಂತರಗಳನ್ನು, ಎಂದರೆ, ಇದರ ಅನಂತ ಅಸ್ತಿತ್ವದ ಸತ್ಯವನ್ನು ಅಲ್ಲಗಳೆಯುತ್ತೀರಿ. ದಂಡ ಎನ್ನದೆ ಹೋದ ಪಕ್ಷದಲ್ಲಿ, ಇದರ ವರ್ತಮಾನ ಸ್ಥಿತಿಯನ್ನು ನಿರಾಕರಿಸುತ್ತೀರಿ. ಈಗ ಹೇಳಿ, ಇದನ್ನು ಏನೆನ್ನುತ್ತೀರಿ ?'



ತೇರಿನ ಹಾಡು

ಹೀಗೆ ಒಬ್ಬ ಹಾಡಿದ್ದಾನೆ-

ಜ್ಞಾನ ಎಲೆ ಎಲೆ ಬಿಚ್ಚಿ
ನಿಂತಿದೆ ನೋಡು ದೇವದಾರು
ಕೂಗಿತು ಹಕ್ಕಿ – ಸತ್ಯ ಮೊಳಗುವುದು
ಶೂನ್ಯದ ತೇರು.



ಅಂತರಂಗ

ಚಿಕ್ಕಮಗಳೂರಿನ 'ವಾರ್ಷಿಕ ಕ್ಷೋಭೆ'

ಚಿಕ್ಕಮಗಳೂರಿನ ಪ್ರಶಾಂತ ಗಿರಿಧಾಮ ಬಾಬಾಬುಡನಗಿರಿ 'ವಾರ್ಷಿಕ ಕ್ಷೋಭೆ'ಗೆ ಮತ್ತೆ ಸಿದ್ಧವಾಗುತ್ತಿದೆ. ವರ್ಷಕ್ಕೊಮ್ಮೆ ಬರುವ ಎಲ್ಲ ಉತ್ಸವಗಳಂತೆ ಈ 'ವಾರ್ಷಿಕ ಕ್ಷೋಭೆ'ಯ ಸಿದ್ಧತೆಗಳೂ ಭರದಿಂದ ಸಾಗಿವೆ. ಒಂದು ಕಡೆ ಸರ್ಕಾರದ ತಾಳವಾದರೆ, ಮತ್ತೊಂದೆಡೆ ಸಂಘ ಪರಿವಾರದ ವಾದ್ಯ. ಈ ತಾಳ-ವಾದ್ಯ ಕಚೇರಿಯ ರೌದ್ರಾವತಾರಕ್ಕೆ ಎಲ್ಲ ಮಾನವತಾವಾದಿಗಳು, ಧರ್ಮ ಪ್ರಿಯರು ದಂಗಾಗಿ ಹೋಗುತ್ತಿದ್ದಾರೆ.

ಆಳುವ ವರ್ಗ ಅಥವಾ ಸರ್ಕಾರ ಬೇಜವಾಬ್ದಾರಿಯಿಂದ ನಡೆದುಕೊಂಡರೆ ಏನೆಲ್ಲ ಅನಾಹುತಕ್ಕೆ ಕಾರಣವಾಗಬಹುದೆಂಬುದಕ್ಕೆ ಬಾಬಾಬುಡನಗಿರಿ ಉತ್ತಮ ಉದಾಹರಣೆ. ಬಾಬರಿ ಮಸೀದಿಗಾದ ಗತಿ ಬಾಬಾಬುಡನಗಿರಿಗೂ ಆಗುವುದಿಲ್ಲ ಎಂಬ ಖಾತ್ರಿಯೇನೂ ಈಗ ನಮ್ಮ ಮುಂದಿಲ್ಲ. ಆದರೆ ದುರಂತವೆಂದರೆ ಜಾತ್ಯಾತೀತ ಪಕ್ಷವೆಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಕಾಂಗ್ರೆಸ್ ಆಡಳಿತದಲ್ಲೇ ಈ ಎರಡೂ ದುರಂತಗಳು ಸಂಭವಿಸಿದ್ದು ಮಾತ್ರ ಕಾಕತಾಳೀಯವಲ್ಲ.

ರಾಜೀವ್‌ಗಾಂಧಿ ಪ್ರಧಾನಿಯಾಗಿದ್ದಾಗ ಮೊಟ್ಟಮೊದಲ ಬಾರಿಗೆ ಬಾಬರಿಮಸೀದಿ ಪ್ರದೇಶದಲ್ಲಿ ಶ್ರೀರಾಮನ ಪೂಜೆಗೆ ಅವಕಾಶ ಮಾಡಿಕೊಡದಿದ್ದರೆ ಬಹುಶಃ ಡಿಸೆಂಬರ್ ಆರರ ದುರಂತ ನಡೆಯುತ್ತಿರಲಿಲ್ಲ. ಅದೇ ರೀತಿ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿರುವಾಗ ಬಾಬಾಬುಡನಗಿರಿಯಲ್ಲಿ ದತ್ತ ಪೂಜೆಗೆ ಅವಕಾಶ ಮಾಡಿಕೊಡದಿದ್ದರೆ ಇಂದಿನ ಕ್ಷೋಭೆ ಹುಟ್ಟಿಕೊಳ್ಳುತ್ತಿರಲಿಲ್ಲ! ಕಾಂಗ್ರೆಸ್‌ನ ಅಂತರಂಗ ಕೋಮುವಾದಿಯಾದರೆ ಸಂಘ ಪರಿವಾರದ ಅಂತರಂಗ ಬಹಿರಂಗಗಳೆರಡೂ ಕೋಮು ವಿಷದಿಂದ ತುಂಬಿಹೋಗಿದೆ.

ಇದರ ಭೀಕರತೆ ಅರಿವಾಗಬೇಕಾದರೆ ಹಿರಿಯ ಸೇನಾಧಿಕಾರಿ ಮೇಜರ್ ಜನರಲ್ ಪರಮಜಿತ್‌ಸಿಂಗ್ ಅವರ ಮಾತುಗಳನ್ನೂ ಕೇಳಬೇಕು. ಕೆಲವು ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಅವರು 'ಕರ್ನಾಟಕದಲ್ಲಿ ಹರಿಯುತ್ತಿರುವ ಕೋಮುಶಕ್ತಿಗಳ ಅಂತರ್ ಪ್ರವಾಹ'ದ ಬಗೆಗೆ ವ್ಯಕ್ತಪಡಿಸಿದ ಆತಂಕ ಪ್ರಜ್ಞಾವಂತರೆಲ್ಲರ ನಿದ್ದೆಗೆಡಿಸಿದೆ. ಎಪ್ಪತ್ತರ ದಶಕದಿಂದೀಚೆಗೆ ನಿಧಾನಕ್ಕೆ ಕೋಮುವಾದಕ್ಕೆ ಹೊರಳುತ್ತಿರುವ ನಾಡಿನ ಸ್ಥಿತಿಗತಿಗಳನ್ನೂ ಸೂಕ್ಷ್ಮವಾಗಿ ಅವಲೋಕಿಸಿದರೆ ಇದರ ತೀವ್ರತೆ ಅರ್ಥವಾಗುತ್ತದೆ.

ಬಹುಶಃ ನಾಡಿನ ಸಾಮಾಜಿಕ ಚಳವಳಿಗಳು ಬಲಿಷ್ಠವಾಗಿದ್ದುದರಿಂದ ಮಾತ್ರ ಕೋಮುವಾದಿಗಳ ಹುನ್ನಾರವನ್ನು ಸಮರ್ಥವಾಗಿ ಇಷ್ಟು ಕಾಲ ತಡೆಹಿಡಿಯಲು ಸಾಧ್ಯವಾಯಿತು ಎನ್ನುವುದೇ ಈಗಿನ ಸಮಾಧಾನ. ದುರಂತವೆಂದರೆ, ಆಳುವ ಎಲ್ಲ ಪಕ್ಷಗಳೂ, ಎಲ್ಲಿ ಸರ್ಕಾರಗಳೂ ಪರೋಕ್ಷವಾಗಿ ಕೋಮುವಾದಿ ಶಕ್ತಿಗಳ ಪರವಾಗಿಯೇ ಕೆಲಸ ಮಾಡುತ್ತಿರುವುದು. ಸಮಸ್ಯೆಗಳನ್ನು ಎದುರಿಸುವ ಯಾವುದೇ ಸಿದ್ಧತೆ, ಕಾರ್ಯಕ್ರಮಗಳ ಬಗ್ಗೆ ಚಿಂತಿಸದ ಸರ್ಕಾರಗಳು ಪ್ರತಿಯೊಂದನ್ನು ಬೆಳೆಯಲು ಬಿಡುತ್ತವೆ. ಅದು ಬೆಳೆದು ಹೆಮ್ಮರವಾದಾಗ ಕೈಚೆಲ್ಲಿ ಜವಾಬ್ದಾರಿಯನ್ನು ಬೇರೆಯವರ ಮೇಲೆ ಹಾಕಿ, ಪರಿಸ್ಥಿತಿಯ ಲಾಭ ಗಳಿಸುವುದನ್ನಷ್ಟೇ ಯೋಚಿಸತೊಡಗುತ್ತವೆ.

ಬಾಬರಿ ಮಸೀದಿ ವಿವಾದದಲ್ಲಾದರೋ ಹಿಂದು-ಮುಸ್ಲಿಮರ ನಡುವೆ ನೇರ ಸಂಘರ್ಷವಿತ್ತು. ಆದರೆ ಬಾಬಾಬುಡನ್‌ಗಿರಿಯಲ್ಲಿ ಮುಸ್ಲಿಮರ ಪಾತ್ರವೇ ಇಲ್ಲ. ಬಾಬಾಬುಡನ್‌ಗಿರಿ ರಕ್ಷಿಸಿ ಎಂದು ಯಾವ ಮುಸ್ಲಿಮರೂ ಮೊರೆ ಇಡುತ್ತಿಲ್ಲ. ಸಂಪ್ರದಾಯಸ್ಥ ಮುಸ್ಲಿಮರಾರೂ ಬಾಬಾವನ್ನು ತಮ್ಮವನೆಂದು ಹೇಳಲು ಸಿದ್ಧರಿಲ್ಲ. ಅಷ್ಟರ ಮಟ್ಟಿಗೆ ಅವರು ಪ್ರಾಮಾಣಿಕರು. ಯಾಕೆಂದರೆ ಬಾಬಾ ಮುಸ್ಲಿಮರೊಳಗಿನ ಎಲ್ಲ ಅಧಾರ್ಮಿಕ, ಮೂಲಭೂತವಾದಿ ಚಿಂತನೆಗಳ ವಿರುದ್ಧ ಬಂಡೆದ್ದವನು. ಆದರೆ ಬಾಬಾನಂತೆಯೇ ಹಿಂದೂ ಧರ್ಮದೊಳಗಿನ ಅಮಾನವೀಯ ಚಿಂತನೆಯ ವಿರುದ್ಧ ಬಂಡೆದ್ದು ನಾಲ್ಕು ವೇದಗಳನ್ನು ನಾಲ್ಕು ನಾಯಿಗಳನ್ನಾಗಿ ಮಾಡಿ, ಅವುಗಳನ್ನು ತನ್ನ ಕಾಲಿಗೆ ಕಟ್ಟಿಕೊಂಡ ದತ್ತನೊಳಗೆ ಅದ್ಯಾವ ವೈದಿಕ ಸಂಸ್ಕೃತಿಯನ್ನು ಕಂಡು ಸಂಘ ಪರಿವಾರ ಹುಯಿಲಿಡುತ್ತಿದೆಯೋ ಅರ್ಥವಾಗುತ್ತಿಲ್ಲ.

ಆಷಾಢಭೂತಿತನವೇ ಬಂಡವಾಳವಾಗಿರುವ ಸಂಘಪರಿವಾರ, ಅಧಿಕಾರ ಹಿಡಿಯುವ ದುರಾಸೆಯಿಂದ ಜನರ ಭಾವನೆಯನ್ನು ಕೆರಳಿಸಿ ಅದನ್ನೇ ಬಂಡವಾಳ ಮಾಡಿಕೊಳ್ಳುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ದ್ವೇಷ, ಭಯ-ಆತಂಕಗಳನ್ನು ಹುಟ್ಟುಹಾಕಿ ಓಟು ಪಡೆಯುವ ಹುನ್ನಾರ ಅವರದು. ಇದೇ ಹುನ್ನಾರದಂತೆ ಸುಳ್ಳುಗಳ ಸಾಮ್ರಾಜ್ಯವನ್ನೇ ಕಟ್ಟಿ ಭಾರತವನ್ನು ಪ್ರಕಾಶಿಸಲು ಹೊರಟು ಮಣ್ಣು ಮುಕ್ಕಿದ್ದರೂ, ತನ್ನ ತಪ್ಪಿನ ಅರಿವಿನ್ನೂ ಸಂಘ ಪರಿವಾರಕ್ಕೆ ಆದಂತಿಲ್ಲ. ಆದರೆ ನಾಡಿನ ಜನ ಇಂಥ ಬಣ್ಣದ ಮಾತಿಗೆ ಈವರೆಗೆ ಸೊಪ್ಪು ಹಾಕದಿರುವುದೊಂದೇ ನೆಮ್ಮದಿಯ ವಿಚಾರ.

ಕನ್ನಡ ನಾಡಿಗೆ ತನ್ನದೇ ಪರಂಪರೆ ಇದೆ. ಅದು ಶಾಂತಿ-ನೆಮ್ಮದಿ-ಸಹ ಬಾಳ್ವೆಯ ಪರಂಪರೆ. ಅದನ್ನು ಉಳಿಸಬೇಕಾದ ಬಹುದೊಡ್ಡ ಜವಾಬ್ದಾರಿ ಇಂದು ಎಲ್ಲರ ಹೆಗಲ ಮೇಲಿದೆ. ಮಲೆನಾಡು ಹಿಂದಿನಿಂದಲೂ ಇಂಥ ಸೌಹಾರ್ದತೆಗೆ ಹೆಸರಾದುದು. ಕುವೆಂಪು, ಗೋಪಾಲಗೌಡರಂಥ ಮಹಾ ದಾರ್ಶನಿಕ ಮುತ್ಸದ್ದಿಗಳನ್ನು ನಾಡಿಗೆ ಕೊಟ್ಟಿದ್ದು ಮಲೆನಾಡು. ಅಲ್ಲಿ ನೆಮ್ಮದಿಯನ್ನು ಪುನರ್ ಸ್ಥಾಪಿಸುವ ಕೆಲಸವನ್ನು ಸರ್ಕಾರ ಆದ್ಯತೆಯ ಮೇಲೆ ಮಾಡಬೇಕು. ಹಾಗೆ ಮಾಡಲೇಬೇಕಾದಂತ ಒತ್ತಡವನ್ನು ಎಲ್ಲ ಜನಪರ ಚಳವಳಿಗಳು ಸೃಷ್ಟಿಸಬೇಕು.

ಇವೆಲ್ಲಕ್ಕೂ ಮಿಗಿಲಾದದ್ದು, ಬಾಬಾಬುಡನಗಿರಿಯನ್ನು ಕೇವಲ ಮಾನವೀಯ ನೆಲೆಗಟ್ಟಿನ 'ಅನುಭಾವಿ ಗಿರಿ'ಯನ್ನಾಗಿ ಕಾಪಾಡಿಕೊಳ್ಳುವುದು. ಅದು ಎಲ್ಲ ಲೌಕಿಕ 'ಧರ್ಮ'ಗಳನ್ನು ಮೀರಿದ್ದು. ಕೇವಲ ಪ್ರೀತಿ, ವಿಶ್ವಾಸ, ಕರುಣೆ, ಮಾನವೀಯತೆಗೆ ಮಾತ್ರ ಅಲ್ಲಿ ಜಾಗ. ಬಾಬಾ-ದತ್ತರಿಗೆ ಅದೇ ನಿಜವಾದ ಗೌರವ.

❍ ಇಂದೂಧರ ಹೊನ್ನಾಪುರ



ಧರ್ಮ ನಿರಪೇಕ್ಷತೆ ಕಾರ್ಯಸಾಧುವೆ ?

ಜಿಜ್ಞಾಸೆ

ಬಹುತೇಕ ದಲಿತ ಚಿಂತನಾಸಕ್ತರು ಅಂಬೇಡ್ಕರರನ್ನು ಕಾರ್ಲ್‌ಮಾರ್ಕ್ಸ್‌ರೊಂದಿಗೆ ಗಾಢವಾಗಿ ಭಾವಿಸುವಷ್ಟು ಬುದ್ಧನೊಂದಿಗೆ ಭಾವಿಸಲಾರರು. ಏಕೆಂದರೆ ಬುದ್ಧನೆಂದರೆ ಅಹಿಂಸೆ ಎಂದು ಮಾತ್ರ ಅರ್ಥೈಸಿಕೊಳ್ಳಲಾಗುತ್ತದೆ. ವಿಪರ್ಯಾಸವೆಂದರೆ ಬಹುತೇಕ ದಲಿತರು ಧರ್ಮದಲ್ಲೇನಿದೆ? ನಮಗೆ ಯಾವುದೇ ಧರ್ಮ ಬೇಕಿಲ್ಲ, ನಮ್ಮದು ಸ್ವಾಭಾವಿಕ ಮಾನವ ಧರ್ಮ ಎಂದು ಕುತರ್ಕ ಮಾಡುತ್ತಾರೆ. 'ಧರ್ಮದಲ್ಲಿ ಏನಿದೆ ? ಎಂದು ಪ್ರಶ್ನಿಸುವವರು ವಿದ್ಯುತ್ ತಂತಿಯನ್ನು ಉಪೇಕ್ಷಿಸಿದಂತೆ' ಎಂದು ಹೇಳಿರುವ ಅಂಬೇಡ್ಕರ್ ಕಾರ್ಲ್‌ಮಾರ್ಕ್ಸ್ ಮತ್ತು ಬುದ್ಧನ ಸಾಧನೆಗಳಲ್ಲಿ ಯಾರ ಸಾಧನೆಗಳು ಹೆಚ್ಚು ಕಾಲ ಬಾಳಬಲ್ಲವು ಎಂಬುದನ್ನು ತಾವೇ ಆಯ್ಕೆ ಮಾಡಿ ಹೇಳಿದ್ದಾರೆ.

○ ಪದ್ಮಾಲಯ ನಾಗರಾಜ್

ಮಹಿಳಾ ಶೋಷಣೆಯ ಪ್ರಮುಖ ವಿಚಾರಗಳಾದ ವಿಧವಾ ವಿವಾಹ, ವಿಚ್ಛೇದಿತ ಮಹಿಳೆಯ ಪುನರ್ವಿವಾಹ, ಕನ್ಯತ್ವವನ್ನು ಕಳೆದುಕೊಂಡ ಕಳಂಕಿತಳ ವೈವಾಹಿಕ ಸಂಬಂಧ, ಮತ್ತು ಜಾತಿ ನಿರ್ಬಂಧ, ಮೌಢ್ಯತೆ ಇತ್ಯಾದಿ ವಿಚಾರಗಳು ಭಾರತೀಯ ಮನಸ್ಸುಗಳಿಗೆ ಅಪಥ್ಯವಾದ ಸರ್ವಕಾಲಿಕ ಸತ್ಯಗಳು.

ಸತ್ಯ ಎನ್ನುವುದು ದೇದೀಪ್ಯಮಾನವಾದ ಬೆಂಕಿ ಕೆಂಡವಿದ್ದ ಹಾಗೆ. ನಾವದನ್ನು ತೋರಿಕೆಗಾಗಿ ಬಟ್ಟೆಯಲ್ಲಿ ಮುಚ್ಚಿಡಲು ಪ್ರಯತ್ನಿಸಿದರೆ ಅದು ಮಡಿಲನ್ನೇ ಸುಟ್ಟು ಹಾಕುತ್ತದೆ. ಇಲ್ಲಿ ಸಾಮಾನ್ಯನಿಂದ ಹಿಡಿದು ವಿಚಾರವಾದಿಯೆನಿಸಿಕೊಂಡವರೂ ತಮ್ಮ ಮನಸಾಕ್ಷಿಯೊಂದಿಗೆ ಸತ್ಯದೊಡನೆ ಸಿಕ್ಕಿ ಸುಟ್ಟುಕೊಳ್ಳುವುದು ಹೀಗೆ...

ನಮ್ಮ ಸಹೋದರಿ ಅಥವಾ ಮಗಳು ಆಕಸ್ಮಿಕವಾಗಿ ವಿಧವೆಯಾದಳೆಂದುಕೊಳ್ಳೋಣ. ನಮ್ಮ ಹೃದಯದಂತರಾಳದಲ್ಲಿ ಅವಳು ಪುನರ್ವಿವಾಹಕ್ಕೆ ಅಯೋಗ್ಯಳೆಂಬುದನ್ನು ಒತ್ತಿ ಹೇಳುತ್ತಿರುತ್ತದೆ. ನಮ್ಮದೇ ಮನೆಯಲ್ಲಿ ವಿಚ್ಛೇದಿತಳಿದ್ದರೂ ಅಷ್ಟೇ ನಮ್ಮ ದೃಷ್ಟಿಯಲ್ಲಿ ಕಳಂಕಿತಳೇ ವಿನಃ ಪುನರ್ಜೀವನಕ್ಕೆ ಅಹಿತಳೆಂಬ ಭಾವನೆ ನಮ್ಮಲ್ಲಿ ಪ್ರತಿಧ್ವನಿಸುತ್ತಿರುತ್ತದೆ.

ಗುಣವಾಗದೇ ಇರುವ ರೋಗ ಬಂದು ಎಲ್ಲಾ ಚಿಕಿತ್ಸೆಗಳೂ ಕೈಕೊಟ್ಟವೆಂದು ಭಾವಿಸೋಣ. ಇಂತಹ ಸಮಯದಲ್ಲಿ ಸ್ನೇಹಿತನೋ, ಬಂಧುವೋ ಎಲ್ಲೋ ಇರುವ ಗುಡಿಯ ಮಹಿಮೆ ಬಗ್ಗೆಯೋ... ದೇವರ ಲೀಲಾ ವಿಲಾಸದ ಬಗ್ಗೆಯೋ... ಮಾಂತ್ರಿಕನ ಬಗ್ಗೆಯೋ... ಅನಧಿಕೃತ ವೈದ್ಯನ ಅತಿಮಾನವ ಶಕ್ತಿಯ ಬಗ್ಗೆಯೋ... ಇಲ್ಲ ಸೊಲ್ಲದ್ದನ್ನು ಸೇರಿಸಿ ಹೇಳಿದ್ದಾನೆಂದರೆ ಆಗ ಎಂತಹ ವಿಚಾರವಾದಿಯೇ ಆಗಲಿ ತನ್ನೆಲ್ಲಾ ವಿಚಾರಗಳನ್ನು ಬದಿಗಿಟ್ಟು ವೈದ್ಯನ ಹತ್ತಿರವಾಗಲಿ, ಗುಡಿಗಾಗಲಿ ಓಡಿ ಹೋಗಲೇಬೇಕು.

ಜಾತಿಯ ಬಗ್ಗೆ ವಿರೋಧ ಭಾವ ತಳೆಯುತ್ತಾ ಇದರ ಬಗ್ಗೆ ಪಾಂಡಿತ್ಯ ಪೂರ್ಣವಾಗಿ ಮಾತನಾಡುವ ವ್ಯಕ್ತಿಗಳೇ ಆಗಿದ್ದರೂ ತನ್ನ ಸಹೋದರಿ ಸಹೋದರ ಅಥವಾ ಸ್ವಂತ ಮಕ್ಕಳಾಗಲಿ ಅಂತರ್ಜಾತಿಯೊಂದಿಗೋ, ಆರ್ಥಿಕವಾಗಿ ಹಿಂದುಳಿದವರೊಂದಿಗೋ ವೈವಾಹಿಕ ಸಂಬಂಧಗಳನ್ನು ಬೆಳೆಸಲು ಪ್ರಾರಂಭಿಸಿದಾಗಲಂತೂ ಅಂಜಿ, ಅಳುಕಿ ಅನುಮಾನಗಳ ಸುಳಿಯಲ್ಲಿ ಬೆಂದು ಹೋಗಲೇಬೇಕು. ರೋಗಗ್ರಸ್ತನಾದವನಿಗೆ ಊಟ ಕಂಡಾಗ ಅಸಹ್ಯವಾಗುವಂತೆ ಇಂತಹ ಸಂದರ್ಭಗಳು ಭಾರತೀಯನಿಗೆ ಅಸಹನೀಯವಾಗುವುದೇ ಹೆಚ್ಚು. ಪುಟಗಟ್ಟಲೇ ಸ್ತ್ರೀ ಸಮಾನತೆ ಬಗ್ಗೆ ಓದಿಕೊಂಡಿರುವವರೂ ತಮ್ಮ ಮನೆಯಲ್ಲಿ ಮಹಿಳೆಯನ್ನು 'ದುಷ್ಟ ಸಮಾಜದ ನೆಪವೊಡ್ಡಿಯಾದರೂ' ನಿರ್ಬಂಧಿಸುತ್ತಾರೆ.

ಏಕೆ ಹೀಗೆ ? ಎಂಬ ಪ್ರಶ್ನೆ ಬಂದಾಗ ನಮ್ಮಲ್ಲಿರುವ ಒಂದೇ ಉತ್ತರ! ಈ ಹಾಳು ವ್ಯವಸ್ಥೆ! ಹಾಗಾಗಿ ಈ ವ್ಯವಸ್ಥೆಯ ಮುಂದೆ ಬಹುಶಃ ಎಲ್ಲಾ ಪ್ರಗತಿಪರ ವೈಚಾರಿಕ ಚಿಂತನೆಗಳು ನೆಪವಾಗಿ ಮುಂದುವರಿಯುತ್ತವೆ.

ಈ ಕೆಳಗಿನ ಉದಾಹರಣೆಯನ್ನು ಗಮನಿಸಿ. ನಮ್ಮ ದೇಹವು ಕೋಟ್ಯಾನುಕೋಟಿ ಜೀವಕೋಶಗಳ ನಿಯಮಬದ್ಧ ಜೋಡಣೆಯಿಂದ ರೂಪುಗೊಂಡಿದೆಯಾದರೂ ನಮ್ಮ ದೇಹದಲ್ಲಿನ ವ್ಯವಸ್ಥೆಯೇ ತನ್ನಲ್ಲಿರುವ ಎಲ್ಲಾ ಜೀವಕೋಶಗಳಿಗೆ ಪ್ರಾಣ ವಾಯು (ಆಮ್ಲಜನಕ) ಮತ್ತು ಪೋಷಕಾಂಶಗಳನ್ನು ನೀಡಿ ಜೀವಕೋಶಗಳು ಮತ್ತು ಶರೀರ ಒಟ್ಟಿಗೆ ಬದುಕಿರುವಂತೆ ಮಾಡುತ್ತದೆ. ಇದೊಂದು Self service system (ಸ್ವಸಹಾಯ ನಿಯಮ) ವಿದ್ದಂತೆ ಈ ವಿಧಾನದಲ್ಲೇ...

ವ್ಯಕ್ತಿಗಳಿಂದ ರೂಪುಗೊಂಡ ಈ ಸಮಾಜವೆಂಬ ವ್ಯವಸ್ಥೆಯು ವ್ಯಕ್ತಿಗಳಿಗೆ ಸಂಸ್ಕೃತಿಯ ನೆಪವೊಡ್ಡಿ ತಲೆಬುಡ ಇಲ್ಲದ ಆಚರಣೆಗಳನ್ನು ಧರ್ಮದ ಮೂಲಕ ನೀಡಿ ವ್ಯಕ್ತಿ ಮತ್ತು ಸಮಾಜ ಒಟ್ಟಿಗೆ ಶಾಶ್ವತವಾಗಿ ಧರ್ಮದೊಂದಿಗೆ ಜೀವಿಸುವಂತೆ ಮಾಡುತ್ತದೆ.

ಅತ್ಯಂತ ಸೂಕ್ಷ್ಮ ಕಣವಾಗಿರುವ ಜೀವಕೋಶದಲ್ಲಿನ ವರ್ಣತಂತು (ಕ್ರೋಮೋ ಸೋಮ್) ಗಳಲ್ಲಿರುವ ವಂಶವಾಹಿನಿಗಳು ಗುಣ, ರೋಗ ಹಾಗೂ ರೋಗ ನಿರೋಧಕ ಸಾಮರ್ಥ್ಯವನ್ನು ತಂದೆಯಿಂದ ಮಗನಿಗೆ ವರ್ಗಾಯಿಸುವಂತೆ ಭಾರತೀಯನ ಮನೋಪಟಲದಲ್ಲಿ ಅತ್ಯಂತ ಸಂಕೀರ್ಣವಾಗಿ ಬೇರು ಬಿಟ್ಟಿರುವ ಆಚರಣೆಗಳು, ಪದ್ಧತಿಗಳು, ಪಿಡುಗುಗಳು ಹಾಗೂ ಧರ್ಮಶಾಸ್ತ್ರಗಳು ಪರಂಪರೆಯಿಂದ ಪರಂಪರೆಗೆ ಭೂತದಿಂದ ವರ್ತಮಾನಕ್ಕೆ ಧಾರ್ಮಿಕ ಭಾವನೆಗಳ ಮೂಲಕ ವರ್ಗಾಯಿಸಲ್ಪಡುತ್ತವೆ.

'ಮನುಸ್ಮೃತಿ' ಎಂಬುದೊಂದು ಧರ್ಮಶಾಸ್ತ್ರವಿದೆ, ಅದು ಸಂಸ್ಕೃತದ ಪುಸ್ತಕ ಎಂಬುದು ಬಹುಶಃ ಭಾರತೀಯರಿಗೆ ತಿಳಿದೇ ಇಲ್ಲ ಮತ್ತು ಅದನ್ನು ಯಾರೂ ಓದಿದ್ದೂ ಇಲ್ಲ. ಮನುವು ಬರೆದ ಶಾಸನ ಕಾಲಗರ್ಭದಲ್ಲಿ ಸಾವಿರಾರು ವರ್ಷಗಳ ನಂತರವೂ ಭಾರತೀಯರ ಮನಸ್ಸಿನಲ್ಲಿ ಎಷ್ಟು ಪರಿಣಾಮಕಾರಿಯಾಗಿದೆಯೆಂದರೆ ಜಾತಿಯನ್ನಾಗಲಿ, ಅಸಮಾನತೆಯನ್ನಾಗಲಿ, ಮಹಿಳೆಯರ ಬಗ್ಗೆ ಇರುವ ಕೀಳು ಅಭಿಪ್ರಾಯವಾಗಿರಲಿ, ಮೌಢ್ಯತೆಯಾಗಲಿ, ಇವೆಲ್ಲವುಗಳ ಬಗ್ಗೆ ನಮ್ಮ ಜನರಿಗೆ ಇರುವ ಅಪಥ್ಯ ಮನೋಸ್ಥಿತಿಯನ್ನು ಮೊದಲು ಕಲ್ಪಿಸಿಕೊಂಡು ಜನರಿಗೆ ಕೊಡುಗೆಯಾಗಿ ನೀಡಿದವರಲ್ಲಿ ಮನುವೇ ಪ್ರಪ್ರಥಮನು. ಚರಿತ್ರೆಗಳಿಂದ ಪ್ರಭಾವ ಕ್ಕೊಳಪಟ್ಟು ವರ್ತಮಾನದಲ್ಲಿ ಭಾರತೀಯ ಮನಸ್ಸುಗಳು ಮನುಸ್ಮೃತಿಗಳಾಗಿ ರೂಪುಗೊಳ್ಳುತ್ತದೆ. 'ಮನುಸ್ಮೃತಿ' ಎಂಬ ಪದವೇ ಹೇಳುವಂತೆ 'ಸ್ಮೃತಿ' ಎಂದರೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿರುವುದು ಎಂದರ್ಥ.

ಸ್ಥಳಾವಾಕಾಶದ ಸಮಸ್ಯೆಯ ಕಾರಣದಿಂದ ಹೇಳುವುದಾದರೆ 'ಪ್ರಸ್ತುತ ಸಮಾಜದಲ್ಲಿ ಯಾವ್ಯಾವ ಸಾಮಾಜಿಕ ಸಮಸ್ಯೆಗಳನ್ನು 'ವೈಚಾರಿಕ ಚಿಂತನೆಗಳು' ಗಂಟಾ ಘೋಷವಾಗಿ ಅಲ್ಲಗಳೆಯುವುವೋ ಅವೆಲ್ಲವುಗಳನ್ನು ಜಾಗ್ರತೆಯಿಂದ ಮನಸ್ಸಿನಲ್ಲಿಟ್ಟುಕೊಂಡು ಪಾಲಿಸಬೇಕೆಂದು ಮನು ಶಾಸನ ವಿಧಿಸಿದನು.'

ಈ ಕಾರಣಗಳಿಗಾಗಿಯೇ ಡಾ|| ಬಿ.ಆರ್. ಅಂಬೇಡ್ಕರರು 'ಮನುಸ್ಮೃತಿ'ಯನ್ನು ಸಾಮೂಹಿಕವಾಗಿ ಮತ್ತು ಸಾಂಕೇತಿಕವಾಗಿ ಭಸ್ಮ ಮಾಡಿದರು. ಇದೊಂದು ಗ್ರಂಥವಾಗಿದಿದ್ದರೆ ಖಂಡಿತವಾಗಿ ಬಾಬಾ ಸಾಹೇಬರು ಇದನ್ನು ಸುಡುತ್ತಿರಲಿಲ್ಲ. ಕೇವಲ ಒಂದು ಪುಸ್ತಕವು ಒಂದು ಬೃಹತ್ ವ್ಯವಸ್ಥೆಯಾಗಿ ರೂಪುಗೊಂಡು ಇಡೀ ಭಾರತವನ್ನು ಅಮಾನವೀಯ ಜ್ಞಾನಿಗಳು ನಾಚಿಕೆ ಪಡುವಂತೆ ಮಾಡಿತ್ತು.

ಇಲ್ಲಿ ಬಹಳ ಮುಖ್ಯವಾದ ಎರಡು ಪ್ರಶ್ನೆಗಳು ಏಳುತ್ತವೆ. ಈ ರೀತಿ ಮಾಡಿದ ಬಾಬಾ ಸಾಹೇಬರ ಸ್ಪಷ್ಟ ಉದ್ದೇಶ ಮತ್ತು ಮಹತ್ವಾಕಾಂಕ್ಷೆ ಏನು? ಊಹಿಸುವುದು ಕಷ್ಟವೇನೂ ಅಲ್ಲ. ೧. ಮೊದಲು ನಮ್ಮ ಅಂತರಾಳದಲ್ಲಿ ಬೇರು ಬಿಟ್ಟಿರುವ ಅನಾಮಿಕ ಮನುವನ್ನು ಜ್ಞಾನದ ಪ್ರಖರತೆಯಿಂದ ಸುಟ್ಟು ಭಸ್ಮ ಮಾಡುವುದು ೨. ಭಸ್ಮಗೊಂಡ ಜಾಗಕ್ಕೆ ಪರ್ಯಾಯವಾದ ಒಂದು ಮಾನವತಾ ವ್ಯವಸ್ಥೆಯನ್ನು ರೂಪಿಸುವುದು, ಪರ್ಯಾಯ ಮಾನವತಾ ವ್ಯವಸ್ಥೆಯಾಗಿ ಬೌದ್ಧ ಧರ್ಮವನ್ನು ಕಂಡುಕೊಂಡರು. ಮೀಸಲಾತಿಯಡಿಯಲ್ಲಿ ಅವಕಾಶಗಳಿಂದಾಗಿ ಆರ್ಥಿಕವಾಗಿ ಸಬಲಗೊಂಡ ದಲಿತ ಸಮೂಹ ಮುಂದೊಂದು ದಿನ ಶಿಕ್ಷಣ, ಸಂಘಟನೆ, ಹೋರಾಟಗಳನ್ನು ಮೂಲ ಮಂತ್ರಗಳನ್ನಾಗಿಸಿ ಕೊಂಡು, ಹಿಂದೂ ವ್ಯವಸ್ಥೆಯ ಬಗ್ಗೆ ಸೃಜನಾತ್ಮಕವಾದ ಚಳವಳಿಯನ್ನು ರೂಪಿಸಬಹುದೆಂಬ ಅವರ ಕನಸನ್ನು ದಲಿತ ಚಳವಳಿಗಳು ಸಂಪೂರ್ಣವಾಗಿ ಹುಸಿಯಾಗಿಸಿದವು. ಇದಕ್ಕೊಂದು ಸ್ಪಷ್ಟವಾದ ಸಾಕ್ಷಿ ದಲಿತರಿಗೆ ಧರ್ಮದ ಬಗೆಗಿನ ನಿರಪೇಕ್ಷೆ.

ಇಲ್ಲಿಯವರೆಗಿನ ಬಹುತೇಕ ದಲಿತ ಚಿಂತನಾಸಕ್ತರು ಅಂಬೇಡ್ಕರರನ್ನು ಕಾರ್ಲ್‌ಮಾರ್ಕ್ಸ್‌ರೊಂದಿಗೆ ಗಾಢವಾಗಿ ಭಾವಿಸುವಷ್ಟು ಬುದ್ಧನೊಂದಿಗೆ ಭಾವಿಸಲಾರರು. ಏಕೆಂದರೆ ಬುದ್ಧನೆಂದರೆ ಅಹಿಂಸೆ ಎಂದು ಮಾತ್ರ ಅರ್ಥೈಸಿಕೊಳ್ಳಲಾಗುತ್ತದೆ. ಇದೊಂದು ದೊಡ್ಡ ದುರಂತವೇ ಸರಿ. ವಿಪರ್ಯಾಸವೆಂದರೆ ಬಹುತೇಕ ದಲಿತರು ಧರ್ಮದಲ್ಲೇನಿದೆ? ನಮಗೆ ಯಾವುದೇ ಧರ್ಮ ಬೇಕಿಲ್ಲ, ನಮ್ಮದು ಸ್ವಾಭಾವಿಕ ಮಾನವ ಧರ್ಮ ಎಂದು ಕುತರ್ಕ ಮಾಡುತ್ತಾರೆ. 'ಧರ್ಮದಲ್ಲಿ ಏನಿದೆ ? ಎಂದು ಪ್ರಶ್ನಿಸುವವರು ವಿದ್ಯುತ್ ತಂತಿಯನ್ನು ಉಪೇಕ್ಷಿಸಿದಂತೆ' (-ಅಂಬೇಡ್ಕರ್). ಮುಖ್ಯವಾಗಿ ಕಾರ್ಲ್‌ಮಾರ್ಕ್ಸ್‌ರ ಸಾಧನೆಗಳು ಮತ್ತು ಬುದ್ಧನ ಸಾಧನೆಗಳು. ಇವೆರಡರಲ್ಲಿ ಯಾರ ಸಾಧನೆಗಳು ಹೆಚ್ಚು ಕಾಲ ಬಾಳಬಲ್ಲವು ಎಂಬುದನ್ನು ಬಾಬಾಸಾಹೇಬರೇ ಆಯ್ಕೆ ಮಾಡಿ ಹೇಳಿದ್ದಾರೆ.

'ಮಾರ್ಕ್ಸ್ ಸಿದ್ಧಾಂತ ೧೯ನೇ ಶತಮಾನದ ಭಾಗದಲ್ಲಿ ಪ್ರತಿಪಾದಿತವಾಯಿತು. ಅಂದಿನಿಂದಲೂ ಅದು ತುಂಬಾ ಟೀಕೆಗೆ ಗುರಿಯಾಗಿದೆ. ಈ ಟೀಕೆಯ ಫಲವಾಗಿ ಕಾರ್ಲ್ ಮಾರ್ಕ್ಸ್ ಕಟ್ಟಿದ ವಿಚಾರ ಸೌಧ ಬಹುಪಾಲು ಛಿದ್ರವಾಗಿದೆ. ನನ್ನ ಸಮಾಜವಾದ ಅನಿವಾರ್ಯ ಎಂದು ಹೇಳಿದ ಮಾರ್ಕ್ಸ್‌ನ ಮಾತು ಸಂಪೂರ್ಣವಾಗಿ ಇಂದು ಸುಳ್ಳಾಗಿದೆ' (-ಅಂಬೇಡ್ಕರ್ ಸಂ.೩, ಪು. ಸಂ. ೬೮೩) ಏಕೆಂದರೆ 'ತನ್ನ ಸಮಾಜದ ವಾದವು ವೈಜ್ಞಾನಿಕವಾದುದು, ಕಾಲ್ಪನಿಕವಲ್ಲ ಎಂಬ ವಾದವನ್ನು ಸ್ಥಾಪಿಸುವುದನ್ನು ಬಿಟ್ಟರೆ ಅವನು ಪ್ರತಿಪಾದಿಸಿದ ಎಲ್ಲಾ ವಾದಗಳಿಗೂ ಬೇರೆ ಗುರಿಗಳೇ ಇರಲಿಲ್ಲ' (ಅಂಬೇಡ್ಕರ್ ಸಂ. ೩.. ಪು. ಸಂ. ೬೩೪).

ಇಂದಿನ ದಲಿತ ಚಳವಳಿಕಾರರ ಧರ್ಮ ನಿರಪೇಕ್ಷತೆಯನ್ನು ಹಿಂದೂ ಪೌರೋಹಿತ್ಯಶಾಹಿಯು ಹೇಗೆ ಗುಗ್ಗು ಮಾಡಿ ದಬ್ಬಾಳಿಕೆ ನಡೆಸುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲೇಬೇಕು.

ಇಲ್ಲಿ ನಾವು ಬಹಳ ಅನಿವಾರ್ಯವಾದ ಸತ್ಯವನ್ನು ಗ್ರಹಿಸಬಹುದು. ಅದೇನೆಂದರೆ ಅಧಿಕಾರ ಗದ್ದುಗೆಗಳು ಮತ್ತು ಆರ್ಥಿಕ ಮೌಲ್ಯಗಳಿಗೆ ನಿರ್ದಿಷ್ಟ ಗುರಿಗಳು ಇಲ್ಲದೇ ಹೋದಲ್ಲಿ ಅವು ಸರ್ವಾಧಿಕಾರಿಗಳಾಗಿ ಅಥವಾ ಅರಾಜಕತೆಗಳಾಗಿ ಪರಿಣಮಿಸುತ್ತವೆ. 'ನಿರ್ದಿಷ್ಟ ಗುರಿ' ಎಂಬುದನ್ನು ಧರ್ಮ ಮಾತ್ರ ನೀಡಬಲ್ಲದು. ಸಮಾಜವಾದ ಅಥವಾ ಸಮತಾವಾದವನ್ನು ಬಾಬಾಸಾಹೇಬರು ಸಮ್ಮತಿಸಿದ್ದರೂ ರಾಜ್ಯ ಅಥವಾ ಸಮಾಜವನ್ನು ಉಳಿಸುವ ಮಹಾನ್ ಶಕ್ತಿ ಧರ್ಮಕ್ಕಿದೆ ಎಂದು ನಂಬಿದ್ದರು. ರಾಜ್ಯಾಧಿಕಾರವೊಂದೇ ಎಲ್ಲಾ ಬಾಗಿಲುಗಳನ್ನು ತೆರೆಯುವುದಕ್ಕಿರುವ ಏಕೈಕ ಕೀಲಿಕೈ ಎಂದು ಹೇಳಿದ್ದರೂ ಅವರಿಗೆ ಅಧಿಕಾರ ಬೇಕಾಗಿದ್ದಿದು 'ಧರ್ಮ' ಸ್ಥಾಪನೆಗಾಗಿ. ಮುಕ್ತ ಸಮಾಜದ ಕನಸನ್ನು ಧರ್ಮದ ಮೇಲೆ ಕಟ್ಟಿಕೊಳ್ಳಲು ಸಾಧ್ಯವೆಂದು ತಿಳಿಸಿದ್ದರೂ ಅದು ಬುದ್ಧ ಧರ್ಮದೊಂದಿಗೆ ಮಾತ್ರ.

ಅವರ ಮೂಲಭೂತ ಪರಿಕಲ್ಪನೆಗಳಾದ ಸಹೋದರತೆ, ಸಮಾನತೆ, ಸ್ವಾತಂತ್ರ್ಯ ಈ ಮೂರು ಪರಿಪೂರ್ಣವಾದ ಸಮಾಜವಾದವನ್ನು ರೂಪಿಸಬಲ್ಲವೇ ಹೊರತು ಅಧಿಕಾರ ಗದ್ದುಗೆಗಳು ಮತ್ತು ಆರ್ಥಿಕ ಮೌಲ್ಯಗಳು ಧರ್ಮವಿಲ್ಲದಿದ್ದರೆ ಶೋಷಣೆಗಳಲ್ಲಿ ಪರ್ಯವಸಾನವಾಗುತ್ತವೆಂದುಕೊಂಡಿದ್ದರು.

ಬುದ್ಧನ ತತ್ವದ ಸ್ಥೂಲ ಪರಿಚಯ

- ಮುಕ್ತ ಸಮಾಜಕ್ಕೆ ಧರ್ಮ ಬೇಕು.
- ಎಲ್ಲಾ ಧರ್ಮಗಳನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ.
- ಧರ್ಮವೆಂದರೆ ಜೀವನ ಸಂಗತಿಗಳು, 'ದೇವರು, ಆತ್ಮ ಸ್ವರ್ಗ ಭೂಮಿ ಬಗೆಗಿನ ಕಲ್ಪನೆ ಅಲ್ಲ.'
- ಧರ್ಮವೆಂದರೆ ಸಮಾಜವನ್ನು ಪುನರ್ರಚನೆ ಮಾಡುವುದು.
- ದುಃಖವನ್ನು ಹೋಗಲಾಡಿಸುವ ಮಾರ್ಗ ಒಂದೇ ಅದು ಅಷ್ಟಾಂಗಮಾರ್ಗ.
- ಎಲ್ಲ ಮಾನವರೂ ಸಮಾನರು.
- ನಿನ್ನ ಏಳ್ಗೆ ನಿನ್ನ ಕೈಯಲ್ಲಿದೆ.
- ದೇವರು ಇಲ್ಲವೋ ಇದೆಯೋ ಗೊತ್ತಿಲ್ಲ, ಆದರೆ ದುಃಖಿತನಾದ ಮಾನವ ಮಾತ್ರ ಎಲ್ಲೆಲ್ಲೂ ಇದ್ದಾನೆ.
- ಶೀಲವಿಲ್ಲದ ಜ್ಞಾನ ಅಪಾಯಕಾರಿ
- ಮನುಷ್ಯನನ್ನು ಅರ್ಹತೆಯಿಂದ ಅಳೆಯಬೇಕು. ಅಧಿಕಾರದಿಂದಲ್ಲ, ಹುಟ್ಟಿನಿಂದಲ್ಲ.
- ಶೋಷಣೆಯಿಂದ ದರಿದ್ರವು ಹುಟ್ಟುತ್ತದೆ.
- ಇರುವುದನ್ನು ಎಲ್ಲರೂ ಹಂಚಿ ತಿನ್ನುವುದು.
- ಎಲ್ಲಾ ಜೀವಿಗಳನ್ನು ಪ್ರೀತಿಯಿಂದ ಕಾಣಿ.
- ನಿರ್ಗತಿಕರಿಗೆ ಜೀವನಾಂಶಗಳನ್ನು ಕೊಡಿ.
- ಸಂಪತ್ತನ್ನು ನ್ಯಾಯವಾಗಿ ಗಳಿಸುವುದು ತಪ್ಪಲ್ಲ...

ಇಂದಿನ ದಲಿತ ಚಳವಳಿಕಾರರ ಧರ್ಮ ನಿರಪೇಕ್ಷತೆಯನ್ನು ಹಿಂದೂ ಪೌರೋಹಿತ್ಯಶಾಹಿಯು ಹೇಗೆ ಗುಗ್ಗು ಮಾಡಿ ದಬ್ಬಾಳಿಕೆ ನಡೆಸುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲೇಬೇಕು. ನಾಗರಿಕತೆಯ ನೆಪದಲ್ಲಿ ಬೌದ್ಧ ಧರ್ಮದೊಂದಿಗೆ ಸಾಮ್ಯತೆ ಪಡೆದಿದ್ದ ಗ್ರಾಮೀಣ ಸಂಸ್ಕೃತಿಗಳು ಸರ್ವನಾಶವಾದವು. ತತ್ವಪದಗಳು, ಹೋರಾಟಗಳು, ಜನಪದ ಆಟಗಳು, ಕ್ರೀಡೆಗಳು, ಜನಪದ ಪರಿಕರಗಳು ಇತ್ಯಾದಿಗಳು ಪಳಯುಳಿಕೆಗಳಾದವು. ಹಿಂದೂ ಸನಾತನ ಸಂಪ್ರದಾಯಗಳೂ ಜನಪದದಂತೆ ನಾಶವಾದವೆ ? ೧೦-೨೦ ವರ್ಷಗಳಿಂದಾಚೆ ವರಮಹಾಲಕ್ಷ್ಮಿ ಪೂಜೆ ಶ್ರೀಸಾಮಾನ್ಯನಿಗೆ ಗೊತ್ತಿರಲಿಲ್ಲ. ಈಗ ಎಲ್ಲರೂ ಆಚರಿಸುತ್ತಾರೆ. ಗಣಪತಿ ಹಬ್ಬ ಹಳ್ಳಿಗಳಿಗೆ ಹಿಂದೆ ಗೊತ್ತೆ ಇರಲಿಲ್ಲ. ಈಗ ಬೀದಿಗೆ ಹತ್ತು ಗಣಪತಿಗಳು ಬಂದವು. ಇತ್ತೀಚೆಗೆ ಬಂದ ಶಬರಿ ಮಲೆ ಯಾತ್ರೆ ಕೀಳು ಜಾತಿಯವರಲ್ಲಿ ಜನಮೆಚ್ಚಿಗೆ ಪಡೆಯುತ್ತಿದೆ. (ವೈದಿಕ ಸಂಸ್ಕೃತಿಯ ವ್ರತವಾಗಿದೆ) ಹೊಲೆಯನ ಮದುವೆಗೆ ಇಂದು ಪುರೋಹಿತ ಬೇಕೇ ಬೇಕು. ಮಾದಿಗನಿಗೂ ಮನೆಕಟ್ಟುವಾಗ ಬ್ರಾಹ್ಮಣನಿಂದ ವಾಸ್ತು ಬರೆಯಿಸಬೇಕು...(ಇನ್ನೂ ಬೇಕಾದಷ್ಟಿದೆ).

ಇವೆಲ್ಲವೂ ಏನನ್ನು ಹೇಳುತ್ತವೆ? ಕ್ರಾಂತಿಯು ಸತ್ತಿತೆಂದೆ? ಪ್ರತಿಕ್ರಾಂತಿಯೇ ಇಂದು ಭಾರತದಲ್ಲಿ ಸರ್ವಶಕ್ತವಾದದ್ದೆಂದೆ ? ಅಥವಾ ಇದೊಂದು ರೀತಿಯ ನಾಗರಿಕತೆಯ ವಿಕಾಸವೆಂದೆ ? ಏನೂ ಅರ್ಥವಾಗುವುದಿಲ್ಲ ! ಏಕೆಂದರೆ ನಮ್ಮ ತಲೆಯಲ್ಲಿ ನಿಖರವಾದ ಆಧ್ಯಾತ್ಮ ಕಲ್ಪನೆಯೇ ಇಲ್ಲ.

'ಮಾನವ ಜನಾಂಗ ಕೇವಲ ಆರ್ಥಿಕ ಮೌಲ್ಯಗಳನ್ನು ಬಯಸುವುದಿಲ್ಲ. ಅದು ಆಧ್ಯಾತ್ಮಿಕ ಮೌಲ್ಯಗಳನ್ನು ಉಳಿಸಿಕೊಳ್ಳಲು ಇಚ್ಛಿಸುತ್ತದೆ. ನಿರಂತರ ಸರ್ವಾಧಿಕಾರವು ಆಧ್ಯಾತ್ಮಿಕ ಮೌಲ್ಯಗಳಿಗೆ ಯಾವ ಗಮನವನ್ನೂ ನೀಡಲಿಲ್ಲ. ನೀಡುವಂತೆ ಕಾಣುವುದೂ ಇಲ್ಲ. ರಾಜಕೀಯ ಅರ್ಥಶಾಸ್ತ್ರವನ್ನು ಹಂದಿ ಸಿದ್ಧಾಂತವೆಂದು ಕಾರ್ಲೈಲ್ ಕರೆದಿದ್ದಾನೆ. ವಾಸ್ತವವಾಗಿ ಕಾರ್ಲೈಲ್‌ನ ಅಭಿಪ್ರಾಯ ಅಸಾಧು. ಏಕೆಂದರೆ ಕಮ್ಯುನಿಸ್ಟ್ ತತ್ವ ಕೂಡ ಮನುಷ್ಯರು ಹಂದಿಗಳಿಗಿಂತ ಹೆಚ್ಚಲ್ಲ ಎಂದು ಮನುಷ್ಯರನ್ನು ಹಂದಿಗಳಂತೆ ಕೊಬ್ಬಿಸುವುದೇ ಆಗಿದೆ ಮನುಷ್ಯ ಭೌತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಬೆಳೆಯಲೇಬೇಕು. ಸಮಾಜ ಹೊಸ ಅಸ್ತಿಭಾರವನ್ನು ಹಾಕಲು ಉದ್ದೇಶಿಸಿದೆ ಎಂಬುದು ಫ್ರಾನ್ಸಿನ ಮಹಾಕ್ರಾಂತಿಯ ಸಹೋದರತ್ವ ಸ್ವಾತಂತ್ರ್ಯ ಸಮಾನತೆ ಎಂಬ ಈ ಮೂರು ಮಂತ್ರಗಳಲ್ಲಿ ಅಡಕವಾಗಿದೆ. ಈ ಘೋಷಣೆಯಿಂದಾಗಿ ಫ್ರಾನ್ಸ್ ಮಹಾಕ್ರಾಂತಿಗೆ ಸ್ವಾಗತ ಸಿಕ್ಕಿತು. ಸ್ವಾತಂತ್ರ್ಯವನ್ನು ತರಲು ಸೋತಿತು. ಸಮಾನತೆಯನ್ನು ತರಲು ರಷ್ಯಾದ ಕ್ರಾಂತಿ ಉದ್ದೇಶಿಸಿರುವುದರಿಂದ ನಾವು ಅದನ್ನು ಸ್ವಾಗತಿಸುತ್ತೇವೆ, ಆದರೆ ಸಮಾನತೆಯ ಸ್ಥಾಪನೆಗಾಗಿ ಸಮಾಜದ ಸಹೋದರತ್ವ ಅಥವಾ ಸ್ವಾತಂತ್ರ್ಯವನ್ನು ಬಲಿಕೊಡಲಾಗುವುದಿಲ್ಲ. ಈ ಕಾರಣಕ್ಕಾಗಿ ಸಮಾನತೆಗೆ ವಿಪರೀತ ಒತ್ತು ಕೊಡಬಾರದು.

ಸೋದರತ್ವ ಅಥವಾ ಸ್ವಾತಂತ್ರ್ಯ ಇಲ್ಲದಿದ್ದರೆ ಸಮಾನತೆಗೆ ಬೆಲೆ ಇಲ್ಲ. ಬುದ್ಧನ ಮಾರ್ಗವನ್ನು ಅನುಸರಿಸುವುದರಿಂದ ಮಾತ್ರ ಈ ಮೂರು ತತ್ವಗಳೂ ಜೊತೆ ಜೊತೆಯಾಗಿ ಬಾಳಬಲ್ಲವು. ಕಮ್ಯುನಿಸಂ ಯಾವುದಾದರೂ ಒಂದನ್ನು ಕೊಡುತ್ತದೆ ಎಲ್ಲವನ್ನೂ ಅಲ್ಲ.' (-ಅಂಬೇಡ್ಕರ್. ಸಂ.೩, ಪು. ಸಂ. ೬೬೪) □

ವಾಜಪೇಯಿ ಶಿಷ್ಟಾಸನ ಭಾಜಪ ವ್ಯಸನ

ವಿಶ್ಲೇಷಣೆ

ಭಾರತದ ರಾಜಕಾರಣಿಗಳು ತಮ್ಮ ಮಾತುಗಳನ್ನು ತಾವೇ ಅಲ್ಲಗಳೆಯುವುದು ಸರ್ವೇ ಸಾಮಾನ್ಯ ವಿಷಯವಾದರೂ ಕೆಲವರು ಈ ನಿಟ್ಟಿನಲ್ಲಿ ಅಗ್ರಗಣ್ಯರೆನಿಸಿದ್ದಾರೆ. ಅದರಲ್ಲೂ ವಾಜಪೇಯಿಯಂತಹ ಗೋಮುಖ ವ್ಯಾಘ್ರಗಳು ಈ ರೀತಿಯ ಮೌಖಿಕ ಶೀರ್ಷಾಸನ ಮಾಡಿದಾಗ ಅದು ಇಡೀ ದೇಶಕ್ಕೆ ಅಪಾಯಕಾರಿಯಾಗಿ ಪರಿಣಮಿಸಬಹುದು. ವಾಜಪೇಯಿಯವರ ಸಮಯ ಸಾಧಕ ರಾಜಕಾರಣ ಮತ್ತು ಮೌಖಿಕ ಶಿರ್ಷಾಸನಗಳಿಗೆ ಅವರ ಆರು ವರ್ಷಗಳ ಪ್ರಧಾನಮಂತ್ರಿ ಅವಧಿಯೇ ಸ್ಪಷ್ಟ ಉದಾಹರಣೆ ಯಾಗಿದೆ. ಈ ದೃಷ್ಟಿಕೋನದಲ್ಲಿ ಒಂದು ವಿಶ್ಲೇಷಣೆ.

○ ನಾ. ದಿವಾಕರ

ತಾನು ಆಡಿದ ಮಾತುಗಳನ್ನು ತಾನೇ ಅಲ್ಲಗಳೆಯುವುದು ರಾಜಕಾರಣದಲ್ಲಿ ಕಂಡುಬರುವ ಒಂದು ವಿಶಿಷ್ಟ ಲಕ್ಷಣ. ಈ ಲಕ್ಷಣವು ವಿಶ್ವವ್ಯಾಪಿಯಾಗಿದ್ದು ಎಲ್ಲಾ ದೇಶಗಳಲ್ಲಿ ಇದನ್ನು ಕಾಣಬಹದು. ರಾಜಕೀಯ ನಾಯಕರು ಜನರ ಟೀಕಾಪ್ರಹಾರಗಳಿಂದ ತಪ್ಪಿಸಿಕೊಳ್ಳಲು, ಸಮಯ ಸಾಧಕತೆಯಿಂದ ಈ ರೀತಿ ನುಣುಚಿಕೊಳ್ಳುತ್ತಾರೆ. ಎಲ್ಲಾ ವರ್ಗದ ಎಲ್ಲಾ ಜಾತಿಯ ಜನರನ್ನು ಸಂತೃಪ್ತಿಗೊಳಿಸಲು ಬಹುಶಃ ರಾಜಕಾರಣಿಗಳಿಗೆ ಈ ಮೌಖಿಕ ಶಿರ್ಷಾಸನ ಅವಶ್ಯವೆಂದು ತೋರುತ್ತದೆ. ಇವರ ನಡವಳಿಕೆಗೆ ತಕ್ಕಂತೆ ಮಾಧ್ಯಮಗಳೂ ವರ್ತಿಸುತ್ತವೆ.

ಪ್ರತಿಯೊಂದು ಪತ್ರಿಕೆ, ಟಿವಿ ಚಾನಲ್ ಸಹ ತಮ್ಮದೇ ಆದ ರಾಜಕೀಯ ನಿಷ್ಠೆ ನಿಲುವು ಹೊಂದಿರುವುದರಿಂದ ರಾಜಕಾರಣಿಗಳ ಹೇಳಿಕೆಗಳನ್ನು ಮಾಧ್ಯಮಗಳಲ್ಲಿ ತಿರುಚಿ, ಬಣ್ಣ ನೀಡಿ ಪ್ರಸಾರ ಮಾಡುವುದೂ ಸಹ ಪರಿಪಾಠವಾಗಿದೆ. ಆದರೆ ಟಿವಿ ಚಾನಲ್‌ಗಳಿಗೆ ಸಂದರ್ಶನ ನೀಡುವಾಗ ನೀಡಿರುವ ಹೇಳಿಕೆಗಳನ್ನೂ ಸಹ ಅಲ್ಲಗಳೆಯುವುದು ನಮ್ಮ ರಾಜಕೀಯ ಮುತ್ಸದ್ದಿಗಳ ಪರಿಪಾಠವಾಗಿದೆ. 'ನಾನು ಹಾಗೆ ಹೇಳಲೇ ಇಲ್ಲ' 'ಆ ಸಂದರ್ಭದಲ್ಲಿ ಹಾಗೆ ಹೇಳಿದ್ದೆ ಅಷ್ಟೆ' 'ಈಗ ಅದು ಪ್ರಸ್ತುತವಲ್ಲ' 'ಮಾಧ್ಯಮಗಳು ನನ್ನ ಅಭಿಪ್ರಾಯವನ್ನು ತಪ್ಪಾಗಿ ಗ್ರಹಿಸಿವೆ', 'ಇದು ನನ್ನ ವಿರೋಧಿಗಳ ಕೃತ್ಯ' ಈ ಎಲ್ಲಾ ಹೇಳಿಕೆಗಳು ಮೌಖಿಕ ಶಿರ್ಷಾಸನದ ಕೆಲವು ಸಾಧನಗಳಷ್ಟೆ ಭಾಜಪದವರು

ಹಾಗೆ ನೋಡಿದರೆ ಜನಸಂಘದ ಕಾಲದಿಂದಲೂ ವಾಜಪೇಯಿ ಯವರು ತಮ್ಮ ವಾಕ್ ಚಾತುರ್ಯದಿಂದಲೇ ಆಕರ್ಷಣೀಯ ವ್ಯಕ್ತಿಯಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ತಮ್ಮ ಉತ್ತಮ ಭಾಷಣ ಕಲೆಯಿಂದ, ತಮಾಷೆಯ ಮಾತುಗಳಿಂದ ಜನರನ್ನು ಆಕರ್ಷಿಸುವಲ್ಲಿ ವಾಜಪೇಯಿಯವರು ಮೊದಲಿನಿಂದಲೂ ಯಶಸ್ವಿಯಾಗಿದ್ದಾರೆ. ಅವರು ದೇಶದ ಪ್ರಧಾನಿಯಾಗಲು ಅವರ ಈ ವಾಕ್ ಚಾತುರ್ಯವೇ ಬಹುತೇಕ ಕಾರಣವೆಂದು ಹೇಳಬಹುದು; ಇದರೊಂದಿಗೆ ಸಮಯ ಬಂದಾಗ ಉದಾರವಾದಿ ರೂಪ ತಾಳುವ ಜಾಣ್ಮೆಯೂ ವಾಜಪೇಯಿ ಯವರಿಗಿದೆ. ಎಲ್ಲರನ್ನು ಸಂತೃಪ್ತಿಗೊಳಿಸಿ ಸರಿತೂಗಿಸಿಕೊಂಡು ಹೋಗುವ ತಾಳ್ಮೆಯೂ ಅವರಲ್ಲಿದೆ. ಈ ಎಲ್ಲಾ ಗುಣಗಳಿಂದ ವಾಜಪೇಯಿಯವರು ಭಾರತೀಯ ರಾಜಕಾರಣದಲ್ಲಿ ಒಬ್ಬ ಆಕರ್ಷಣೀಯ ನಾಯಕರಾಗಿ ಹೊರಹೊಮ್ಮಿದ್ದಾರೆ.

ಅವರ ಈ ಚತುರತೆಯನ್ನು ಗುರುತಿಸಿಯೇ ಸಂಘಪರಿವಾರವು ದಶಕಗಳ ಮುಂಚೆಯೇ ವಾಜಪೇಯಿಯವರನ್ನು ಮುಖ್ಯ ಭಾಷಣಕಾರನಾಗಿ ರೂಪಿಸಲಾರಂಭಿಸಿತ್ತು. ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿ ಜಾರಿಗೊಳಿಸಿದಾಗ ವಾಜಪೇಯಿಯವರ ಭಾಷಣಗಳೇ ಅನೇಕರಿಗೆ ಮಾದರಿಯಾಗಿದ್ದವು. ಪ್ರಜಾತಂತ್ರವನ್ನೇ ಅಂಗೀಕರಿಸದ ಹಿಟ್ಲರ್, ಮುಸಲೋನಿಯವರನ್ನು ಆರಾಧಿಸುವ, ಧಾರ್ಮಿಕ ರಾಷ್ಟ್ರ

ಕೆಲವೊಮ್ಮೆ ಐಎಸ್‌ಐ ಕೈವಾಡವನ್ನೂ ಶಂಕಿಸುವುದೂ ಉಂಟು. ಅನಿಷ್ಟಗಳಿಗೆಲ್ಲಾ ಅವನೇ ಕಾರಣ ಎಂಬಂತೆ ಕೆಲವೊಮ್ಮೆ ಜರುಗುವ ಘಟನೆಗಳಿಗೆಲ್ಲಾ ಐಎಸ್‌ಐ ಕಾರಣವಾಗಿಬಿಡುತ್ತದೆ.

ಭಾರತೀಯ ರಾಜಕಾರಣದಲ್ಲಿ ಈ ರೀತಿ ಮೌಖಿಕ ಶಿರ್ಷಾಸನ ಮಾಡುವವರು ನೂರಾರು ಸಂಖ್ಯೆಯಲ್ಲಿದ್ದು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ಅವರುಗಳಲ್ಲೊಬ್ಬರೆಂದರೆ ತಪ್ಪಾಗಲಾರದು. ತಮ್ಮ ಪ್ರಧಾನ ಮಂತ್ರಿ ಪದವಿಯ ೬ ವರ್ಷದ ಅವಧಿ ಯಲ್ಲಿ ವರ್ಷಕ್ಕೆ ನೂರು ಬಾರಿಯಂತೆ ಆರು ನೂರು ಸಲವಾದರೂ ಈ ರೀತಿಯ ಮೌಖಿಕ ಶಿರ್ಷಾಸನ ಮಾಡಿದ್ದಾರೆ. ಈ ಲೆಕ್ಕಾಚಾರವನ್ನು ಎಲ್ಲರೂ ಸುಲಭವಾಗಿ ಒಪ್ಪುವುದಿಲ್ಲ, ಏಕೆಂದರೆ ಕಳೆದ ಆರು ವರ್ಷಗಳಲ್ಲಿ ಮಾಧ್ಯಮಗಳು ವಾಜಪೇಯಿಯವರನ್ನು ಹೊಗಳಿ ಹೊಗಳಿ ಅಟ್ಟಕ್ಕೇರಿಸಿವೆ. ವಾಜಪೇಯಿಯವರನ್ನು ಅತ್ಯಂತ ಗೌರವಯುತ ವ್ಯಕ್ತಿಯೆಂದು ಮಾಧ್ಯಮಗಳಲ್ಲಿ ಚಿತ್ರಿಸಲಾಗಿ, ಅವರ ಬಗ್ಗೆ ಈ ರೀತಿಯ ಅಪಾದನೆಯನ್ನು ಸ್ವೀಕರಿಸುವುದು ದುಸ್ತರವೇ.

ಆದರೂ ವಸ್ತುನಿಷ್ಠವಾಗಿ ಹೇಳುವುದಾದರೆ ಶ್ರೀಮಾನ್ ವಾಜಪೇಯಿಯವರು ತಮ್ಮ ಆರು ವರ್ಷಗಳ ಅಧಿಕಾರಾವಧಿಯಲ್ಲಿ ಕೇವಲ ಎರಡು ಸಂದರ್ಭಗಳಲ್ಲಿ ಮಾತ್ರ ತಮ್ಮ ಹೇಳಿಕೆಗಳನ್ನು ಅಲ್ಲಗಳೆಯದೆ, ಸಮರ್ಥಿಸಿಕೊಂಡಿರುವುದು ಕಂಡು ಬರುತ್ತದೆ. ಮೊದಲನೆಯ ಸಂದರ್ಭದಲ್ಲಿ ಅಮೆರಿಕಾದ ಅಧ್ಯಕ್ಷ ಬಿಲ್‌ಕ್ಲಿಂಟನ್‌ರವರು ಪಾಕಿಸ್ತಾನದೊಡನೆ ರಾಜಿ ಮಾಡಿಕೊಳ್ಳಲು ವಾಷಿಂಗ್‌ಟನ್‌ಗೆ ಆಹ್ವಾನಿಸಿದಾಗ ವಾಜಪೇಯಿಯವರು ದೃಢವಾಗಿ ನಿರಾಕರಿಸಿದ್ದರು. ಎರಡನೆಯದಾಗಿ ತೆಹೆಲ್ಕಾ ಹಗರಣದ ನಂತರದಲ್ಲಿ ಸಂಘಪರಿವಾರ, ಎಲ್. ಕೆ. ಅಡ್ವಾಣಿಯವರ ಎಷ್ಟೇ ಒತ್ತಡಗಳಿದ್ದರೂ, ವಾಜಪೇಯಿ ಯವರು ತಮ್ಮ ಆಪ್ತ ಕಾರ್ಯದರ್ಶಿ ಬ್ರಿಜೇಶ್ ಮಿಶ್ರಾರವರನ್ನು ಬದಲಾಯಿಸಲು ಒಪ್ಪದಿದ್ದುದು. ಈ ಎರಡು ಸಂದರ್ಭಗಳನ್ನು ಬಿಟ್ಟರೆ ವಾಜಪೇಯಿಯವರ ಇಡೀ ರಾಜಕೀಯವು ಈ ರೀತಿಯ ದ್ವಂದ್ವದಿಂದಲೇ ಕೂಡಿದೆ ಎಂದು ಹೇಳಬಹುದು.



ಸ್ಥಾಪನೆಗಾಗಿ ಹೋರಾಡುವ, ಚಾತುರ್ವರ್ಣ ಪದ್ಧತಿಯನ್ನು ಸಮರ್ಥಿಸುವ ಸಂಘ ಪರಿವಾರದ ನಾಯಕರಾಗಿದ್ದರೂ ಸಹ, ತುರ್ತು ಪರಿಸ್ಥಿತಿಯ ಸಮಯದಲ್ಲಿ ವಾಜಪೇಯಿಯವರ ಭಾಷಣದಲ್ಲಿ ಪ್ರಜಾತಂತ್ರದ ಬಗ್ಗೆ ಕಾಳಜಿ ಎದ್ದು ಕಾಣುವಂತಿತ್ತು. ತುರ್ತು ಪರಿಸ್ಥಿತಿಯ ವಿರುದ್ಧ ನಿರಂತರ ಹೋರಾಡಿ ಜೈಲುವಾಸ ಅನುಭವಿಸಿದ ಸಂಘಪರಿವಾರದ ನಾಯಕರುಗಳು ಮಹಾ ಪ್ರಜಾತಂತ್ರವಾದಿಗಳೆಂದು ಭ್ರಮೆಯನ್ನು ಮೂಡಿಸುವಲ್ಲಿ ವಾಜಪೇಯಿಯವರು ಯಶಸ್ವಿಯಾಗಿದ್ದರು. ಈ ಅಂಶವನ್ನು ಸಂಘಪರಿವಾರವು ಉಪಯೋಗಿಸಿಕೊಂಡು ಜನರ ನಡುವೆ ವಾಜಪೇಯಿಯವರನ್ನು ನಾಯಕನ ರೂಪದಲ್ಲಿ ಮುಂದೆ ತರುವಲ್ಲಿ ಸಫಲವಾಯಿತು.

ಒಂದೆಡೆ ಕಾಂಗ್ರೆಸ್ ವಿರೋಧಿ ಗುಂಪುಗಳಿಗೆ ಮತ್ತು ಇನ್ನೊಂದೆಡೆ ಜನಸಂಘದ ಕೋಮುವಾದಿ ನೀತಿಯನ್ನು ಒಪ್ಪದವರಿಗೆ ವಾಜಪೇಯಿ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುವ ಮೂಲಕ ಸಂಘಪರಿವಾರಕ್ಕೆ ತುರ್ತು ಪರಿಸ್ಥಿತಿಯ ನಂತರದಲ್ಲಿ ರಾಜಕೀಯ ಸ್ವರೂಪ ನೀಡುವಲ್ಲಿ ಯಶಸ್ವಿಯಾದರು. ಹಾಗಾಗಿಯೇ ೧೯೮೦ರಲ್ಲಿ ಜನಸಂಘವು ಭಾರತೀಯ ಜನತಾ ಪಕ್ಷವಾಗಿ ಮಾರ್ಪಾಟಾಗಿ, ವಾಜಪೇಯಿಯವರನ್ನೇ ಪ್ರಥಮ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿತ್ತು. ತಮ್ಮ ಉದಾರವಾದಿ ಮುಖವಾಡದಿಂದಲೇ ಕಾಂಗ್ರೆಸ್ಸೇತರ ಪಕ್ಷಗಳನ್ನು, ನಾಯಕರುಗಳನ್ನೂ ಆಕರ್ಷಿಸುವ ಮೂಲಕ ವಾಜಪೇಯಿಯವರು ಕೊನೆಗೂ ಭಾರತದ ಪ್ರಧಾನಿಯಾಗಿದ್ದು ಈಗ ಇತಿಹಾಸ. ಆದರೆ ಒಮ್ಮೆ ಪ್ರಧಾನಿಯಾದ ಕೂಡಲೇ ಸಂಘ ಪರಿವಾರವು ವಾಜಪೇಯಿಯವರ ಮೇಲಿನ ತನ್ನ ಹಿಡಿತವನ್ನು ಗಟ್ಟಿಗೊಳಿಸಿದ್ದು ಇತ್ತೀಚಿನ ವರ್ಷಗಳ ರಾಜಕೀಯದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ವಾಜಪೇಯಿಯವರು ಪ್ರಧಾನಿಯಾಗಿದ್ದು ೬ ವರ್ಷಗಳಲ್ಲಿ ಸಂಘ ಪರಿವಾರವು ರಾಷ್ಟ್ರದ ರಾಜಕಾರಣದಲ್ಲಿ ಪ್ರಮುಖ ಸ್ಥಾನಗಳಿಸಿದ್ದು ಮಾತ್ರ ಅಲ್ಲಗಳೆಯಲಾಗದ ಸತ್ಯ.

೨೦೦೪ರ ಚುನಾವಣಾ ಸಮಯದಲ್ಲಿ ದೇಶದ ಅಪ್ರತಿಮ ನಾಯಕರೆಂದು ಮಾಧ್ಯಮಗಳಿಂದ ಹೊಗಳಿಸಿಕೊಂಡ ವಾಜಪೇಯಿಯವರು, ಚುನಾವಣಾ ಸೋಲಿನ ನಂತರ ತಮ್ಮ ಪಕ್ಷಕ್ಕೆ ಬೇಡವಾಗಿರುವುದು ವಿಪರ್ಯಾಸ. ಮನಾಲಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಚುನಾವಣೆಗಳ ಬಗ್ಗೆ ವಿಶ್ಲೇಷಣೆ ಮಾಡಿ, ಗುಜರಾತ್ ಬಗ್ಗೆ, ನರೇಂದ್ರ ಮೋದಿಯವರ ಬಗ್ಗೆ ವಾಜಪೇಯಿಯವರು ನೀಡಿದ ಹೇಳಿಕೆಗಳು ಅವರಿಗೆ ತಿರುಗೇಟಾಗಿದೆ. ಮುಂಬೈನಲ್ಲಿ ಜರುಗಿದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ವಾಜಪೇಯಿಯವರನ್ನು ತರಾಟೆಗೆ ತೆಗೆದುಕೊಳ್ಳಲಾಗಿದೆ. ತಾವು ಮನಾಲಿಯಲ್ಲಿ ನೀಡಿದ ಹೇಳಿಕೆಗಳನ್ನು ಹಿಂತೆಗೆದುಕೊಳ್ಳುವಂತೆ ವಾಜಪೇಯಿಯವರ ಮೇಲೆ ಒತ್ತಡ ಹೇರಲಾಗಿದೆ. ವಾಜಪೇಯಿಯವರ ಸಮಯಸಾಧಕ ರಾಜಕಾರಣ ಮತ್ತು ಮೌಖಿಕ ಶಿರ್ಷಾಸನಗಳಿಗೆ ಅವರ ಆರು ವರ್ಷಗಳ ಪ್ರಧಾನಮಂತ್ರಿ ಅವಧಿಯೇ ಸ್ಪಷ್ಟ ಉದಾಹರಣೆಯಾಗಿದೆ.

೧೯೯೬ರಲ್ಲಿ ಅಧಿಕಾರ ವಹಿಸಿಕೊಳ್ಳುವಾಗಲೇ ವಾಜಪೇಯಿಯವರು ತಮ್ಮ ಸ್ವಯಂಸೇವಕ ಲಕ್ಷಣಗಳನ್ನು ಸ್ಪಷ್ಟಪಡಿಸಿದ್ದರು.

'ನಾನು ಉದಾರವಾದಿ - ಪಕ್ಷ ಉದಾರವಾದಿಯಲ್ಲ, ನಾನು ಸೆಕ್ಯುಲರ್, ಪಕ್ಷ ಸೆಕ್ಯುಲರ್ ಅಲ್ಲ ಎಂಬ ಅಪವಾದವೆಲ್ಲ ಎಡಪಕ್ಷಗಳ ಗೋಬೆಲ್‌ನ ಪ್ರಚಾರಗಳು ಮಾತ್ರ' (ಫ್ರಂಟ್



'ಗುಜರಾತ್ ನಡೆಯಬಾರದಾಗಿತ್ತು ಇನ್ನು ಮುಂದೆ ಗುಜರಾತ್ ಎಲ್ಲಿಯೂ ನಡೆಯದಂತೆ ನಾವು ನೋಡಿಕೊಳ್ಳಬೇಕು' ಎಂಬ ವಾಜಪೇಯಿಯವರ ಹೇಳಿಕೆ ಮಾರ್ಮಿಕವಾಗಿತ್ತು. ಇವರ ಹೇಳಿಕೆಯಲ್ಲಿನ 'ನಾವು' ಎಂಬ ಪದದ ಹಿಂದೆ 'ಗುಜರಾತ್ ಘಟನೆಗಳಿಗೆ ಭಾಜಪ ವಿಹಿಂಪ ಭಜರಂಗದಳ ಮೋದಿಯವರು ಮಾತ್ರ ಜವಾಬ್ದಾರರಲ್ಲ' ಎಂಬ ಅರ್ಥ ಅಡಗಿರುವುದು ಸ್ಪಷ್ಟವಾಗಿದೆ. ಇದಾದ ಕೆಲವು ದಿನಗಳ ನಂತರ ಜನವರಿ ೧೩. ೨೦೦೪ ರಂದು ವಾಜಪೇಯಿಯವರು 'ಕ್ಷಮೆ ಯಾಚಿಸುವವನಿಗಿಂತಲೂ ಕ್ಷಮಾದಾನ ನೀಡುವವನು ಮಹಾನ್ ವ್ಯಕ್ತಿಯಾಗುತ್ತಾನೆ' ಎಂದು ಹೇಳುವ ಮೂಲಕ ಮುಸ್ಲಿಂ ಜನತೆಯ ಕ್ಷಮೆ ಕೋರಿದ್ದರು.

ಲೈನ್ ೧೫-೧೧-೯೬) ಎಂದು ಹೇಳುವ ಮುಲಕ ವಾಜಪೇಯಿಯವರು ತಮ್ಮ ಸ್ವಯಂ ಸೇವಕ ನಿಷ್ಠೆಯನ್ನು ಪ್ರಚುರಪಡಿಸಿದ್ದರು. ಎಡಪಕ್ಷಗಳು ಎಂದಿಗೂ ಈ ರೀತಿಯ ಭ್ರಮೆ ಹೊಂದಿರಲಿಲ್ಲ ಎಂಬ ಅಂಶ ಒತ್ತಟ್ಟಿಗಿರಲಿ. ೬೭ ರಿಂದ ಇಲ್ಲಿಯವರೆಗಿನ ಅವಧಿಯಲ್ಲಿ ಯಾವುದೇ ಸನ್ನಿವೇಶದಲ್ಲೂ ವಾಜಪೇಯಿಯವರು ಅಲ್ಪಸಂಖ್ಯಾತರ ಬಗ್ಗೆ ವಿಶೇಷವಾಗಿ ಮುಸಲ್ಮಾನರ ಬಗ್ಗೆ ಕಾಳಜಿ ವ್ಯಕ್ತಪಡಿಸಿಲ್ಲ ಎಂಬ ಅಂಶವಂತೂ ಸತ್ಯ. ೧೯೬೯ರ ಅಹಮದಾಬಾದ್ ಗಲಭೆ ಮತ್ತು ೧೯೭೦ರ ಭಿವಂದಿ ಗಲಭೆಗಳ ಸಮಯದಲ್ಲಿ ವಾಜಪೇಯಿಯವರು ಮುಸ್ಲಿಮರ ವಿರುದ್ಧ ಮಾಡಿದ್ದ ಅಪಾದನೆಗಳೆಲ್ಲವೂ ತನಿಖಾವಧಿಯಲ್ಲಿ ನಿರಾಕರಿಸಲ್ಪಟ್ಟವು.

ಇತ್ತೀಚಿನ ಚುನಾವಣೆಗಳಲ್ಲಿ ವಾಜಪೇಯಿ ಮತ್ತು ಅಡ್ವಾಣಿಯವರು ಮುಸ್ಲಿಮರ ಮತಗಳಿಗಾಗಿ ಮುಸ್ಲಿಮರನ್ನು ಓಲೈಸುವುದರಲ್ಲಿ ತೊಡಗಿದ್ದರಾದರೂ, ಬಾಬ್ರಿ ಮಸೀದಿಯನ್ನೂ ಸೇರಿದಂತೆ ಯಾವುದೇ ವಿಷಯದಲ್ಲೂ ಆಸಕ್ತಿ ತೋರಲಿಲ್ಲ. ಬದಲಾಗಿ ಭಾರತ ಪಾಕ್ ಸಂಬಂಧಗಳಿಗೆ ಕೋಮುವಾದಿ ಮೆರುಗು ನೀಡುವ ಮೂಲಕ ತಮ್ಮ ನೈತಿಕ ಅಧಃಪತನವನ್ನು ಪ್ರದರ್ಶಿಸಿದ್ದರು.

'ಗುಜರಾತ್ ನಡೆಯಬಾರದಾಗಿತ್ತು ಇನ್ನು ಮುಂದೆ ಗುಜರಾತ್ ಎಲ್ಲಿಯೂ ನಡೆಯದಂತೆ ನಾವು ನೋಡಿಕೊಳ್ಳಬೇಕು' ಎಂಬ ವಾಜಪೇಯಿಯವರ ಹೇಳಿಕೆ ಮಾರ್ಮಿಕವಾಗಿತ್ತು. ಇವರ ಹೇಳಿಕೆಯಲ್ಲಿನ 'ನಾವು' ಎಂಬ ಪದದ ಹಿಂದೆ 'ಗುಜರಾತ್ ಘಟನೆಗಳಿಗೆ ಭಾಜಪ ವಿಹಿಂಪ ಭಜರಂಗದಳ ಮೋದಿಯವರು ಮಾತ್ರ ಜವಾಬ್ದಾರರಲ್ಲ' ಎಂಬ ಅರ್ಥ ಅಡಗಿರುವುದು ಸ್ಪಷ್ಟವಾಗಿದೆ. ಇದಾದ ಕೆಲವು ದಿನಗಳ ನಂತರ ಜನವರಿ ೧೩. ೨೦೦೪ ರಂದು ವಾಜಪೇಯಿಯವರು 'ಕ್ಷಮೆ ಯಾಚಿಸುವವನಿಗಿಂತಲೂ ಕ್ಷಮಾದಾನ ನೀಡುವವನು ಮಹಾನ್ ವ್ಯಕ್ತಿಯಾಗುತ್ತಾನೆ' ಎಂದು ಹೇಳುವ ಮೂಲಕ ಮುಸ್ಲಿಂ ಜನತೆಯ ಕ್ಷಮೆ ಕೋರಿದ್ದರು. ವಾಜಪೇಯಿಯವರ ವಾಕ್ ಚಾತುರ್ಯಕ್ಕೆ ಇದೊಂದು ನಿದರ್ಶನ.

ಮುಸಲ್ಮಾನರ ಕ್ಷಮೆ ಕೇಳಿದ ವಾಜಪೇಯಿಯವರು 'ಗುಜರಾತ್ ಘಟನೆಗಳಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸಲಾಗುವುದು' ಎಂಬ ಹೇಳಿಕೆ ನೀಡಿದ್ದೂ ಬಹಳ ತಡವಾಗಿಯೇ. ಆದರೆ ಆ ವೇಳೆಗೆ ನರೇಂದ್ರ ಮೋದಿ ಸರ್ಕಾರಕ್ಕೆ ತನ್ನ ಮಂತ್ರಿಗಳನ್ನು ಪಕ್ಷದ ನಾಯಕರನ್ನು ಶಿಕ್ಷಿಸುವ ಊಹೆಯೂ ಇರಲಿಲ್ಲ. ನಿಜವಾದ ಅಪರಾಧಿಗಳನ್ನು ಶಿಕ್ಷಿಸುವ ಉದ್ದೇಶವಿಲ್ಲದಿದ್ದರೂ ವಾಜಪೇಯಿಯವರು ತಮ್ಮ ಈ ಹೇಳಿಕೆಯ ಮೂಲಕ ಜನರನ್ನು ಮರುಳು ಮಾಡಲೆತ್ನಿಸಿದ್ದರೂ, ಕ್ಷಮೆ ಕೇಳುವುದು ಅಪರಾಧವೆಸಗಿದ ಕುರುಹಾದರೂ ವಾಜಪೇಯಿಯವರು ಗೋದ್ರಾ ಘಟನೆಯನ್ನೇ ಪ್ರಸ್ತಾಪಿಸುವುದರ ಮೂಲಕ ಗುಜರಾತ್‌ನ ಗಲಭೆಗಳು ಗೋದ್ರಾಗೆ ಪ್ರತಿಕ್ರಿಯೆ ಎಂಬ ವಾದವನ್ನೇ ದೃಢೀಕರಿಸಿ ಮೋದಿಯನ್ನು ಸಮರ್ಥಿಸಲೆತ್ನಿಸಿದ್ದುಂಟು.

೨೦೦೪ರ ಚುನಾವಣೆಗಳಲ್ಲಿ ಸೋಲನುಭವಿಸಿದ ನಂತರ ಭಾಜಪದ ನಾಯಕರುಗಳು ಸೋಲಿನ ಕಾರಣಗಳನ್ನು ಅರಸುತ್ತಿದ್ದಾಗ ಮನಾಲಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ವಾಜಪೇಯಿಯವರು ಜೂನ್ ೧೨ ರಂದು ಪತ್ರಿಕಾಗೋಷ್ಠಿಯಲ್ಲಿ 'ಗುಜರಾತ್‌ನ ಗಲಭೆಗಳಿಂದಲೂ ನಮಗೆ ಸೋಲುಂಟಾಯಿತು. ಗುಜರಾತ್‌ನ ಗಲಭೆಗಳನ್ನು ನಿಯಂತ್ರಿಸುವಲ್ಲಿ ಭಾಜಪ ಯಾವುದೇ ತಪ್ಪು ಮಾಡಲಿಲ್ಲವಾದರೂ ವಿರೋಧ ಪಕ್ಷಗಳು ಇದನ್ನು ಚೆನ್ನಾಗಿ ಉಪಯೋಗಿಸಿಕೊಂಡರು' ಎಂದು ಹೇಳಿ ಮರುದಿನವೇ ಮೋದಿಯವರನ್ನು ವಜಾಗೊಳಿಸಬೇಕೆಂಬ ಬೇಡಿಕೆಯನ್ನೂ ಪ್ರಕಟಿಸಿದ್ದರು.

ಇಡೀ ದೇಶವೇ ಮೋದಿಯವರನ್ನು ವಜಾ ಮಾಡಲು ಆಗ್ರಹಿಸುತ್ತಿದ್ದಾಗ ವಾಜಪೇಯಿಯವರು ಮರು ಚುನಾವಣೆಗೆ ಕರೆ ನೀಡಿದ್ದರು. ಅಂದಿನ ಸನ್ನಿವೇಶದಲ್ಲಿ ಉನ್ಮಾದಕರ ಕೋಮು ಸಂಘರ್ಷದ ಪರಿಸ್ಥಿತಿಯಲ್ಲಿ ಮೋದಿಯವರು ಕೋಮು ಭಾವನೆಗಳನ್ನು ಕೆರಳಿಸುವುದು ವಾಜಪೇಯಿಯವರಿಗೂ ತಿಳಿದಿತ್ತು. ಜನತೆಯ ತೀರ್ಪು ಅಂತಿಮ ಎಂಬ ನೆಪದಲ್ಲಿ ಡಿಸೆಂಬರ್ ೨೦೦೨ರಲ್ಲಿ ಭಾಜಪ ಮೋದಿಯವರ ನಾಯಕತ್ವದಲ್ಲಿ ಗುಜರಾತ್‌ನಲ್ಲಿ ಜಯಭೇರಿ ಬಾರಿಸಿತು.

ಆದರೆ ವಾಜಪೇಯಿ ಅಡ್ವಾಣಿಯವರ ಈ ದ್ವಂದ್ವ ನೀತಿ ಲೋಕಸಭಾ ಚುನಾವಣೆಗಳಲ್ಲಿ ಫಲಪ್ರದವಾಗದೆ ಹೋಯಿತು.

ಈ ಚುನಾವಣಾ ಸೋಲು ಮತ್ತು ಮುಂಬರುವ ವಿಧಾನ ಸಭಾ ಚುನಾವಣೆಗಳಲ್ಲಿ ಎದುರಿಸಬಹುದಾದ ಸೋಲಿನ ಭೀತಿಯಿಂದ ವಾಜಪೇಯಿಯವರು ಮನಾಲಿಯಲ್ಲಿ ಪಶ್ಚಾತ್ತಾಪದ ನುಡಿಗಳನ್ನಾಡಿರುವರೇ ಹೊರತು ಗುಜರಾತ್‌ನಲ್ಲಿ ಬಲಿಯಾದವರ ಮೇಲಿನ ಕಾಳಜಿಯಿಂದಲ್ಲ. 'ಗುಜರಾತ್ ಗಲಭೆಗಳ ಬಗ್ಗೆ ರಾಜ್ಯದ ಹೊರಗೆ ಬಿತ್ತರಿಸಲಾದ ಚಿತ್ರಗಳು ಪ್ರಚಾರ ಕಾರ್ಯಗಳು ನಮ್ಮ ಊಹೆಗೆ ನಿಲುಕದಾಗಿತ್ತು' ಎಂದು ವಾಜಪೇಯಿಯವರು ಹೇಳಿದರೆ 'ಕೆಲವೊಮ್ಮೆ ಸತ್ಯ ನುಡಿಯುವುದು ಜವಾಬ್ದಾರಿಯುತ ಕೆಲಸವಾಗುವುದಿಲ್ಲ' ಎಂದು ಅಡ್ವಾಣಿಯವರು ಹೇಳಿಕೆ ನೀಡಿದ್ದು ಈ ನಾಯಕರ ಆಷಾಢಭೂತಿ ಲಕ್ಷಣಗಳಿಗೆ ನಿದರ್ಶನ. ವಾಜಪೇಯಿಯವರು ಮೋದಿಯವರ ವಿರುದ್ಧ ನೀಡಿದ ಹೇಳಿಕೆಗಳು ರಾಜಕೀಯ ಉದ್ದೇಶ ಹೊಂದಿದ್ದರಿಂದಲೇ ಭಾಜಪ ಕಾರ್ಯಕಾರಿ ಸಮಿತಿಯು ಈ ವಿವಾದವನ್ನು ಮೊಳಕೆಯಲ್ಲೇ ಚಿವುಟಿ ಹಾಕುವುದರಲ್ಲಿ ಯಶಸ್ವಿಯಾಯಿತು.

ಪ್ರಧಾನ ಮಂತ್ರಿಯಾಗಿ ವಾಜಪೇಯಿ

ವೈಯಕ್ತಿಕವಾಗಿ ತಮ್ಮ ದ್ವಂದ್ವಗಳಿಗೆ ಹೆಸರಾದ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿ ಸಹ ತಮ್ಮ ಪ್ರಜಾತಾಂತ್ರಿಕ ಕರ್ತವ್ಯಗಳನ್ನು ನಿರ್ವಹಿಸದೆ ಹೋದದ್ದು ಸ್ಪಷ್ಟವಾಗಿ ಕಂಡುಬರುತ್ತವೆ. ಗುಜರಾತ್‌ನ ಗಲಭೆಗಳಲ್ಲೂ ಸಹ ಭಾಜಪದ ನಾಯಕರು ಪಕ್ಷದ ಕಾರ್ಯಕರ್ತರಿಗೆ ರಕ್ಷಣೆ ನೀಡದೆ ಹೋಗಿದ್ದಲ್ಲಿ ಗಲಭೆ ಆ ರೀತಿ ಪರಾಕಾಷ್ಠೆ ತಲುಪುತ್ತಿರಲಿಲ್ಲ. ಅಲ್ಪಸಂಖ್ಯಾತರ ವಿರುದ್ಧ ಸಂಘ ಪರಿವಾರದ ಆಕ್ರಮಣ ಗುಜರಾತ್‌ನಲ್ಲಿ ಕೊನೆಯ ಹಂತವನ್ನು ತಲುಪಿತೆಂದು ಹೇಳಬಹುದು.

೧೯೯೮ರಲ್ಲಿ ಭಾಜಪ ಎನ್‌ಡಿಎ ಸರ್ಕಾರ ಅಧಿಕಾರ ವಹಿಸಿಕೊಂಡಾಗಲೇ ಅಲೆ ಆರಂಭಗೊಂಡಿತ್ತು. ಗುಜರಾತ್‌ನ ಡ್ಯಾಂಗ್ಸ್ ಜಿಲ್ಲೆಯಲ್ಲಿ ಕ್ರೈಸ್ತರ ಮೇಲೆ ಹಲ್ಲೆಯಾದಾಗಲೇ ವಾಜಪೇಯಿಯವರು ಘಟನೆಯನ್ನು ಖಂಡಿಸುವ ಬದಲು ಮತಾಂತರದ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕೆಂದು ಆಗ್ರಹಿಸಿದ್ದು ಸಂಘ ಪರಿವಾರಕ್ಕೆ ಕೇಂದ್ರ ಸರ್ಕಾರ ನೀಡಿದ ಮುಕ್ತ ಪರವಾನಗಿಯಾಗಿತ್ತು. ಗ್ರಾಹಂ ಸ್ಟೈನ್ಸ್‌ನ ಕೊಲೆಯ ನಂತರದ ಘಟನೆಗಳು ಅಲ್ಪಸಂಖ್ಯಾತರಲ್ಲಿ ವಿಶೇಷವಾಗಿ ಕ್ರೈಸ್ತರಲ್ಲಿ ಭೀತಿ ಹುಟ್ಟಿಸಿತ್ತು. ಆದರೂ ವಾಜಪೇಯಿಯವರಾಗಲೀ ಅಡ್ವಾಣಿಯವರಾಗಲೀ ಅಪರಾಧಿಗಳನ್ನು ಗುರುತಿಸಲಿಲ್ಲ, ಆಕ್ರಮಣವನ್ನು ಖಂಡಿಸಲೂ ಇಲ್ಲ.

ಈ ಆಕ್ರಮಣಗಳಿಗೆ ಕೋಮುವಾದ ಸ್ವರೂಪ ನೀಡುವುದು ತರವಲ್ಲ ಎಂಬ ಅಡ್ವಾಣಿಯವರ ಹೇಳಿಕೆ ಬಾಲಿಶವಾಗಿತ್ತು. ೧೯೯೯ರ ಜನವರಿ ೨೨ ರಂದು ಅಂತರ ರಾಜ್ಯ ಸಮಿತಿ ಸಭೆಯಲ್ಲಿ 'ಇಡೀ ರಾಷ್ಟ್ರದಲ್ಲಿ ನಡೆಯುವ ಆಗು ಹೋಗುಗಳ ಬಗ್ಗೆ ಘಟನೆಗಳ ಬಗ್ಗೆ ಸೂಕ್ಷ್ಮವಾಗಿ ನಿಗಾ ಇಡುವುದು ಸರ್ಕಾರದ ಸಂವಿಧಾನಿಕ ಕರ್ತವ್ಯ' ಎಂದು ಹೇಳಿದ್ದ ಅಡ್ವಾಣಿಯವರು ಗೃಹ ಮಂತ್ರಿಯಾಗಿದ್ದುಕೊಂಡೂ ಗುಜರಾತ್‌ನ ಹತ್ಯಾಕಾಂಡದ ಬಳಿಕ ಯಾವುದೇ ಕ್ರಮ ಕೈಗೊಳ್ಳದಿದ್ದುದು ಅವರ ಆಷಾಢಭೂತಿತನದ ಲಕ್ಷಣವೇ.

ಬೆಸ್ಟ್ ಬೇಕರಿ ಮೊಕದ್ದಮೆಯ ಐತಿಹಾಸಿಕ ತೀರ್ಪಿನಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯವು ಗುಜರಾತ್ ಸರ್ಕಾರವನ್ನು ಕಟುವಾಗಿ ನಿಂದಿಸಿದೆ. 'ಜನತೆಯ ಜೀವ-ಆಸ್ತಿಪಾಸ್ತಿಗಳನ್ನು ರಕ್ಷಿಸಬೇಕಾದವರು ನ್ಯಾಯಯುತವಾದ ತನಿಖೆ ನಡೆಸಿ ಅಪರಾಧಿಗಳನ್ನು ಶಿಕ್ಷಿಸಬೇಕಾದವರು ಯಾವುದೇ ಕಾಳಜಿ ತೋರಿಲ್ಲ. ಬೆಸ್ಟ್ ಬೇಕರಿ ಅಮಾಯಕ ಮಹಿಳೆಯರೂ, ಹಸುಳೆಗಳು ಸುಟ್ಟು ಭಸ್ಮವಾಗುತ್ತಿದ್ದಾಗ ಈ ಆಧುನಿಕ ನೀರೋಗಳು ಬೇರೆಲ್ಲೋ ನೋಡುತ್ತಿದ್ದರು. ಬಹುಶಃ ಅಪರಾಧಿಗಳನ್ನು ರಕ್ಷಿಸಲು ಸಂಚು ಹೂಡುತ್ತಿದ್ದರೆಂದು ಕಾಣುತ್ತದೆ' ಎಂಬ ಸರ್ವೋಚ್ಚ ನ್ಯಾಯಾಲಯದ ಛೀಮಾರಿ, ವಾಜಪೇಯಿ, ಅಡ್ವಾಣಿಯವರ ಕಣ್ತೆರೆಸಬೇಕಾಗಿತ್ತು.

೨೦೦೨ರ ಮಾರ್ಚ್ ೧ನೇ ತಾರೀಖಿನಿಂದ ಇಂದಿನವರೆಗಿನ ವಾಜಪೇಯಿಯವರ ಹೇಳಿಕೆಗಳನ್ನು ಗಮನಿಸಿದರೆ ಅವರ ಇತ್ತೀಚಿನ ಹೇಳಿಕೆಗಳ ಗೂಢಾರ್ಥವನ್ನು ಗ್ರಹಿಸಬಹುದು. ವಾಜಪೇಯಿಯವರ ವ್ಯಕ್ತಿತ್ವವನ್ನು ಒಬ್ಬ ರಾಜಕೀಯ ವ್ಯಕ್ತಿಯಾಗಿ ಅಥವಾ ಪ್ರಧಾನ ಮಂತ್ರಿಯಾಗಿ ವಿಶ್ಲೇಷಿಸುವಾಗ ಈ ಹೇಳಿಕೆಗಳನ್ನು ಅವಲಂಬಿಸಬೇಕಾಗುತ್ತದೆ. ಗೋಧ್ರಾ ನಂತರದಲ್ಲಿ ೨೦೦೨ ಮಾರ್ಚ್ ೧ ರಂದು ವಾಜಪೇಯಿ ಮತ್ತು ಇತರ ಎಲ್ಲಾ ಪಕ್ಷಗಳ ನಾಯಕರು ಗುಜರಾತ್‌ನಲ್ಲಿ ಶಾಂತಿ ಕಾಪಾಡುವಂತೆ ಜನತೆಗೆ ಮನವಿ ಮಾಡಿಕೊಂಡರು. ಆದರೆ ಅಡ್ವಾಣಿ ವಾಜಪೇಯಿಯವರಿಗೆ ಮಾರ್ಚ್ ೧೫ರ ವಿಹಿಂಪ ಅಯೋಧ್ಯ ಯಾತ್ರೆ ಮುಖ್ಯವಾಗಿತ್ತು. ಒಂದೆಡೆ 'ಗುಜರಾತ್‌ನ ಗಲಭೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆಗೆ ಕಪ್ಪು ಚುಕ್ಕೆಯಿದ್ದಂತೆ' ಎಂದು ಹೇಳಿದ ವಾಜಪೇಯಿಯವರು ಅದೇ ಸಮಯದಲ್ಲಿ ವಿಹಿಂಪ ಯಾತ್ರೆಯನ್ನು ನಿರ್ಬಂಧಿಸಲು ಆರ್‌ಎಸ್‌ಎಸ್‌ನೊಡನೆ ಸಂವಾದ ನಡೆಸಿದ್ದರು. ಮಾರ್ಚ್ ೩ ರಂದು ಅಡ್ವಾಣಿಯವರು 'ಗುಜರಾತ್‌ನ ಘಟನೆಗಳು ನಮ್ಮ ನಾಲ್ಕು ವರ್ಷದ ಸಾಧನೆಯನ್ನು ನೀರುಪಾಲು ಮಾಡಿದೆ' ಎಂದು ಹೇಳಿದರೂ ಗೋಧ್ರಾವನ್ನು ಭಯೋತ್ಪಾದಕತೆ ಎಂದು ಬಣ್ಣಿಸಿ ಗುಜರಾತನ್ನು ಕೇವಲ ಪ್ರತಿಕ್ರಿಯಾ ಘಟನೆ ಎಂದೇ ಬಣ್ಣಿಸಿದ್ದುಂಟು.

೨೦೦೨ರ ಮಾರ್ಚ್ ೧ನೇ ತಾರೀಖಿನಿಂದ ಇಂದಿನವರೆಗಿನ ವಾಜಪೇಯಿಯವರ ಹೇಳಿಕೆಗಳನ್ನು ಗಮನಿಸಿದರೆ ಅವರ ಇತ್ತೀಚಿನ ಹೇಳಿಕೆಗಳ ಗೂಢಾರ್ಥವನ್ನು ಗ್ರಹಿಸಬಹುದು. ವಾಜಪೇಯಿಯವರ ವ್ಯಕ್ತಿತ್ವವನ್ನು ಒಬ್ಬ ರಾಜಕೀಯ ವ್ಯಕ್ತಿಯಾಗಿ ಅಥವಾ ಪ್ರಧಾನ ಮಂತ್ರಿಯಾಗಿ ವಿಶ್ಲೇಷಿಸುವಾಗ ಈ ಹೇಳಿಕೆಗಳನ್ನು ಅವಲಂಬಿಸಬೇಕಾಗುತ್ತದೆ. ಗೋಧ್ರಾ ನಂತರದಲ್ಲಿ ೨೦೦೨ ಮಾರ್ಚ್ ೧ ರಂದು ವಾಜಪೇಯಿ ಮತ್ತು ಇತರ ಎಲ್ಲಾ ಪಕ್ಷಗಳ ನಾಯಕರು ಗುಜರಾತ್‌ನಲ್ಲಿ ಶಾಂತಿ ಕಾಪಾಡುವಂತೆ ಜನತೆಗೆ ಮನವಿ ಮಾಡಿಕೊಂಡರು. ಆದರೆ ಅಡ್ವಾಣಿ ವಾಜಪೇಯಿಯವರಿಗೆ ಮಾರ್ಚ್ ೧೫ರ ವಿಹಿಂಪ ಅಯೋಧ್ಯ ಯಾತ್ರೆ ಮುಖ್ಯವಾಗಿತ್ತು. ಒಂದೆಡೆ 'ಗುಜರಾತ್‌ನ ಗಲಭೆಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆಗೆ ಕಪ್ಪು ಚುಕ್ಕೆಯಿದ್ದಂತೆ' ಎಂದು ಹೇಳಿದ ವಾಜಪೇಯಿಯವರು ಅದೇ ಸಮಯದಲ್ಲಿ ವಿಹಿಂಪ ಯಾತ್ರೆಯನ್ನು ನಿರ್ಬಂಧಿಸಲು ಆರ್‌ಎಸ್‌ಎಸ್‌ನೊಡನೆ ಸಂವಾದ ನಡೆಸಿದ್ದರು.

ಇದೇ ಅಡ್ವಾಣಿಯವರು ಮಾರ್ಚ್ ೧೧ ರಂದು ರಾಜ್ಯ ಸಭೆಯಲ್ಲಿ ಮಾತನಾಡುತ್ತಾ ಮೋದಿಯನ್ನು ಸಮರ್ಥಿಸಿದ್ದೇ ಅಲ್ಲದೆ, 'ಈ ರೀತಿಯ ಕೋಮುಗಲಭೆಯನ್ನು ಕೇವಲ ೭೨ ಗಂಟೆಗಳಲ್ಲಿ ಯಾವುದೇ ಸರ್ಕಾರವೂ ಅಡಗಿಸಿರಲಿಲ್ಲ, ಗುಜರಾತ್ ಗಲಭೆಗಳಲ್ಲಿ ಹಿಂದೂಗಳೇ ಹೆಚ್ಚು ಮಡಿದಿದ್ದಾರೆ' ಎಂದು ಹೇಳಿಕೆ ನೀಡಿದ್ದುಂಟು. ಆದರೆ ಅಡ್ವಾಣಿಯವರ '೭೨ ಗಂಟೆಗಳ' ನಂತರವೂ ಗುಜರಾತ್‌ನಲ್ಲಿ ದಹನ ಕ್ರಿಯೆ ಮುಂದುವರೆದಿತ್ತು. ಇದಾದ ಕೆಲದಿನಗಳ ನಂತರ ಏಪ್ರಿಲ್ ೧೨ ರಂದು ಗೋವಾದಲ್ಲಿ ನಡೆದ ಭಾಜಪದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ವಾಜಪೇಯಿಯವರು ತಮ್ಮ ನೈಜ ರೂಪವನ್ನು ಪ್ರಕಟಗೊಳಿಸಿದ್ದರು. ಬಹುಶಃ ಯಾವುದೇ ಪ್ರಧಾನಿಯೂ ತನ್ನ ದೇಶದ ಪ್ರಜೆಗಳ ಬಗ್ಗೆ ಅವರ ಧಾರ್ಮಿಕ ನಂಬಿಕೆಗಳ ಬಗ್ಗೆ ವಾಜಪೇಯಿಯವರಷ್ಟು ತುಚ್ಛವಾಗಿ ಮಾತನಾಡಿರಲಿಕ್ಕಿಲ್ಲ. ನರೇಂದ್ರ ಮೋದಿಯವರನ್ನು ಸಮರ್ಥಿಸುವುದರ ಜೊತೆಗೆ ವಾಜಪೇಯಿಯವರ ಹೇಳಿಕೆಗಳು ಗಮನಾರ್ಹವಾದವು.

'ಗೋಧ್ರಾದ ನಂತರ ನಡೆದ ಘಟನೆಗಳು ಖಂಡನಾರ್ಹವೇ ಆದರೆ ಇದು ಆರಂಭವಾಗಿದ್ದು ಹೇಗೆ ಎಂಬುದೇ ಮುಖ್ಯ ವಿಷಯ' ಇಲ್ಲಿ ವಾಜಪೇಯಿಯವರು ನೇರವಾಗಿ ಮುಸ್ಲಿಂ ಸಮುದಾಯವನ್ನು ದೂಷಿಸುತ್ತಾರೆ.

ಮುಸ್ಲಿಂ ಸಮುದಾಯದ ಬಗ್ಗೆ ಟೀಕೆ ಮಾಡುತ್ತಾ 'ಮುಸ್ಲಿಮರು ಯಾವುದೇ ಪ್ರದೇಶದಲ್ಲಿರಲಿ ಅವರು ಇತರರೊಡನೆ ಸಹಬಾಳ್ವೆ ನಡೆಸಲು ಸಿದ್ಧರಿರುವುದಿಲ್ಲ ಶಾಂತಿಯುತವಾಗಿ ಬಾಳದೆ ಅವರು ಭಯ ಭೀತಿ ಹುಟ್ಟಿಸುವ ಮೂಲಕ ತಮ್ಮ ಧರ್ಮ ಪ್ರಚಾರ ಮಾಡುತ್ತಾರೆ, ಮಲೇಷಿಯಾ ಇಂಡೋನೇಷಿಯದಲ್ಲೂ ಇದೇ ಸಮಸ್ಯೆಯಿದೆ. ಮುಸ್ಲಿಂ ಮೂಲಭೂತವಾದಿಗಳು ಭಯೋತ್ಪಾದನೆಯನ್ನು ಎಲ್ಲೆಡೆ ಹರಡುತ್ತಿದ್ದಾರೆ. ಇದು ಹಿಂದೂ ಸಂಸ್ಕೃತಿಗೆ ವಿರುದ್ಧವಾದದ್ದು ಮುಸ್ಲಿಮರು ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಅಲ್ಲಿನ ಆಳುವ ವರ್ಗಗಳಿಗೆ ಅವರ ಆಕ್ರಮಣಕಾರಿ ನೀತಿಯನ್ನು ನಿಯಂತ್ರಿಸುವುದೇ ಪ್ರಮುಖ ಕೆಲಸವಾಗುತ್ತದೆ' ಎಂದು ಹೇಳುವ ಮೂಲಕ ವಾಜಪೇಯಿಯವರು ಸಂಘ ಪರಿವಾರದ ಮುಖವಾಣಿಯಂತೆ ಅದೇ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತಾರೆ.

ಅದೇ ಗೋವಾ ಅಧಿವೇಶನದಲ್ಲಿ ವಾಜಪೇಯಿಯವರು 'ನಾವು ಅವರು' ಎಂಬ ಪದಗಳನ್ನು ಬಳಸಿರುವುದು ಗಮನಾರ್ಹ. 'ನಮ್ಮ ದೇಶದೊಳಗೆ ನಂತರ ಬಂದವರಿಗಿಂತಲೂ ನಾವು ಭಿನ್ನ ಮತ್ತು ಉತ್ತಮರು, ಮುಸ್ಲಿಂ, ಕ್ರೈಸ್ತ ದೊರೆಗಳು ಇಲ್ಲಿ ಬರುವ ಮುನ್ನವೂ ನಾವು ಸೆಕ್ಯುಲರ್ ಆಗಿದ್ದೆವು ನಾವು ಅವರಿಗೆ ಅವರ ಧರ್ಮವನ್ನು ಪಾಲಿಸಲು ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಿದ್ದೇವೆ' ಎಂದು ಹೇಳಿದ ನಂತರ ವಾಜಪೇಯಿಯವರು 'ಒಂದು ಕಾಲದಲ್ಲಿ ಇಸ್ಲಾಂ ಎಂದರೆ ತಾಳ್ಮೆ ಸತ್ಯ ಕರುಣೆಗಳಿಗೆ ಪ್ರಸಿದ್ಧವಾಗಿತ್ತು. ಈಗ ನಾನು ನೋಡುವಂತೆ ಇಸ್ಲಾಂ ಎಂದರೆ ಭಯೋತ್ಪಾದನೆಯೇ ಆಗಿದೆ.

ಧರ್ಮ ಯುದ್ಧದ ಆಧಾರದ ಮೇಲೆಯೇ ಇಸ್ಲಾಂ ಮುನ್ನಡೆಯುತ್ತದೆ' ಎಂದು ಹೇಳುತ್ತಾರೆ. ಆದರೆ ತದನಂತರದಲ್ಲಿ ಆ ಹೇಳಿಕೆಯನ್ನು ವಾಜಪೇಯಿಯವರು ಅಲ್ಲಗಳೆದು ತಾವು ಬೇರೆಯೇ ಅರ್ಥದಲ್ಲಿ ಹೇಳಿದ್ದನ್ನು ಮಾಧ್ಯಮಗಳು ತಿರುಚಿವೆ ಎಂದು ಹೇಳಿ ಜಾರಿಕೊಂಡರು.

ಎಲ್ಲಾ ಧರ್ಮಗಳೂ ಸಹ ಶಾಂತಿ ಸಹನೆ ಕರುಣೆಯನ್ನು ಬೋಧಿಸುತ್ತವೆ. ಆದರೆ ಧಾರ್ಮಿಕ ಅನುಯಾಯಿಗಳು ಧರ್ಮದ ಹೆಸರಿನಲ್ಲಿ ಹಿಂಸೆ ನಡೆಸುತ್ತಾರೆ ಎಂಬ ಸತ್ಯ ವಾಜಪೇಯಿಯವರಿಗೆ ತಿಳಿದಿರಬೇಕು. ಇಸ್ಲಾಂನಲ್ಲಿರುವಂತಹ ಭಯೋತ್ಪಾದನೆಯೇ ಹಿಂದೂ ಧರ್ಮದಲ್ಲೂ ಸಂಘಪರಿವಾರದ ರೂಪದಲ್ಲಿ ಇರುವುದೆಂಬ ಸತ್ಯಾಂಶವನ್ನು ವಾಜಪೇಯಿಯವರ ಗ್ರಹಿಕೆಗೆ ಬರಬೇಕಿತ್ತು. ದೇಶದ ಪ್ರಧಾನಿಯ ಸ್ಥಾನವನ್ನು ಅಲಂಕರಿಸುವ ವ್ಯಕ್ತಿಯ ಈ ರೀತಿಯ ಉನ್ಮಾದಕರ ಹೇಳಿಕೆಗಳು ಸೆಕ್ಯುಲರ್ ಸಮಾಜವನ್ನು ಹಾಳುಗೆಡವುತ್ತವೆ.

ಗೋವಾದಲ್ಲಿ ಕ್ರೈಸ್ತ ಮುಸಲ್ಮಾನರ ಬಗ್ಗೆ 'ನಂತರ ಭಾರತಕ್ಕೆ ಬಂದವರೆಂದು' ಟೀಕೆ ಮಾಡಿದ ವಾಜಪೇಯಿಯವರೇ ೨೦೦೧ರ ಏಪ್ರಿಲ್ ೧೧ ರಂದು ಟೆಹರಾನ್‌ನಲ್ಲಿ ಇರಾನಿನ ಮಜಲಿಸ್‌ಗಳನ್ನುದ್ದೇಶಿಸಿ ಮಾತನಾಡುವಾಗ 'ನಾವು ಯಾವ ಧರ್ಮವನ್ನೂ ಪರಕೀಯ ಎಂದು ಪರಿಗಣಿಸುವುದಿಲ್ಲ. ಸಾವಿರ ವರ್ಷಗಳ ಕಾಲ ಇಸ್ಲಾಂ ನಮ್ಮ ರಾಷ್ಟ್ರೀಯ ಜೀವನದ ಅಂಗವಾಗಿದೆ' ಎಂದು ಹೇಳಿದ್ದುದು ಅವರ ದ್ವಂದ್ವ ನಿಲುವುಗಳಿಗೆ ಉತ್ತಮ ನಿದರ್ಶನ. ತಮ್ಮ ಗೋವಾ ಭಾಷಣವನ್ನು ಸಮರ್ಥಿಸಿಕೊಳ್ಳಲು ವಾಜಪೇಯಿಯವರು ಸಂಸತ್ತಿನಲ್ಲಿ ಸಾಕಷ್ಟು ಕಸರತ್ತು ಮಾಡಬೇಕಾಯಿತು.

ತಮ್ಮ ಉದಾರವಾದೀ ವರ್ಚಸ್ಸನ್ನು ಉಳಿಸಿಕೊಳ್ಳಲು ಮೇ ೧ ರಂದು ಸಂಸತ್ತಿನಲ್ಲಿ 'ನಾನು ನನ್ನ ಜೀವಮಾನದಲ್ಲಿ ಜಾತಿ ಧರ್ಮವನ್ನಾಧರಿಸಿ ಯಾವ ವ್ಯಕ್ತಿಯನ್ನೂ ಭಿನ್ನವಾಗಿ ಕಂಡಿಲ್ಲ. ನಾನು ಸಂಪಾದಿಸುದುದೆಲ್ಲವನ್ನೂ ಈಗ ಕಳೆದುಕೊಂಡಂತಿದೆ' ಎಂದು ಹೇಳುವ ಮೂಲಕ ವಾಜಪೇಯಿ ತಮ್ಮ ಅಲ್ಪಸಂಖ್ಯಾತರ ವಿರೋಧಿ ನಿಲುವುಗಳನ್ನು ಮರೆಮಾಚಲು ಯತ್ನಿಸಿದ್ದುಂಟು. ಆದರೆ ಬಾಬ್ರಿ ಮಸೀದಿಯ ಬಗ್ಗೆ 'ನಾನು ಒಬ್ಬ ಸ್ವಯಂಸೇವಕನಾಗಿ ಹಿಂದುವಾಗಿ ಮಾತನಾಡುತ್ತಿದ್ದೇನೆ' ಎಂದು ಅವರೇ ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು (ಇಂಡಿಯನ್ ಎಕ್ಸ್‌ಪ್ರೆಸ್ ೭.೪.೯೮) ಇಷ್ಟೆಲ್ಲಾ ಸಮುಜಾಯಿಷಿ ನೀಡಿದ ನಂತರ, ಗುಜರಾತ್‌ಗೆ ೧೫೦೦ ಕೋಟಿ ರೂ.ಗಳ ಪರಿಹಾರ ಘೋಷಿಸಿದ ವಾಜಪೇಯಿಯವರು 'ಸಾಬರಮತಿ ರೈಲಿನ (ಗೋಧ್ರಾ) ಪ್ರಕರಣವನ್ನು ಖಂಡಿಸಿದ್ದಲ್ಲಿ ನಂತರದ ಗಲಭೆಗಳು ನಡೆಯುತ್ತಿರಲಿಲ್ಲ' ಎಂದು ಹೇಳುವ ಮೂಲಕ ತಮ್ಮ ನಿಜ ಸ್ವರೂಪವನ್ನು ಹೊರಗೆಡಹಿದ್ದರು.

ಗುಜರಾತ್ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ಮೋದಿಯವರ ಪ್ರಚಾರ ಅತ್ಯಂತ ಉನ್ಮಾದಕರವಾಗಿತ್ತೆಂದರೆ ತಪ್ಪಾಗಲಾರದು. ಮುಸಲ್ಮಾನರನ್ನು ಕುರಿತು ನರೇಂದ್ರ ಮೋದಿ 'ನೀವು ಹಿಂದೂಗಳೊಡನೆ ಸಂಬಂಧಗಳನ್ನು ಬೆಳೆಸಲು ಮತ್ತೊಮ್ಮೆ ವಿಫಲರಾಗಿ ಅವಕಾಶ ವಂಚಿತರಾಗಿರುವಿರಿ. ನಿಮ್ಮ ಸೆಕ್ಯುಲರ್ ಲಕ್ಷಣಗಳನ್ನು ನಿರೂಪಿಸಲು ವಿಫಲರಾಗಿರುವಿರಿ, ಒಂದು ಬಣವೇ ಸದಾಕಾಲವೂ ನಿಮ್ಮ ಪಾತಕೀ ಕೃತ್ಯಗಳನ್ನು ಸಹಿಸಿಕೊಂಡು ಕ್ಷಮಿಸಲಾಗುವುದಿಲ್ಲ. ಕೇವಲ ಒಂದು ಸಮುದಾಯವೇ ಕೋಮುಸೌಹಾರ್ದತೆಯನ್ನು ಕಾಪಾಡಲೂ ಆಗುವುದಿಲ್ಲ' ಎಂದು ಗುಡುಗಿದ್ದರು. ಮೋದಿಯವರ ಈ

ಕವಿ ಎಂಬ ಬಿರುದು ಪಡೆದಿರುವ ವಾಜಪೇಯಿ ತಮ್ಮ ಕವನಗಳಲ್ಲಿ ಪ್ರಕಟಪಡಿಸುವ ಕಾಲ್ಪನಿಕ ಸಂವೇದನೆಯನ್ನು ತಮ್ಮ ರಾಜಕೀಯದಲ್ಲಿ ಎಂದಿಗೂ ನಿರೂಪಿಸಿಲ್ಲ. ತಮ್ಮ ಕವನವೊಂದರಲ್ಲಿ ಅಣ್ವಸ್ತ್ರವನ್ನು ಖಂಡಿಸುವ ಕವಿ ವಾಜಪೇಯಿಯವರೇ ಪ್ರಧಾನಿಯ ರೂಪದಲ್ಲಿ ಬುದ್ಧನನ್ನು ನಗಿಸುತ್ತಾರೆ. ಅಣ್ವಸ್ತ್ರವನ್ನು ಸಮರ್ಥಿಸುತ್ತಾರೆ. ಕವನಗಳಲ್ಲಿ ಮಾನವೀಯತೆ ಸೌಹಾರ್ದತೆ ಮಾನವ ಸಂವೇದನೆಯನ್ನು ಅಭಿವ್ಯಕ್ತಗೊಳಿಸಿ ನಿಜಜೀವನದಲ್ಲಿ ನಾವು ಅವರು ಎಂಬ ಪರಿಭಾಷೆ ಬಳಸುತ್ತಾರೆ. ಭಾರತ ಎಂದಿಗೂ ಧಾರ್ಮಿಕ ರಾಷ್ಟ್ರವಾಗದು ಎಂದು ಒಂದೆಡೆ ಹೇಳಿ ಇನ್ನೊಂದೆಡೆ ಸಂಘಪರಿವಾರಕ್ಕೆ 'ನಮ್ಮದೇ ಆದ ಬಹುಮತ ಬಂದಲ್ಲಿ ನಾನು ನಿಮ್ಮ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುತ್ತೇನೆ' ಎಂದು ಭರವಸೆ ನೀಡುತ್ತಾರೆ.

ಹೇಳಿಕೆಯನ್ನು ಅಡ್ವಾಣಿಯವರಾಗಲಿ ವಾಜಪೇಯಿಯವರಾಗಲಿ ಖಂಡಿಸಲಿಲ್ಲ. ಬದಲಾಗಿ ನರೇಂದ್ರ ಮೋದಿ ಚುನಾವಣೆಗಳಲ್ಲಿ ಪ್ರಚಂಡ ವಿಜಯ ಸಾಧಿಸಿದಾಗ ವಾಜಪೇಯಿಯವರು ತಮ್ಮ ವಾದ ಸಾರ್ಥಕವಾಯಿತೆಂಬಂತೆ ಪ್ರತಿಕ್ರಿಯಿಸಿದ್ದರು. 'ಮುಸ್ಲಿಂ ಸಮುದಾಯದ ಜನರು ಗೋಧ್ರಾ ದುರಂತವನ್ನು ಈವರೆಗೂ ಖಂಡಿಸಿಲ್ಲ. ಅಲ್ಪಸಂಖ್ಯಾತರಿಂದಲೂ ಗೋಧ್ರಾ ಬಗ್ಗೆ ಪ್ರತಿಕ್ರಿಯೆ ಮೂಡಲಿಲ್ಲ' (ಟೆಲಿಗ್ರಾಫ್ ಡಿಸೆಂಬರ್ ೧೮, ೨೦೦೨) ಎಂದು ಹೇಳುವ ಮೂಲಕ ವಾಜಪೇಯಿಯವರು ತಮ್ಮ ಅಂತರಾಳವನ್ನು ಹೊರಗೆಡಹಿದ್ದರು.

ವಾಜಪೇಯಿಯವರ ಈ ಎಲ್ಲಾ ಹೇಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಲ್ಲಿ ಅವರ ಅಭಿಪ್ರಾಯದಲ್ಲಿ ಅವಿಚ್ಛಿನ್ನತೆ ಕಂಡುಬರುತ್ತದೆ. ಆದರೆ ಅವರ ಹಿಂಬಾಲಕರು ಇದನ್ನು ಕಡೆಗಣಿಸಿ ಅವರ ಹೇಳಿಕೆಗಳಲ್ಲಿ ಸೂಕ್ಷ್ಮವಾದುದನ್ನು ಹೆಕ್ಕಿ ತೆಗೆದು ಹಾಡಿ ಹೊಗಳುತ್ತಾರೆ. ೨೦೦೪ರ ಚುನಾವಣೆಗಳಲ್ಲಿ ಹೀನಾಯ ಸೋಲು ವಾಜಪೇಯಿಯವರಿಂದ ಮುಸ್ಲಿಂ ಪರವಾದ ಮಾತುಗಳನ್ನು ಹೊರಡಿಸಿ ತೆಂದು ಹೇಳಬಹುದು.

ವಾಜಪೇಯಿಯವರ ಬಗ್ಗೆ ಮಾತ್ರ ಈ ರೀತಿಯ ಟೀಕೆ ಮಾಡಬೇಕಾದ ಅವಶ್ಯಕತೆ ಏಕಿದೆ ಎಂದರೆ, ಮಾಧ್ಯಮಗಳು ಕಳೆದ ಐದಾರು ವರ್ಷಗಳಲ್ಲಿ ವಾಜಪೇಯಿಯವರನ್ನು ಅವರ ಊಹೆಗೂ ನಿಲುಕದಷ್ಟು ಮಟ್ಟಿಗೆ ಹಾಡಿ ಹೊಗಳಿ ಅಟ್ಟಕ್ಕೇರಿಸಿದ್ದಾರೆ. ವಾಜಪೇಯಿಯವರಲ್ಲಿ ಮಾತ್ರ ಈ ದ್ವಂದ್ವ ವ್ಯಕ್ತಿತ್ವವಿರುವುದೆಂದು ಹೇಳಲಾಗುವುದಿಲ್ಲ. ಆದರೂ ಮಾಧ್ಯಮಗಳಿಂದ ಭಾಜಪ ಸಂಘಪರಿವಾರದವರಿಂದ ದೇಶದ ಅಪ್ರತಿಮ ನಾಯಕ ನೆಹರೂರವರ ವ್ಯಕ್ತಿತ್ವವನ್ನೂ ಮೀರಿಸುವ ವ್ಯಕ್ತಿತ್ವ, ೨೦ ವರ್ಷಗಳ ಕಾಲ ಭಾರತವನ್ನಾಳುವ ಕಣ್ಮಣಿ ಎಂದೆಲ್ಲಾ ಹೊಗಳಿಸಿಕೊಂಡ ಶ್ರೀಮಾನ್ ಉದಾರವಾದಿ ವಾಜಪೇಯಿಯವರು ಈಗ ಅವರ ಪಕ್ಷದಲ್ಲೇ ಮೂಲೆಗುಂಪಾಗಿದ್ದಾರೆ.

ಮೋದಿಯವರನ್ನು ಟೀಕಿಸಿದ ಕ್ಷಣವೇ ವಾಜಪೇಯಿಯವರು ಸಂಘ ಪರಿವಾರದ ಶತ್ರುವಾಗುತ್ತಾರೆಂದರೆ ಇಷ್ಟು ವರ್ಷಗಳೂ ಅವರು ನಿಷ್ಠಾವಂತ ಸ್ವಯಂ ಸೇವಕರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಅದು ನಿಜವೂ ಹೌದು. ತಮ್ಮ ೫೦ ವರ್ಷಗಳ ರಾಜಕೀಯದಲ್ಲಿ ವಾಜಪೇಯಿಯವರು ಎಂದಿಗೂ ಗೋಳ್ವಾಲ್ಕರರನ್ನಾಗಲೀ, ಹಿಟ್ಲರ್‌ನನ್ನಾಗಲೀ, ಮನುಸ್ಮೃತಿಯನ್ನಾಗಲೀ, ವಿಮರ್ಶಾತ್ಮಕವಾಗಿ ವಿಶ್ಲೇಷಿಸಿಲ್ಲ. ಟೀಕೆಯನ್ನೂ ಮಾಡಿಲ್ಲ. ಕವಿ ಎಂಬ ಬಿರುದು ಪಡೆದಿರುವ ವಾಜಪೇಯಿ ತಮ್ಮ ಕವನಗಳಲ್ಲಿ ಪ್ರಕಟಪಡಿಸುವ ಕಾಲ್ಪನಿಕ ಸಂವೇದನೆಯನ್ನು ತಮ್ಮ ರಾಜಕೀಯದಲ್ಲಿ ಎಂದಿಗೂ ನಿರೂಪಿಸಿಲ್ಲ.

ತಮ್ಮ ಕವನವೊಂದರಲ್ಲಿ ಅಣ್ವಸ್ತ್ರವನ್ನು ಖಂಡಿಸುವ ಕವಿ ವಾಜಪೇಯಿಯವರೇ ಪ್ರಧಾನಿಯ ರೂಪದಲ್ಲಿ ಬುದ್ಧನನ್ನು ನಗಿಸುತ್ತಾರೆ. ಅಣ್ವಸ್ತ್ರವನ್ನು ಸಮರ್ಥಿಸುತ್ತಾರೆ. ಕವನಗಳಲ್ಲಿ ಮಾನವೀಯತೆ ಸೌಹಾರ್ದತೆ ಮಾನವ ಸಂವೇದನೆಯನ್ನು ಅಭಿವ್ಯಕ್ತಗೊಳಿಸಿ ನಿಜಜೀವನದಲ್ಲಿ ನಾವು ಅವರು ಎಂಬ ಪರಿಭಾಷೆ ಬಳಸುತ್ತಾರೆ. ಭಾರತ ಎಂದಿಗೂ ಧಾರ್ಮಿಕ ರಾಷ್ಟ್ರವಾಗದು ಎಂದು ಒಂದೆಡೆ ಹೇಳಿ ಇನ್ನೊಂದೆಡೆ ಸಂಘಪರಿವಾರಕ್ಕೆ 'ನಮ್ಮದೇ ಆದ ಬಹುಮತ ಬಂದಲ್ಲಿ ನಾನು ನಿಮ್ಮ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುತ್ತೇನೆ' ಎಂದು ಭರವಸೆ ನೀಡುತ್ತಾರೆ.

ಇಷ್ಟೆಲ್ಲಾ ದ್ವಂದ್ವಾತ್ಮಕ ನಿಲುವುಗಳ ನಡುವೆಯೂ ವಾಜಪೇಯಿಯವರು ಭಾರತೀಯ ರಾಜಕಾರಣದಲ್ಲಿ ಎತ್ತರದ ವ್ಯಕ್ತಿಯಾಗಿ, ಉದಾರವಾದಿ, ಸೆಕ್ಯುಲರ್ ನಾಯಕರಾಗಿ ಬೆಳೆದಿದ್ದರೆ ಅದಕ್ಕೆ ಒಂದೆಡೆ ಮಾಧ್ಯಮಗಳು ಕಾರಣವಾದರೆ ಇನ್ನೊಂದೆಡೆ ಕಾಂಗ್ರೆಸ್ಸೇತರ ಪಕ್ಷಗಳೂ ಕಾರಣವೆಂದು ಹೇಳಬಹುದು.

ಆದಗ್ಯೂ ವಾಜಪೇಯಿಯವರಲ್ಲಿ ಯಾವುದೇ ಸದ್ಗುಣಗಳಿಲ್ಲ ಎಂದು ಹೇಳಲಾಗುವುದಿಲ್ಲ. ಸ್ವಾತಂತ್ರ್ಯ ನಂತರದಲ್ಲಿ ಯಾವುದೇ ವ್ಯಕ್ತಿ ಅತ್ಯಂತ ನಿಷ್ಠಾವಂತ-ಸತ್ಯವಂತ- ಪ್ರಾಮಾಣಿಕ ಎಂದಾದರೆ ಆತನನ್ನು ಆರ್‌ಎಸ್‌ಎಸ್ ಅಥವಾ ಕಮ್ಯುನಿಸ್ಟ್ ಪಕ್ಷದ ಸದಸ್ಯನೆಂದು ಗುರುತಿಸಲಾಗುತ್ತಿತ್ತು. ವಾಜಪೇಯಿಯವರು ಆ ಕಾಲಘಟ್ಟದವರೇ ಆದ್ದರಿಂದ ಅವರಲ್ಲಿ ವೈಯಕ್ತಿಕ ಪ್ರಾಮಾಣಿಕತೆ, ಸಭ್ಯತೆ, ಸರಳತೆ ಇದೆ. ಭ್ರಷ್ಟಾಚಾರದ ವಿರುದ್ಧ ಸ್ಪಷ್ಟ ನಿಲುವು ತೆಗೆದುಕೊಳ್ಳುತ್ತಾರೆ. ಇತರ ಸಂಘ ಪರಿವಾರದವರ ಹಾಗೆ ಅವಾಚ್ಯ ಭಾಷೆ ಬಳಸುವುದಿಲ್ಲ. ರಾಜಕೀಯದಲ್ಲಿ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ವಿದೇಶಾಂಗ ಮಂತ್ರಿಯಾಗಿ ಪ್ರಧಾನಿಯಾಗಿ ಶ್ಲಾಘನೀಯ ಕೆಲಸಗಳನ್ನು ಮಾಡಿದ್ದಾರೆ. ಆದರೂ ಭಾರತೀಯ ರಾಜಕಾರಣದಲ್ಲಿ ಅವರು ಭಿನ್ನ ಎನಿಸದಿರಲು ಕಾರಣ ಅವರ ದ್ವಂದ್ವ ವ್ಯಕ್ತಿತ್ವ.

ಬಹುಶಃ ಈ ದ್ವಂದ್ವ ವ್ಯಕ್ತಿತ್ವದಿಂದ ಭಾರತದ ರಾಜಕೀಯ ಇತಿಹಾಸದಲ್ಲಿ ಯಾರೂ ಹೊರತಾಗಿಲ್ಲ. ನೆಹರೂರವರಿಂದ ಹಿಡಿದು ಪ್ರಸ್ತುತ ಪ್ರಧಾನಿಗಳವರೆಗೆ ಎಲ್ಲಾ ರಾಜಕಾರಣಿಗಳಲ್ಲೂ ಈ ಪ್ರವೃತ್ತಿ ಕಾಣಬಹುದು. ನಿದರ್ಶನ ರೂಪದಲ್ಲಿ ಹೇಳುವುದಾದರೆ ಮಹಾ ಪ್ರಜಾತಂತ್ರವಾದಿಗಳೆಂದು ಹೆಸರಾಂತರಾಗಿದ್ದ ಮಾನುಮಸಾನಿ, ಕೃಪಲಾನಿ, ಜೆಪಿ ಮುಂತಾದವರು ೬೨ರ ಚೀನಾ ಯುದ್ಧದ ಮುನ್ನ ನೆಹರೂ

ಸರ್ಕಾರವನ್ನು ಮಿಲಿಟರಿಗಾಗಿ ಹೆಚ್ಚು ಹಣ ವ್ಯರ್ಥ ಮಾಡುತ್ತಿದೆ ಎಂದು ದೂಷಿಸಿ ಲೋಕಸಭೆಯಲ್ಲಿ ಕೋಲಾಹಲ ಉಂಟುಮಾಡಿದ್ದರು. ಇದೇ ನಾಯಕರು ೬೨ರ ಯುದ್ಧದಲ್ಲಿ ಭಾರತ ಸೋಲುಂಡ ನಂತರ ನೆಹರೂ ಸರ್ಕಾರದ ಮಿಲಿಟರಿ ಸಿದ್ಧತೆ ಸರಿಯಾಗಿಲ್ಲವೆಂದು ಟೀಕಿಸಿದ್ದರು.

ಈ ದೃಷ್ಟಿಯಿಂದ ನೋಡಿದಾಗ ವಾಜಪೇಯಿಯವರನ್ನು ಮಾತ್ರ ಪ್ರತ್ಯೇಕಿಸಿ ಟೀಕೆ ಮಾಡುವುದು ತರವಲ್ಲ ಎನಿಸಬಹುದು. ಆದರೆ ಮಾಧ್ಯಮಗಳು ೨೦೦೪ರ ಚುನಾವಣೆಗಳ ನಂತರವೂ ಸಹ ವಾಜಪೇಯಿಯವರ ವರ್ಚಸ್ಸನ್ನು ಕಾಪಾಡಲು ಹೆಣಗಾಡಿದ್ದು ಈ ರೀತಿಯ ವಿಶ್ಲೇಷಣೆಗೆ ಪೂರಕವಾಗಿದೆ. ನೆಹರೂ ನಂತರ ಯಾರು? ಇಂದಿರಾ ನಂತರ ಯಾರು? ಎಂಬ ಅರ್ಥಹೀನ ಪ್ರಲಾಪಗಳಂತೆ ಮಾಧ್ಯಮಗಳು ವಾಜಪೇಯಿಯ ನಂತರ ಯಾರು? ಎಂಬ ಪ್ರಶ್ನೆಯನ್ನು ಜನತೆಯ ಮುಂದಿಟ್ಟಿದ್ದು ಅವರ ವ್ಯಕ್ತಿತ್ವವನ್ನು ರಕ್ಷಿಸಲು ಮಾಡಿದ ಕುತಂತ್ರವೇ ಎಂದು ಹೇಳಬಹುದು.

ನೆಹರೂ ನಂತರ ಯಾರು? ಇಂದಿರಾ ನಂತರ ಯಾರು? ಎಂಬ ಅರ್ಥಹೀನ ಪ್ರಲಾಪಗಳಂತೆ ಮಾಧ್ಯಮಗಳು ವಾಜಪೇಯಿಯ ನಂತರ ಯಾರು? ಎಂಬ ಪ್ರಶ್ನೆಯನ್ನು ಜನತೆಯ ಮುಂದಿಟ್ಟಿದ್ದು ಅವರ ವ್ಯಕ್ತಿತ್ವವನ್ನು ರಕ್ಷಿಸಲು ಮಾಡಿದ ಕುತಂತ್ರವೇ ಎಂದು ಹೇಳಬಹುದು. ಭಾರತೀಯ ಸಮಾಜ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು ಸಾವಿರಾರು ಆಕ್ರಮಣ ಎದುರಿಸಿ ನೂರಾರು ಸಾಮ್ರಾಜ್ಯಗಳ ಅವಸಾನಗಳನ್ನು ಮೀರಿ ಇಂದು ಪ್ರಜಾತಾಂತ್ರಿಕ ದೇಶವಾಗಿ ಹೊರ ಹೊಮ್ಮಿದ್ದರೆ ಅದು ನೆಹರೂ-ಇಂದಿರಾ- ವಾಜಪೇಯಿ ಯವರು ಗಳಿಂದಲ್ಲ. ಬದಲಾಗಿ ಜನತೆಯ ಪರಿಶ್ರಮ-ಫಲ ದಿಂದ ಮಾತ್ರ ಎಂಬ ಅಂಶವನ್ನು ಮಾಧ್ಯಮಗಳು ರಾಜಕೀಯ ಪಕ್ಷಗಳು ಅರಿಯಬೇಕಾಗಿದೆ.

ಭಾರತೀಯ ಸಮಾಜ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದು ಸಾವಿರಾರು ಆಕ್ರಮಣ ಎದುರಿಸಿ ನೂರಾರು ಸಾಮ್ರಾಜ್ಯಗಳ ಅವಸಾನಗಳನ್ನು ಮೀರಿ ಇಂದು ಪ್ರಜಾತಾಂತ್ರಿಕ ದೇಶವಾಗಿ ಹೊರ ಹೊಮ್ಮಿದ್ದರೆ ಅದು ನೆಹರೂ-ಇಂದಿರಾ-ವಾಜಪೇಯಿಯವರುಗಳಿಂದಲ್ಲ. ಬದಲಾಗಿ ಜನತೆಯ ಪರಿಶ್ರಮ-ಫಲದಿಂದ ಮಾತ್ರ ಎಂಬ ಅಂಶವನ್ನು ಮಾಧ್ಯಮಗಳು ರಾಜಕೀಯ ಪಕ್ಷಗಳು ಅರಿಯಬೇಕಾಗಿದೆ.

ಇಷ್ಟೆಲ್ಲಾ ದ್ವಂದ್ವಗಳಿರುವ ವ್ಯಕ್ತಿಗಳೇ ರಾಷ್ಟ್ರದ ಮೇರು ವ್ಯಕ್ತಿತ್ವದಂತೆ ಚಿತ್ರಿಸುವುದಾದರೆ, ಉದಾತ್ತ ಗುಣಗಳನ್ನುಳ್ಳ ವ್ಯಕ್ತಿಗಳನ್ನು ನಮ್ಮ ಮಾಧ್ಯಮಗಳು ಹೇಗೆ ಚಿತ್ರಿಸಬಲ್ಲವು ಎಂದು ಊಹಿಸುವುದು ಕಷ್ಟವಾಗುತ್ತದೆ. ಕೊನೆಯದಾಗಿ ಹೇಳುವುದಾದರೆ ವಾಜಪೇಯಿಯವರು ತಮ್ಮ ಬಾಲ್ಯದಲ್ಲಿ ಸಂಘಪರಿವಾರ ಸೇರದೆ ರಾಷ್ಟ್ರೀಯ ಮುಖ್ಯ ವಾಹಿನಿಯಲ್ಲಿ ಸೇರಿದ್ದರೆ ಮೇರು ವ್ಯಕ್ತಿಯಾಗಿ ಇರುತ್ತಿದ್ದರು. ವಾಜಪೇಯಿಯವರಿಗೂ ಅವರೊಳಗಿನ ಸ್ವಯಂ ಸೇವಕನಿಗೂ ಇರುವ ವ್ಯತ್ಯಾಸವೇ ಅವರ ವ್ಯಕ್ತಿತ್ವವನ್ನು ರೂಪಿಸಿದೆ ಎಂದರೆ ತಪ್ಪಾಗಲಾರದು. □



ಗಾಢಮೌನಕ್ಕೆ ಜೋತುಬಿದ್ದಿದೆ
ಈ ನಟ್ಟಿರುಳು.

ದುಡಿದ ಜೀವಗಳ ಒರಗಿಸಿ
ಕಲರವದ ಹಕ್ಕಿಗಳ ಗೂಡು ಸೇರಿಸಿ
ನದಿ ಜಲಪಾತಗಳ ಮೊರೆತವನ್ನು ನಿಲ್ಲಿಸಿ
ಗಾಢಮೌನಕ್ಕೆ ಜೋತು ಬಿದ್ದಿದೆ
ಈ ನಟ್ಟಿರುಳು.

ಸೂತಕದ ಮನೆಯಂತೆ
ಸ್ತಬ್ಧವಾಗಿದೆ ಪ್ರಕೃತಿ.
ಇಂಪಿಲ್ಲ, ತಂಪಿಲ್ಲ, ಗಾಳಿಯರವವಿಲ್ಲ
ಎಲೆಗಳಲು ಗಾಟವಿಲ್ಲ
ಹೆಜ್ಜೆ ಸಪ್ಪಳವಿಲ್ಲ, ಉಸಿರಾಟವಿಲ್ಲ
ಯಾವುದೋ ದುಃಖಾಗ್ನಿಯುರಿಯಲ್ಲಿ ಬೇಯುವಂತೆ
ಗಾಢಮೌನಕ್ಕೆ ಜೋತು ಬಿದ್ದಿದೆ
ಈ ನಟ್ಟಿರುಳು.

ವಿನಾಶದ ಸೂಚನೆಯೊ, ನವಸೃಷ್ಟಿಯಾರಂಭವೊ
ಹೀಗೆ ಸಹಜ ಕಾಲಗತಿಯಲ್ಲೊಮ್ಮೊಮ್ಮೆ
ಘಟಿಸುವ ವಿಸ್ಮಯವೊ ಅಥವಾ
ದಿವ್ಯದರಿವಿನ ಗಳಿಗೆಯೊ ?
ಓ ಕಾಲವೇ
ಏನಿದರ ಗುಟ್ಟು?
ಎಲ್ಲಿರಬಹುದಿದರ ಕೊನೆ ?

ಕತ್ತಲಲ್ಲಿ ತಡಕುವ ಮನವೇ
ಪ್ರಾರ್ಥಿಸು
ಬೆಳಕು ಹರಿಯಲಿ ಬೇಗ
ಎದೆಯಲ್ಲಿ, ಮತ್ತೆ ಚಲಿಸಲಿ ಲೋಕ
ಸಹಜ ಗತಿಯಲ್ಲಿ, ಆದರೂ
ಮೌನ ಕರಗದೆ ಇರಲಿ.
ಮಾತು-ಮೌನದ ನಡಿಗೆ
ಜತೆಯಾಗಿರಲಿ.

○ ಡಾ॥ ಸಂತೋಷ ಚೊಕ್ಕಾಡಿ

ಮತಾಂತರವೂ, ವೈದಿಕರ ಕುತಂತ್ರವೂ

ದೃಷ್ಟಿಕೋನ

ಈ ಆಧುನಿಕ ಕಾಲ ವೈದಿಕ ಧರ್ಮದ ಪುನರುತ್ಥಾನದ ಕಾಲ. ಅದು ರಾಜಕೀಯ ಪ್ರಭುತ್ವಕ್ಕೇರಲು ದಾಪುಗಾಲಿಡುತ್ತಿರುವಾಗ ಗುಡಿ, ಗುಂಡಾರ, ಹಿಂದೂ ಒಂದು, ಮಸೀದಿ, ಗೋಮಾಂಸ ಮುಂತಾದ ಬಾಣಗಳನ್ನು ಒಂದೊಂದಾಗಿ ಹೊರಹಾಕುತ್ತ ತನ್ನ ರಾಜಕೀಯ ಬಲವರ್ಧನೆಗೆ ಜನಬೆಂಬಲವನ್ನು ಯಾಚಿಸುತ್ತಿದೆ. ವ್ಯಕ್ತಿಯೊಬ್ಬನಿಗೆ ಯಾವುದೇ ಧರ್ಮವನ್ನು ಹೊಂದುವ, ಅನುಸರಿಸುವ ಹಕ್ಕನ್ನು ಸಂವಿಧಾನವೇ ನೀಡಿದೆ. ಹೀಗಿದ್ದಾಗ್ಯೂ ಕೆಲವು ಮೂಲಭೂತವಾದಿಗಳು ಇದನ್ನೊಂದು ರಾಷ್ಟ್ರೀಯ ಸಮಸ್ಯೆಯಾಗಿಸುತ್ತಿದ್ದಾರೆ.

○ ಡಾ|| ಮಲ್ಲಿಕಾ ಘಂಟಿ

ವೈದಿಕ ಮತದ ಜೀವ ವಿರೋಧಿತನಕ್ಕೆ ಮತ್ತು ಅದರ ಕ್ರೌರ್ಯ, ದೌರ್ಜನ್ಯಕ್ಕಾಗಿ ಬಹುಹಿಂದಿನಿಂದಲೂ ವ್ಯಕ್ತಿಗತನೆಲೆಯಲ್ಲಿ ಪ್ರತಿಭಟಿಸಿ ನಂತರ ಸಾಮುದಾಯಿಕ ಶಕ್ತಿಯಾಗಿ ಪರ್ಯಾಯ ಧರ್ಮಗಳು ಇಲ್ಲಿ ಹುಟ್ಟಿ ಬೆಳೆದದ್ದಕ್ಕೆ ಸಾಕ್ಷಿಗಳಿವೆ. ಚಾರ್ವಾಕ, ಬೌದ್ಧ, ಜೈನ, ವೀರಶೈವ ಮುಂತಾದುವುಗಳನ್ನು ಗಮನಿಸಬಹುದು. ಒಂದು ದುರಂತವೇನೆಂದರೆ, ಯಾವ ಕಾರಣಕ್ಕಾಗಿ ಹಿಂದೂಧರ್ಮವನ್ನು ವಿರೋಧಿಸಿ ಹುಟ್ಟಿಕೊಂಡಿದ್ದವೋ ಅವುಗಳೆಲ್ಲ ಕಾಲಾಂತರದಲ್ಲಿ ಹಿಂದೂಧರ್ಮದ ಚಹರೆ, ನೆರಳಾಗಿ ನಿಂತುಕೊಂಡವು.

ಹಿಂದೂಧರ್ಮಕ್ಕೆ ತಂತ್ರಗಾರಿಕೆ, ಕುತಂತ್ರಗಾರಿಕೆಯೇ ಮೂಲಭೂತ ಗುಣವಾಗಿರುವುದರಿಂದ ಅದು ತನ್ನ ಎದುರಾಳಿಯ ಶಕ್ತಿಯ ಅಂದಾಜಿನ ಮೂಲಕ ತನ್ನ ಕಾರ್ಯಸೂಚಿಯನ್ನು ಸಿದ್ಧಪಡಿಸಿಕೊಳ್ಳುತ್ತದೆ. ಹಿಂದೂಧರ್ಮಕ್ಕೆ ಇಲಾಸ್ಟಿಕ್ ಗುಣವಿದೆ. ಈ ಗುಣದ ಮೂಲಕ ತನ್ನ ಎದುರಾಳಿಯ ಅರಿವಿಗೆ ನಿಲುಕದ ಹಾಗೇ ಪ್ರವೇಶ ಮಾಡುತ್ತದೆ. ಹೀಗೆ ಪ್ರವೇಶ ಮಾಡಿ ಕ್ರಮೇಣ ವೈರಿಯ ಅಂತಸತ್ತ್ವವನ್ನೆಲ್ಲ ನಾಶಗೊಳಿಸಿ ಅದರ ಚಲನಶೀಲತೆಯನ್ನು ಸ್ಥಗಿತಗೊಳಿಸುತ್ತದೆ, ಜಡಗೊಳಿಸುತ್ತದೆ. ಜಡಗೊಂಡ ಮೇಲೆ ತಾನು ಬಯಲಿಗೆ ಬಂದು ಕತ್ತಿಹಿರಿದು ನಿಲ್ಲುತ್ತದೆ. ಹಿಂದೂಧರ್ಮ ಅನ್ನುವುದು ಒಂದು ವಾಸನಾಮಯ ಜಗತ್ತು. ಇದರ ವಾಸನೆಗೆ, ದುರ್ಗುಣಕ್ಕೆ ಎಲ್ಲ ಧರ್ಮದ ಮೂಗುಗಳು ಪ್ರಾರಂಭದಲ್ಲಿ ಮುಚ್ಚಿಕೊಂಡಿವೆ. ಕ್ರಮೇಣ ಇದರ ತೆಕ್ಕೆಗೆ ಅಮರಿಕೊಂಡಿವೆ.

ಅಖಿಲಭಾರತ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರು ಸಮ್ಮೇಳನದ ಉದ್ಘಾಟನೆಯ ಸಂದರ್ಭದಲ್ಲಿ 'ಲಿಂಗಾಯತ ಧರ್ಮದ ಒಳಪಂಗಡಗಳೆಲ್ಲ ಒಂದಾಗಬೇಕೆಂದು' ಹೇಳಿದರು. ಇದು ಬಸವಣ್ಣನ ಆಶಯಕ್ಕೆ ವಿರುದ್ಧವಾದದ್ದು. ಇಂದಿನ ಸಂದರ್ಭದಲ್ಲಿ ಕೇವಲ ಲಿಂಗಾಯತ ಜಾತಿ ಒಂದಾಗುವುದಲ್ಲ ಎಲ್ಲ ಅವೈದಿಕ ಜಾತಿ ಧರ್ಮಗಳು ಒಂದಾಗಬೇಕಾದ ತುರ್ತಿದೆ. ಬಸವಣ್ಣನವರು ತಮ್ಮ ಧರ್ಮದ ಮಹಾಮನೆಗೆ ಬಾಗಿಲನ್ನು ಹಚ್ಚಿ ಬೀಗದ ಕೈಯನ್ನು ಲಿಂಗಧಾರಿಗಳ ಕೈಯಲ್ಲಿ ಕೊಟ್ಟಿರಲಿಲ್ಲ. ಲಿಂಗ ಹರಿದು ಬಿದ್ದರು ಅದರ ಹಂಗಿಗೆ ಒಳಗಾಗದ ನುಲಿಯ ಚಂದಯ್ಯನಂಥ ಕಾಯಕ ಜೀವಿಗಳಿಂದ ಬಸವಣ್ಣನ ಚೈತನ್ಯ ನೂರ್ಮಡಿಸಿದೆ. ಲಿಂಗ ಕಟ್ಟಿಕೊಳ್ಳದೆ, ಲಿಂಗಾಯತ ಜಾತಿಯಲ್ಲಿ ಹುಟ್ಟದ ಲಿಂಗನಿಷ್ಠೆಯ ನುಲಿಯ ಚಂದಯ್ಯಗಳು ಇಂದಿಗೂ ಬಸವಸಿದ್ಧಾಂತವನ್ನು ಉಸಿರಾಡಿಸುತ್ತಿರುವರು. ಮಾರವಾಡಿ ಮಠಗಳ ಲೆಕ್ಕಚಾರದ ಲಿಂಗತತ್ವ ಬಸವತತ್ವವಾಗದು. ಶರಣ ಪರಿಷತ್ತು ನಡೆನುಡಿ ಒಂದಾದವರ ಮಹಾಮನೆಯಾಗುವುದರ ಮೂಲಕ ಇವತ್ತಿನ ಭೌತಿಕ ಬದುಕಿನ ಸಮಸ್ಯೆಗಳಿಗೆ ಉತ್ತರಗಳನ್ನು ಹುಡುಕಬೇಕು.

ಭಾರತದ ಸಂದರ್ಭದಲ್ಲಿ ಸಮಾಜವೆಂಬುದರ ವ್ಯಾಖ್ಯಾನ ಸಮಾಜಶಾಸ್ತ್ರಜ್ಞರು ಹೇಳುವಂತೆ ಇಂದು ಉಳಿದುಕೊಂಡಿಲ್ಲ. ಎಲ್ಲ ಜಾತಿ, ಉಪಜಾತಿಗಳು, ಸಂಘಟಿತ ನೆಲೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿವೆ. ಹೀಗಾಗಿ ಅವುಗಳೆಲ್ಲವೂ ತಮ್ಮ ತಮ್ಮ ಜಾತಿಗಳನ್ನು 'ಜಾತಿ ಸಮಾಜಗಳೆಂದು' ಕರೆದುಕೊಳ್ಳುತ್ತಿವೆ. ಲಿಂಗಾಯತ ಸಮಾಜ, ಕುರುಬ ಸಮಾಜ, ಗಂಗಾಮತ ಸಮಾಜ, ಬ್ರಾಹ್ಮಣ ಸಮಾಜ, ವಾಲ್ಮೀಕಿ ಸಮಾಜ- ಹೀಗೆ ಜಾತಿ ಸಮಾಜಗಳು ತಮ್ಮ ತಮ್ಮ ಜನ ಸಂಖ್ಯಾಬಲದ ಮೂಲಕ ರಾಜಕೀಯ ಸ್ಥಾನಮಾನಗಳನ್ನು ಪಡೆದುಕೊಳ್ಳಲು ಮುಂದಾಗಿವೆ.

ಸಾಮಾಜಿಕ ಸ್ಥಾನಕ್ಕಿಂತಲೂ ರಾಜಕೀಯ ಶಕ್ತಿ ಪ್ರದರ್ಶನಕ್ಕಾಗಿ ಇಂತಹ ಸಂಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ.

ಪ್ರಾಚೀನ ಕಾಲದಿಂದಲೂ ಮತಾಂತರದ ಕಾರ್ಯ ಇಲ್ಲಿ ನಡೆದಿವೆ. ಆಗ ಇಲ್ಲದ ಹುಯ್ಯಿಲು ಈಗ ತಾರಕಕ್ಕೇರಿದೆ. ಜೈನ, ಬೌದ್ಧ ಇಸ್ಲಾಂ ಧರ್ಮಗಳು ಹಿಂದೂಧರ್ಮದ ಹಾಗೇ ಈ ನೆಲದಲ್ಲಿ ನೆಲೆಯೂರಿವೆ. ಹಿಂದೂಧರ್ಮಕ್ಕೆ ಪಸರಿಸುವ ಗುಣವಿಲ್ಲ, ಅದೇನಿದ್ದರೂ ಘನೀಭೂತದ್ದು. ಇದನ್ನು ಒಡೆದಂತೆ ಜಾತಿಗಳ ಚೂರು ಹೊರಬೀಳುತ್ತದೆ. ಆದರೆ ಬೌದ್ಧ ಜೈನ, ಇಸ್ಲಾಂ ಧರ್ಮಗಳಿಗೆ ಹರಿಯುವ, ಪಸರಿಸುವ, ಚಲಿಸುವ ಗುಣವಿರುವುದರಿಂದ ಅವು ಎಲ್ಲ ಕಾಲದಲ್ಲಿಯೂ ಹಿಗ್ಗುವ, ಕುಗ್ಗುವ ಕ್ರಿಯೆಗೆ ಒಳಪಟ್ಟಿವೆ. ಈ ಧರ್ಮಗಳು ಹೊರಗಿನಿಂದ ಬಂದವರನ್ನು ಸ್ವೀಕರಿಸಿವೆ. ಒಳಗಿನಿಂದ ಹೋಗುವವರಿಗೆ ಕೈಬೀಸಿವೆ. ಆದರೆ ಹಿಂದೂ ಧರ್ಮವೆಂಬ ಏಳುಸುತ್ತಿನ ಕೋಟೆಗೆ ಬಾಗಿಲೆಂಬುದೆ ಇಲ್ಲ. ಈ ಕೋಟೆಯಲ್ಲಿ ಹುಟ್ಟಿದವರಿಗೆಲ್ಲ ಗಾಳಿ, ಬೆಳಕು, ಬದುಕು ಸಮಾನವಾಗಿ ದಕ್ಕುವುದಿಲ್ಲ. ದಕ್ಕದಂತೆ ಜನರನ್ನು ನಿಯಂತ್ರಿಸುವುದೆ ಹಿಂದೂತ್ವದ ಶ್ರೇಷ್ಠತೆ. ಬ್ರಾಹ್ಮಣನಾಗಿ ಹುಟ್ಟುವವನಿಗೆ ಮಾತ್ರ ಬದುಕಿನ ನಾನಾ ಸೌಲಭ್ಯಗಳನ್ನು ಅನುಭವಿಸುವ ಹಕ್ಕು ದೊರೆತ್ತಿರುತ್ತದೆ. ಉಳಿದವರಿಗೆ ಇಂತಹ ಅವಕಾಶಗಳಿರುವುದಿಲ್ಲ. ಅವುಗಳನ್ನು ಹಿಂದೂಧರ್ಮ ನಿರಾಕರಿಸಿದೆ.

ಈ ಆಧುನಿಕ ಕಾಲ ವೈದಿಕ ಧರ್ಮದ ಪುನರುತ್ಥಾನದ ಕಾಲ. ಅದು ರಾಜಕೀಯ ಪ್ರಭುತ್ವಕ್ಕೇರಲು ದಾಪುಗಾಲಿಡುತ್ತಿರುವಾಗ ಗುಡಿ, ಗುಂಡಾರ, ಹಿಂದೂ ಒಂದು, ಮಸೀದಿ, ಗೋಮಾಂಸ ಮುಂತಾದ ಬಾಣಗಳನ್ನು ಒಂದೊಂದಾಗಿ ಹೊರಹಾಕುತ್ತ ತನ್ನ ರಾಜಕೀಯ ಬಲವರ್ಧನೆಗೆ ಜನಬೆಂಬಲವನ್ನು ಯಾಚಿಸುತ್ತಿದೆ. ವ್ಯಕ್ತಿಯೊಬ್ಬನಿಗೆ ಯಾವುದೇ ಧರ್ಮವನ್ನು ಹೊಂದುವ, ಅನುಸರಿಸುವ ಹಕ್ಕನ್ನು ಸಂವಿಧಾನವೇ ನೀಡಿದೆ. ಹೀಗಿದ್ದಾಗ್ಯೂ ಈ ಮತಾಂತರದ ಬಗ್ಗೆ ಕೆಲವು ಮೂಲಭೂತವಾದಿಗಳು ಇದನ್ನೊಂದು ರಾಷ್ಟ್ರೀಯ ಸಮಸ್ಯೆಯಾಗಿಸುತ್ತಿದ್ದಾರೆ.

ನಮ್ಮ ರಾಜಕೀಯ ಮತ್ತು ಸಾಮಾಜಿಕ ಬದುಕನ್ನು ಮುನ್ನಡೆಸುವ ಸಂವಿಧಾನ ಒಂದೇ ಆಗಿರದೆ ಇರುವುದರಿಂದ ಈ ವೈರುಧ್ಯತೆ. ಡಾ|| ಬಿ.ಆರ್.ಅಂಬೇಡ್ಕರವರು ರಚಿಸಲ್ಪಟ್ಟ ಸಂವಿಧಾನ ರಾಜಕೀಯ ಬದುಕನ್ನು ಆವರಿಸಿಕೊಂಡಿದ್ದರೆ, ಮನುಸ್ಮೃತಿ ನಮ್ಮ ಸಮಾಜ, ಕುಟುಂಬ ಮತ್ತು ವ್ಯಕ್ತಿಗಳನ್ನು ಸುತ್ತುವರಿದಿದೆ. ಹೀಗಾಗಿ ಈ ಎರಡು ಸಂವಿಧಾನಗಳ ಮಧ್ಯದಲ್ಲಿ ನಿರಂತರ ಪರಸ್ಪರ ಅಂತರ್ ಯುದ್ಧ ನಡೆಯುತ್ತಿದೆ. ಆಧುನಿಕ ಸಂವಿಧಾನ ಮತಾಂತರವನ್ನು ವ್ಯಕ್ತಿಯ ಮೂಲಭೂತ ಹಕ್ಕಾಗಿಸಿದ್ದರೆ, ಸನಾತನ (ಸ್ಮೃತಿ) ಸಂವಿಧಾನ ಕರ್ಮವನ್ನು ಹುಟ್ಟಿಗಂಟಿಸಿ ಅದರಲ್ಲಿರುವುದು, ಅದನ್ನು ಸವೆಸುವುದು, ಪಾಲಿಸುವುದು ಕರ್ತವ್ಯವೆಂದು ಕಡ್ಡಾಯಗೊಳಿಸಿದೆ.

ನಿಘಂಟಿನ ಪ್ರಕಾರ ಮತವೆಂದರೆ Thought; understood; believed; conceived; imagined; considered; ಆದರೆ ಶ್ರೇಷ್ಠ ಕುಲಸಂಜಾತರು, ಹಿಂದೂಧರ್ಮದ ವಾರಸುದಾರರಿಗೆ ಸಿದ್ಧಾಂತ, ನಂಬಿಕೆ, ಅರ್ಥೈಸಿಕೊಳ್ಳುವ, ತಿಳಿಸಿಕೊಳ್ಳುವ, ಕಲ್ಪಿಸಿ ಹೇಳುವ, ಸ್ವೀಕರಿಸುವ ಈ ಯಾವ ಮೂಲಭೂತ ಗುಣಸ್ವಭಾವವಿಲ್ಲದ ಹಿಂದೂತ್ವಕ್ಕೆ ದುರಾಸೆಯೊಂದೆ ಬಂಡವಾಳವಾಗಿದೆ. ಲಿಖಿತ ಮತ್ತು ಅಲಿಖಿತ ಸಂವಿಧಾನಗಳು ವ್ಯಕ್ತಿಯ ಬದುಕಿನಲ್ಲಿ ಸಾಮಾಜಿಕ ಅಸಹಾಯಕತೆಯನ್ನು ತುಂಬಿ ಮೂಲಭೂತವಾದಿಗಳಿಗೆ ಬೆಳೆಯಲು ಮುಕ್ತ ಅವಕಾಶವನ್ನು ವಾಸ್ತವವಾಗಿ ಕಲ್ಪಿಸುತ್ತಿದ್ದೇವೆ. ಈ ಮೂಲಭೂತವಾದಿ ಗುಣ ಎಲ್ಲ ಧರ್ಮಗಳಲ್ಲಿಯೂ ಅಂಡೂರಿದೆ.

ಒಂದು ಕಾಲಕ್ಕೆ ಹಿಂದೂಧರ್ಮದ ಶ್ರೇಷ್ಠ ಕುಲಸಂಜಾತರು (ವೈದಿಕರು) ಕ್ಷತ್ರಿಯ ಧರ್ಮದ (ರಾಜರ) ರಕ್ಷಣೆಯಲ್ಲಿ, ಔದಾರ್ಯತೆಯಲ್ಲಿ ವೈಭವದಿಂದ ಮೆರೆದಿರುವರು. ಆದರೆ ಇಂದು ಜಾಗತಿಕ ಕ್ಷತ್ರಿಯರು (ಬುಷ್, ಕ್ಲಿಂಟನ್) ಹುಟ್ಟಿಕೊಂಡಿರುವಾಗ ಅವರ ಔದಾರ್ಯ, ರಕ್ಷಣೆ ಲಭ್ಯವಾಗಬೇಕಾದರೆ ಇವರು ರಾಜಪ್ರಭುತ್ವಕ್ಕೇರಬೇಕಾಗಿದೆ. ಈ ರಾಜಪ್ರಭುತ್ವ ಪ್ರಜಾಪ್ರಭುತ್ವದ ನೆಲೆಯಲ್ಲಿ ಜನಸಂಖ್ಯೆಯ ಬಲಾಬಲವನ್ನು ಅವಲಂಬಿಸಿದೆ. ಈ ಸಂಖ್ಯಾಬಲಕ್ಕಾಗಿ ಹಿಂದೂ ಒಂದು ಎಂಬ ಹೊಸ 'ಸ್ಲೋಗನ್' ಹುಟ್ಟುಹಾಕಿ ಶತಶತಮಾನಗಳಿಂದಲೂ ತಮ್ಮ ದಢೂತಿ ದೇಹಕ್ಕೆ ಕಾಲನ್ನಾಗಿಸಿಕೊಂಡವರ ಕಾಲುಗಳಿಗೆ ಮೆತ್ತನೆಯ ಕಮಲ ನೀಡಿ ಹಣೆಗೆ ಕುಂಕುಮದ ತಿಲಕವಿಟ್ಟು ಕೈಗೆ ತ್ರಿಶೂಲ ಧಾರಾಳವಾಗಿ ನೀಡಿ ಜಾತಿಯಾಧಾರಿತ ಹಿಂದೂಧರ್ಮದ ಬಲಪ್ರದರ್ಶನಕ್ಕೆ ಬ್ರಾಹ್ಮಣ್ಯ ಹೊಸ ಹೊಸ ಒರಸೆಯನ್ನು ಹುಟ್ಟುಹಾಕುತ್ತಿದೆ.

ಪ್ರಾಚೀನ ಕಾಲದಿಂದಲೂ ಮತಾಂತರದ ಕಾರ್ಯ ಇಲ್ಲಿ ನಡೆದಿವೆ. ಆಗ ಇಲ್ಲದ ಹುಯ್ಯಿಲು ಈಗ ತಾರಕಕ್ಕೇರಿದೆ. ಜೈನ, ಬೌದ್ಧ ಇಸ್ಲಾಂ ಧರ್ಮಗಳು ಹಿಂದೂಧರ್ಮದ ಹಾಗೇ ಈ ನೆಲದಲ್ಲಿ ನೆಲೆಯೂರಿವೆ. ಹಿಂದೂಧರ್ಮಕ್ಕೆ ಪಸರಿಸುವ ಗುಣವಿಲ್ಲ. ಅದೇನಿದ್ದರೂ ಘನೀಭೂತದ್ದು. ಇದನ್ನು ಒಡೆದಂತೆ ಜಾತಿಗಳ ಚೂರು ಹೊರಬೀಳುತ್ತದೆ. ಆದರೆ ಬೌದ್ಧ ಜೈನ, ಇಸ್ಲಾಂ ಧರ್ಮಗಳಿಗೆ ಹರಿಯುವ, ಪಸರಿಸುವ, ಚಲಿಸುವ ಗುಣವಿರುವುದರಿಂದ ಅವು ಎಲ್ಲ ಕಾಲದಲ್ಲಿಯೂ ಹಿಗ್ಗುವ, ಕುಗ್ಗುವ ಕ್ರಿಯೆಗೆ ಒಳಪಟ್ಟಿವೆ. ಈ ಧರ್ಮಗಳು ಹೊರಗಿನಿಂದ ಬಂದವರನ್ನು ಸ್ವೀಕರಿಸಿವೆ. ಒಳಗಿನಿಂದ ಹೋಗುವವರಿಗೆ ಕೈಬೀಸಿವೆ. ಆದರೆ ಹಿಂದೂ ಧರ್ಮವೆಂಬ ಏಳುಸುತ್ತಿನ ಕೋಟೆಗೆ ಬಾಗಿಲೆಂಬುದೆ ಇಲ್ಲ. ಈ ಕೋಟೆಯಲ್ಲಿ ಹುಟ್ಟಿದವರಿಗೆಲ್ಲ ಗಾಳಿ, ಬೆಳಕು, ಬದುಕು ಸಮಾನವಾಗಿ ದಕ್ಕುವುದಿಲ್ಲ. ದಕ್ಕದಂತೆ ಜನರನ್ನು ನಿಯಂತ್ರಿಸುವುದೆ ಹಿಂದೂತ್ವದ ಶ್ರೇಷ್ಠತೆ. ಬ್ರಾಹ್ಮಣನಾಗಿ ಹುಟ್ಟುವವನಿಗೆ ಮಾತ್ರ ಬದುಕಿನ ನಾನಾ ಸೌಲಭ್ಯಗಳನ್ನು ಅನುಭವಿಸುವ ಹಕ್ಕು ದೊರೆತ್ತಿರುತ್ತದೆ. ಉಳಿದವರಿಗೆ ಇಂತಹ ಅವಕಾಶಗಳಿರುವುದಿಲ್ಲ. ಅವುಗಳನ್ನು ಹಿಂದೂಧರ್ಮ ನಿರಾಕರಿಸಿದೆ.

ಈ ಸಂದರ್ಭದಲ್ಲಿ ಅಸಂಖ್ಯಾತ ಕೆಳಜಾತಿ ಜನ ಅಕ್ಷರ ಬಲದ ಮೂಲಕ ಅರಿವಿನ ನೆಲೆಯಲ್ಲಿ ಧಾರ್ಮಿಕ, ಸಾಮಾಜಿಕ ಸಮಾನತೆ ನ್ಯಾಯಕ್ಕಾಗಿ ತನಗಿರುವ ಸಂವಿಧಾನಿಕ ಹಕ್ಕಿನ ಬಲದಿಂದ ಬೇರೆ ಧರ್ಮಗಳಿಗೆ ಮತಾಂತರಗೊಳ್ಳುತ್ತಿರುವುದರಿಂದ ಹಿಂದೂತ್ವವಾದಿಗಳಿಗೆ ಎಲ್ಲಿಲ್ಲದ ಆತಂಕವುಂಟಾಗಿದೆ. ಸಂಖ್ಯಾಬಲದಿಂದ ರಾಜಕೀಯ ಗದ್ದುಗೆಯನ್ನು ಹಿಡಿದು ಜಾಗತಿಕ ರಾಜರುಗಳಿಗೆ ಪೌರೋಹಿತ್ಯ ಹೇಳಿಕೊಡಲು ಹೊರಟಿರುವವರಿಗೆ ಮತಾಂತರ ಹೊಂದುವ ವ್ಯಕ್ತಿಯ ಸಮಸ್ಯೆಗಳು ಕಾಣಿಸುತ್ತಿಲ್ಲ. ಹೀಗಾಗಿ ಪಾದ್ರಿಗಳನ್ನು, ಮೌಲ್ವಿಗಳನ್ನು ತಮ್ಮ ಯಾಗಕ್ಕೆ ಬಲಿಗಳನ್ನಾಗಿಸಿಕೊಂಡಿರುವರು. ಇವರ ಕಮಲದ ರಥಕ್ಕೆ ಹೆಗಲೊಡ್ಡಿದ ಕುದುರೆಗಳು ಹಿಂದುಳಿದ ಶೂದ್ರ, ಮಹಿಳೆ, ಆದಿವಾಸಿ ಸಮುದಾಯ ದಿಂದಲೇ ಮುಂದೆ ಬಂದಿರುವುದೊಂದು ದುರಂತ.

ಎಂದೂ ಬ್ರಾಹ್ಮಣ್ಯ, ವೈದಿಕತ್ವದ ಚರಿತ್ರೆ ಕೈಯಲ್ಲಿ ಖಡ್ಗ ಬಂದೂಕು ಹಿಡಿದು ವೈರಿಯ ಜೊತೆಯಲ್ಲಿ ಯುದ್ಧ ಮಾಡಿದ ವಿರೋಚಿತ ಉದಾಹರಣೆಗಳೇನಿಲ್ಲ. ಅದೇನಿದ್ದರೂ ತನ್ನ ಬಂದೂಕನ್ನು ಹೊರಬಲ್ಲ, ಖಡ್ಗ ಹಿಡಿದು ಬಲ್ಲ ಕೈ ಮತ್ತು ಹೆಗಲಿಗಾಗಿ ಹೊಂಚುಹಾಕಿದ ಸಂಚು ಮಾತ್ರ ಚರಿತ್ರೆ ಯುದ್ಧಕ್ಕೂ ಕಾಣಸಿಗುವುದು. ಶೂದ್ರ ಶಂಭೂಕನ ತಪಸ್ಸಿಗೆ, ಶಕ್ತಿಗೆ ಹೆದರಿದ ಮನುಸಂಜಾತರು ರಾಮನ ಮೂಲಕ ಕೊಲ್ಲಿಸಿ ಚರಿತ್ರೆಯಲ್ಲಿ ರಾಮನ ಕೈಗೆ ರಕ್ತ ಅಂಟಿಸಿ ತಾವು ಮಾತ್ರ ಶುದ್ಧ ಹಸ್ತರಾಗಿ ಉಳಿದುಕೊಂಡಿರುವರು.

ಹಿಂದೂ ಧರ್ಮಕ್ಕೆ ಮತಾಂತರವೆಂದರೆ ಅನ್ಯಧರ್ಮೀಯರನ್ನು ತನ್ನೆಡೆಗೆ ಆಕರ್ಷಿಸುವುದೆಂದಲ್ಲ. ಹೀಗೆ ಆಕರ್ಷಿಸಬೇಕಾದರೆ ವೈದಿಕ ಧರ್ಮದ ತುಪ್ಪದ ಕುಡಿಕೆಯನ್ನು ಅಂಗಳಕ್ಕೆ ಇಡಬೇಕಾಗುತ್ತದೆ. ಹಿಂದೂಧರ್ಮಕ್ಕೆ ತುಪ್ಪದ ಕುಡಿಕೆಯ ಮೇಲೆ ಬೇರೆಯವರ ದೃಷ್ಟಿ ಬೀಳಬಾರದು ಮತ್ತು ತುಪ್ಪ ಮಾಡುವವರು, ತಂದುಕೊಡುವವರು ತನ್ನ ಹಿಡಿತದಿಂದ ಬಿಡುಗಡೆ ಹೊಂದಬಾರದೆಂಬ ದುರಾಲೋಚನೆಯಿಂದ ಮತಾಂತರ ನಿಷೇಧದಂತಹ ಕಾಯ್ದೆಗಳನ್ನು ತರುವುದರ ಮೂಲಕ ತಾನು ಕೂಡ ಜಾಗತಿಕ ರಾಜ, ಪುರೋಹಿತರ ಜೊತೆಗೂಡುವ ಅಝುಂಡಾದ ಅನುಷ್ಠಾನದ ಕನಸು ಕಾಣುತ್ತಿರುವುದು.

ಹಿಂದೂಧರ್ಮದ ಒಳಗಿರುವ ಅಸಂಖ್ಯಾತ ಜಾತಿಗಳು ಒಂದನ್ನೊಂದು ಸೇರದಂತೆ, ತಾಗದಂತೆ ನಿರಂತರ ಪುರೋಹಿತ ಶಕ್ತಿ ಎಚ್ಚರಿಕೆಯನ್ನು ವಹಿಸಿರುತ್ತದೆ. ಜಾತಿ, ಜಾತಿಗಳು ತಮ್ಮ ತಮ್ಮೊಳಗೆ ಎಷ್ಟೊಂದು ಐಕ್ಯತೆಯನ್ನು ಸಾಧಿಸುತ್ತವೋ ಅಷ್ಟು ಹಿಂದೂತ್ವವೆಂಬುದು ಬಲಿಷ್ಠಗೊಳ್ಳುತ್ತದೆ. ಎಲ್ಲ ಜಾತಿ ಜನಸಮುದಾಯದಲ್ಲಿಯೂ ಪುರೋಹಿತಶಾಹಿ ತನ್ನ ಛಾಯೆ, ಚಹರೆಯನ್ನು (ಗುರು, ಪೂಜಾರಿ, ಸ್ವಾಮಿಗಳನ್ನು) ಕಾಯಲಿಟ್ಟಿರುತ್ತದೆ. ಈ ಕಾರಣಕ್ಕಾಗಿಯೇ ಎಲ್ಲ ಜಾತಿ, ಧರ್ಮಗಳಲ್ಲಿಯೂ ಅಸಮಾನತೆಯ ಅಂತರಜಲ ಹರಿಯುತ್ತಲೇ ಇರುತ್ತದೆ.

ಆರ್ಥಿಕ ನೆಲೆಯಲ್ಲಿ ಬಲಹೀನರನ್ನು, ಧಾರ್ಮಿಕ ನೆಲೆಯಲ್ಲಿ ಕುಲಹೀನರನ್ನು, ಲಿಂಗನೆಲೆಯಲ್ಲಿ ಮಹಿಳೆಯರನ್ನು ನಿಯಂತ್ರಿಸುವ, ಶೋಷಿಸುವುದನ್ನೆಲ್ಲ ಕಾಣಬಹುದು. ಹಿಂದೂ ಸಮಜ, ಧರ್ಮ, ಮತದ ಒಳಗೆ ಎಷ್ಟೊಂದು ಕಂದಕಗಳಿವೆಯೆಂದರೆ ಒಂದು ಜಾತಿಯಿಂದ, ಶ್ರೇಣಿಯಿಂದ ಇನ್ನೊಂದು ಜಾತಿ, ಶ್ರೇಣಿಗೆ ಹೋಗುವಂತಿಲ್ಲ. ಒಂದು ವೇಳೆ ಈ ನಿಯಮವನ್ನು ಮೀರಿದರೆ ಅತ್ಯಂತ ಕ್ರೂರವಾದ ಶಿಕ್ಷೆಯನ್ನು ಅನುಭವಿಸಬೇಕಾಗುವುದೆಂಬ ಎಚ್ಚರವನ್ನು ನೀಡಿದೆ. ಮನು

ಇಂತಹ ತಪ್ಪುಗಳಿಗೆ ಜ್ಯಾತಿವಾರು ಶಿಕ್ಷೆಗಳನ್ನು ಹೇಳಿರುವನು. ಇಂತಹ ಶಿಕ್ಷೆಗೆ ಹೆದರಿದ ಜನವರ್ಗ ಜಾತಿ ಬಿಡುವ, ಹಿಡಿಯುವ ಸಾಹಸನವನ್ನು ಮಾಡಲೇ ಇಲ್ಲ.

ಆದರೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣ ಮತ್ತು ಆಧುನಿಕ ಕಾಲದಲ್ಲಿ ಡಾ|| ಬಿ.ಆರ್. ಅಂಬೇಡ್ಕರ್ ಅವರು ಮಾಡಿದರು. ಇವರು ಹಿಂದೂತ್ವದ ಅಹಮ್ಮಿಗೆ ಪೆಟ್ಟು ಕೊಟ್ಟಿದ್ದು ಪ್ರಚಾರಕ್ಕೆಳಸದಂತೆ ನೋಡಿಕೊಂಡಿದೆ ಈ ಪುರೋಹಿತಶಾಹಿ. ಚರಿತ್ರೆಯಲ್ಲಿ ಹಿಂದುತ್ವವೆಂಬುದು ನೇರವಾಗಿ ರಾಜಪ್ರಭುತ್ವವಾಗಲು ಹಂಬಲಿಸಿದ್ದು ಬ್ರಿಟಿಷರ ನಿರ್ಗಮನದ ನಂತರದ ಅವಧಿಯಲ್ಲಿ, ದೇಶ ಇಬ್ಭಾಗವಾದ ಮೇಲಂತೂ ಈ ಹಿಂದೂತ್ವ ರಾಷ್ಟ್ರವಾಳುವ ಉಮೇದಿನಿಂದ ಸ್ವದೇಶ ಪ್ರೇಮ, ರಾಷ್ಟ್ರಭಕ್ತಿ ರಾಷ್ಟ್ರಧ್ವಜ, ಭಾರತಮಾತೆಯ ಪೂಜೆಗೆ, ಜಪಕ್ಕೆ, ಆಯ್ಕೆ ಮಾಡಿಕೊಂಡ ಸ್ಥಾನ ಪಾರ್ಲಿಮೆಂಟನ್ನು, ಸಂವಿಧಾನಾತ್ಮಕ ನೆಲೆಯಲ್ಲಿ ಹದಿನೆಂಟು ವರ್ಷವಾದವರಿಗೆಲ್ಲ ಮತಚಲಾವಣೆಯ ಹಕ್ಕು ಒದಗಿದ ಮೇಲೆ ಈ ಹಿಂದುತ್ವ ಬಂಧುತ್ವವೆಂದು ಹೇಳುತ್ತ ಕೆಳಜಾತಿ, ವರ್ಗದ ಜನರ ಕಣ್ಣಿಗೆ ಮಂಕುಬೂದಿ ಎರಚಿ ಜಾತಿ ರಾಜಕೀಯ ಕಾರಣವಾಗಿ ಮತಾಂತರ ನಿಷೇಧ, ಗೋಹತ್ಯೆ ನಿಷೇಧ, ಏಕರೂಪ ನಾಗರಿಕಸಂಹಿತೆ, ಸಂವಿಧಾನ ಪರಾಮರ್ಶನ, ಮಂದಿರ ಮಸೀದಿಯಂತಹ ಜನವಿರೋಧಿ ಮತಾಂಧ ಕಾರ್ಯಸೂಚಿಗೆ ಹಸಿದ ಹೊಟ್ಟೆಯ, ಖಾಲಿ ತಲೆಯ ಶೂದ್ರ ಹಿಂದುಳಿದ ಜನಸಮುದಾಯ ಸಮೂಹ ಸನ್ನಿಗೆ ಒಳಗಾಗುವಂತೆ ಮಾಡುತ್ತಿರುವರು.

ಪ್ರಸ್ತುತ ಸಂದರ್ಭದಲ್ಲಿ ಯಾಕೆ ಮತಾಂತರದ ಬಗ್ಗೆ ಇಷ್ಟೊಂದು ಆತಂಕವುಂಟಾಗಿದೆ ಮತ್ತು ಮತಾಂತರದಿಂದ ಆಗಬಹುದಾದ ಲಾಭ ಹಾನಿ ಎಂತಹದ್ದು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ವರ್ಣಾಶ್ರಮವನ್ನು ಜೀವಂತ ವಾಗಿಡುವ ಮನುವಾದಿಗಳು ಭಾರತದ ಸಾಮಾಜಿಕ ಬದುಕಿನಲ್ಲಿ ವ್ಯಕ್ತಿಯ ಹುಟ್ಟನ್ನೆ ಅವನ ಸ್ಥಾನಮಾನ ನಿರ್ಧರಿಸುವ ಮಾನದಂಡವಾಗಿಸಿದ ಪುರೋಹಿತಶಾಹಿಗೆ ಆಧುನಿಕ ಕಾಲದ ಅಕ್ಷರದ, ವಿಜ್ಞಾನದ ಅರಿವಿನ ಮೂಲಕ ಬಹುಸಂಖ್ಯಾತರ ಬದುಕು ಚಲನಶೀಲಗೊಳ್ಳುತ್ತಿರುವುದನ್ನು ಕಂಡು ಆಘಾತವಾಗಿದೆ.

ಜ್ಞಾನದ ಬಲದಿಂದ ಧಾರ್ಮಿಕ ನೆಲೆಯ ಮಿಥ್ಯಗಳನ್ನು, ಶೋಷಣೆಯನ್ನು ಅರ್ಥ ಮಾಡಿಕೊಂಡಿರುವ ಜನರ ಅಸಮಾನತೆಯಿಂದ ತುಂಬಿರುವ ಹಿಂದೂ ಧರ್ಮದಿಂದ ಬಿಡುಗಡೆ ಹೊಂದಿ ಸಮಾನತೆಯನ್ನು, ಭ್ರಾತೃತ್ವ-ಸಹೋದರತ್ವ, ಮಾನವೀಯತೆ, ಜೀವಪರತೆ ಹೊಂದಿರಬಹುದಾದ ಧರ್ಮಗಳ ಆಯ್ಕೆಯ ಹಕ್ಕನ್ನು ಚಲಾಯಿಸಲು ಮುಂದಾಗಿರುವುದು ಕುಂಕುಮಧಾರಿ ಪುರೋಹಿತರಿಗೆ ಆತಂಕವಾಗಿದೆ.

ಮತಾಂತರದ ಬಗೆಗೆ ಆತಂಕದಿಂದ ಮಾತನಾಡುವ ಪುರೋಹಿತಶಾಹಿಗಳು ಶೂದ್ರರನ್ನು, ಶೂದ್ರ ಸಂಸ್ಕೃತಿಯನ್ನು ತಮ್ಮ ಸಮಾನಕ್ಕೆ ಶ್ರೇಷ್ಠವೆಂದು ಪರಿಗಣಿಸುವರೆ ? ತಾವು ಸಮೀಪಕ್ಕೆ ಕರೆದುಕೊಂಡು ಮೈದಡವಲು ಸಿದ್ಧರಿಲ್ಲ, ಬೇರೆಯವರ ಕಡೆ ಹೋಗುತ್ತೇನೆಂದರು ಅದಕ್ಕೂ ಒಪ್ಪ ಲಾರದ ಈ ಜನರ 'ವಿತಂಡ'ವಾದ ಇಂದು ನಿನ್ನೆಯದೇನಲ್ಲ. ಮತಾಂತರ ಹೊಂದುವುದರಿಂದ ಮೂಲಭೂತವಾಗಿ ವ್ಯಕ್ತಿಯ ಬದುಕಿನಲ್ಲೇನು ಭೌತಿಕ ಬದಲಾವಣೆಯಾಗುತ್ತದೆ ಎಂಬ ಭ್ರಮೆಯೂ ಇಲ್ಲ. ಮಾನಸಿಕ ನೆಲೆಯಲ್ಲಿ ವ್ಯಕ್ತಿ ಗೌರವವನ್ನು ದಕ್ಕಿಸಿಕೊಳ್ಳಲು ತನ್ಮೂಲಕ ಸಾಮಾಜಿಕ ಬದುಕಿನಲ್ಲಿ ಸಮಾನತೆ ದೊರಕಿತೆಂಬ ಹಂಬಲದ ಬಗ್ಗೆ ಗೌರವದಿಂದ ನೋಡಬೇಕಾಗಿದೆ.

ಕ್ರೈಸ್ತ ಮಿಷನರಿಗಳು, ಇಸ್ಲಾಂ ಮೌಲ್ವಿಗಳಾರು ಬಂದೂಕು ಹಿಡಿದು ಜನರನ್ನು ಭಯಕ್ಕೆ ನೂಕಿ ಮತಾಂತರ ಕಾರ್ಯ ಮಾಡಿದ ಉದಾಹರಣೆಗಳಿಲ್ಲ, ಬಡತನ, ರೋಗರುಜಿನ, ಸಾಮಾಜಿಕ ಅಪಮಾನ, ಅಸಹಾಯಕತೆಯಿಂದ ಬಳಲುವ ಜನರಿಗೆ ಮೈದಡವಿ ಕಷ್ಟಸುಖಕ್ಕೆ ಆಗುವುದರ ಮೂಲಕ ಏಸು, ಅಲ್ಲಾರನ್ನು ಹತ್ತಿರಕ್ಕೆ ತಂದು ಮಾನಸಿಕ ನೆಮ್ಮದಿಯನ್ನು ನೀಡಿರಬಹುದು. ಈ ಕಾರಣಕ್ಕಾಗಿ ಮನುಷ್ಯ ಮತಾಂತರ ಹೊಂದುವನು. ಇಂದಿಗೂ ಪುರೋಹಿತಶಾಹಿ ಪ್ರಾಬಲ್ಯವಿರುವ ದೇವಾಲಯದ ಒಳಗೆ ಶೂದ್ರರು, ಮಹಿಳೆಯರು ಹೋಗಲು ನಿಷೇಧಿಸಿದೆ. ದೇವರನ್ನು ಸಮೀಪದಿಂದ ನೋಡುವ ಮನುಷ್ಯ ಸಹಜ ಆಸೆಯನ್ನು ಕಿತ್ತುಕೊಂಡಿರುವ ಜನ ಮತ್ತು ಧರ್ಮದ ಬಗ್ಗೆ ಬೆನ್ನು ತಿರುಗಿಸಿದರೆ ಯಾಕೆ ಈ ಕಮಲೋದ್ಭವರಿಗೆ ಕಸಿವಿಸಿಯಾಗಬೇಕು. ತಮ್ಮ ದೇವರು, ದೇವಾಲಯದ ಬಾಗಿಲನ್ನು ತೆರೆಯದ ಈ ಪುರೋಹಿತರಿಗೆ ಮಸೀದಿ, ಚರ್ಚುಗಳನ್ನು ನಾಶಮಾಡುವ ಹಕ್ಕೇನಿದೆ.

ಡಾ|| ಬಾಬಾ ಸಾಹೇಬ ಅಂಬೇಡ್ಕರರಂಥವರು ಹಿಂದೂ ಧರ್ಮದ ಆಳ ಅಗಲಗಳನ್ನು ಅಳೆದು ಅದರ ಜೀವ ವಿರೋಧಿ ತನಕ್ಕೆ ಬೇಸತ್ತು ಅನಪೇಕ್ಷಿತವಾಗಿ ಹಿಂದೂಧರ್ಮದಲ್ಲಿ ಹುಟ್ಟಿದ ತಪ್ಪನ್ನು ಅಪೇಕ್ಷೆ ಪಟ್ಟು ಬೌದ್ಧಧರ್ಮ ಸೇರುವುದರ ಮೂಲಕ ತಿದ್ದಿಕೊಂಡು ಸ್ವಾಭಿಮಾನ ಮೆರೆದರು. ಇಂದಿಗೂ ದಲಿತರು ಅದೇ ಹಾದಿಯಲ್ಲಿ ನಡೆದರೆ ಈ ಮನುವಾದಿಗಳು ಬೆಚ್ಚಿಬೀಳುವುದಿಲ್ಲ. ಏಕೆಂದರೆ ಬುದ್ಧನನ್ನು ದಶಾವತಾರಗಳಲ್ಲಿ ಒಬ್ಬನನ್ನಾಗಿಸಿರುವರು. ಅವರ ಬ್ರಹ್ಮ-ವಿಷ್ಣುವಿನ ಅಂಶವೇ ಬುದ್ಧನಾಗಿರುವುದರಿಂದ ದೀಕ್ಷಾ ಬದ್ಧ ದಲಿತ ಸಮೂಹವನ್ನು ಸಹಿಸಿಕೊಳ್ಳುವುದು ಎನ್ನುವುದಕ್ಕಿಂತಲೂ ಉದಾಸೀನತೆ ಯಿಂದ ಈ ಕಾರ್ಯವನ್ನು ನೋಡುವುದು.

ಒಂದು ಸತ್ಯವೇನೆಂದರೆ ಹೀಗೆ ದೀಕ್ಷೆಗೊಂಡ ದಲಿತರು ಬೌದ್ಧಧರ್ಮದ ಆಚಾರ ವಿಚಾರವನ್ನು, ಸಂಸ್ಕೃತಿಯನ್ನು ಪ್ರತಿಷ್ಠಾಪಿಸುವ ಬುದ್ಧಿವಂತಿಕೆಯನ್ನು, ವೈಚಾರಿಕತೆಯನ್ನು ಮೈಗೂಡಿಸಿಕೊಂಡಿಲ್ಲ. ಬೌದ್ಧಧರ್ಮದ ಸಂಕೇತ, ಗುರುತು ಗಳನ್ನು ಹೊಂದಿರುವುದಿಲ್ಲ. ಎಲ್ಲಿಯೂ ಬೌದ್ಧ ದೇವಾಲಯ ಗಳಾಗಲಿ, ಅದರ ಧಾರ್ಮಿಕ ಆಚರಣೆಗಳಾಗಲಿ, ಭೌತಿಕ ನೆಲೆಯಲ್ಲಿ ಗುರುತಿಸುವಂತೆ ಇಲ್ಲದೆ ಇರುವುದರಿಂದ ವೈದಿಕಧರ್ಮ ಬೌದ್ಧಧರ್ಮವನ್ನು, ಅದಕ್ಕೆ ಮತಾಂತರ ಹೊಂದುವವರನ್ನು ಬೀದಿಗಿಳಿದು ಪ್ರತಿಭಟಿಸುವುದಿಲ್ಲ. ಅದರ ಬಗ್ಗೆ ಆತಂಕಕ್ಕೂ ಒಳಗಾಗಿಲ್ಲ. ಆದರೆ ಕ್ರೈಸ್ತ ಮತ್ತು ಇಸ್ಲಾಂ ಧರ್ಮಕ್ಕೆ ವಲಸೆ ಹೋಗುವುದರ ಬಗ್ಗೆ ತೀವ್ರವಾದ ಆಘಾತವನ್ನು ಅನುಭವಿಸುತ್ತಿದೆ.

ಕ್ರೈಸ್ತ ಮಿಷನರಿಗಳು, ಇಸ್ಲಾಂ ಮೌಲ್ವಿಗಳಾರು ಬಂದೂಕು ಹಿಡಿದು ಜನರನ್ನು ಭಯಕ್ಕೆ ನೂಕಿ ಮತಾಂತರ ಕಾರ್ಯ ಮಾಡಿದ ಉದಾಹರಣೆಗಳಿಲ್ಲ, ಬಡತನ, ರೋಗರುಜಿನ, ಸಾಮಾಜಿಕ ಅಪಮಾನ, ಅಸಹಾಯಕತೆಯಿಂದ ಬಳಲುವ ಜನರಿಗೆ ಮೈದಡವಿ ಕಷ್ಟಸುಖಕ್ಕೆ ಆಗುವುದರ ಮೂಲಕ ಏಸು, ಅಲ್ಲಾರನ್ನು ಹತ್ತಿರಕ್ಕೆ ತಂದು ಮಾನಸಿಕ ನೆಮ್ಮದಿಯನ್ನು ನೀಡಿರಬಹುದು. ಈ ಕಾರಣಕ್ಕಾಗಿ ಮನುಷ್ಯ ಮತಾಂತರ ಹೊಂದುವನು. ಇಂದಿಗೂ ಪುರೋಹಿತಶಾಹಿ ಪ್ರಾಬಲ್ಯ ವಿರುವ ದೇವಾಲಯದ ಒಳಗೆ ಶೂದ್ರರು, ಮಹಿಳೆಯರು ಹೋಗಲು ನಿಷೇಧಿಸಿದೆ. ದೇವರನ್ನು ಸಮೀಪದಿಂದ ನೋಡುವ ಮನುಷ್ಯ ಸಹಜ ಆಸೆಯನ್ನು ಕಿತ್ತುಕೊಂಡಿರುವ ಜನ ಮತ್ತು ಧರ್ಮದ ಬಗ್ಗೆ ಬೆನ್ನು ತಿರುಗಿಸಿದರೆ ಯಾಕೆ ಈ ಕಮಲೋದ್ಭವರಿಗೆ ಕಸಿವಿಸಿಯಾಗಬೇಕು. ತಮ್ಮ ದೇವರು, ದೇವಾಲಯದ ಬಾಗಿಲನ್ನು ತೆರೆಯದ ಈ ಪುರೋಹಿತರಿಗೆ ಮಸೀದಿ, ಚರ್ಚುಗಳನ್ನು ನಾಶಮಾಡುವ ಹಕ್ಕೇನಿದೆ.

ಹಣದ ಆಸೆಯಿಂದ ಮತಾಂತರ ಮಾಡುತ್ತಿರುವರು ಎಂದು ಬೊಬ್ಬೆ ಹಾಕುತ್ತಿರುವವರಿಗೆ ಒಂದು ಪ್ರಶ್ನೆಯನ್ನು ಹಾಕಬೇಕಾಗಿದೆ. ಇಲ್ಲಿಯ ರಾಜ ಮಹಾರಾಜರು, ರಾಣಿಯರು, ಪಂಡಿತರಿಗೆ ಯಾವ ಹಣದ ಕೊರತೆಯಿತ್ತು ಅವರೇಕೆ ಹಿಂದೆ ಮತಾಂತರ ಹೊಂದಿರುವರು. ಹಣದ ಆಸೆಗೆ ಮತಾಂತರ ಹೊಂದುವುದು ನಿಜವೇ ಆಗಿದ್ದರೆ ನೀವು ಧಾರಾಳವಾಗಿ ನೀಡಿ ಜನರನ್ನು ಉಳಿಸಿಕೊಳ್ಳಿರಿ. ಅದು ಬಿಟ್ಟು ಕಾನೂನು ತರುವುದರ ಮೂಲಕ ನಿಮ್ಮ ಭಯ ನಿವಾರಣೆಗೆ ಮುಂದಾಗಿರುವುದು ತಪ್ಪಲ್ಲವೇ.

ಇಂತಹ ತರ್ಕಕ್ಕೆ ಉತ್ತರಿಸಲು ಅವರಿಗೆ ಬಿಡುವಿಲ್ಲ. ಶೂದ್ರಶಕ್ತಿ ಆರ್ಥಿಕವಾಗಿ ಬಲಿಷ್ಠವಾದರೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಕ್ಕಿಗಾಗಿ ಧ್ವನಿ ಎತ್ತುವರು ಎಂಬ ಭಯ ಆವರಿಸಿಕೊಂಡಿದೆ. ಶೂದ್ರರು, ಮಹಿಳೆಯರು ನಿರಂತರವಾಗಿ ತನ್ನ ಕಾಲಡಿಯಲ್ಲಿ ಮಿಸುಕದ ಹಾಗೇ ಇಟ್ಟುಕೊಳ್ಳುವ ಪ್ರಬಲ ಅಸ್ತ್ರವೆಂದರೆ ಹಿಂದೂ ಧರ್ಮದ ನೀತಿ ಸಂಹಿತೆ. ಹೀಗಾಗಿ ತನ್ನ ಅಸ್ತಿತ್ವಕ್ಕಾಗಿ ಅನ್ಯಧರ್ಮಗಳಿಗೆ ಮತಾಂತರ ಹೊಂದುವುದನ್ನು ರಾಷ್ಟ್ರೀಯ ಸಮಸ್ಯೆಯಾಗಿಸಿ ಮತದ ಲೆಕ್ಕಾಚಾರದ ರಾಜಕೀಯ ನಡೆದಿದೆ.

ಎಂಟುನೂರು ವರ್ಷಗಳ ಹಿಂದೆಯೇ ಹಿಂದೂ ಧರ್ಮದ ಕರ್ಮಠತನಕ್ಕೆ ಬೇಸತ್ತು ಪ್ರತಿಭಟನಾತ್ಮಕ ರೀತಿಯಲ್ಲಿ ಬಸವಣ್ಣನವರು ಜನಿವಾರದ ಹಂಗುಹರಿದು ಶರಣ ಧರ್ಮವನ್ನು ಭಕ್ತ, ಗುರು, ಲಿಂಗ, ಜಂಗಮವೆಂಬ ನಾಲ್ಕು ಕಂಬಗಳ ಮೇಲೆ ಸಮಾನತೆಯ ಸಮಾಜ ನಿರ್ಮಿಸುವ ಕನಸಿಗೆ ಕಾಯಕ, ದಾಸೋಹದ ಕಣ್ಣುಗಳನ್ನು ಜಗಕ್ಕೆ ನೀಡಿದರು. ಸ್ಥಾವರ ನಿರಾಕರಿಸಿ ಜಂಗಮಸಿದ್ಧಾಂತದ ಮೂಲಕ ಮನುಷ್ಯನೊಳಗೆ ಕ್ರಿಯಾಶೀಲತೆಯನ್ನು ತುಂಬಿದ ಮಹಾಮಾನವತಾವಾದಿ ಬಸವಣ್ಣನ ಹೆಸರಿನ ರಥದಲ್ಲಿ ರಾಮಮಂದಿರ ಕಟ್ಟಲು ಇಟ್ಟಂಗಿ ಇಟ್ಟುಕೊಂಡು ಮೆರವಣಿಗೆ ಹೋದ ಅಪರಾಧವನ್ನು, ತಪ್ಪನ್ನು ತಿದ್ದಿಕೊಳ್ಳುವ ವಿವೇಕ ನಮ್ಮಲ್ಲಿ ಮೂಡಬೇಕಾಗಿದೆ. ಇಲ್ಲದಿದ್ದರೆ ಹಿಂದೂತ್ವದ ಮತಾಂಧತೆ ನಮ್ಮ ಮೂಲಕವೇ ನಮ್ಮನ್ನು ಕೊಲ್ಲಿಸಿ ತನ್ನ ರಕ್ತದಾಹವನ್ನು ಹಿಂಗಿಸಿಕೊಳ್ಳುವುದು. □

ಬಾಬಾ ದತ್ತರ ಗಿರಿಕ್ಯಾರಣ

ವಾಸ್ತವ

ನಿರ್ಮಲ-ಶಾಂತ ಗಿರಿ ಶಿಖರ ಬಾಬಾಬುಡನ್‌ಗಿರಿಗೆ ಕೋಮುವಾದಿಗಳು ಬೆಂಕಿ ಹಚ್ಚಿದ್ದಾರೆ. ಮುಗ್ಧ ಜನರನ್ನು ಕೆರಳಿಸಿ, ಅದರ ಲಾಭ ಪಡೆದು ಅಧಿಕಾರ ಹಿಡಿಯುವ ಸಂಘ ಪರಿವಾರದ ಹುನ್ನಾರ ಕುಸಿದು ಬಿದ್ದಿದೆ. ಹಿಂದೂ-ಮುಸ್ಲಿಂ ಮೂಲಭೂತತನವನ್ನು ತಿರಸ್ಕರಿಸಿ ಜನತೆ ಧರ್ಮ ಕಟ್ಟಿದ ಬಾಬಾಬುಡನ್ ಮತ್ತು ದತ್ತಾತ್ರೇಯರಂಥ ಅನುಭಾವಿಗಳ ನೆಲೆಯಾದ ಈ ಪ್ರದೇಶದ ಕುರಿತಂತೆ ನಿಜದ ನೆಲೆಗಟ್ಟಿನ ವಿಶ್ಲೇಷಣೆ ಅಗತ್ಯವಾಗಿದೆ. ಇಂತಹ ವಿಶ್ಲೇಷಣೆಯನ್ನು ಲೇಖಕರು ಇಲ್ಲಿ ನಡೆಸಿದ್ದಾರೆ. ಅದರ ಮೊದಲನೇ ಕಂತು ಇದು.

○ಪ್ರೊ॥ ರಹಮತ್ ತರೀಕೆರೆ

ಹಸಿವಿನ ಭರದಲ್ಲಿ ಇದು ತನ್ನ ಆಹಾರವೇ ಅಲ್ಲವೇ ಎಂಬುದನ್ನು ಯೋಚಿಸದೆ ಏನೇನನ್ನೊ ನುಂಗಿದ ಹಾವಿನಂತೆ ಸಂಘಪರಿವಾರ ಚಡಪಡಿಸುತ್ತಿದೆ. ಅದಕ್ಕೆ ಬಾಬಾಬುಡನಗಿರಿಯನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಅದರ ಕೋಮುವಾದಿ ತರ್ಕದ ಹಿಡಿತಕ್ಕೆ ಗಿರಿ ಸಿಕ್ಕುತ್ತಿಲ್ಲ. ಸಾಮಾನ್ಯವಾಗಿ ಅದು ಮಂಡಿಸುವ ತರ್ಕವೆಂದರೆ, ಹಿಂದೆ ಆಳಿದ ಮುಸ್ಲಿಮ್ ದೊರೆಗಳು ನಮ್ಮ ದೇವರ ಜಾಗಗಳ ಮೇಲೆ ಆಕ್ರಮಣ ಮಾಡಿದರು. ಗುಡಿಗಳನ್ನು ಕೆಡವಿ ಮಸೀದಿ ಕಟ್ಟಿಸಿದರು, ಈಗ ನಾವು ಅವನ್ನು ಕೆಡವಿ ಮತ್ತೆ ಗುಡಿ ಕಟ್ಟುತ್ತೇವೆ ಎಂಬುದು. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಕೆಡವಿದ್ದು ಈ ತರ್ಕದ ಬಲದಿಂದ.

ಆದರೆ ಗಿರಿಯಲ್ಲಿರುವ ದರ್ಗಾವನ್ನು ಹಾಗೆ ಕೆಡವಲು ಸಾಧ್ಯವಾಗುತ್ತಿಲ್ಲ. ಕೆಡವೋಣ ಎಂದರೆ ಅಲ್ಲಿ ದತ್ತಾತ್ರೇಯನ ಹೆಸರೂ ಇದೆ. ದತ್ತಾತ್ರೇಯನನ್ನು ತಮ್ಮ ದೈವವಾಗಿ ಸ್ವೀಕರಿಸೋಣ ಎಂದರೆ, ಅವನು ಪಕ್ಕಾ ಅವೈದಿಕ ದೇವತೆ. ನಾಲ್ಕುವೇದಗಳನ್ನು ನಾಯಿಗಳನ್ನಾಗಿ ಮಾಡಿ ಹಿಂದಿಟ್ಟು ಕೊಂಡ ವೇದವಿರೋಧಿ. ಇದು ದತ್ತಪಂಥದ ಯತಿಯಿದ್ದ ಜಾಗವೆನ್ನೋಣವೆಂದರೆ ಅಲ್ಲಿದ್ದ ಯತಿ ಯಾರು ಎಂಬ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಇದು ಕೇವಲ ದತ್ತಾತ್ರೇಯನ ಜಾಗ ಎಂದು ಹೇಳೋಣ ಎಂದರೆ, ಇಲ್ಲಿ ಸೂಫಿಪರಂಪರೆಯ ದಟ್ಟವಾದ ನೆಲೆಸಿದೆ.

ಸೂಫಿ ಪರಂಪರೆಯನ್ನು ಇಸ್ಲಾಮೀಕರಣ ಮುಸ್ಲಿಮರ ಆಕ್ರಮಣ ಎನ್ನೋಣವೆಂದರೆ, ಸ್ವತಃ ಸೂಫಿಪಂಥವು ಇಸ್ಲಾಮಿ ಮೂಲಭೂತವಾದದ ವಿರುದ್ಧ ಸಂಘರ್ಷ ಮಾಡಿದ ಅನುಭಾವಿ ಪಂಥ. ಈಗಲೂ ಸನಾತನವಾದಿ ಮುಸ್ಲಿಮರು ದರ್ಗಾ ಸಂಸ್ಕೃತಿಯನ್ನು ನಿಷೇಧಿಸುತ್ತಾರೆ. ಅಹಲೆ ಹದೀಸ್, ತಬ್ಲಿಕ್ ಮುಂತಾದ ಸಂಘಟನೆಗಳು ಸೂಫಿಗಳ ಮೇಲೆ ದಾಳಿಮಾಡುತ್ತವೆ. ಇಲ್ಲಿ ಹಿಂದುಗಳಿಗೆ ಅನ್ಯಾಯವಾಗಿದೆ ಎನ್ನುವ ಎಂದರೆ, ತಲೆತಲಾಂತರದಿಂದ ಹಿಂದೂ ಧರ್ಮದ ಕೆಳಜಾತಿಗಳಿಗೆ ಸೇರಿದ ಬಹಸಂಖ್ಯಾತ ಜನ ಗಿರಿಗೆ ನಡೆದುಕೊಳ್ಳುತ್ತಿದ್ದಾರೆ. ಅವರು ಇಲ್ಲಿನ ಪೂಜಾವಿಧಾನ ನಮಗೆ ಸಮ್ಮತವಿಲ್ಲವೆಂದು ಎಂದೂ ದೂರಲಿಲ್ಲ.

ಹಿಂದು ಮುಸ್ಲಿಮರನ್ನು ಒಡೆದು ಎರಡು ಭಾಗಮಾಡಿ, ಮುಸ್ಲಿಮರನ್ನು ಒಂದುಕಡೆ, ಹಿಂದುಗಳನ್ನು ಇನ್ನೊಂದೆಡೆ ನಿಲ್ಲಿಸಿ ಯುದ್ದ ಮಾಡಿಸಬೇಕು, ಹಿಂದುಗಳ ಹಕ್ಕುಕೊಡಿಸಿದ ಕೀರ್ತಿ ಪಡೆಯಬೇಕು, ದರ್ಗಾದ ಜಾಗದಲ್ಲಿ ದತ್ತನಗುಡಿ ಕಟ್ಟಿಸಿ, ಬ್ರಾಹ್ಮಣ ಪುರೋಹಿತರನ್ನು ನೇಮಿಸಿ ತನ್ನ ಯಜಮಾನಿಕೆ ಸ್ಥಾಪಿಸಬೇಕು ಎನ್ನೋಣ ಎಂದರೆ, ಬಾಬಾಬುಡನಗಿರಿ ನಮ್ಮದು ಎಂದು ಯಾವ ಮುಸ್ಲಿಮರೂ ಹಠ ಮಾಡುತ್ತಿಲ್ಲ. ಹಿಂದುಗಳು ಬರಬಾರದು ಎಂದು ಹೇಳುತ್ತಿಲ್ಲ. ಬದಲಿಗೆ ಬಾಬಾಬುಡನಗಿರಿ ರಕ್ಷಿಸುವ ಚಳವಳಿಯಲ್ಲಿ ಕನ್ನಡನಾಡಿನ ಎಲ್ಲ ಪ್ರಗತಿಪರರು, ಶೂದ್ರಸ್ವಾಮಿಗಳು, ಎಡಪಂಥೀಯರು, ಕನ್ನಡದ ಸಂವೇದನಶೀಲ ಲೇಖಕರು, ಚಿಂತಕರು, ರೈತಸಂಘದವರು, ದಲಿತ ಸಂಘರ್ಷ ಸಮಿತಿಯವರು ಒಗ್ಗೂಡಿ ಬಿಟ್ಟಿದ್ದಾರೆ. ಬಾಬಾಬುಡನಗಿರಿ ಪ್ರಕರಣವು ಕರ್ನಾಟಕದ ಎಲ್ಲ ಪ್ರಗತಿಪರರನ್ನು ಬಡಿದು ಎಚ್ಚರಿಸಿಬಿಟ್ಟಿದೆ. ಬಹುಶಃ ಈಹೊತ್ತು ಭಾರತದಲ್ಲಿ ಕೋಮುವಾದದ ವಿರುದ್ಧ ಸಂಘಟಿತ ಪ್ರತಿರೋಧ ವ್ಯಕ್ತವಾಗುತ್ತಿದ್ದರೆ ಅದು ಕರ್ನಾಟಕದಿಂದ ಅನಿಸುತ್ತದೆ.

'ಯಾರು ತನ್ನನ್ನು ತಾನು ಅರಿಯುವನೋ ಅವನು ದೇವರನ್ನು ಅರಿಯುವನು'
ಇದು ಬಾಬಾಬುಡನಗಿರಿ ದರ್ಗಾದಲ್ಲಿರುವ ಫಾರಸಿ ಶಾಸನದಲ್ಲಿರುವ ಒಂದು ಸೂಕ್ತಿ.

ಸಂಘಪರಿವಾರದ ಲೆಕ್ಕಾಚಾರಗಳು ಯುದ್ಧತಂತ್ರಗಳು ಅಯೋಧ್ಯೆಯಲ್ಲಿ ಸಲೀಸಾಗಿ ಕೆಲಸ ಮಾಡಿದಂತೆ ಇಲ್ಲಿ ಯಾಕೋ ಮಾಡುತ್ತಿಲ್ಲ. ಹಾಗೆಂದು ಅದಕ್ಕೆ ಯಶಸ್ಸು ಸಿಕ್ಕಿಲ್ಲವೆಂತಿಲ್ಲ. ಕಳೆದ ೧೫ ವರುಷಗಳಿಂದ ಅದು ಮಾಡಿದ ಕೆಲಸದಿಂದ, ಹತ್ತಾರು ಜನರಿದ್ದ ದತ್ತಜಯಂತಿಯ ಗುಂಪನ್ನು ಸಾವಿರಾರು ಮಟ್ಟಕ್ಕೆ ತೆಗೆದುಕೊಂಡುಹೋಗಿದೆ. ತೊಗಾಡಿಯಾರಿಂದ ಹಿಡಿದು ಮೋದಿಯ ತನಕ ನಾಡಿನ ಎಲ್ಲ ಕೋಮುದ್ವೇಷ ಪಸರಿಸುವ ನಾಯಕರು ಚಿಕ್ಕಮಗಳೂರಿಗೆ ಕರೆಸಿ ಭಾಷಣ ಮಾಡಿಸಿದೆ. ಜಿಲ್ಲಾಡಳಿತವನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಮಣಿಸಿದೆ. ಆದರೂ ಗಿರಿ ದಕ್ಕುತ್ತಿಲ್ಲ.

ಯಾಕೆ ಹೀಗಾಗುತ್ತಿದೆ

ಇದಕ್ಕೆ ಕಾರಣ, ಬಾಬಾಬುಡನಗಿರಿಯಲ್ಲಿ ಇರುವ ವಿಶಿಷ್ಟ ಸಂಸ್ಕೃತಿ ಎಂದು ಅನಿಸುತ್ತದೆ. ಇದು ಹಿಂದು ಮುಸ್ಲಿಂ ಎಂಬ ಮತೀಯ ಪರಿಭಾಷೆಯಲ್ಲಿ ಹೆಸರಿಟ್ಟು ವಿಂಗಡಿಸಲಾಗದ ಈ ಸಂಸ್ಕೃತಿಯಾಗಿದೆ. ಹಲವು ನದಿಗಳು ಮಿಲನವಾಗಿರುವ ಸಾಗರದಂತಿದೆ. ಇದು ಹಲವು ಅನುಭಾವದ ಪಂಥಗಳು ಸೇರಿಕೊಂಡು ಹುಟ್ಟಿರುವ ಹೊಸಧರ್ಮ ಅಥವಾ ಹೊಸ ಸಂಸ್ಕೃತಿಯಾಗಿದೆ. ಇಲ್ಲಿರುವ ಆಚರಣೆಗಳು ಶುದ್ಧ ಇಸ್ಲಾಮಿಯೂ ಅಲ್ಲದ ಹಿಂದೂ ಎನಿಸದವು.ಇಲ್ಲಿಗೆ ಬರುವವರು ಜನ. ಧರ್ಮಜಾತಿಯ ಗೆರೆಯನ್ನು ದಾಟಿ ನಿತ್ಯಜೀವನದ ಹೋರಾಟದಲ್ಲಿ ತೊಡಗಿರುವ ಕೇವಲ ಜನ. ಅವರನ್ನು ಹಿಂದು ಮುಸ್ಲಿಂ ಎಂಬ ಮತೀಯ ಪರಿಭಾಷೆಯಲ್ಲಿ ಕರೆಯುವುದೆ ಸರಿಯಲ್ಲ. ಜತೆಗೆ ಗಿರಿಗೆ ಸಂಪ್ರದಾಯಸ್ಥ ಮುಸ್ಲಿಮರು ಸನಾತನವಾದಿ ಹಿಂದೂಗಳು ಎಂದೂ ನಡೆದುಕೊಂಡಿಲ್ಲ. ಈಗಲೂ ನಡೆದುಕೊಳ್ಳುವುದಿಲ್ಲ. ಎಂತಲೆ ಇಲ್ಲಿರುವುದು ಜನತೆಯ ಧರ್ಮ ಅಥವಾ ಜನತೆಯ ಸಂಸ್ಕೃತಿ.

ಭಾರತದಲ್ಲಿಯೇ ಅನನ್ಯವಾದ ಈ ಮಿಲನದ ಸಂಸ್ಕೃತಿಗೆ ಅಥವಾ ಜನತೆಯ ಧರ್ಮಕ್ಕೆ ಅಡಿಪಾಯ ಹಾಕಿದವರು ಈ ನಾಡಿನ ಅವಧೂತರು ಆರೂಢರು ಸಂತರು. ಈ ಅಡಿಪಾಯದ ಮೇಲೆ ತಮ್ಮ ಭಕ್ತಿ, ಶ್ರದ್ಧೆ, ಆಹಾರ ಪದ್ಧತಿಗಳ ಮೂಲಕ ಈ ವಿಶಿಷ್ಟ ಸಂಸ್ಕೃತಿಯ ಕಟ್ಟಡವನ್ನು ಕಟ್ಟಿದವರು ಈ ನಾಡಿನ ದುಡಿಯುವ ಜನತೆ. ತಂತಮ್ಮ ಕಷ್ಟ ನೋವು ಸಂತೋಷಗಳನ್ನು ಇಲ್ಲಿನ ದೈವಗಳ ಮುಂದೆ ಹಂಚಿಕೊಳ್ಳಲೆಂದು ಬರುವ ದಮನಿತ ಜನತೆ.

ಕೆಡಹುವ ಸಂಸ್ಕೃತಿಯ ಸಂಘಪರಿವಾರಕ್ಕೆ ನಮ್ಮ ದೇಶ ರೂಪಿಸಿರುವ ಇಂತಹ ವಿಶಿಷ್ಟವಾದ ಧರ್ಮಗಳ ಅರಿವೇಯಿಲ್ಲ. ಈ ಲೋಕದ ಸಮಸ್ತ ವಸ್ತುಗಳನ್ನು ಹಿಂದು ಮುಸ್ಲಿಂ ವಿಭಜಿಸುವ ಪರಿಣತಿಯುಳ್ಳ ಅವರಿಗೆ ಇಲ್ಲಿನ ಮಿಲನ ಸಂಸ್ಕೃತಿಯ ಪರಿವೆಯೇ ಇಲ್ಲ. ಅವರಲ್ಲಿ ಎಲ್ಲೆಲ್ಲಿ ವಿವಾದ ಹುಟ್ಟುಹಾಕಬಹುದು ಎಂಬ ಧಾರ್ಮಿಕ ತಾಣಗಳ ಪಟ್ಟಿಮಾತ್ರ ಸದಾ ಸಿದ್ಧವಾಗಿದೆ. ಭಾರತದಲ್ಲಿ ಧರ್ಮಗಳು ಗೂಳಿಕಾಳಗ ಮಾಡಿದವು ಎಂದು ಅದು ಬಣ್ಣಿಸುತ್ತದೆ. ಆದರೆ ಭಾರತದ ಪಂಥಗಳು ಧರ್ಮಗಳು ಸಮುದಾಯಗಳು ಹಲವು ನದಿಗಳು ಕೂಡಿ ಸಾಗರಕ್ಕೆ ಹರಿದಂತೆ ಹರಿದಿರುವ ಕಥೆಯೂ ಇದೆ. ಬಾಬಾಬುಡನಗಿರಿ ಹಾಗೆ ಹಲವು ಪಂಥಗಳ ಸಮ್ಮಿಲನದ ಅಪೂರ್ವ ತಾಣ. ಈ ಮಿಲನದ ಚಿಹ್ನೆ "ಬಾಬಾಬುಡನ್" ಎಂಬ ಫಾರಸಿ ಪದದೊಂದಿಗೆ "ಗಿರಿ" ಎಂಬ ಸಂಸ್ಕೃತ ಶಬ್ದ ಬೆರೆಯುವಿಕೆಯಿಂದ ಶುರುವಾಗುತ್ತದೆ. ಅಲ್ಲಿನ ಆಚರಣೆಗಳಲ್ಲಿ ಮಿಲನವಿದೆ. ನಡೆದುಕೊಳ್ಳುವ ಜನರಲ್ಲಿ ಮಿಲನವಿದೆ. ಅಲ್ಲಿನ ತತ್ವದಲ್ಲಿ ಮಿಲನವಿದೆ. ಈ ಲೇಖನದ ಆರಂಭದಲ್ಲಿ ಉಲ್ಲೇಖ ಮಾಡಿದ ಶಾಸನದ ಸೂಕ್ತಿಯನ್ನು ಗಮನಿಸಿಬೇಕು.

ಅದು ಭಾರತದ ಎಲ್ಲ ಅವಧೂತ ಪಂಥಗಳ ಮೂಲಸಿದ್ಧಾಂತವಾಗಿರುವ ಅಹಂ ಬ್ರಹ್ಮಾಸ್ಮಿ ತತ್ವವಾಗಿದೆ. ಅಲ್ಲಮಪ್ರಭು ಹೇಳುವ ನಾನೀ ಎಂಬ ಭೇದ ಅಂದೂ ಇಲ್ಲ, ಇಂದೂ ಇಲ್ಲ, ಗುಹೇಶ್ವರಲಿಂಗ ತಾನೆಯಾಗಿ ಎಂಬ ಚಿಂತನೆಯಾಗಿದೆ. ೧೯ನೇ ಶತಮಾನದ ಗುರುಖಾದರಿಪೀರಾ ಎಂಬ ಸೂಫಿಕವಿ ನಿನ್ನೊಳು ನೀನು ಶೋಧಮಾಡಲು ನೀನೆ ನೀನೆ ಸಂತ, ನಿನ್ನ ಬಿಟ್ಟು ಏನಿಲ್ಲಂತ ಎಂದು ಹೇಳುವುದು ಇದೇ ತತ್ವವನ್ನು. ಇದೆಲ್ಲ ನಮ್ಮ ಜನಸಂಸ್ಕೃತಿಗೆ ಬಾಹಿರರಾದವರಿಗೆ ತಿಳಿಯುವುದೆ ಇಲ್ಲ.

ಮುಖ್ಯ ಸಂಗತಿಯೆಂದರೆ, ಭಾರತದ ಅನುಭಾವಿ ಪಂಥಗಳು ಪರಸ್ಪರ ಮಿಲನವಾಗುವ ಕೆಲಸವನ್ನು ಮಾತ್ರ ಮಾಡಲಿಲ್ಲ. ತಂತಮ್ಮ ಧರ್ಮಗಳ ಒಳಗಿದ್ದ ಸನಾತನವಾದಿ ಪುರೋಹಿತಶಾಹಿ ಚಿಂತನೆಗಳನ್ನು ತೀವ್ರವಾಗಿ ವಿರೋಧಿಸಿದವು. ಇವುಗಳ ಜನಪ್ರಿಯತೆಗೆ ಇದುವೇ ಮುಖ್ಯ ಕಾರಣ. ಸೂಫಿಗಳು ಇಸ್ಲಾಮಿನಲ್ಲಿರುವ ಸನಾತನವಾದಕ್ಕೆ ಪ್ರತಿಯಾಗಿ ಹುಟ್ಟಿದ ಅನುಭಾವಿ ಪಂಥವಾದರೆ, ದತ್ತಪಂಥವು ಪುರೋಹಿತಶಾಹಿ ಶಕ್ತಿಗಳ ವಿರುದ್ಧ ಸಮರ ಸಾರಿದ ಜಾತ್ಯತೀತ ಪಂಥವಾಗಿದೆ. ಇದರ ಚರ್ಚೆಯನ್ನು ಮುಂದೆ ನೋಡಬಹುದು.

ಭಾರತದ ಪಂಥಗಳು ಧರ್ಮಗಳು ಸಮುದಾಯಗಳು ಹಲವು ನದಿಗಳು ಕೂಡಿ ಸಾಗರಕ್ಕೆ ಹರಿದಂತೆ ಹರಿದಿರುವ ಕಥೆಯೂ ಇದೆ. ಬಾಬಾಬುಡನಗಿರಿ ಹಾಗೆ ಹಲವು ಪಂಥಗಳ ಸಮ್ಮಿಲನದ ಅಪೂರ್ವ ತಾಣ. ಈ ಮಿಲನದ ಚಿಹ್ನೆ 'ಬಾಬಾಬುಡನ್' ಎಂಬ ಫಾರಸಿ ಪದದೊಂದಿಗೆ 'ಗಿರಿ' ಎಂಬ ಸಂಸ್ಕೃತ ಶಬ್ದ ಬೆರೆಯುವಿಕೆಯಿಂದ ಶುರುವಾಗುತ್ತದೆ. ಅಲ್ಲಿನ ಆಚರಣೆಗಳಲ್ಲಿ ಮಿಲನವಿದೆ. ನಡೆದುಕೊಳ್ಳುವ ಜನರಲ್ಲಿ ಮಿಲನವಿದೆ. ಅಲ್ಲಿನ ತತ್ವದಲ್ಲಿ ಮಿಲನವಿದೆ. ಭಾರತದ ಅನುಭಾವಿ ಪಂಥಗಳು ಪರಸ್ಪರ ಮಿಲನವಾಗುವ ಕೆಲಸವನ್ನು ಮಾತ್ರ ಮಾಡಲಿಲ್ಲ. ತಂತಮ್ಮ ಧರ್ಮಗಳ ಒಳಗಿದ್ದ ಸನಾತನವಾದಿ ಪುರೋಹಿತಶಾಹಿ ಚಿಂತನೆಗಳನ್ನು ತೀವ್ರವಾಗಿ ವಿರೋಧಿಸಿದವು. ಇವುಗಳ ಜನಪ್ರಿಯತೆಗೆ ಇದುವೇ ಮುಖ್ಯ ಕಾರಣ. ಸೂಫಿಗಳು ಇಸ್ಲಾಮಿನಲ್ಲಿರುವ ಸನಾತನವಾದಕ್ಕೆ ಪ್ರತಿಯಾಗಿ ಹುಟ್ಟಿದ ಅನುಭಾವಿ ಪಂಥವಾದರೆ, ದತ್ತಪಂಥವು ಪುರೋಹಿತಶಾಹಿ ಶಕ್ತಿಗಳ ವಿರುದ್ಧ ಸಮರ ಸಾರಿದ ಜಾತ್ಯತೀತ ಪಂಥವಾಗಿದೆ.

ಈ ಹಿನ್ನೆಲೆಯಲ್ಲಿ ನೋಡಿದರೆ, ಬ್ರಾಹ್ಮಣ ಸನಾತನವಾದ ಹಾಗೂ ಪುರೋಹಿತಶಾಹಿಯ ಆಧುನಿಕ ರೂಪವಾಗಿರುವ ಸಂಘ ಪರಿವಾರವು ಇದಕ್ಕೆ ನಿಜವಾಗಿಯೂ ವಾರಸುದಾರನಲ್ಲ. ಆದರೆ ಯಾವುದಕ್ಕೆ ತಾನು ವಾರಸುದಾರನಲ್ಲವೊ, ಅಂತಹ ಮೂರನೆಯ ಧರ್ಮದ ಜಾಗಗಳನ್ನು ಸಂಘಪರಿವಾರವು ಆಕ್ರಮಿಸಿಕೊಳ್ಳುತ್ತಿದೆ. ಕಾರಣ, ಅದು ಸಾಮಾನ್ಯ ಜನರನ್ನು ಅವರ ಧರ್ಮ ಜಾತಿಗಳಾಚೆ ತೆಗೆದುಕೊಂಡುಹೋಗಿ ಒಂದುಗೂಡಿಸುವ ಯಾವುದೇ ತತ್ವವನ್ನು ನಿರಾಕರಿಸುತ್ತದೆ. ಅದನ್ನು ನಾಶಮಾಡಬಯಸುತ್ತದೆ. ನಾಶ ಮಾಡದೆ ಹೋದರೆ, ಧರ್ಮದ ಹೆಸರಲ್ಲಿ ಜನರನ್ನು ವಿಭಜಿಸಿ ಪರಸ್ಪರ ದ್ವೇಷಿಸುವಂತೆ ಮಾಡುವ ಅದರ ರಾಜಕಾರಣ ಪೂರ್ಣಗೊಳ್ಳುವುದಿಲ್ಲ.

ಬಜರಂಗದಳವು ಕಳೆದ ಎರಡು ವರ್ಷಗಳಿಂದ ಸೂಫಿ ಸಂತ ತಾಣಗಳಾದ ಬಿಜಾಪುರ, ಬಾಗಲಕೋಟೆ, ಮಲೆಬೆನ್ನೂರು, ಬೀಳಗಿಗಳಲ್ಲಿ ಕೋಮುಗಲಭೆ ಎಬ್ಬಿಸಿತು. ಇವೆಲ್ಲವೂ ಸೂಫಿ ಸಂತರಿರುವ ಜಾಗಗಳು ಎಂಬುದು ಗಮನಾರ್ಹ. ಬಾಬಾಬುಡನಗಿರಿಯಲ್ಲಿ ದತ್ತನ ವಿಗ್ರಹ ಸ್ಥಾಪನೆ ಮಾಡಬೇಕು, ಬ್ರಾಹ್ಮಣ ಪೂಜಾರಿ ಇಡಬೇಕು, ಯಜ್ಞಯಾಗ ಮಾಡಬೇಕು ಎನ್ನುತ್ತಿದೆ. ಅದರ ನಿಜವಾದ ಅಜೆಂಡಾ, ಇಲ್ಲಿರುವ ಸಾಮರಸ್ಯದ ಸಂಕೇತವನ್ನು ನಾಶಮಾಡುವುದು ಹಾಗೂ ಮತೀಯ ದ್ವೇಷದ ಗಂಗೋತ್ರಿಯನ್ನು ಸ್ಥಾಪಿಸುವುದು.

ಅವರು ನಾಶ ಮಾಡಬಯಸುವ ನಮ್ಮ ಜನತೆಯ ಸಂಸ್ಕೃತಿಯ ಸ್ವರೂಪ ಯಾವುದು. ಈ ಹೊತ್ತಿನ ಭಾರತದ ಸನ್ನಿವೇಶದಲ್ಲಿ ಯಾಕೆ ಅದು ಜನತ ಮಾಡಬೇಕಾದ ಪವಿತ್ರ ಧರ್ಮವಾಗಿದೆ. ಇದು ಈಗ ತಿಳಿಯಬೇಕಾದ ಸಂಗತಿ. ಪ್ರಸ್ತುತ ಲೇಖನದಲ್ಲಿ ಬಾಬಾಬುಡನಗಿರಿಯಲ್ಲಿರುವ ಹಿಂದುಮುಸ್ಲಿಂ ಎರಡೂ ಅಲ್ಲದ ಮೂರನೆಯ ಧರ್ಮದ ವಿಶಿಷ್ಟ ಸ್ವರೂಪವನ್ನು ವಿವರಿಸಲು ಯತ್ನಿಸಿದೆ. ಇದಕ್ಕೆ ಕಾರಣವಾದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ಯತ್ನಿಸಿದೆ. ನಮ್ಮ ನಾಡಿನ ಅನುಭಾವಿ ಪಂಥಗಳು ಹೇಗೆ ಪರಸ್ಪರ ಕೊಡುಕೊಳೆ ಮಾಡಿದ ಕಥನವನ್ನು ಶೋಧಿಸಲು ಯತ್ನಿಸಿದೆ.

ಇದಕ್ಕಾಗಿ ಬಳಸಿಕೊಂಡಿರುವ ಆಕರಗಳೆಂದರೆ ೧.ಬಾಬಾಬುಡನಗಿರಿಯ ಪರಿಸರದಲ್ಲಿ ಮಾಡಿದ ಕ್ಷೇತ್ರ ಕಾರ್ಯದಲ್ಲಿ ಸಿಕ್ಕ ಮಾಹಿತಿಗಳು. ೨. ಬಾಬಾಬುಡನಗಿರಿಗೆ ನಡೆದುಕೊಳ್ಳುವ ನೂರಾರು ಜನರ ಜತೆಗೆ ಮಾಡಿದ ಚರ್ಚೆ. ೩. ಗಿರಿಯ ಉರುಸುಗಳಲ್ಲಿ ಹಾಗೂ ದಿನನಿತ್ಯ ದರ್ಗಾದಲ್ಲಿ ಮಾಡುವ ಆಚರಣೆಗಳು. ೪.ಬಾಬಾಬುಡನಗಿರಿಯನ್ನು ಕುರಿತು ಬ್ರಿಟಿಶರ ಕಾಲದಿಂದಲೂ ಬಂದಿರುವ ಮುಜರಾಯಿ, ಪುರಾತತ್ವ, ಆಡಳಿತದ ವರದಿಗಳನ್ನು ಮ್ಯಾನವೆಲ್ಲು, ಗೆಜಿಟಿಯರುಗಳು ೫. ಭಾರತದ ಅವಧೂತ ಪಂಥಗಳ ಮೇಲೆ ಕೆಲಸ ಮಾಡಿರುವ ಕನ್ನಡದ ಧೀಮಂತ ಸಂಸ್ಕೃತಿ ಚಿಂತಕ ಶಂಬಾಜೋಶಿ, ನಾಥ ಮತ್ತು ದತ್ತಪಂಥಗಳ ಮೇಲೆ ಪ್ರಕಾಂಡ ಪಂಡಿತರಾದ ಮರಾಠಿಯ ರಾ.ಚಿಂ. ಢೇರೆ, ಸೂಫಿಗಳ ಮೇಲೆ ಕೆಲಸಮಾಡಿದ ಅಂತಾರಾಷ್ಟ್ರೀಯ

ವಿದ್ವಾಂಸರಾದ ರಿಚ್ಚಿ ಹಾಗೂ ಈಟನ್, ನಾಥ ಕಾಪಾಲಿಕ ಪಂಥಗಳ ಮೇಲೆ ಅಧ್ಯಯನ ಮಾಡಿರುವ ಬ್ರಿಗ್ಸ್ ಹಾಗೂ ಲೊರೆಂಜ್ಟೆನ್ ಅವರು ಬರೆದ ಗ್ರಂಥಗಳು.

ಕೆಲವು ಪ್ರಶ್ನೆಗಳು

ಮೊದಲಿಗೆ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಬಾಬಾಬುಡನಗಿರಿಯಲ್ಲಿರುವ ವಿಶಿಷ್ಟ ಸಂಸ್ಕೃತಿ ಅಥವಾ ವಿಶಿಷ್ಟ ಧರ್ಮವು ಹೇಗೆ ರೂಪುಗೊಂಡಿತು. ಇಲ್ಲಿನ ಬೆಟ್ಟಕ್ಕೆ ಬಾಬಾಬುಡನ್ ಹೆಸರು ಬರಲು ಕಾರಣವೇನು, ಇಲ್ಲಿನ ದರ್ಗಾಕ್ಕೆ ಹೆಸರು ಬರಲು ಕಾರಣವಾಗಿರುವ ದಾದಾಹಯಾತ್ ಮೀರಖಲಂದರ್ ಯಾರು, ಇಲ್ಲಿ ನಡೆಯುವ ಆಚರಣೆಗಳು ಯಾವುವು, ಈ ದರ್ಗಾಕ್ಕೆ ದತ್ತಾತ್ರೇಯ ಪೀಠ ಎಂಬ ಹೆಸರುಂಟಾಗಲು ಕಾರಣವೇನು, ದತ್ತಪಂಥದ ಯಾವ ಯತಿ ಇಲ್ಲಿದ್ದರು, ಒಂದೇ ಬೆಟ್ಟದಲ್ಲಿ ಒಂದೇ ಗುಹೆಯಲ್ಲಿ ಸೂಫಿಸಂತರೂ ದತ್ತಾತ್ರೇಯರು ಹೇಗೆ ನೆಲೆಸಿದರು, ಇವರಿಬ್ಬರೂ ಬೇರೆಯೊ ಅಥವಾ ಒಂದೆಯೊ, ಈಗ ದರ್ಗಾದಲ್ಲಿರುವ ಸಮಾಧಿಗಳು ಯಾರವು, ಇಲ್ಲಿರುವ ಶಾಸನಗಳು ಏನನ್ನು ಹೇಳುತ್ತವೆ, ಬಾಬಾಬುಡನಗಿರಿ ಪರಿಸರದಲ್ಲಿರುವ ಇತರೆ ಮಠಗಳು ಪೀಠಗಳು ಗುಡಿಗಳು ಯಾವ ಪಂಥದವು, ಇಲ್ಲಿಗೆ ಯಾವ ಜನ ನಡೆದುಕೊಳ್ಳುತ್ತಾರೆ ಮತ್ತು ಯಾವ ಆಚರಣೆ ಮಾಡುತ್ತಾರೆ.

ಈ ಪ್ರಶ್ನೆಗಳಿಗೆ ಉತ್ತರ ಹುಡುಕುವಾಗ, ಚಾರಿತ್ರಿಕ ಎನ್ನಬಹುದಾದ ಖಚಿತ ಉತ್ತರ ಸಿಗುವುದಿಲ್ಲ. ಮುಂಬರುವ ಜನ ತಮ್ಮ ಜಾಗವನ್ನು ವಿವಾದವಾಗಿಸಿ ಕಿತ್ತಾಡುತ್ತಾರೆ, ಕೋರ್ಟು ಕಛೇರಿ ಹತ್ತುತ್ತಾರೆ ಎಂದು ಗೊತ್ತಿದ್ದರೆ, ನಮ್ಮ ಸಂತರು ಬಯೋಡೇಟ ಬರೆದಿಟ್ಟು ಹೋಗುತ್ತಿದ್ದರೊ ಏನೊ. ಈ ವಿಷಯದಲ್ಲಿ ಚಾರಿತ್ರಿಕ ದಾಖಲೆಗಳಿಗಿಂತಹ ಹೆಚ್ಚಾಗಿ ಸಿಗುವುದು ಭಕ್ತರು ನಂಬಿಕೆ ಶ್ರದ್ಧೆಯಿಂದ ಕಟ್ಟಿದ ಪವಾಡ ಕತೆಗಳು.

ಸರಕಾರಿ ದಾಖಲೆಗಳಲ್ಲಿಗಿರಿ

ಸರಕಾರಿ ದಾಖಲೆಗಳಲ್ಲಿ ಬಾಬಾಬುಡನಗಿರಿಯ ದರ್ಗಾವು ಚಿಕ್ಕಮಗಳೂರು ಜಿಲ್ಲೆಯ ಜಾಗರ ಹೋಬಳಿಗೆ ಸೇರಿದ ಇನಾಂ ದತ್ತಾತ್ರೇಯಪೀಠ ಎಂಬ ಗ್ರಾಮದಲ್ಲಿದೆ. ಸರಕಾರವು ಈ ದರ್ಗಾ ಅಥವಾ ಪೀಠಕ್ಕೆ ಒಂದು ಗ್ರಾಮವನ್ನು ಕಂದಾಯ ಹಾಕದೆ ಜಹಗೀರು ಹಾಕಿಕೊಟ್ಟಿದ್ದರಿಂದ ಇನಾಂ ಎಂಬ ಹೆಸರು ಬಂದಿತು. ಕರ್ನಾಟಕ ಸರಕಾರ ಪ್ರಕಟಿಸಿರುವ ಗ್ರಾಮನಾಮ ಸೂಚಿಯಲ್ಲಿ ಇನಾಂ ದತ್ತಾತ್ರೇಯ ಪೀಠ ಹಾಗೂ ದತ್ತಾತ್ರೇಯಪೀಠ ಎಂಬ ಎರಡು ಜಾಗಗಳಿವೆ. ಈ ಎರಡನೆಯ ದತ್ತಾತ್ರೇಯ ಪೀಠವು ದರ್ಗಾದಿಂದ ಮೂರು ಮೈಲಿ ಅಂತರದಲ್ಲಿ ಪೂರ್ವಕ್ಕೆ ಇರುವ ಆದಿಗದ್ದುಗೆ ದತ್ತಾತ್ರೇಯ ಫಳಾಹಾರಮಠ ಅಥವಾ ದರ್ಗಾದ ಉತ್ತರಕ್ಕೆ ಇರುವ ಆದಿಗದ್ದುಗೆ ದತ್ತಾತ್ರೇಯ ಬಸಗ್ನಿಮಠವೋ ಇರಬೇಕು. ಇನಾಮತಿಯಿಲ್ಲದ ಕಾರಣ ಇವನ್ನು ಬರಿಯೆ ದತ್ತಾತ್ರೇಯಪೀಠಗಳು ಎಂದು ಕರೆದಿರಬೇಕು. ಇವು ದತ್ತಾತ್ರೇಯನ ಆದಿಗದ್ದುಗೆಗಳು ಎನ್ನುವುದು ಗಮನಾರ್ಹ.

ಈ ಎರಡು ಪೀಠಗಳಿಗೆ ಈಗಲೂ ಮರಾಠಿಗರು, ಕೆಳಜಾತಿಯ ಜನ ಹೋಗುತ್ತಾರೆ. ಅಲ್ಲಿ ಬಲಿಪದ್ಧತಿಯಿದೆ. ಸಂಘಪರಿವಾರವು ಈ ಎರಡೂ ಆದಿಗದ್ದುಗೆ ದತ್ತಾತ್ರೇಯ ಪೀಠಗಳಿಗೆ ಎಂದೂ ಹೋಗಿಲ್ಲ. ಬದಲಿಗೆ ದರ್ಗಾ ಇರುವ ಇನಾಂದತ್ತಾತ್ರೇಯ ಪೀಠವನ್ನು ಮಾತ್ರ ವಿವಾದಕ್ಕೊಳಪಡಿಸಿದೆ. ಈ ಎರಡು ಆದಿಗದ್ದುಗೆ ದತ್ತಾತ್ರೇಯ ಪೀಠಗಳಿಗೆ ಹೋಲಿಸಿದರೆ, ಬಾಬಾಬುಡನಗಿರಿ ದರ್ಗಾ ಸರ್ವ ಧರ್ಮೀಯರನ್ನು ಸೆಳೆಯುತ್ತ ಬಹಳ ಜನಪ್ರಿಯವಾಗಿದೆ.

> **ಬಜರಂಗದಳವು ಕಳೆದ ಎರಡು ವರ್ಷ..ಳಿಂದ ಸೂಫಿ ಸಂತ ತಾಣಗಳಾದ ಬಿಜಾಪುರ, ಬಾಗಲಕೋಟೆ, ಮಲೆಬೆನ್ನೂರು, ಬೀಳಗಿಗಳಲ್ಲಿ ಕೋಮುಗಲಭೆ ಎಬ್ಬಿಸಿತು. ಇವೆಲ್ಲವೂ ಸೂಫಿ ಸಂತರಿರುವ ಜಾಗಗಳು ಎಂಬುದು ಗಮನಾರ್ಹ. ಬಾಬಾಬುಡನಗಿರಿಯಲ್ಲಿ ದತ್ತನ ವಿಗ್ರಹಸ್ಥಾಪನೆ ಮಾಡಬೇಕು, ಬ್ರಾಹ್ಮಣ ಪೂಜಾರಿ ಇಡಬೇಕು, ಯಜ್ಞಯಾಗ ಮಾಡಬೇಕು ಎನ್ನುತ್ತಿದೆ. ಅದರ ನಿಜವಾದ ಅಜೆಂಡಾ, ಇಲ್ಲಿರುವ ಸಾಮರಸ್ಯದ ಸಂಕೇತವನ್ನು ನಾಶಮಾಡುವುದು ಹಾಗೂ ಮತೀಯ ದ್ವೇಷದ ಗಂಗೋತ್ರಿಯನ್ನು ಸ್ಥಾಪಿಸುವುದು. ಅವರು ನಾಶ ಮಾಡಬಯಸುವ ನಮ್ಮ ಜನತೆಯ ಸಂಸ್ಕೃತಿಯ ಸ್ವರೂಪ ಯಾವುದು. ಈ ಹೊತ್ತಿನ ಭಾರತದ ಸನ್ನಿವೇಶದಲ್ಲಿ ಯಾಕೆ ಅದು ಜನತ ಮಾಡಬೇಕಾದ ಪವಿತ್ರ ಧರ್ಮವಾಗಿದೆ. ಇದು ಈಗ ತಿಳಿಯಬೇಕಾದ ಸಂಗತಿ.**

ಜನಪ್ರಿಯತೆಯಿರುವ ಕಾರಣಕ್ಕಾಗಿ ಕಾಲಕಾಲಕ್ಕೆ ಪ್ರಭುತ್ವಗಳು ಇದಕ್ಕೆ ಇನಾಂ ಹಾಕಿಕೊಟ್ಟಿರಬಹುದು. ಈ ಇನಾಮುಗಳನ್ನು ಮೊದಲು ಕೊಟ್ಟವರು ಬಿಜಾಪುರದ ಆದಿಲ ಶಾಹಿಗಳು. ನಂತರ ಹೈದರಾಲಿ ದಾಸರಹಳ್ಳಿಯನ್ನು, ಮುಮ್ಮಡಿ ಕೃಷ್ಣರಾಜ ಒಡೆಯರರು ಸೂರಗುಪ್ಪೆಯನ್ನು ಜಹಗೀರಾಗಿ ಇತ್ತರು. ಟಿಪ್ಪುಸುಲ್ತಾನ, ಮೈಸೂರು ಒಡೆಯರು, ಎಲ್ಲರೂ ಇದೊಂದು ಎಲ್ಲ ಧರ್ಮೀಯರ ಶ್ರದ್ಧೆಯ ಜಾಗವೆಂದು ಮನಗಂಡು ಇನಾಮನ್ನು ಮುಂದುವರೆಸಿಕೊಂಡು ಬಂದರು. ಕೆಳದಿಯ ಚೆನ್ನಮ್ಮ ಇಲ್ಲಿ ಒಂದು ಛತ್ರ ಕಟ್ಟಿಸಿಕೊಟ್ಟಳು. ತಮ್ಮ ರಾಜಕಾರಣಕ್ಕಾಗಿ ಹಿಂದು ಮುಸ್ಲಿಮರಲ್ಲಿ ಸಂಘರ್ಷ ಬಿತ್ತುವುದರಲ್ಲಿ ಪರಿಣಿತರಾಗಿದ್ದ ಬ್ರಿಟಿಶರು ಕೂಡ ಇದರಲ್ಲಿ ಕೈಹಾಕಲಿಲ್ಲ. ದಿವಾನ್ ಪೂರ್ಣಯ್ಯನ ಕಾಲದಲ್ಲಿ ಹೊರಟ ಹುಕುಮುಗಳಲ್ಲಿ ಕೂಡ ಇದಕ್ಕೆ ಕಂದಾಯ ಮನ್ನಾ ಮಾಡಲಾಗಿದೆ.

೨೦೦ ವರುಷಗಳಿಂದ ಸಿಗುವ ಬ್ರಿಟಿಶ್ ಹಾಗೂ ನಮ್ಮ ಸ್ವತಂತ್ರ ಸರಕಾರಗಳ ಮ್ಯಾನುವೆಲ್ಲುಗಳು, ಗೆಜೆಟಿಯರುಗಳು, ಮುಜರಾಯಿ, ರೆವಿನ್ಯೂ, ಪುರಾತತ್ವ ಇಲಾಖೆಗಳ ವಾರ್ಷಿಕ ವರದಿಗಳು ಪ್ರಕಟವಾಗಿವೆ. ಇವು ಬಾಬಾಬುಡನಗಿರಿ ಕುರಿತು ನಿರಂತರವಾಗಿ ವರದಿ ಮಾಡುತ್ತ ಬಂದಿವೆ. ಅವು ಪುನರಾವೃತ್ತಿಯಾಗಿ ದಾಖಲಿಸುವ ಸಂಗತಿಗಳು ಇವು ಈ ಬೆಟ್ಟದ ಹೆಸರು ಬಾಬಾಬುಡನಗಿರಿ. ದಾದಾಹಯಾತ್ ಮೀರಖಲಂದರ್ ಎಂಬ ಸೂಫಿಯಿದ್ದ ಜಾಗ. ಬಾಬಾಬುಡನ್ ದಾದಾಹಯಾತರ ಶಿಷ್ಯ. ಹಜರತ್ ಜಮಾಲ್ ಮಗ್ರಿಬಿ ಎಂಬ ಸಂತನು ಅರೆಬಿಯಾದಿಂದ ಬಂದಾಗ ತಂದ ಕಾಫಿಬೀಜಗಳ ಮೂಲಕ ಇಲ್ಲಿ ಕಾಫಿಬೆಳೆ ಪರಿಚಯಿಸಿದನು, ಇಲ್ಲಿ ವರ್ಷಕ್ಕೊಮ್ಮೆ ಉರುಸು ನಡೆಯುತ್ತದೆ. ಇದಕ್ಕೆ ದೇಶದ ನಾನಾ ಕಡೆಗಳಿಂದ ಭಕ್ತರು ಬರುತ್ತಾರೆ. ಮಧ್ಯೇಶಿಯಾ ದೇಶಗಳಿಂದಲೂ ಬರುತ್ತಾರೆ.

ಈ ಕ್ಷೇತ್ರಕ್ಕೆ ಪೀಠಾಧಿಪತಿ ಸೈಯದ್ ವಂಶದ ಖಲಂದರ್ ಗುರುವಿನದು. ಈ ಗುರುಪರಂಪರೆಯು ಆನುವಂಶಿಕವಾದುದು. ಅವರು ನೇಮಿಸುವ ಬ್ರಹ್ಮಚಾರಿ ಮುಜಾವರನು ಗುಹೆಯ ಗರ್ಭಗುಡಿಯೊಳಗೆ ಹೋಗಿ ಫಾತೆಹಾ ಮಾಡುವ ಮತ್ತು ಪ್ರಸಾದ ಕೊಡುವ ಕೆಲಸ ಮಾಡುತ್ತಾನೆ. ಇದು ಹಿಂದೂಗಳಿಗೆ ದತ್ತಾತ್ರೇಯ ಪೀಠವೆಂದು ಪವಿತ್ರವಾಗಿದೆ. ಎರಡೂ ಧರ್ಮದ ಜನರು ಇದಕ್ಕೆ ನಡೆದುಕೊಳ್ಳುತ್ತಾರೆ.

ಗಮನಿಸಬೇಕಾದ ಸಂಗತಿ ಎಂದರೆ, ೩೦೦ ವರ್ಷಗಳಿಂದ ಸಿಗುವ ಸರಕಾರಿ ದಾಖಲೆಗಳಲ್ಲಿ ದಾದಾಹಯಾತ್ ಹಾಗೂ ಬಾಬಾಬುಡನ್ ಎಂಬ ಇಬ್ಬರು ಸಂತರ ಹೆಸರು ಬರುತ್ತದೆ. ಯಾವುದೆ ದತ್ತಪಂಥದ ಯತಿಯ ಹೆಸರು ಬರುವುದಿಲ್ಲ. ಇಲ್ಲಿನ ಮುಖ್ಯಸ್ಥರು ಸೂಫಿವಂಶದ ಗುರುವೆಂದು ಹೇಳಲಾಗಿದೆ. ಅವರ ಇಡೀ ವಂಶವೃಕ್ಷ ಸಿಗುತ್ತದೆ.

ಯಾವುದೇ ಹಿಂದು ಪೂಜಾರಿಯ ಪ್ರಸ್ತಾಪವಿಲ್ಲ. ಇಲ್ಲಿ ಉರುಸು ನಡೆಯುತ್ತದೆ ಎಂದು ಹೇಳಲಾಗಿದೆ. ದತ್ತವಿಗ್ರಹದ ಪೂಜೆಯದಾಗಲಿ, ದತ್ತಜಯಂತಿಯ ಉಲ್ಲೇಖವಾಗಲಿ ಇಲ್ಲ. ಹಿಂದುಗಳ ಜಾಗವನ್ನು ಮುಸ್ಲಿಮರು ಆಕ್ರಮಿಸಿಕೊಂಡರು ಎಂಬ ವಿವಾದದಗ್ರಸ್ತ ಮಾತುಗಳು ನಮೂದಾಗಿಲ್ಲ. ಬದಲಾಗಿ ಎರಡೂ ಧರ್ಮದ ಜನರು ನಡೆದುಕೊಳ್ಳುವ ವಿಶೇಷ ಸ್ಥಳ ಎಂದು ಆದರದಿಂದ ಹೇಳಲಾಗಿದೆ.

ದತ್ತಾತ್ರೇಯ ಭಕ್ತರಾಗಿದ್ದ ಮೈಸೂರು ಒಡೆಯರು ಗಿರಿಗೆ ಭೇಟಿಕೊಟ್ಟಾಗಲೂ ಅವರನ್ನು ಸ್ವಾಗತ ಮಾಡಿ ಗುಹೆಯ ದರ್ಶನದ ಕೆಲಸವನ್ನು ಇಲ್ಲಿನ ಪೀಠಾಧಿಪತಿಯಾದ ಸಜ್ಜಾದೆನಶೀನರು ಮಾಡುತ್ತಿದ್ದರು. ಇದನ್ನು ಮೈಸೂರು ಆಸ್ಥಾನದ ಚರಿತ್ರಕಾರರು ಕೂಡ ದಾಖಲಿಸುತ್ತಾರೆ. (ಎಸಿಂಗ್ರಯ್ಯ ವಿರಚಿತ ಶ್ರೀ ಜಯಚಾಮರಾಜೇಂದ್ರ ಒಡೆಯವರವರ ಚರಿತ್ರೆ, ೧೯೦೦, ಪು. ೧೧೯) ಪ್ರಶ್ನೆಯೆಂದರೆ ಇಂತಹ ಸೂಫಿ ಪರಂಪರೆಯ ಜಾಗದಲ್ಲಿ ದತ್ತಾತ್ರೇಯನ ಹೆಸರು ಹೇಗೆ ಲಗತ್ತಾಯಿತು. ಇದಕ್ಕೆ ವಿವರಣೆಯನ್ನು ಮುಂದೆ ನೋಡಬಹುದು.

ಬಾಬಾಬುಡನಗಿರಿಯ ಪರಿಸರ

ಮೊದಲಿಗೆ ಬಾಬಾಬುಡನಗಿರಿಯ ಪರಿಸರವನ್ನು ನೋಡೋಣ. ಇಲ್ಲಿನ ಬೆಟ್ಟಗಳ ಶ್ರೇಣಿಯಲ್ಲಿ ಮುಳ್ಳಯ್ಯನ ಗಿರಿ, ಬಾಬಾಬುಡನಗಿರಿ, ದೇವೀರಮ್ಮನ ಗುಡ್ಡ, ಕಲ್ಹತ್ತಿಗಿರಿ ಮುಂತಾದ ಗಿರಿಗಳಿವೆ. ಬಾಬಾಬುಡನ ಗಿರಿ ಬೆಟ್ಟಗಳಿರುವ ಶ್ರೇಣಿಯನ್ನು ಪುರಾಣಗಳಲ್ಲಿ ಚಂದ್ರದ್ರೋಣ ಪರ್ವತವೆಂದು ಕರೆಯಲಾಗಿದೆ. ದ್ರೋಣ ಎಂದರೆ ದೋಣಿ ಅಥವಾ ದೊನ್ನೆ. ಗಿರಿಯಿಂದ ನಿಂತು ನೋಡಿದರೆ ಮುಂದಿನ ಕಣಿವೆ ದೊನ್ನೆಯನ್ನು ನೆನಪಿಸುತ್ತದೆ. ಇದರಿಂದ ಈ ಹೆಸರು ಬಂದಿರಬಹುದು.

ಗಿರಿಯ ಪರಿಸರದಲ್ಲಿ ಅನೇಕ ಧಾರ್ಮಿಕ ಸ್ಥಳಗಳಿವೆ. ಅವುಗಳಲ್ಲಿ ಮುಖ್ಯವಾದವು ದಾದಾಹಯಾತ ಖಲಂದರರಿದ್ದ ದರ್ಗಾ, ಶ್ರೀ ಗುರುದತ್ತಾತ್ರೇಯನ ಆದಿಗದ್ದುಗೆಗಳು ಎಂದು ಹೆಸರಾಗಿರುವ ಎರಡು ಮಠಗಳು, ಮುಳ್ಳಯ್ಯನಗಿರಿಯಲ್ಲಿರುವ ಮುಳ್ಳಯ್ಯ ಸ್ವಾಮಿ ಗದ್ದುಗೆ, ಸೀತಾಳಯ್ಯನ ಗದ್ದುಗೆ, ನಿರ್ವಾಣಸ್ವಾಮಿ ಗದ್ದುಗೆ. ಗಮನಿಸಬೇಕಾದ ಸಂಗತಿ ಎಂದರೆ ಇಲ್ಲಿರುವವು ಮುಖ್ಯವಾಗಿ ಗುಡಿ ಮಸೀದಿಗಳಲ್ಲ. ಸಂತರ ಸಮಾಧಿಗಳು. ಪೀಠ ಅಥವಾ ಗದ್ದುಗೆಗಳು. ಸಮಾಧಿ ಗದ್ದುಗೆಗಳು ಯಾವಾಗಲೂ ಅನುಭಾವ ಸಾಧನೆಗೆ ಹೆಸರಾದ ಗುರುಪಂಥದ ಸ್ಮಾರಕಗಳು. ಸೂಫಿಪಂಥ, ದತ್ತಪಂಥ, ನಾಥಪಂಥ ಎಲ್ಲವೂ ಗುರುಪಂಥಗಳು.

ಬಾಬಾಬುಡನ್ ದಾದಾಹಯಾತ್ ಯಾರಿವರು

ಫಾರಸಿ ಉರ್ದು ಭಾಷೆಯ ಸೂಫಿಸಂತರ ಚರಿತ್ರೆಗಳ ಪ್ರಕಾರ, ಬಾಬಾಬುಡನಗಿರಿಗೆ ಮೆಕ್ಕಾದಿಂದ ಅಬ್ದುಲ್ ಅಜೀಜ್ ಯೂಸೂಫ್ ಮಕ್ಕಿ ಎಂಬ ಸೂಫಿ ಸಂತ ಬಂದರು. ದಾದಾಹಯಾತ ಖಲಂದರ್ ಎಂಬುದು ವಾಸ್ತವವಾಗಿ ಹೆಸರಲ್ಲ. ಅದೊಂದು ಪದವಿ. ದಾದಾ ಎಂದರೆ ಅಜ್ಜ ಎಂದರ್ಥ. ಸಂತರನ್ನು ಬಾಬಾ (ತಂದೆ) ದಾದಾ (ಅಜ್ಜ) ಎಂಬ ಕುಟುಂಬ ಸಂಬಂಧದಲ್ಲಿ ಕರೆಯುವುದು ಸೂಫಿಗಳಲ್ಲಿ ಸಾಮಾನ್ಯ. ಖಲಂದರ್ ಎಂಬುದು ಅವರ ಸೂಫಿಪಂಥದ ಶಾಖೆಯ ಹೆಸರು.

ಪರ್ಶಿಯಾದಲ್ಲಿ ಹುಟ್ಟಿ ಭಾರತದಲ್ಲಿ ಬೆಳೆದ ಸೂಫಿಪಂಥವು ಇಲ್ಲಿನ ಯೋಗಿಗಳ ಜತೆ ಅನನ್ಯವಾಗಿ ಬೆರೆಯಿತು. ಸೂಫಿಗಳನ್ನು ಕಾಶ್ಮೀರದಲ್ಲಿ ಋಷಿ ಎಂದು ಕರೆಯುತ್ತಾರೆ. ದೇವರನ್ನು ಪ್ರೇಮದಿಂದ ಒಲಿಸಿಕೊಳ್ಳ ಬಹುದು ಎಂದು ಭಾವಿಸಿದ್ದ, ಸನ್ಯಾಸ, ಧ್ಯಾನ, ಯೋಗಸಾಧನೆ ಮಾಡುತ್ತಿದ್ದ ಅನುಭಾವಿ ಪಂಥವಿದು. ಅದರಲ್ಲಿ ಖಾದ್ರಿಯಾ ಚಿಸ್ತಿಯಾ ಎಂಬ ಶಾಖೆಗಳಿವೆ., ಖಲಂದರಿಯ ಶಾಖೆಯು ತನ್ನ ಹಠಯೋಗ, ದೇಹದಂಡನೆ, ಧ್ಯಾನ, ತಪಸ್ಸು, ತಿರುಗಾಟ, ಏಕಾಂತ, ಪವಾಡಗಳಿಗೆ ಹೆಸರಾಗಿದೆ.. ಈಗಲೂ ಭಾರತದ ಮೂಲೆಮೂಲೆಗಳಿಂದ ಉರುಸಿಗೆ ಬರುವ ಫಕೀರರು ಶಸ್ತ್ರದಿಂದ ತಮ್ಮನ್ನು ದಂಡಿಸಿಕೊಳ್ಳುವುದನ್ನು ಕಾಣಬಹುದು. ದಾದಾಹಯಾತ ಖಲಂದರ್ ಖಲಂದರಿಯಾ ಪಂಥದ ಒಬ್ಬ ಸೂಫಿ. ಖಲಂದರಿಯಾ ಪಂಥದ ಸೂಫಿಗಳು ಸಾಂಪ್ರದಾಯಕ ಇಸ್ಲಾಮಿನ ಶರೀಯತ್ ನಿಯಮಗಳನ್ನು ಪಾಲಿಸದ ಉನ್ಮತ್ತ ಅನುಭಾವಿಗಳು. ಎಂತಲೇ ಸಾಂಪ್ರದಾಯಕ ಇಸ್ಲಾಮಿನಲ್ಲಿ ಅವರನ್ನು ಬೇಶರಾ ನಿಯಮಬಾಹಿರರು ಎಂದು ಟೀಕಿಸಲಾಗಿದೆ. ಖಲಂದರ್ ಎಂದರೆ ನಿರಂಕುಶಮತಿಗಳು ಎಂದು ಅರ್ಥ. ಸಂಚಾರಿಗಳಾದ ಇವರು ನೈಸರ್ಗಿಕ ಗುಹೆಗಳಲ್ಲಿ ದುರ್ಗಮ ವಾದ ಕಾಡುಗಳಲ್ಲಿ ನಿರ್ಜನವಾದ ಜಾಗಗಳಲ್ಲಿ ಇರುತ್ತಿದ್ದರು. ದಾದಾಹಯಾತರು ಕೆಲಕಾಲ ಈ ಗುಹೆಗಳಲ್ಲಿ ಇದ್ದರು. ಏಶಿಯಾದಲ್ಲಿಯೇ ಬಾಬಾ ಬುಡನಗಿರಿಯು ಖಲಂದರ್ ಪಂಥದ ಕೇಂದ್ರವಾಗಿ ಪ್ರಸಿದ್ಧವಾಯಿತು.

ದಾದಾಹಯಾತ ಮೀರಖಲಂದರ್ ಎಂಬ ಹೆಸರಲ್ಲಿ ಹಯಾತ್ ಎಂಬ ಶಬ್ದ ಸಾಂಕೇತಿಕವಾಗಿದೆ. ಹಯಾತ್ ಎಂದರೆ ದೀರ್ಘಾಯುಷ್ಯ ಎಂದು ಅರ್ಥ ವಿರುವಂತೆ ಲೋಕದ ಜೀವನ ಎಂದೂ ಅರ್ಥವಿದೆ. ಇದು ಯೋಗಪಂಥಗಳಿಗೆ ಸೇರಿದ ಪದ. ಯೋಗಸಾಧನೆಯ ಮೂಲಕ ದೃಢವಾದ ದೇಹವನ್ನು ಪಡೆದಿದ್ದವರು. ಸಿದ್ಧೌಷಧಿ ಜ್ಞಾನವನ್ನೂ ಪಡೆದಿದ್ದ ಇವರು ಸಹಜವಾಗಿ ದೀರ್ಘಾಯುಷಿಗಳಾಗಿದ್ದರು. ಈಗಲೂ ಬಾಬಾಬುಡನಗಿರಿ ತನ್ನ ಗಿಡಮೂಲಿಕೆಗಳಿಗೆ ಹೆಸರಾದುದು. ಸಿದ್ಧರು ಸಾವಿರಾರು ವರುಷ ಬದುಕಿದ್ದ ಕಥೆಗಳನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು.

ಯೋಗಪಂಥಗಳು ದೇಹವನ್ನು ಲೋಕವನ್ನು ನಶ್ವರ ಎಂದು ಒಪ್ಪುವುದಿಲ್ಲ. ಭಾರತದ ಸೂಫಿ ಶಾಖೆಗಳಲ್ಲಿ ಖಲಂದರ್ ಸೂಫಿಗಳು ಯೋಗಪಂಥದ ಜತೆ ಅತ್ಯಂತ ಗಾಢವಾದ ಮಿಲನ ಸಾಧಿಸಿದ್ದವರು. ರಿಜ್ವಿಯವರು ಬರೆದಿರುವ ಹಿಸ್ಟರಿ ಆಫ್ ಸೂಫಿಸಂ ಇನ್ ಇಂಡಿಯಾ ಎಂಬ ಪುಸ್ತಕದಲ್ಲಿ The Interaction between Hindu Mystic Tradition and Sufism ಎಂಬ ಅಧ್ಯಾಯವಿದೆ. ಇದರಲ್ಲಿ ಅವರು ಭಾರತದ ಸಿದ್ಧರು ಯೋಗಿಗಳ ಜತೆ ಸೂಫಿಗಳು ಬೆರೆತ ಬಗ್ಗೆ ಬರೆದಿದ್ದಾರೆ. ಪಂಡರಾಪುರದ ಭಕ್ತನಾದ ವಾರಕರಿ ಪಂಥದ ನಾಮದೇವನು ತನ್ನ ಒಂದು ಪ್ರಸಿದ್ಧ ಮರಾಠಿ ಅಭಂಗದಲ್ಲಿ ಕೃಷ್ಣನನ್ನು ಖಲಂದರ್ ಎಂದು ಕರೆಯುತ್ತಾನೆ. ಕರ್ನಾಟಕದಲ್ಲಿಯೂ ಕರಿಸಬಸವೇಶ್ವರ ಎಂಬ ಸಿದ್ಧನು ತನ್ನನ್ನು ಕರಿಖಲಂದರ ಎಂದು ಕರೆದುಕೊಳ್ಳುತ್ತಾನೆ. ಇದು ಸೂಫಿ ದತ್ತ ಅಥವಾ ನಾಥಪಂಥದ ನಡುವಣ ಸಮರಸವನ್ನು ಸೂಚಿಸುತ್ತದೆ.

ದಾದಾಹಯಾತನ ಬಗ್ಗೆ ಇರುವ ಮಿತ್‌ಗಳು ಇವು. ಅವರು ಇಲ್ಲಿನ ಗಿರಿಪರಿಸರಕ್ಕೆ ಬಂದಾಗ ಈ ಭಾಗದಲ್ಲಿ ನರಬಲಿ ನಡೆಯುತ್ತಿತ್ತು. ಒಮ್ಮೆ ಅವರು ಬಲಿಕೊಡಲು ಕಟ್ಟಿಹಾಕಿದ್ದ ಒಬ್ಬ ಮನುಷ್ಯನನ್ನು ಸೆರೆಯಿಂದ ಬಿಡಿಸಿದರು. ಈ ಭಾಗದಲ್ಲಿ ಕಾಪಾಲಿಕ ಭೈರವರಾಧನೆ ವ್ಯಾಪಕವಾಗಿತ್ತು. ದರ್ಗಾದಿಂದ ಮೂರು ಕಿಮಿ ದೂರದಲ್ಲಿರುವ ಆದಿಗದ್ದುಗೆ ದತ್ತಾತ್ರೇಯ ಫಲಾಹಾರ ಮಠದ ಬಳಿ ಸಿಗುವ ಅವಶೇಷಗಳಲ್ಲಿ ತಲೆಕತ್ತರಿಸಿದ ಕೆತ್ತನೆಯುಳ್ಳ ಫಲಕಗಳಿವೆ. ಆದರೆ ಈಗ ಅದು ನಿಂತಿದೆ. ಚೌಡಮ್ಮನಿಗೆ ಕೋಳಿ ಬಲಿ ನಡೆಯುತ್ತಿದೆ. ದಾದಾಹಯಾತರು ಅದನ್ನು ನಿಲ್ಲಿಸಿದರು, ಇದಕ್ಕಾಗಿ ಅವರು ಇಲ್ಲಿನ ಪಾಳೆಯಗಾರರೊಂದಿಗೆ ಹೋರಾಟ ಮಾಡಬೇಕಾಯಿತು. ಅವರ ಮಹಿಮೆಯನ್ನು ಜನರ ಒಪ್ಪಿಕೊಂಡು ಆದರ ತೋರಿದರು. ಇಷ್ಟು ಕಥೆಯನ್ನು ದಾದಾಹಯಾತರ ಮೇಲೆ ಬಂದಿರುವ ಎಲ್ಲ ಉರ್ದು ಭಾಷೆಯ ಚರಿತ್ರೆಗಳು ರಿಪೀಟ್ ಮಾಡುತ್ತವೆ. ಎರಡನೆಯ ಕಥೆಯೆಂದರೆ, ಮಲಂಗ್ ಎಂಬ ದುಷ್ಟನು ಅಪಹರಿಸಿಕೊಂಡು ಬಂದಿದ್ದ ಮಾಮಾಜಿಗನಿ ಎಂಬ ಹೆಣ್ಣನ್ನು

ಗಮನಿಸಬೇಕಾದ ಸಂಗತಿ ಎಂದರೆ, ೩೦೦ ವರ್ಷಗಳಿಂದ ಸಿಗುವ ಸರಕಾರಿ ದಾಖಲೆಗಳಲ್ಲಿ ದಾದಾಹಯಾತ್ ಹಾಗೂ ಬಾಬಾಬುಡನ್ ಎಂಬ ಇಬ್ಬರು ಸಂತರ ಹೆಸರು ಬರುತ್ತದೆ. ಯಾವುದೆ ದತ್ತಪಂಥದ ಯತಿಯ ಹೆಸರು ಬರುವುದಿಲ್ಲ. ಇಲ್ಲಿನ ಮುಖ್ಯಸ್ಥರು ಸೂಫಿವಂಶದ ಗುರುವೆಂದು ಹೇಳಲಾಗಿದೆ. ಅವರ ಇಡೀ ವಂಶವೃಕ್ಷ ಸಿಗುತ್ತದೆ. ಯಾವುದೇ ಹಿಂದು ಪೂಜಾರಿಯ ಪ್ರಸ್ತಾಪವಿಲ್ಲ. ಇಲ್ಲಿ ಉರುಸು ನಡೆಯುತ್ತದೆ ಎಂದು ಹೇಳಲಾಗಿದೆ. ದತ್ತವಿಗ್ರಹದ ಪೂಜೆಯದಾಗಲಿ, ದತ್ತಜಯಂತಿಯ ಉಲ್ಲೇಖವಾಗಲಿ ಇಲ್ಲ. ಹಿಂದುಗಳ ಜಾಗವನ್ನು ಮುಸ್ಲಿಮರು ಆಕ್ರಮಿಸಿಕೊಂಡರು ಎಂಬ ವಿವಾದದಗ್ರಸ್ತ ಮಾತುಗಳು ನಮೂದಾಗಿಲ್ಲ. ಬದಲಾಗಿ ಎರಡೂ ಧರ್ಮದ ಜನರು ನಡೆದುಕೊಳ್ಳುವ ವಿಶೇಷ ಸ್ಥಳ ಎಂದು ಆದರದಿಂದ ಹೇಳಲಾಗಿದೆ.

ರಕ್ಷಿಸಿದ್ದು. ಆಕೆ ಕಡೆತನಕ ಅವರ ಸೇವೆಯಲ್ಲಿ ದ್ದಳು. ಜಿಗನಿ ಎಂಬುದು ಜೋಗಿನಿಯ ರೂಪವಾಗಿದೆ. ಈಗಲೂ ಬಾಬಾಬುಡನಗಿರಿಯ ದರ್ಗಾದಲ್ಲಿ ಪಶ್ಚಿಮಕ್ಕಿರುವ ಗುಹೆಯ ಭಾಗವನ್ನು ಮಾಮಾಜಿ ಗನಿಯದೆಂದು ತೋರುತ್ತಾರೆ.

ಆಕೆ ಬಂದ ಬಡವರಿಗೆ ಗುಹೆಯೊಳಗಿನ ಮಣ್ಣಿನಿಂದ ರೊಟ್ಟಿ ಮಾಡಿ, ಒಂದು ಕಿಂಡಿಯಲ್ಲಿ ಕೊಡುತ್ತಿದ್ದಳಂತೆ. ಒಮ್ಮೆ ಒಬ್ಬ ದುಷ್ಟ ರೊಟ್ಟಿ ಕೊಡುವ ಕೈಯ ಚೆಲುವನ್ನು ಕಂಡು, ಅದನ್ನು ತುಡುಕಿ ಹಿಡಿದನಂತೆ. ಆಗ ಮಾಮಾಜುಗನಿಯು ಬಾಬಾ ಏನು ಮಾಡಲಿ ಎಂದು ಕೂಗಿದಾಗ, 'ಕೈಕೊಡಹು' ಎಂದರು. ಆಗ ಆ ಫಕೀರ ದೂರ ಹೋಗಿಬಿದ್ದನಂತೆ. ದಾದಾಹಯಾತರು ಗುಹೆಯಲ್ಲಿರುವ ಕಿಂಡಿಯ ಮೂಲಕ ಮೆಕ್ಕಾಗೆ ಹೋದರು ಎಂದು ಜನ ನಂಬುತ್ತಾರೆ. ಅವರ ಶಿಷ್ಯನೇ ಬಾಬಾಬುಡನ್. ಅವನಿಂದ ಈ ಬೆಟ್ಟಗಳಿಗೆ ಬಾಬಾಬುಡನಗಿರಿ ಹೆಸರು ಬಂದಿತು. ಗುಹೆಯ ಒಳಗಿರುವ ೪ ಸಮಾಧಿಗಳು ಬಾಬಾಬುಡನರ ಶಿಷ್ಯರವು. ಇಷ್ಟು ಫಾರಸಿ ಉರ್ದು ಚರಿತ್ರೆಗಳಿಂದ ಗೊತ್ತಾಗುವ ಸಂಗತಿಗಳು.

ಕಾಫಿ ಸೂಫಿ ಸಂಬಂಧ

ಬಾಬಾಬುಡನಗಿರಿಯ ಸೂಫಿಪರಂಪರೆಯನ್ನು ಬೆಸೆಯುವ ಇನ್ನೊಂದು ಸಂಗತಿ ಎಂದರೆ ಕಾಫಿಬೆಳೆ. ಇಲ್ಲಿನ ಬೆಟ್ಟಗಳಲ್ಲಿ ಬೆಳೆವ ಕಾಫಿಗೂ ಸೂಫಿಪಂಥಕ್ಕೂ ವಿಶಿಷ್ಟ ಸಂಬಂಧವಿದೆ. ಅರಬಸ್ಥಾನದಿಂದ ಬಂದಿದ್ದ ಜಮಾಲುದ್ದೀನ್ ಮಗ್ರಿಬಿ ಎಂಬ ಸಂತ ಕಾಫಿಬೀಜವನ್ನು ತಂದು ಈ ಬೆಟ್ಟಕ್ಕೆ ಪರಿಚಯಿಸಿದರು ಎಂದು ಫಾರಸಿ ದಾಖಲೆಗಳೂ ಬ್ರಿಟಿಶ್ ದಾಖಲೆಗಳೂ ಸೂಚಿಸುತ್ತವೆ.

ಕಾಫಿಯ ಸಸ್ಯಶಾಸ್ತ್ರದ ಹೆಸರು 'ಕಾಫಿ ಅರಾಬಿಕಾ'. ಅರಬರಿಗೂ ಕಾಫಿಬೆಳೆಗೂ ಇರುವ ಸಂಬಂಧಗಳ ಮೇಲೆ ಸ್ವಾರಸ್ಯಕರ ಚರ್ಚೆಯನ್ನು ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯಾಗಿದ್ದ ಎಚ್ ಎಲ್ ನಾಗೇಗೌಡರು ತಮ್ಮ ಬೆಟ್ಟದಿಂದ ಬಟ್ಟಲಿಗೆ ಕೃತಿಯಲ್ಲಿ ವಿವರಿಸುತ್ತಾರೆ. ಅವರು ಮಾಡುವ ಚರ್ಚೆಯಲ್ಲಿ ಸ್ವಾರಸ್ಯಕರವಾದುದು ಎಂದರೆ, ಫಕೀರರು ಅನುಭಾವದ ಸಾಧನೆಗಳಲ್ಲಿ ಮೈಮರೆಯುಲು ಬೇಕಾದ ಅಮಲಿಗಾಗಿ ಕಾಫಿಬೀಜ ಬಳಸುತ್ತಿದ್ದುದು. ಭಂಗಿ ಮುಂತಾದ ಅಮಲಿನ ವಸ್ತುಗಳ ಬಳಕೆ ಗುರುಪಂಥಗಳಲ್ಲಿ ಸಾಮಾನ್ಯ.

೧೯ನೇ ಶತಮಾನದ ಬ್ರಿಟಿಶ್ ದಾಖಲೆಗಳು ಬಾಬಾಬುಡನಗಿರಿಗೆ ಬರುತ್ತಿದ್ದ ಭಕ್ತರಿಗೆ ದರ್ಗಾದ ವತಿಯಿಂದ ಕೊಡುತ್ತಿದ್ದ ಪಡಿಯಲ್ಲಿ ಭಂಗಿಯನ್ನು ಕೊಡುತ್ತಿದ್ದುದರ ಉಲ್ಲೇಖವಿದೆ. ಕಾಫಿ, ಭಂಗಿ, ಚಳಿಕಾಸಲು ಬೆಂಕಿ ಇವು ನಾಲ್ಕುಸಾವಿರ ಅಡಿ ಎತ್ತರದ ಬೆಟ್ಟದಲ್ಲಿ ಬದುಕಲು ಅಗತ್ಯವಸ್ತುಗಳಾಗಿದ್ದು. ಇವು ಸಾಧನೆಯಲ್ಲಿ ಸಹಾಯ ಮಾಡುವ ವಸ್ತುಗಳಾಗಿ ಎಲ್ಲ ಯೋಗಪಂಥಗಳಲ್ಲಿ ಈಗಲೂ ಬೆಸೆದುಕೊಂಡಿವೆ. ಬಾಬಾಬುಡನಗಿರಿ ದರ್ಗಾಕ್ಕೆ ಕಾಫಿತೋಟಗಳಿವೆ.

ಶಾಸನಗಳಲ್ಲಿಗಿರಿ

ದರ್ಗಾದ ಪರಿಸರದಲ್ಲಿ ಫಾರಸಿ ಭಾಷೆಯ ಮೂರು ಶಿಲಾಶಾಸನಗಳು ದೊರೆತಿವೆ. ಅವನ್ನು ಮೈಸೂರು ವಿಶ್ವವಿದ್ಯಾಲಯವು ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ ೧೧ರಲ್ಲಿ ಪ್ರಕಟಿಸಿದೆ. ಕನ್ನಡ ವಿಶ್ವವಿದ್ಯಾಲಯವೂ ಸಹ ಕರ್ನಾಟಕದ ಅರೆಬಿಕ್ ಫಾರಸಿ ಮತ್ತು ಉರ್ದು ಶಾಸನಗಳು ಕೃತಿಯಲ್ಲಿ ಪ್ರಕಟಿಸಿದೆ. ಇವು ಬಾಬಾಬುಡನ ಗಿರಿಯ ಸೂಫಿಪರಂಪರೆಯ ಸಂತರ ಪ್ರಸ್ತಾಪವನ್ನು ಒಳಗೊಂಡಿವೆ. ಮೊದಲನೆಯದಾಗಿ, ಗುಹೆಯ ಬಾಗಿಲ ಎದುರಿಗಿರುವ ಸ್ಥಂಬದ ಮೇಲಿನ ಶಾಸನದ ಸಾರಾಂಶ ವಿದುತೆ "ಹಜರತ್ ಮೀರಖಲಂದರ್ ಅವರ ಸಮಾಧಿಗೆ ದೇವರು ಪ್ರಭೆಯನ್ನು ಉಂಟುಮಾಡಲಿ, ಯಾರು ತನ್ನನ್ನು ಅರಿಯುವರೊ ಅವರು ದೇವರನ್ನು ಅರಿಯುವರು. ಇದು ಪ್ರವಾದಿ ಮಹಮ್ಮದರ ಹೇಳಿಕೆ. ನೀನು ಮತ್ತು ನಾನು ಇಬ್ಬರೂ ಸ್ವರ್ಗದಲ್ಲಿ ಒಟ್ಟಿಗೆ ಬದುಕುತ್ತೇವೆ. ಇದು ದೇವರ ಮಾತು. ಇದುವೇ ಜ್ಞಾನೋದಯದ ಸಾರ. ಇದೇ ಪವಾಡ. ಹಯಾತ್ ಮೀರ ಖಲಂದರರ ಬೆಟ್ಟದಲ್ಲಿ ಇದು ಹೃದಯ ತೆರೆಸುವ ಮಾತು. ಇದು ದೇವರನ್ನು ಹುಡುಕುವ ಸಮಸ್ತ ಜನರ ನೆಲೆಮನೆ. ಇದು ದೇವರ ಪ್ರಸನ್ನತೆ ಅನುಭವಿಸುವವರ ತಾಣ";

ಎರಡನೆಯದಾಗಿ, ಗುಹೆಯ ಮೇಲೆ ಮೆಟ್ಟಲು ಹತ್ತಿಹೋಗುವ ದಾರಿಯಲ್ಲಿ ಎಡಬಲಕ್ಕೆ ಗಿರಿಯ ಗುರುಗಳ ಸಮಾಧಿಗಳಿವೆ. ಅಲ್ಲಿರುವ ೧೮೩೦ರ ಶಾಸನದ ಸಾರಾಂಶವಿದು: "೧೮೮೩ರಂದು ಹಜರತ್ ಮೀರ ಹಯಾತ್ ಖಲಂದರರ ದರ್ಗಾದ ಆಧ್ಯಾತ್ಮಿಕ ಉತ್ತರಾಧಿಕಾರಿಯಾಗಿದ್ದ ಹಜರತ್ ಸೈಯಿದ್ ಜಮಾಲ್ ಶಾ ಖಾದ್ರಿಯವರ ಮಗನಾದ ಹಜರತ್ ಸಯ್ಯಿದ್ ಮೀರಾನ್ ಶಾ ಖಾದ್ರಿ ತೀರಿಕೊಂಡರು. ಅವರ ಸಮಾಧಿ ದೈವಾನುಗ್ರಹದಿಂದ ಬೆಳಗಲಿ."

ಮೂರನೆಯದಾಗಿ, ದರ್ಗಾದ ಗುರುಗಳಾದ ಸಜ್ಜಾದೆನಶೀನರು ಕೂರುವ ಭಂಡಾರಖಾನದ ದ್ವಾರದಲ್ಲಿ ಕೊರೆದಿರುವ ೧೮೫೨ರ ಶಾಸನದ ಸಾರಾಂಶ: ``ಪವಿತ್ರ ಬುಡನ್ ಪರ್ವತದ ಆಧ್ಯಾತ್ಮಿಕ ಉತ್ತರಾಧಿಕಾರಿಯಾದ ಹಜರತ್ ಶಾ ಸೈಯ್ಯದ್ ಗೌಸ್ ಅವರು ಮಾರ್ಗದರ್ಶಕ

ಪರ್ಶಿಯಾದಲ್ಲಿ ಹುಟ್ಟಿ ಭಾರತದಲ್ಲಿ ಬೆಳೆದ ಸೂಫಿಪಂಥವು ಇಲ್ಲಿನ ಯೋಗಿಗಳ ಜತೆ ಅನನ್ಯವಾಗಿ ಬೆರೆಯಿತು. ದೇವರನ್ನು ಪ್ರೇಮದಿಂದ ಒಲಿಸಿಕೊಳ್ಳಬಹುದು ಎಂದು ಭಾವಿಸಿದ್ದ, ಸನ್ಯಾಸ, ಧ್ಯಾನ, ಯೋಗಸಾಧನೆ ಮಾಡುತ್ತಿದ್ದ ಅನುಭಾವಿ ಪಂಥವಿದು. ಅದರಲ್ಲಿ ಖಾದ್ರಿಯಾ ಚಿಸ್ತಿಯಾ ಎಂಬ ಶಾಖೆಗಳಿವೆ., ಖಲಂದರಿಯ ಶಾಖೆಯು ತನ್ನ ಹಠಯೋಗ, ದೇಹದಂಡನೆ, ಧ್ಯಾನ, ತಪಸ್ಸು, ತಿರುಗಾಟ, ಏಕಾಂತ, ಪವಾಡಗಳಿಗೆ ಹೆಸರಾಗಿದೆ.. ಈಗಲೂ ಭಾರತದ ಮೂಲೆಮೂಲೆಗಳಿಂದ ಉರುಸಿಗೆ ಬರುವ ಫಕೀರರು ಶಸ್ತ್ರದಿಂದ ತಮ್ಮನ್ನು ದಂಡಿಸಿಕೊಳ್ಳುವುದನ್ನು ಕಾಣಬಹುದು. ದಾದಾಹಯಾತ ಖಲಂದರ್ ಖಲಂದರಿಯಾ ಪಂಥದ ಒಬ್ಬ ಸೂಫಿ.

ಬಾಬಾಬುಡನಗಿರಿಯಲ್ಲಿ ಏನಿದೆ

ದಾದಾಹಯಾತ್ ಮೀರಖಲಂದರ್ ಎಂಬ ಸೂಫಿಸಂತರು ನೆಲೆಸಿದ್ದರು ಎಂದು ಖ್ಯಾತವಾಗಿರುವ ಈ ಗಿರಿಯ ನಡುಭಾಗದಲ್ಲಿ ಖಾನಖಾ ಅಥವಾ ಮಠವಿದೆ. ಕೆಳಗೆ ೩೦೦ಮೆಟ್ಟಿಲು ಇಳಿದು ಹೋದರೆ ಒಂದು ಗುಹೆಯಿದೆ. ಈ ಖಾನಖಾ ಹಾಗೂ ಗುಹೆಯ ನಡುವೆಯಿರುವ ಮೆಟ್ಟಿಲು ಎಡಬಲಗಳಲ್ಲಿ ಇಲ್ಲಿಗೆ ಬಂದ ಸೂಫಿಸಂತರ, ದರ್ಗಾದ ಮುಖ್ಯಸ್ಥರ, ಅವರ ಕುಟುಂಬದವರ ನೂರಾರು ಸಮಾಧಿಗಳಿವೆ. ಗಿರಿಯ ಕೇಂದ್ರಸ್ಥಾನವಾದ ಗುಹೆಯಲ್ಲಿ ಎರಡು ಭಾಗಗಳಿವೆ.

ಮೊದಲನೆಯ ವಿಶಾಲ ಭಾಗದಲ್ಲಿ ನಾಲ್ಕು ಸಮಾಧಿಗಳಿವೆ. ಅವು ಬಾಬಾಬುಡನನ ಶಿಷ್ಯರವು ಎನ್ನಲಾಗಿದೆ. ಅವು ಎತ್ತರದ ಪೀಠದ ಮೇಲಿವೆ. ಗುಹೆಯ ಎರಡನೆ ಭಾಗದಲ್ಲಿ ಪಾದುಕೆಗಳಿವೆ. ಸದಾ ಉರಿಯುವ ನಂದಾದೀಪವಿದೆ. ಅಲ್ಲೊಂದು ಸುರಂಗವಿದೆ. ಇದರಲ್ಲಿ ದಾದಾಹಯಾತರು ಮೆಕ್ಕಾಕ್ಕೆ ಹೋದರೆಂದು ನಂಬುತ್ತಾರೆ. ಅಂತರ್ಧಾನವಾಗಿರುವ ದತ್ತಾತ್ರೇಯರು ಕಲಿಯುಗದಲ್ಲಿ ಈ ಸುರಂಗದಿಂದ ಹೊರಬರುತ್ತಾರೆ ಎಂದು ಹಿಂದುಗಳು ನಂಬುತ್ತಾರೆ. ಅಲ್ಲೊಂದು ಯಾವತ್ತೂ ಬತ್ತಲಾರದ ಚಿಲುಮೆಯಿದೆ. ಚಿಲುಮೆಯ ನೀರನ್ನು ತೀರ್ಥವೆಂದು ಕೊಡುತ್ತಾರೆ. ಗುಹೆಯ ಹೊರಗೆ ಒಂದು ಚೌಕಿಯಿದೆ. ಅಲ್ಲಿ ತೆಂಗಿನ ಕಾಯಿ ಒಡೆಯುತ್ತಾರೆ. ಅದರ ಮುಂದೆ ಒಂದು ಸ್ಥಂಭವಿದೆ. ಅದರಲ್ಲಿ ಒಂದು ಫಾರಸಿ ಶಾಸನವಿದೆ. ಗುಹೆಯ ಮುಂದೆ ಮಸೀದಿಯಿದೆ. ಗುಹೆಯ ಹೊರಗೆ ಇನ್ನೂರು ಮೆಟ್ಟಿಲು ಹತ್ತಿಹೋದರೆ ಅಲ್ಲಿ ಈ ದರ್ಗಾದ ಮುಖ್ಯಸ್ಥರಾದ ಸೈಯದ್‌ಶಾಖಾದ್ರಿ ಎಂಬ ಬಿರುದುಗಳುಳ್ಳ ಸಜ್ಜಾದೆನಶೀನರು ಇರುತ್ತಾರೆ. ಅವರ ಕೋಣೆಯ ಪಕ್ಕದಲ್ಲಿ ಹೊರನಾಡಿನಿಂದ ಬಂದ ಫಕೀರರು ತಂಗುವ ಖಾನಖಾ ಇದೆ. ಅಲ್ಲಿ ಅವರಿಗೆ ಬೆಂಕಿಹಾಕಿಕೊಳ್ಳಲು ಧುನಿ ಇದೆ.

ದರ್ಗಾದಿಂದ ಪೂರ್ವಕ್ಕೆ ನಾಲ್ಕು ಕಿಮಿ ದೂರದಲ್ಲಿ ಮಾಣಿಕ್ಯಧಾರಾ ಎಂಬ ಜಲಪಾತವಿದ್ದು ಗಿರಿಗೆ ಹೋದವರೆಲ್ಲ ಅಲ್ಲಿ ಸ್ನಾನಮಾಡುತ್ತಾರೆ. ದರ್ಗಾದಿಂದ ಉತ್ತರಕ್ಕೆ ಮೂರುಕಿಮಿ ಹೋದರೆ ಗಾಳಿಕೆರೆ ಇದೆ. ಅದನ್ನು ಮುಸ್ಲಿಮರು ಪಲ್ಲಂಗ್‌ತಲಾಬ್ ಎನ್ನುತ್ತಾರೆ. ಅಲ್ಲಿಯೂ ಹೋದವರು ಸ್ನಾನ ಮಾಡುತ್ತಾರೆ. ಅಲ್ಲಿ ಗಾಳಿಕೆರೆ ಕೆಂಚ ಎಂದು ಕರೆಯಲಾಗುವ ಮಣ್ಣಿನ ದಿಬ್ಬದೊಳಗಿನ ದೈವಕ್ಕೆ ಹಿಂದುಗಳು ಕೋಳಿಬಲಿ ಕೊಡುತ್ತಾರೆ. ಇದು ಸ್ಥೂಲವಾಗಿ ಬಾಬಾಬುಡನಗಿರಿಯ ಆಚರಣಾ ಲೋಕದ ಚಿತ್ರ.

ರಾದ ಗುರುಗಳು. ಅವರು ಬೆಟ್ಟದಲ್ಲಿ ಒಂದು ಸುಂದರವಾದ ಚಿಲುಮೆಮನೆ ಕಟ್ಟಿಸಿದ್ದರು. ಇದು ತೂರ್ ಬೆಟ್ಟಕ್ಕೂ ಅಸೂಯೆ ಹುಟ್ಟಿಸುವಂತಿದೆ. ಈ ಮನೆಯು ನಿಜವಾಗಿಯೂ ವಿಶ್ರಾಂತಿಗೆ ಬಹಳ ಸೂಕ್ತವಾದುದು. ಖಲಂದರರ ಈ ನೆಲೆಯನ್ನು ದೇವರು ವಿಶೇಷವಾಗಿ ಹರಸಿರುವನು. ಆದ್ದರಿಂದಲೇ ಇದು ಮೇಲು ಹಾಗೂ ಕೆಳಗಿನ ಎಲ್ಲರಿಗೂ ಯಾತ್ರಾಸ್ಥಳ.";

ಈ ಶಾಸನಗಳು ಚಾರಿತ್ರಿಕ ದೃಷ್ಟಿಯಿಂದ ಇಲ್ಲಿದ್ದ ಸಂತರು, ಈ ದರ್ಗಾದ ಗುರುಗಳ ಮಾಹಿತಿ ಕೊಡುತ್ತವೆ. ಇದಕ್ಕಿಂತ ಮುಖ್ಯವೆಂದರೆ, ಈ ಗಿರಿಯಲ್ಲಿರುವ ತಾತ್ವಿಕತೆ. ಅದರಲ್ಲಿ ಮುಖ್ಯವಾದುದು, ಸಾಧಕರು ತಾವು ಹುಡುಕುವ ದೈವದ ಜತೆ ಮಿಲನವಾಗುವ ಅನುಭಾವದ ತತ್ವವನ್ನು ಕುರಿತಾದುದು. ಯಾರು ತನ್ನನ್ನು ಅರಿಯುತ್ತಾರೋ ಅವರು ನನ್ನನ್ನು ಅರಿಯುತ್ತಾರೆ ಎಂಬ ಮಾತು, ಭಾರತದ ಅವಧೂತ ಪಂಥಗಳ ಫಿಲಾಸಫಿಗಳಲ್ಲಿ ಇರುವ ತನ್ನ ತಾನರಿವುದು ಎಂಬುದಾಗಿದೆ. ಇದು ಅಹಂ ಬ್ರಹ್ಮಾಸ್ಮಿ ಎಂಬ ಅದ್ವೈತ ತತ್ವಕೂಡ. ಜಾತಿಪದ್ಧತಿಯನ್ನೂ ಪುರೋಹಿತಶಾಹಿ

ಯಾರು ತನ್ನನ್ನು ಅರಿಯುತ್ತಾರೋ ಅವರು ನನ್ನನ್ನು ಅರಿಯುತ್ತಾರೆ ಎಂಬ ಮಾತು, ಭಾರತದ ಅವಧೂತ ಪಂಥಗಳ ಫಿಲಾಸಫಿಗಳಲ್ಲಿ ಇರುವ ತನ್ನತಾನರಿವುದು ಎಂಬುದಾಗಿದೆ. ಇದು ಅಹಂ ಬ್ರಹ್ಮಾಸ್ಮಿ ಎಂಬ ಅದ್ವೈತ ತತ್ವಕೂಡ. ಜಾತಿಪದ್ಧತಿಯನ್ನೂ ಪುರೋಹಿತಶಾಹಿ ಯನ್ನೂ ತಿರಸ್ಕರಿಸಲು ಕಾರಣವಾದ ಈ ತತ್ವವು ನಾಥ ಸೂಫಿ ದತ್ತ ಪಂಥಗಳ ಕೇಂದ್ರತತ್ವವಾಗಿದೆ. ಇಲ್ಲಿ ಸಾಧನೆಗಾಗಿ ಬರುವ ಮತ್ತು ಮನಶಾಂತಿ ಅರಸಿ ಬರುವ ಎಲ್ಲರಿಗೂ ಮುಕ್ತ ಆಹ್ವಾನವಿತ್ತೆಂದು ಗೊತ್ತಾಗುತ್ತದೆ.

ಯನ್ನೂ ತಿರಸ್ಕರಿಸಲು ಕಾರಣವಾದ ಈ ತತ್ವವು ನಾಥ ಸೂಫಿ ದತ್ತ ಪಂಥಗಳ ಕೇಂದ್ರತತ್ವವಾಗಿದೆ.

ಇಲ್ಲಿ ಸಾಧನೆಗಾಗಿ ಬರುವ ಮತ್ತು ಮನಶಾಂತಿ ಅರಸಿ ಬರುವ ಎಲ್ಲರಿಗೂ ಮುಕ್ತ ಆಹ್ವಾನವಿತ್ತೆಂದು ಗೊತ್ತಾಗುತ್ತದೆ. ಇಲ್ಲಿನ ಧಾರ್ಮಿಕ ಆಡಳಿತ ಸೈಯದ್ ವಂಶದ ಗುರುವಿನದಾಗಿರುವುದು. ತೂರ್ ಎಂಬುದು ಕುರಾನಿನಲ್ಲಿ ಬರುವ ಒಂದು ಪವಿತ್ರ ಬೆಟ್ಟದ ಹೆಸರು. ಪ್ರವಾದಿ ಮೋಸೆಸನಿಗೆ ದೇವರು ಪ್ರಕಾಶಮಾನವಾದ ಬೆಳಕಿನ ರೂಪದಲ್ಲಿ ದರ್ಶನವಿತ್ತ ಎನ್ನಲಾದ ಒಂದು ಬೆಟ್ಟ. ಬಾಬಾ ಬುಡನಗಿರಿಯನ್ನು ತೂರ್ ಬೆಟ್ಟಕ್ಕೆ ಹೋಲಿಸಿರುವುದು ಇದರ ಆಧ್ಯಾತ್ಮಿಕ ಮಹತ್ವದ ಸಂಕೇತವಾಗಿದೆ.

(ಮುಂದುವರಿಯುವುದು)

ಕವಿತೆ



ಬರೆಯುತ್ತಿದ್ದಾಗ ಕವಿತೆ
ಮುಕ್ಕುತ್ತಿತ್ತು ದಟ್ಟ ಕ್ರೌರ್ಯ ನೆರಳು ಆಸ್ಪತ್ರೆಯಲಿ !
ಕೆಕ್ಕರಿಸುತ್ತಿತ್ತು ವೈದ್ಯ ಸೇವ ಪಡೆ
ಉರಿಯುತ್ತಿದ್ದವು ಕಾಂಪೋಂಡಿನಲಿ
ಅರಳಿ ನಿಂತ ಬಿಳಿ ಗುಲಾಭಿ !
ಸುಡುತ್ತಿದ್ದವು ಕವಿತೆಯನ್ನೇ
ವೈರಸ್ಸು ಬ್ಯಾಕ್ಟೀರಿಯಾ !

ಭೋಗಿಸುತ್ತಿದ್ದವು ಕವಿತೆಯನ್ನೇ
ರತಿ ಕ್ರೀಡೆಯಲಿ ರಸಾಯನಿಕಗಳೆಲ್ಲ !
ರಕ್ತಸ್ರಾವಗೊಂಡ ಹದಿಹರೆಯದ
ಚೆಲುವ ಜೀವಕೋಶ
ಕತ್ತರಿಸುತ್ತಿದ್ದವು ಸೀಜರಲಿ ಭ್ರೂಣ !

ಕಾಗದದ ನೋಟಿಗೆ
ಸಾಮಾಜಿಕ ನ್ಯಾಯದ ಕಟೆಕಟೆಯಲಿ
ಸಿಡಿಯಾಡುತ್ತಿದ್ದವು ಮನಸ್ಸುಗಳು !

ತಲೆ ತಗ್ಗಿಸಬೇಕಾದ ಹೆಣ್ತನ
ವಿವಸ್ತ್ರಗೊಳಿಸುತ್ತಿತ್ತು ಕವಿತೆಯನ್ನ !

ಅರ್ಥ ಕಳಕೊಂಡ ವ್ಯವಸ್ಥೆ
ಕಾರ್ಖಾನೆಯು ಉಗುಳುವ
ದೂಳಲಿ ಮಗುಚಿಕೊಂಡಿತ್ತು !

ಕಾರ್ಲ್‌ಮಾರ್ಕ್ಸ್‌ನ 'ಮ್ಯಾನಿಫೆಸ್ಟೋ'
ಸಂಕಟದ ಬಿಲದೊಳಗೆ ನರಳುತಿರುವಾಗ
ಕರುಳು ಕತ್ತರಿಸುವ ಅಳು
ಹೆರಿಗೆ ವಾರ್ಡಿಂದ ನುಗ್ಗುತ್ತಿತ್ತು !

'ಹೆಣದ' ಸುತ್ತ ಗುಯ್‌ಗುಡುವ ನೊಣ
ನಿರ್ಲಜ್ಜ ನಗುಗಳ ಜೊತೆ
ಎಡತಿಕ್ಕುತ್ತಿತ್ತು ನನ್ನ 'ಕವಿತೆ' !

○ ಟಿ. ರಾಜೇಂದ್ರಪ್ರಸಾದ್

ಪರ್ಯಾಯ: ಈಗಲೇ ಪಕ್ಷವಾಗದಿರಲಿ

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ನಾಡಿನ ಚಿಂತಕರೊಂದಿಗೆ ಚರ್ಚೆ ನಡೆಸಬೇಕೆಂದು ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ ?

೪. ಜನಪರ ಚಳವಳಿಗಳು - ವ್ಯಕ್ತಿ - ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು ?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?

○ ಪ್ರೊ॥ ಚಂದ್ರಶೇಖರ ಪಾಟೀಲ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

೧. ಜನಪರ ಚಳವಳಿಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಕೂಡಿ ಪರ್ಯಾಯ ರಾಜಕಾರಣ ರೂಪಿಸ ಹೊರಟಿರುವುದು ಈ ಜಾಗತೀಕರಣದ ಹಿನ್ನೆಲೆಯಲ್ಲಿ ಅನಿವಾರ್ಯವಾದಂತಹ ಒಂದು ಬೆಳವಣಿಗೆ. ಆದರೆ ಇಂದು ರೈತಸಂಘ ಎಂದರೆ ಯಾವ ರೈತಸಂಘ, ದಲಿತ ಸಂಘರ್ಷ ಸಮಿತಿ ಎಂದರೆ ಯಾವ ದಲಿತ ಸಂಘರ್ಷ ಸಮಿತಿ ಎಂದು ಕೇಳುವಂತಾಗಿದೆ, ಇದು ನಿವಾರಣೆಯಾಗಬೇಕು, ಎಲ್ಲರೂ ಒಟ್ಟುಗೂಡಿ ತಮ್ಮ ಸಮಾನ ಶತ್ರುಗಳನ್ನು ಗುರುತಿಸಿಕೊಂಡು ಒಂದುಗೂಡಬೇಕು.

ಆದರೆ ಇದೀಗ ಕೆಲವಾದರೂ ನಮ್ಮ ರೈತಸಂಘದವರು, ದಲಿತ ಸಂಘರ್ಷ ಸಮಿತಿಯವರು ಸೈದ್ಧಾಂತಿಕ ನೆಲೆಯೊಳಗೆ, ಸಂಘಟನಾತ್ಮಕ ನೆಲೆಯೊಳಗೆ ಸಮ್ಮಿಶ್ರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಮುಂದಾಗಿರುವುದು ಸ್ವಾಗತ ಮಾಡಲೇಬೇಕಾದಂತ ಒಂದು ಆರೋಗ್ಯಕರ ಬೆಳವಣಿಗೆ. ಆಮೇಲೆ ಇದಕ್ಕೆ ಉಳಿದವರು ಬಂದು ಸೇರಿಕೊಳ್ಳಬಹುದು. ಮೊದಲೇ ಅನುಮಾನಗಳನ್ನು ವ್ಯಕ್ತಮಾಡಿ ವಿಮರ್ಶಾತ್ಮಕವಾಗಿ ನೋಡುವುದಕ್ಕಿಂತ ಕಾಲಗತಿ ಹೇಗೆ ಕೂಡಿಬರುತ್ತದೆಯೋ, ಜನ ಹೇಗೆ ಅರ್ಥಮಾಡಿಕೊಳ್ಳುತ್ತಾರೋ, ಎನ್ನುವುದನ್ನು ನೋಡಿಕೊಂಡು ಇದನ್ನು ಸ್ವಾಗತ ಮಾಡುವುದು ಬಹಳ ಮುಖ್ಯ. ಇದನ್ನು ನಾನು ಸ್ವಾಗತಿಸುತ್ತೇನೆ.

೨. ಇಂದು ನಾವು ಪರ್ಯಾಯ ರಾಜಕಾರಣ ಎಂದು ಕರೆಯುತ್ತಿರುವ ಶಬ್ದದ ಬಗ್ಗೆ ನನ್ನ ಒಂದು ಆಕ್ಷೇಪ ಎಂದರೆ ಇಂದು ಇರುವಂತಹ ರಾಜಕಾರಣಕ್ಕೆ ಬದಲಾಗಿ ಮತ್ತೊಂದು ರಾಜಕಾರಣ ಎಂದು ಇದರ ಅರ್ಥ ಎನಿಸುತ್ತದೆ. ಸಮಕಾಲೀನ ರಾಜಕಾರಣ ನಮಗೆಲ್ಲ ತಿಳಿದಿರುವಂತೆ ಪ್ರಜಾಸತ್ತಾತ್ಮಕ ಚೌಕಟ್ಟಿನಲ್ಲಿ ನಡೆಯುತ್ತಿರುವಂತಹುದು. ಅನೇಕ ರಾಜಕೀಯ ಪಕ್ಷಗಳು, ಚುನಾವಣೆಗಳು, ಜನರಿಂದ ಆಯ್ಕೆಯಾಗುವುದು ಎಂದಾಗ, ಈ ಪರ್ಯಾಯ ರಾಜಕಾರಣ ಎಂದು ನಾವು ಕರೆಯುತ್ತಿರುವ ಇದು, ಪ್ರಜಾಸತ್ತೆಯ ಬದಲಾಗಿ ಇರುವಂತಹ ಇನ್ನೊಂದು ರಾಜಕೀಯವೋ, ಅಥವಾ ಪ್ರಜಾಸತ್ತೀಯ ಚೌಕಟ್ಟಿನೊಳಗೆ ಇರುವಂತಹ ಇನ್ನೊಂದು ಆರೋಗ್ಯಪೂರ್ಣ

(೨೫ನೇ ಪುಟಕ್ಕೆ)

ರೈತಸಂಘ, ದಸಂಸ ಜತೆಗೂಡಿ



○ ಡಾ॥ ಎಲ್. ಬಸವರಾಜು
ವಿದ್ವಾಂಸರು

ದಲಿತ ಸಂಘರ್ಷ ಸಮಿತಿಯಾಗಲಿ, ರೈತಸಂಘವಾಗಲಿ- ಇವೆರಡೂ ತಂತಮ್ಮಲ್ಲೇ ಒಗ್ಗಟ್ಟಿನಿಂದ ಕೆಲಸ ಮಾಡಲಾಗಲಿಲ್ಲ. ಈ ಹಿನ್ನೆಲೆಯಲ್ಲಿ ಈಗ ಇವುಗಳಲ್ಲಿ ಯಾವುದೊಂದೇ ಆಗಲಿ ಅನ್ಯ ಸಂಘಟನೆಗಳೊಡನೆ ಸೇರಿ ಸುಸೂತ್ರ ಕೆಲಸ ಮಾಡುತ್ತವೆಂಬುದರಲ್ಲಿ ಅಷ್ಟು ಭರವಸೆ ಮೂಡುತ್ತಿಲ್ಲ.

ಈಗ ನಡೆಯುತ್ತಿರುವ ರಾಜಕೀಯ ಪಕ್ಷಗಳ ಧ್ಯೇಯ ಮತ್ತು ಧೋರಣೆಗಳಿಂದ ರಾಷ್ಟ್ರದ ಹಿತಕ್ಕೆ ಧಕ್ಕೆಯಾಗುತ್ತಿದ್ದರೆ- ಅಥವಾ ಆಗಬೇಕಾದ ಬದಲಾವಣೆ ವೇಗ ಸಾಲದಿದ್ದರೆ - ಅಥವಾ ಕುರಿತ ಯಾವುದೇ ಒಂದು ಶೋಷಿತ ಜನಾಂಗದ ಉದ್ಧಾರ ಕಾರ್ಯಗಳು ಸ್ಥಗಿತಗೊಂಡಿದ್ದರೆ- ಅದರ ವೇಗವನ್ನು ಸಂವರ್ಧನೆಗೊಳಿಸಲು ಅಥವಾ ಚಾಲನೆಗೊಳಿಸಲು ಪ್ರತ್ಯೇಕ ಒಂದು ರಾಜಕೀಯ ಪಕ್ಷವನ್ನು ಕಟ್ಟಿಕೊಂಡು ಜನಾದೇಶಕ್ಕಾಗಿ ರಾಜಕೀಯ ಕ್ಷೇತ್ರಕ್ಕೆ ನುಗ್ಗಿ ಹೋಗುವುದು ತೀರ ಅವಶ್ಯಕವೇ ಆಗಿರುವುದು.

ದಸಂಸದ ಕಾರ್ಯಕ್ಷೇತ್ರ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಭವಿಷ್ಯವನ್ನು ಸಮೃದ್ಧಗೊಳಿಸುವುದೇ ಆಗಿದೆಯಾಗಿ- ಆ ಬಗ್ಗೆ ಮೀಸಲಾಗಿ ಹೋರಾಡುತ್ತಿರುವ ಬಿಎಸ್‌ಪಿ ಮತ್ತು ಆರ್‌ಪಿಐ ಅಂಥ ಪಕ್ಷಗಳೊಡನೆ ದಸಂಸ ತನ್ನ ಭವಿಷ್ಯವನ್ನು ಕಟ್ಟಿಕೊಳ್ಳಬೇಕು. ಆ ಬಗ್ಗೆ ಈಗಾಗಲೇ ಬೇರೆ

ದಸಂಸದವರು ವಿಶಿಷ್ಟ ಧಾರ್ಮಿಕ ಸಾಮಾಜಿಕ ಕ್ಲಿಷ್ಟ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೊಂದೇ ಒಂದು ನಿರ್ದಿಷ್ಟ ಗುರಿಯಿದೆ - ಅದೇ ಗುರಿಯಿಟ್ಟುಕೊಂಡು ಕಾರ್ಯಸಾಧಿಸಬೇಕು.

ಬೇರೆ ಪ್ರಾಂತ್ಯಗಳಲ್ಲಿ ಮೀಸಲಾಗಿ ಅಧಿಕೃತವಾಗಿ ಹೋರಾಡುತ್ತಿರುವ ಸಮಿತಿ ಸಂಘಗಳೆಲ್ಲಾ ಐಕ್ಯ ಕೇಂದ್ರ

ಬೇಕು: ದಾನಿ-ಭಿಕ್ಷುಕ ಇಲ್ಲದ ಪರ್ಯಾಯ ರಾಜಕೀಯ

ಈ ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಒಟ್ಟಾರೆ ಈ ಪರ್ಯಾಯ ರಾಜಕಾರಣದ ನೆಲೆಗಟ್ಟು ಏನಿರಬೇಕೆಂದು ನನಗೆ ತೋಚುವ ಒಂದೆರಡು ಅಭಿಪ್ರಾಯಗಳನ್ನು ಹೇಳುತ್ತೇನೆ. ಇಂದು ಯಾವುದಕ್ಕೆ ನಾವು ಪರ್ಯಾಯವನ್ನ ಹುಡುಕುತ್ತಿದ್ದೇವೆ ಮತ್ತು ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನ ನಾವು ಹೇಗೆ ಪರಿಭಾವಿಸುತ್ತೇವೆ ಎಂಬುದು ಬಹಳ ಮುಖ್ಯ. ಇಂದು ಒಂದುಗೂಡಲು ಹೊರಟಿರುವ ಎರಡು ಶೋಷಿತ ವರ್ಗಗಳಾದ ದಲಿತ ಮತ್ತು ರೈತ ಸಮುದಾಯಗಳ ಮೇಲೆ ಆಗುತ್ತಿರುವಂತಹ ಶೋಷಣೆಯ ಮೂಲ ತುಂಬಾ ಆಳದಲ್ಲಿದೆ. ಕೇವಲ ಸುಧಾರಣೆಯ ರೀತಿಯ ಪರ್ಯಾಯದ ಪ್ರಯತ್ನಗಳಿಂದ ಪರ್ಯಾಯದ ಸೃಷ್ಟಿಯಾಗುವುದಿಲ್ಲ.

ಪರ್ಯಾಯ ಎಂದಾಗ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳುತಿದ್ದೇವೆ ಎಂಬುದು ಗಮನಿಸಬೇಕಾದ ಅಂಶ. ಅಂದರೆ ವ್ಯವಸ್ಥೆಯಲ್ಲಿರುವ ದೋಷಗಳಾದ ಬಡತನ ನಿವಾರಣೆ, ಜಾತಿ ಇನ್ನೂ ಆಳವಾಗಿ ಬೇರೂರುತ್ತಿರುವುದು, ಭ್ರಷ್ಟಾಚಾರ ಅತಿಯಾಗುತ್ತಿರುವುದು, ಇತ್ಯಾದಿ ದೋಷಗಳನ್ನ ಎಲ್ಲಿ ಹುಡುಕುತ್ತೇವೆ, ಆದರೆ ಅದರ ಮೂಲ ಎಲ್ಲಿದೆ ಎಂಬುದು ಮುಖ್ಯ ಪ್ರಶ್ನೆ. ಈ ದೋಷಗಳು ವ್ಯಕ್ತಿಗಳು, ನೀತಿ, ಪಕ್ಷವನ್ನ ಮೀರಿ ನಮ್ಮ ಇಂದಿನ ವ್ಯವಸ್ಥೆಯೊಳಗಡೆಯೇ ಇರುವುದು ಇಂದಿನ ವಾಸ್ತವ.

ಬಡತನ, ಜಾತೀಯತೆ ಇವೆರಡರ ಪರ್ಯಾಯ ಹುಡುಕುವುದಾದರೆ ಬಡತನ ನಿರ್ಮೂಲನೆ ಪರ್ಯಾಯ ಎಂದೆನಿಸುವುದಿಲ್ಲ, ಅಥವಾ ಜಾತಿಗೆ ಮೀಸಲಾತಿ ಕೊಡುವಂಥದು ಎಲ್ಲಾ ಜಾತಿಗಳನ್ನು ಸಮಾನವಾಗಿ ನೋಡುವಂತಹದು ಪರ್ಯಾಯ ಎನಿಸುವುದಿಲ್ಲ. ಬಡತನ,



❍ ಶಿವಸುಂದರ್
ಚಿಂತಕರು

ಚರ್ಚೆ
ಪರ್ಯಾಯ ರಾಜಕಾರಣ

> ಪರ್ಯಾಯ ರಾಜಕಾರಣ ಕೇವಲ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿ ಇರಬಾರದು. ಒಂದು ಪರ್ಯಾಯ ವ್ಯವಸ್ಥೆಯ ನೆಲೆಗಟ್ಟಿನಲ್ಲಿ ರಾಜಕಾರಣವೂ ಒಂದು ಆಯುಧವಾಗಬೇಕು. ಪರ್ಯಾಯ ವ್ಯವಸ್ಥೆ ಪರಿಕಲ್ಪನೆ ಅಂದರೆ ಸೈದ್ಧಾಂತಿಕವಾದಂತಹ ಪರ್ಯಾಯ ರಾಜಕೀಯ ಇರಬೇಕು. ಇಂದು ನಮ್ಮಲ್ಲಿರುವಂತಹ ವ್ಯವಸ್ಥೆಯನ್ನು ಬಂಡವಾಳಶಾಹಿ, ಊಳಿಗಮಾನ್ಯ ವ್ಯವಸ್ಥೆ ಎಂದು ಕರೆದುಕೊಳ್ಳುವುದಾದರೆ ಸಮಾಜವಾದವೊಂದೇ ನಮಗೆ ಉಳಿದಿರುವ ದಾರಿ.

ಶ್ರೀಮಂತಿಕೆ ಎನ್ನುವ ಅಸಮಾನತೆಯ ನಿರ್ಮೂಲನೆ ಆಗುವುದು ಪರ್ಯಾಯವಾದಂತಹ ಚಿಂತನೆ.

ಉದಾಹರಣೆಗೆ ಸರ್ಕಾರದ ಕೂಲಿಗಾಗಿ ಕಾಳು ಯೋಜನೆಯನ್ನು ವಿಶ್ಲೇಷಿಸುವುದಾದರೆ ಅದು ಬಡವರ ಹಸಿವಿಗೆ ಪರಿಹಾರ ನೀಡುತ್ತಿದ್ದು ಬಡತನಕ್ಕೇ ಪರಿಹಾರ ನೀಡುತ್ತಿಲ್ಲ. ಬಡತನವೇ ನಿರ್ಮೂಲನೆ ಆಗಬೇಕಾದರೆ ಸಂಪನ್ಮೂಲ ಅಸಮಾನ ವಿತರಣೆಯನ್ನು ಬೆಂಬಲಿಸುತ್ತಿರುವ, ಅದನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಪ್ರಭುತ್ವವನ್ನು ನಾವು ಪ್ರಶ್ನಿಸಬೇಕಾಗುತ್ತದೆ. ಈ ಅಜೆಂಡಾ ನಮ್ಮ ಪರ್ಯಾಯದಲ್ಲಿ ಇದೆಯೇ ಎನ್ನುವುದನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಪ್ರಭುತ್ವ ಅನ್ನುವುದು ನಿಷ್ಪಕ್ಷಪಾತವಾಗಿ ಇರುವಂತಹ, ಕಾನೂನು ಪ್ರಕಾರ ನಡೆಯುವಂತಹ ವ್ಯವಸ್ಥೆಯಾಗಿ ಇಂದು ಉಳಿದಿಲ್ಲ. ಮತ್ತು ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗಗಳೂ ಕೂಡ ಅದರ ರಚನೆಯಲ್ಲೇ, ಅದರ ಹುಟ್ಟಿನಲ್ಲೇ ಅದು ಮೂಲಭೂತವಾಗಿ ಬಡವರ ವಿರೋಧಿಯಾದ ಅಂಶಗಳು ಅದರಲ್ಲಿ ಅಡಕವಾಗಿವೆ. ಹೀಗಿರುವಾಗ ಶಾಸಕಾಂಗವನ್ನ ಮಾತ್ರ ಬದಲಾವಣೆ ಮಾಡಿದರೆ ಸಾಧ್ಯವಿಲ್ಲ.

ಜಾಗತೀಕರಣದ ಡಬ್ಲ್ಯೂಟಿಓ ಒಪ್ಪಂದದ ಪ್ರಕಾರ ಭಾರತದಲ್ಲಿ ಸುಮಾರು ೧೪೭೭ ಔಷಧಿಗಳನ್ನು ಉತ್ಪಾದಿಸುವಂತಿಲ್ಲ. ೨೦ರಿಂದ ೫೦ ವರ್ಷಗಳ ಕಾಲ ಏಕಸ್ವಾಮ್ಯ ಹಾಗೂ ಅದನ್ನು ಬೇರೆ ರೀತಿಯಲ್ಲೂ ಉತ್ಪಾದಿಸುವುದಿಲ್ಲ ಎಂಬ ಪ್ರಾಡಕ್ಟ್ ಪೇಟೆಂಟ್ ಕೊಡುತ್ತಿದ್ದೇವೆ. ಹೀಗಾಗಿ ನಮ್ಮ ದೇಶದ ಜನರ ಆರೋಗ್ಯವನ್ನು ಕಾಪಾಡಿಕೊಳ್ಳುವಂತಹ ನೀತಿಗಳನ್ನು ಅನುಸರಿಸುವ ಶಕ್ತಿ ಕೂಡ ನಮ್ಮ ಶಾಸನ ಸಭೆಗಳಿಗೆ, ಸಂಸತ್ತಿಗೆ ಇಲ್ಲವಾಗಿದೆ. ಇಂದು ನಮ್ಮ ಶಾಸನ ಸಭೆಗಳು ನಿರ್ವೀರ್ಯವಾಗಿದ್ದು ನಮ್ಮ ಶತ್ರು ಅಗಾಧವಾಗಿದೆ. ನಾಳೆ

ಕೆಲಸ ಮಾಡಲು ಸಾಧ್ಯವೇ ?

ಸಂಘಟನೆಯಾಗಿ ಕೂಡಿ - ಒಂದು ರಾಷ್ಟ್ರೀಯ ರಾಜಕೀಯ ಪಕ್ಷವಾಗಿ - ಮರಳಿ ಪ್ರಾಂತ್ಯ ಪ್ರಾಂತ್ಯಗಳಲ್ಲಿ ಶಾಖೋಪ ಶಾಖೆಯಾಗಿ ಕಾಂಗ್ರೆಸ್ಸಿನಂತೆ ಕೆಲಸ ಮಾಡಬೇಕು.

ಅದನ್ನು ಬಿಟ್ಟು ರೈತಸಂಸ್ಥೆಗಳೊಡನೆ ಸೇರಿಕೊಳ್ಳುತ್ತೇವೆ ಮುಸಲ್ಮಾನ ಸಂಸ್ಥೆಗಳೊಡನೆ ಸೇರಿಕೊಳ್ಳುತ್ತೇವೆಂದು ಹೊರಟರೆ ಅದು ಉದ್ಯೋಗಾಧಾರಿತವೋ ಧರ್ಮಾಧಾರಿತವೋ ಆದೊಂದು ಚಳವಳಿಯಾಗುತ್ತದೆಯೇ ಹೊರತು - ಅಮಾನವೀಯವಾದೊಂದು ಪ್ರಪಾತಕ್ಕೆ ಅಧಃಪತವಾಗಿರುವ ದಲಿತರನ್ನು ಶೀಘ್ರ ಉದ್ಧರಿಸಲು ತಕ್ಕ ವೇಗ ಮತ್ತು ಆತ್ಮೀಯ ಕಾಳಜಿ ದೊರೆಯದೆ - ಉತ್ತರೋತ್ತರ ಈಗ ಊಹಿಸಲೂ ಸಾಧ್ಯವಿಲ್ಲದ ಭಯೋತ್ಪಾದನೆ ಹಿಂಸೆ ವಿನಾಶಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಹಾಗಾಗದಿರಬೇಕಾದರೆ ದಲಿತ ಸಂಘರ್ಷ ಸಮಿತಿಯು ಅನ್ಯಜಾತಿ ಗಣನೆಯೇ ಇಲ್ಲದೆ - ಎಲ್ಲರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಹೋರಾಡುತ್ತಿದ್ದೇವೆಂಬ ಕಮ್ಯೂನಿಸ್ಟ್ ಪಾರ್ಟಿಗಳೊಡನೆ ಯಾಕೆ ಸೇರಿ ಹೋಗಬಾರದು ? ಅದಾಗುವುದಿಲ್ಲ -ವಿಶೇಷ ಸಾಂಸ್ಕೃತಿಕ ಹಿನ್ನೆಲೆಯಿಂದಾಗಿ !

ಹಾಗೆಯೇ ರೈತಸಂಘದೊಡನೆ ಸೇರಿಯೂ ಬಾಂಧವ್ಯ ಕುದುರಿ ಶಕ್ತಿ ಸಂಚಯವಾಗುವುದೆಂಬ ಬಗ್ಗೆ ನಂಬಿಕೆಯಿಲ್ಲ - ರೈತರು ಜಮೀನುದಾರರು, ದಲಿತರು ಅವರ ಮರ್ಜಿಯಲ್ಲಿ ಬಾಳುತ್ತಿರುವ ಕೂಲಿ ಕಾರ್ಮಿಕರು - ಹೊಂದಿಕೆಯಾಗದು - ಹಾಗೆಯೇ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಸಂಸ್ಥೆಗಳೊಡನೆ ಸೇರಿಕೊಳ್ಳುವ ಬಗ್ಗೆಯೂ !

ದಸಂಸದವರೊಂದು ವಿಶಿಷ್ಟ ಧಾರ್ಮಿಕ ಸಾಮಾಜಿಕ ಕ್ಲಿಷ್ಟ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೊಂದೇ ಒಂದು ನಿರ್ದಿಷ್ಟ ಗುರಿಯಿದೆ - ಆದ್ದರಿಂದ ಅದೇ ಗುರಿಯಿಟ್ಟುಕೊಂಡು ಹೋರಾಡುತ್ತಿರುವ ಸಂಘ ಸಮಿತಿಗಳೊಡಗೂಡಿಕೊಂಡು- ಭಾರತದ ಉದ್ದಗಲಕ್ಕೂ ಏಕೈಕ ರಾಜಕೀಯ ಪಕ್ಷ ಕಟ್ಟಿಕೊಂಡು - ಆ ಪಕ್ಷದ ಪರಿಧಿಗೆ ಬರದ ದಲಿತ ನಾಯಕರನ್ನು ಅನುನಯದಿಂದ ಖೆಡ್ಡಾ ಮಾಡಿ ಸಾಧು ಮಾಡಿ ಬಲಸಂವರ್ಧನೆ ಮಾಡಿಕೊಳ್ಳಬೇಕಾಗಿದೆ. ಆ ಮೂಲಕ ಮಾತ್ರವೇ ದಲಿತರು ಒಂದು ಕಾಲಮಿತಿಯಲ್ಲಿ ಉದ್ಧಾರವಾಗಿ - ಉಳಿದ ಜನರೊಡನೆ ಸರಿಸಮಾನವಾಗಿ ನಡೆಯುವಂತಾದೀತು.

ಇಲ್ಲದಿದ್ದರೆ ಈಗ ಸಾವಿರಾರು ವರ್ಷದಿಂದ ನಡೆದುಬಂದುದೇ ಇನ್ನೂ ಸಾವಿರಾರು ವರ್ಷ ನಡೆದೀತು. ಅದು ಬೇಡ - ಇನ್ನು ಕೆಲವು ದಶಕಗಳಲ್ಲಿ ದಲಿತೋದ್ಧಾರ ನಡೆಯಬೇಕು - ಅದು ಹಾಗಾಗದಿದ್ದರೆ ಯಾವ ಪರ್ಯಾಯ ರಾಜಕಾರಣವಾದರೂ ಯಾಕೆ ? □

ಚರ್ಚೆ

ಪರ್ಯಾಯ ರಾಜಕಾರಣ

ಆದರ ವಿರುದ್ಧ ಹೋರಾಟ ನಡದರೆ ನಮ್ಮದೇ ಪೋಲೀಸು, ಸೇನೆ ನಮ್ಮನ್ನು ಬಗ್ಗುಬಡಿಯುತ್ತವೆ. ಅವು ಬಹುರಾಷ್ಟ್ರೀಯ ಕಂಪನಿಗಳ, ಮಾರುಕಟ್ಟೆಗಳ ಮೇಲೆ ಏಕಸ್ವಾಮ್ಯ ಸಾಧಿಸುವವರ ಸೇವೆಗೆ ನಿಂತುಕೊಳ್ಳುತ್ತವೆ. ಇದು ನಮ್ಮ ಮುಂದಿರುವ ಅಗಾಧವಾದ ಶತ್ರು. ನಾವು ಪರ್ಯಾಯ ಚಿಂತನೆ ಎಂದಾಗ ಇದನ್ನು ಹೇಗೆ ಗ್ರಹಿಸುತ್ತೇವೆ. ಅಂದರೆ ಪ್ರಭುತ್ವವನ್ನ ಈ ವ್ಯವಸ್ಥೆಯನ್ನ ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ ಅನ್ನುವುದೇ ಮೂಲಭೂತವಾದ ಪ್ರಶ್ನೆ. ನಂತರ ಪರ್ಯಾಯ ಹೇಗಿರಬೇಕು ಎಂಬುದು.

ಗ್ರಾಮೋದಯ, ಶಾಲೆಗೆ ಸೇರುವುದು ಇತ್ಯಾದಿಗಳೆಲ್ಲ ವಿಶ್ವಬ್ಯಾಂಕ್‌ಗೆ ಬೇಕಾಗಿರುವ ಕಾರ್ಯಕ್ರಮಗಳು. ಅಂದರೆ ನಾವು ಏನು ಸಣ್ಣ ಸಣ್ಣ ಪರ್ಯಾಯಗಳನ್ನ ಬಿಡಿಬಿಡಿಯಾಗಿ ಅನ್ವೇಷಿಸುತ್ತೇವೆ, ಅದನ್ನು ಈಗಾಗಲೇ ವಿಶ್ವಬ್ಯಾಂಕ್ ತನ್ನ ಅಂತರಾಷ್ಟ್ರೀಯ ಹುನ್ನಾರದ ಭಾಗವಾಗಿ ಅಡಕ ಮಾಡಿಕೊಂಡುಬಿಟ್ಟಿದೆ. ಹಾಗಿರುವಾಗ ಪರ್ಯಾಯ ಅನ್ನುವುದು, ಪರ್ಯಾಯ ರಾಜಕೀಯ, ಪರ್ಯಾಯ ಆರ್ಥಿಕತೆ, ಪರ್ಯಾಯ ಸಂಸ್ಕೃತಿ, ಪರ್ಯಾಯ ಜನಶಕ್ತಿಯ ಭಾಗವಾಗಿರಬೇಕಾಗುತ್ತೆ, ನಮ್ಮ ಕರ್ನಾಟಕ ರಾಜಕಾರಣದಲ್ಲಿ ಈ ಗಂಭೀರ ಪ್ರಶ್ನೆಗಳು ಇನ್ನೂ ಚರ್ಚೆಗೆ ಬರಬೇಕಿದೆ.

ಹಾಗೆಯೇ ಇಂದು ದೊಡ್ಡ ದೊಡ್ಡ ಪಕ್ಷಗಳು, ದೊಡ್ಡ ದೊಡ್ಡ ಸಂಘಟನೆಗಳು ವಿಘಟಿತವಾಗುತ್ತಿವೆ. ಪರ್ಯಾಯ ಚಿಂತನೆ ಮಾಡುವ ಮುನ್ನ ಏಕೆ ಜನಪರ ಚಳವಳಿಗಳು ಬಲಹೀನವಾಗುತ್ತಿವೆ, ಯಾಕೆ ಜನಪರ ಆಂದೋಲನಗಳು ವಿಘಟಿತವಾಗುತ್ತಿವೆ ಎನ್ನುವ ಪ್ರಶ್ನೆ ಹಾಕಿಕೊಳ್ಳಬೇಕಿದೆ.

ಪ್ರಭುತ್ವಗಳು ಇಂದು ನಮಗೆ ಕನಸನ್ನೂ ಕೊಡುತ್ತಿಲ್ಲ, ಜಾಗತೀಕರಣ ಶಕ್ತಿಗಳು ಅವರಿಗೆ ಇದನ್ನು ಸ್ಪಷ್ಟವಾಗಿ ಹೇಳಿವೆ. ಯಾವುದಕ್ಕೂ ಕೂಡ ಸಬ್ಸಿಡಿ ಕೊಡಬಾರದು, ಹೊಸ ಕೈಗಾರಿಕೆಗಳನ್ನು ತೆರೆಯಬಾರದು, ಬಡವರಿಗೆ ಬಡತನ ನಿರ್ಮೂಲನೆ ಎನ್ನುವ ಕಾರ್ಯಕ್ರಮ ಹಾಕಿಕೊಳ್ಳಬಾರದು ಎಂದು ಕಡ್ಡಾಯ ಮಾಡಿವೆ. ಹೀಗಾಗಿ ನಮ್ಮ ಹೋರಾಟಗಳು ಕೊಡುವುದಿಲ್ಲ ಎನ್ನುವ ಸರ್ಕಾರವನ್ನು ಮಣಿಸುವಷ್ಟು ಗಟ್ಟಿಯಾಗಬೇಕಾಗಿದೆ. ಹೋರಾಟವನ್ನು ಗಟ್ಟಿ ಮಾಡಿಕೊಳ್ಳಲಿಕ್ಕೆ ಪರ್ಯಾಯ ರಾಜಕಾರಣ ವೇದಿಕೆಯಾಗಬೇಕಿದೆ.

೧. ಈ ಹಿನ್ನೆಲೆಯಲ್ಲಿ ಇಲ್ಲಿನ ಪ್ರಶ್ನೆಗಳ ಹಿಂದೆ, ಇಂದಿನ ವ್ಯವಸ್ಥೆ ಜನವಿರೋಧಿಯಾಗಿದ್ದು ಜನಪರವಾದ ಒಂದು ರಾಜಕಾರಣ ಆಗಬೇಕು ಎನ್ನುವ ಒಂದು ಆಕಾಂಕ್ಷೆ, ಆಶಯವಿದೆ ಎಂದೆನಿಸುತ್ತದೆ. ಆ ಆಶಯವನ್ನ ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ತುಂಬಾ ಅಭಿನಂದನಾರ್ಹವಾದಂತಹ ಪ್ರಯತ್ನ ಇದಾಗಿದೆ.

೨. ಪರ್ಯಾಯ ರಾಜಕಾರಣ ಕೇವಲ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿ ಇರಬಾರದು. ಒಂದು ಪರ್ಯಾಯ ವ್ಯವಸ್ಥೆಯ ನೆಲೆಗಟ್ಟಿನಲ್ಲಿ ರಾಜಕಾರಣವೂ ಒಂದು ಆಯುಧವಾಗಬೇಕು. ಪರ್ಯಾಯ ವ್ಯವಸ್ಥೆ ಪರಿಕಲ್ಪನೆ ಅಂದರೆ ಸೈದ್ಧಾಂತಿಕವಾದಂತಹ ಪರ್ಯಾಯ ರಾಜಕೀಯ ಇರಬೇಕು. ಇಂದು ನಮ್ಮಲ್ಲಿರುವಂತಹ ವ್ಯವಸ್ಥೆಯನ್ನು ಬಂಡವಾಳಶಾಹಿ, ಊಳಿಗಮಾನ್ಯ ವ್ಯವಸ್ಥೆ ಎಂದು ಕರೆದುಕೊಳ್ಳುವುದಾದರೆ ಸಮಾಜವಾದವೊಂದೇ ನಮಗೆ ಉಳಿದಿರುವ ದಾರಿ. ಆದರೆ ಇಡೀ ಇತಿಹಾಸದಲ್ಲಿ ಸಮಾಜವಾದ ಒಂದು ಅಪೂರ್ಣವಾದ ಪ್ರಯೋಗ. ರಷ್ಯಾ ಆಗಬಹುದು, ಚೀನಾ ಇರಬಹುದು, ಇವೆಲ್ಲವೂ ಒಂದು ಅಪರಿಪಕ್ವವಾದಂತಹ ಅಪರಿಪೂರ್ಣವಾದಂತಹ ಪ್ರಯೋಗಗಳೇ ಆಗಿವೆ. ಆದರೆ ಅದನ್ನು ಬಿಟ್ಟು ನಮಗೆ ಬೇರೆ ಆಶ್ರಯ ಇಲ್ಲ. ಅದನ್ನು ಹೇಗೆ ನಾವು ಇನ್ನೂ ಗಟ್ಟಿಗೊಳಿಸಿಕೊಳ್ಳಬಹುದು ಎಂಬುದು ಪರ್ಯಾಯ ವ್ಯವಸ್ಥೆಯ ರಾಜಕಾರಣದ ಭಾಗವಾಗಬೇಕು.

ಬಡತನ, ಜಾತೀಯತೆ ಇವೆರಡರ ಪರ್ಯಾಯ ಹುಡುಕುವುದಾದರೆ ಬಡತನ ನಿರ್ಮೂಲನೆ ಪರ್ಯಾಯ ಎಂದೆನಿಸುವುದಿಲ್ಲ, ಅಥವಾ ಜಾತಿಗೆ ಮೀಸಲಾತಿ ಕೊಡುವಂಥದು ಎಲ್ಲಾ ಜಾತಿಗಳನ್ನು ಸಮಾನವಾಗಿ ನೋಡುವಂತಹದು ಪರ್ಯಾಯ ಎನಿಸುವುದಿಲ್ಲ, ಬಡತನ, ಶ್ರೀಮಂತಿಕೆ ಎನ್ನುವ ಅಸಮಾನತೆಯ ನಿರ್ಮೂಲನೆ ಆಗುವುದು ಮಾತ್ರ ಪರ್ಯಾಯ ಚಿಂತನೆ.

ಪರ್ಯಾಯ ವ್ಯವಸ್ಥೆ ಎಂದಾಗ ಪ್ರಭುತ್ವದ ಬಗ್ಗೆ ಕೂಡ ನಮಗೆ ಪರ್ಯಾಯವಾದಂತಹ ಚಿಂತನೆ ಇರಬೇಕು. ಡೆಮಾಕ್ರಸಿ ಅಂದ್ರೆ ಬರೀ ಚುನಾವಣೆ ಅಲ್ಲ, ಅದು ಒಂದು ವೇ ಆಫ್ ಲೈಫ್. ಅದು ಸಾರ್ವಜನಿಕ ಜೀವನದ ತತ್ವ, ವ್ಯಯಕ್ತಿಕ ಬದುಕಿನ ತತ್ವ ಕೂಡ ಆಗಿದೆ. ಇಡೀ ಸರ್ಕಾರಕ್ಕೂ ಜನರಿಗೂ ನಡುವೆ ಡೆಮಾಕ್ರಸಿ ಇರಬೇಕು. ಅಂದರೆ ಉತ್ತರದಾಯಿತ್ವ, ಪಾರದರ್ಶಕತೆ ಎನ್ನುವುದು ಮಾತ್ರವಲ್ಲದೆ, ಜನರನ್ನ ಸಶಕ್ತರಾಗಿಸುವಂತಹದ್ದು ಜನರೇ ಆಡಳಿತ ನಡೆಸುವಂತಹದ್ದು. ಅಂತಿಮವಾಗಿ ಆಡಳಿತ ನಡೆಸುವುಕ್ಕಾಗಿಯೇ ಒಂದು ಪ್ರಭುತ್ವದ ಅಗತ್ಯ ಬೀಳದಿರುವಂಥ ರಾಜಕಾರಣ ನಮ್ಮ ಅಂತಿಮ ಗುರಿಯಾಗಿರಬೇಕು.

ದಾನಿ ಮತ್ತು ಭಿಕ್ಷುಕ : ದಾನಿ ತನ್ನ ಬಳಿ ಇರುವುದನ್ನೆಲ್ಲ ಕೊಡುತ್ತಾನೆಂದು ಇತಿಹಾಸದಿಂದಲೂ ಹೊಗಳಿಕೊಂಡು ಬರುತ್ತಿದ್ದೇವೆ. ಆದರೆ ಇಲ್ಲಿನ ಪ್ರಶ್ನೆಯೆಂದರೆ ದಾನಿ ಇದ್ದಾನೆ ಎಂದರೆ ಭಿಕ್ಷುಕ ಇರುತ್ತಾನೆ ಎಂದು ಅರ್ಥ. ಇಲ್ಲಿ ನಾವು ಬಯಸುವ ಪರ್ಯಾಯ ವ್ಯವಸ್ಥೆಯ ಪರಿಕಲ್ಪನೆ ಎಂದರೆ ಭಿಕ್ಷುಕರೇ ಇಲ್ಲದಿರುವಂತಹ, ದಾನಿಯ ಅಗತ್ಯವೇ ಬೀಳದಿರುವಂತಹ ಒಂದು ವ್ಯವಸ್ಥೆ ನಮ್ಮ ಗುರಿಯಾಗಬೇಕು. ಅಂದರೆ ಜನರೇ ತಮ್ಮನ್ನು ತಾವು ಆಳಿಕೊಳ್ಳುವಂತಹ ಒಂದು ರಾಜಕಾರಣ ನಮ್ಮ ಅಂತಿಮ ಗುರಿಯಾಗಬೇಕು. ಈ ನೆಲೆಗಟ್ಟಿನಲ್ಲಿ ಇಂದಿನ ಪ್ರಭುತ್ವ, ವ್ಯವಸ್ಥೆ ಸಂಪೂರ್ಣ ನಾಶವಾಗಬೇಕು.

ಜಾಗತೀಕರಣಕ್ಕೆ ಪರ್ಯಾಯವಾಗಿ ಸಮಾಜವಾದ, ಮತ್ತು ಜಾಗತೀಕರಣದ ವಿರುದ್ಧ ಮಾಡುತ್ತಿರುವ ಹೋರಾಟದ ಹೊರತಾಗಿ ಇಂದಿನ ನಮ್ಮ ಜನಾಂದೋಲನ ಕಳೆದುಕೊಳ್ಳುತ್ತಿರುವ ಅತಿ ದೊಡ್ಡ ವಿಚಾರವೇನೆಂದರೆ ಪ್ರಭುತ್ವದ ದಮನಶಕ್ತಿಗೆ ಪರ್ಯಾಯವಾದಂತಹ ಚಿಂತನೆ ಏನು ? ಜನರ ಶಕ್ತಿಯನ್ನು ಉಳಿಸಿಕೊಳ್ಳುವುದಕ್ಕೆ ನಮ್ಮ ಚಿಂತನೆ ಏನು ? ಎಂಬುದು. ಅಂದರೆ ಭೂ ಆಕ್ರಮಣ ಚಳವಳಿ ಮಾಡುತ್ತೇವೆ, ಆಗ ಪೊಲೀಸರು ಬರುತ್ತಾರೆ. ಇನ್ನೂ ಹೋರಾಟ ಮಾಡಿದರೆ ಸೇನಾಪಡೆಗಳು ಬರುತ್ತವೆ. ಉದಾಹರಣೆಗೆ ಮಣಿಪುರದಲ್ಲಿ ಇಂದು ನಡೆಯುತ್ತಿರುವ ಘಟನೆ. ಇದನ್ನು ನೀವು ಹೇಗೆ ಹೆದರಿಸುತ್ತೀರಿ ? ಪ್ರಜಾತಾಂತ್ರಿಕ ಹೋರಾಟಗಳು ಪ್ರಮುಖವಾದಂತಹ ಒಂದು ಭಾಗ. ಆದರೆ ಈ ಸೇನೆ, ಪೊಲೀಸು ನಮ್ಮದಲ್ಲ ಅನ್ನೊ ತಿಳುವಳಿಕೆ, ಅದಕ್ಕೆ ಪ್ರತಿಯಾಗಿ ಜನರದೇ ಆದಂತಹ ಸೇನಾಶಕ್ತಿಯ ಅಗತ್ಯ ಕೂಡ ನಾವು ಯೋಚಿಸದೇ ಇರುವಂತಹ ಅಂಶ. ಪ್ರಭುತ್ವ ಇಂದು ದಮನಶಕ್ತಿಯನ್ನು ಬಂಡವಾಳಶಾಹಿ ಊಳಿಗಮಾನ್ಯ ಶಕ್ತಿಯನ್ನು ರಕ್ಷಣೆ ಮಾಡುತ್ತಿದೆ. ದಮನಶಕ್ತಿಯ ವಿರುದ್ಧ ಹೋರಾಡುವ ಜನಶಕ್ತಿಯ ರಕ್ಷಣೆ ಹೇಗೆ ? ಇದಕ್ಕೆ ಪರ್ಯಾಯ ರಾಜಕಾರಣ ಉತ್ತರ ಕಂಡುಕೊಳ್ಳಬೇಕು. ಇದನ್ನು ನಕ್ಸಲಿಸಂ ಅನ್ನಬಹುದು, ಹಿಂಸಾವಾದ ಅನ್ನಬಹುದು, ಆದರೆ ಅಂತಿಮವಾಗಿ ಜನಶಕ್ತಿಯನ್ನ ದಮನ ಮಾಡಲು ಬಂದಾಗ ನಮ್ಮನ್ನು ನಾವು ಉಳಿಸಿಕೊಂಡು ಪ್ರಜಾತಂತ್ರ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಮ್ಮ ಎಲ್ಲ ಜನಪರ ಹೋರಾಟಗಳು, ಆಂದೋಲನಗಳು ಚಿಂತಿಸಬೇಕು.

ಕುದುರೆಮುಖ ಅರಣ್ಯದಲ್ಲಿ ಆದಿವಾಸಿಗಳು ತಮ್ಮ ಉಳಿವಿಗಾಗಿ, ತಮ್ಮಂತೆ ತಾವು ಇರಲು ಬಿಡಿ, ಎಂದು ಕೇಳಿಕೊಳ್ಳುವುದಕ್ಕೆ ಶಸ್ತ್ರಾಸ್ತ್ರದ ಮೊರೆ ಹೋಗಬೇಕಾಗಿದೆ. ಯಾವುದರ ವೈಫಲ್ಯ, ಯಾವುದರ ಸಾಫಲ್ಯ ಇದು. ಇಂದು ಪ್ರಜಾತಂತ್ರ ಇವರನ್ನು ರಕ್ಷಣೆ ಮಾಡುವ ಪರಿಸ್ಥಿತಿಯಲ್ಲಿಲ್ಲ.

ಜನಶಕ್ತಿಯನ್ನ ಉಳಿಸಿಕೊಳ್ಳುವುದಕ್ಕೆ ತಮ್ಮದೇ ಆದ ರಕ್ಷಣಾ ವ್ಯವಸ್ಥೆಯನ್ನ ಸೇನೆಯನ್ನ ರಚಿಸಿಕೊಳ್ಳುವುದರ ಬಗ್ಗೆ ನಮ್ಮ ಕರ್ನಾಟಕದ ಜನಾಂದೋಲನಗಳು ಯೋಚನೆ ಮಾಡದೆ ತಾವೇ ಒಂದು ಸೈದ್ಧಾಂತಿಕ ತೊಡಕುಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ತೊಡಕುಗಳಿಂದ ಹೊರಬರದ ಹೊರತು ಪರ್ಯಾಯ ರಾಜಕಾರಣ ಪರಿಪೂರ್ಣವಾಗುವುದಿಲ್ಲ.

೩. ಈ ದೇಶದ ಶೋಷಕ ಶಕ್ತಿಗಳಾದ, ಭೂಮಾಲೀಕರುಗಳು, ಬಂಡವಾಳಶಾಹಿಗಳು, ಅವರಿಗೆ ಛೇಲಾಗಿರಿ ಮಾಡುತ್ತಿರುವ ರಾಜಕಾರಣಿಗಳು ಹಾಗೂ ಪಕ್ಷಗಳನ್ನು ಹೊರತುಪಡಿಸಿ ಈ ದೇಶದ ಶೇ ೯೯ ಭಾಗದ ಜನರೆಲ್ಲರೂ ಒಂದಾಗಬೇಕು. ಇವರೆಲ್ಲರೂ ಒಂದಾಗಿ ಹೋರಾಟಕ್ಕೆ ಬಂದಾಗ ಮಾತ್ರ ಪರ್ಯಾಯ ಸಾಧ್ಯವಾಗುವುದು, ಶೋಷಿತ ವ್ಯವಸ್ಥೆ ಕುಸಿದು ಬೀಳುವುದು.

ಕಾರ್ಮಿಕರ ವಿಮೋಚನೆಯ ಆಶಯ, ರೈತರ ವಿಮೋಚನೆಯ ಆಶಯ, ವಿದ್ಯಾರ್ಥಿ, ಆದಿವಾಸಿಗಳ ಇವರೆಲ್ಲರ ವಿಮೋಚನೆಯ ಆಶಯ ಪರ್ಯಾಯ ರಾಜಕಾರಣದ ಭಾಗವಾಗಬೇಕು. ಇದೆಲ್ಲ ಈಗಿರುವ ವ್ಯವಸ್ಥೆಯ ಸುಧಾರಣೆಯಿಂದ ಸಾಧ್ಯವೇ ? ಸುಧಾರಣೆಗಳ ಮೂಲಕ ಈ ರೀತಿಯ ಮೂಲಭೂತ ಪರಿವರ್ತನೆ ಸಾಧ್ಯವೇ ? ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಇದಲ್ಲದೆ ಮತ್ತೆ ನಾವು ಇನ್ನೊಂದು ಪಕ್ಷ ಕಟ್ಟಿಕೊಂಡು ಇದನ್ನು ಸಾಧ್ಯವಾಗಿಸುತ್ತೇವೆಂದರೆ ದೊಡ್ಡ ವೈಫಲ್ಯಕ್ಕೆ ಗುರಿಯಾಗುತ್ತೇವೆ.

೪. ಇಂದು ನಾವು ಒಪ್ಪಲಿ, ಒಪ್ಪದಿರಲಿ ಜಾಗತೀಕರಣ ಶಕ್ತಿಗಳು, ಫ್ಯಾಸಿಸ್ಟ್ ಶಕ್ತಿಗಳು ನಮ್ಮನ್ನು ಒಂದು ಮಾಡುತ್ತಿವೆ.

ತೊಟ್ಟು ಕಳಚಿದ
ಎಲೆಯೊಂದು ಆಕಾಶಕ್ಕೆ ಹಾರಿ
ಗಾಳಿ ಸವಾರಿ ಏರಿ
ಅಂತೂ ನೆಲ ಮುಟ್ಟಿದೆ.

ಹಣ್ಣಾದ ಎಲೆಯ ಭಾರ
ಹೊರಲಾರದ ಮರದ-
ಬೇರು ಮಾತ್ರ ಭೂಮಿ ಸೀಳಿದೆ.

ಅದೇ ಮರದ ಮೈಯೊಳಗೆ
ಅಡಗಿ ಕೂತ ಮತ್ತದೇ ಗಾಳಿ
ಹಣ್ಣಾದ ಎಲೆಯನ್ನು
ತನ್ನ ಬೆನ್ನಿಗೇರಿಕೊಂಡು
ನದಿ ತೀರಕ್ಕೆ ಬಂದಿದೆ.



ಬೆತ್ತಲೆ ನದಿಯ ಮೈ ಮೇಲೆ
ಹರಿದಾಡುವ ಎಲೆಯಲ್ಲಿ
ಇರುವೆಯೊಂದು
ಅಂಟಿ ಕೂತಿದೆ.
ಎಲೆಗೋ, ಇರುವೆಯನ್ನು
ದಡಕ್ಕೆ ತಲುಪಿಸುವ ತವಕ

ಆದರೂ...
ಗಾಳಿಯ ಭಾರ ಹೊರುವ
ಮರಕ್ಕೇಕೆ ಹಣ್ಣಾದ
ಎಲೆಯ ಭಾರ ಹೊರಲಾಗುತ್ತಿಲ್ಲ!

○ ಉಗಮ ಶ್ರೀನಿವಾಸ್

ನಾವು ಒಂದಾಗಲೇಬೇಕಾದ ಕಾಲಘಟ್ಟ ಬಂದಿದೆ. ಈ ಒಂದಾಗುವ ಪ್ರಕ್ರಿಯೆಯಲ್ಲಿ ಅರೆ ಮನಸ್ಸಿನ ಪ್ರಯತ್ನಗಳು ಇರಬಾರದು. ೫೭ ವರ್ಷದ ಆಳವಾದ ವಿಶ್ಲೇಷಣೆ ಇರಬೇಕು. ಅದರ ಸಫಲತೆ, ವಿಫಲತೆಗಳ ಆಧಾರದ ಮೇಲೆ ಪರ್ಯಾಯವನ್ನ ಹುಡುಕಬೇಕು.

ಆದರೆ ಇಲ್ಲಿಯವರೆಗೂ ಪರ್ಯಾಯ ರಾಜಕಾರಣದಲ್ಲಿ ಆಗಿರುವ ಚರ್ಚೆಯಲ್ಲಿ ಈ ೫೭ ವರ್ಷದ ವಿಶ್ಲೇಷಣೆ , ಪ್ರಭುತ್ವದ ರೂಪುರೇಷೆ, ಪ್ರಭುತ್ವದ ಸ್ವಭಾವ, ಅದಕ್ಕೆ ಪರ್ಯಾಯವಾಗಿ ನಾವು ಏನನ್ನು ಕಟ್ಟಬೇಕು, ಪರ್ಯಾಯ ಮೂಲಭೂತವಾಗಿ ಎಲ್ಲಿ ಹುಟ್ಟಿಬರಬೇಕು ಎನ್ನುವುದು ಲೋಪ ಆಗಿದೆ.

೫. ಆಶಯಕ್ಕೆ ಮೂಲವಾದ ನಿಷ್ಠತೆಯನ್ನಿಟ್ಟುಕೊಂಡು ಅದರ ಆಧಾರದ ಮೇಲೆ ಮತ್ತು ಹಿಂದಿನಿಂದ ನಮ್ಮ ಸಂಘಟನೆಗಳು ಏಕೆ ವಿಫಲವಾದವು ಎನ್ನುವ ಮಾರ್ಗದರ್ಶಿ ಸೂತ್ರಗಳನ್ನಿಟ್ಟುಕೊಂಡು ಮುನ್ನಡೆಯಬೇಕು.

ಎಷ್ಟು ಶಕ್ತಿಗಳು ಒಗ್ಗೂಡುತ್ತವೆ, ಒಗ್ಗೂಡಿದರೆ ಅವು ಯಾವ ಸಂಹಿತೆಗಳಿಗೆ ಒಳಪಟ್ಟು ಕೆಲಸ ಮಾಡಿದರೆ ಕಾರ್ಯಸಾಧುವಾಗುತ್ತದೆ ಎನ್ನುವ ತೀರ್ಮಾನವಾಗುವುದು ಪರ್ಯಾಯ ರಾಜಕಾರಣ ಯಾವ ದಿಕ್ಕಿನ ಕಡೆಗೆ, ಯಾವುದನ್ನ ಸಾಕಾರ ಮಾಡಲು ಹೊರಟಿದೆ ಎನ್ನುವುದನ್ನು ಆಧರಿಸಿದೆ. ಮೇಲ್ನೋಟಕ್ಕೆ ಅರಾಜಕತೆ, ಅಶಿಸ್ತುಗಳನ್ನು ಹೊರತುಪಡಿಸಿ ಆಶಯಕ್ಕೆ ಬದ್ಧತೆ ಇರಬೇಕು. ಮತ್ತು ಜನರೇ ತಮ್ಮನ್ನು ತಾವು ಬದಲಾವಣೆ ಮಾಡಿಕೊಳ್ಳುವ ರೀತಿಯಲ್ಲಿ ಕಾರ್ಯತತ್ಪರರಾದರೆ, ಸಂಘಟನೆಯ ಸಂಸ್ಕೃತಿ ಪ್ರಶ್ನೆಗಳು ಬಗೆಹರಿಯುತ್ತವೆ. ನಾವು ನಾಯಕರು, ಜನರನ್ನು ಉದ್ಧಾರ ಮಾಡಲು ಬರುವವರು ಎಂಬ ಭಾವನೆ ಬಿಟ್ಟು ಜನರೇ ನಮ್ಮ ನಾಯಕರೆಂಬ ದಿಕ್ಕಿನಲ್ಲಿ ಹೋದಾಗ ಜನರಿಗೂ ನಾಯಕರನ್ನು ಪ್ರಶ್ನಿಸಬಹುದು ಎಂಬ ಧೈರ್ಯ ಬರುತ್ತದೆ. ಇದು ನಿಜವಾದ ಪರ್ಯಾಯ. □

ಈಗಲೇ ಪಕ್ಷವಾಗದಿರಲಿ

೨೨ನೇ ಪುಟದಿಂದ

ರಾಜಕೀಯವೋ ಅನ್ನುವುದರ ಬಗ್ಗೆ ಗೊಂದಲ ಇದೆ. ಪ್ರಜಾಸತ್ತೀಯ ಚೌಕಟ್ಟಿನೊಳಗೆ ಹೆಚ್ಚು ಆರೋಗ್ಯಪೂರ್ಣ ರಾಜಕೀಯ ಮಾಡುತ್ತೇವೆ ಎಂದು ಹೇಳಿದಾಗ ಈ ಪರ್ಯಾಯ ರಾಜಕಾರಣ ಎನ್ನುವ ಶಬ್ದದ ಅರ್ಥವನ್ನು ವೇದಿಕೆಗಳ ಮೂಲಕ ಸ್ಪಷ್ಟವಾಗಿಸಬೇಕಿದೆ. ಇದು ಬಹಳ ಮುಖ್ಯ. ಇದು ನನ್ನ ಒಂದು ಸೂಚನೆ ಅಷ್ಟೆ

೩, ೪ ಮತ್ತು ೫. ಶಕ್ತಿಗಳು ಎಂದಾಗ ಬೇರೆ ಬೇರೆ ಬಣಗಳು. ಈಗ ರೈತಸಂಘ, ದಲಿತ ಸಂಘರ್ಷ ಸಮಿತಿಯ ಹಾಗೇಯೇ ಇನ್ನೊಂದು ಮಹಾಶಕ್ತಿ ಭಾಷಾ ಚಳವಳಿ. ೮೦ರ ದಶಕದ ಪ್ರಾರಂಭದೊಳಗೆ ನಡೆದ ಗೋಕಾಕ್ ಚಳವಳಿ ಇಡೀ ಜನಸ್ತೋಮವನ್ನು ಒಳಗೊಂಡಂತಹ ಚಳವಳಿ. ಮತ್ತು ಭಾಷೆ ಭಾವನಾತ್ಮಕವಾಗಿ ನಮ್ಮ ಜನರನ್ನು ತಲುಪುವುದಲ್ಲದೆ ಎಲ್ಲಕ್ಕಿಂತ ಹೆಚ್ಚಿನ ಬೀಸು ಭಾಷೆಗಿದೆ. ಕನ್ನಡ ಎಂದರೆ, ಕನ್ನಡಕ್ಕೇ ಏನೋ ಕುತ್ತು ಬಂದಿದೆ ಎಂದರೆ ಸಾಕು ಜನ ಭಾವನಾತ್ಮಕ ನೆಲೆಯೊಳಗೆ ಒಂದುಗೂಡುವುದು ಬಹಳ ಸಾಧ್ಯ. ತೀರ ಇತ್ತೀಚಿನ ಬೆಳವಣಿಗೆ ಎಂದರೆ ಈ ರೈತ ಮತ್ತು ದಲಿತ ಶಕ್ತಿಗಳು ಕನ್ನಡ ಶಕ್ತಿಯನ್ನ ಮುಂದು ಮಾಡಿಕೊಂಡು ಹೋರಾಟಕ್ಕಿಳಿರುವುದು. ಅದು ಒಳ್ಳೆಯ ಸಂಗಮ. ಈ ದಿಕ್ಕಿನೊಳಗೆ ನಾವು ಬೆಳೆಯಬೇಕು.

ಕನ್ನಡ ಅಂದರೆ ಕೇವಲ ಭಾಷೆ ಅಲ್ಲ, ಬರೀ ಶಿಕ್ಷಣ, ಸಂಸ್ಕೃತಿ ಅಲ್ಲ, ಕನ್ನಡ ಅಂದರೆ ಇಡೀ ನಮ್ಮ ಸಮುದಾಯದ ಬದುಕು. ಅದರೊಳಗೆ ಕೃಷಿ ವ್ಯಾಪಾರ, ಆಡಳಿತ, ಶಿಕ್ಷಣ ಎಲ್ಲವೂ ಒಟ್ಟುಗೂಡಿದಂತಹ ಪರಿಕಲ್ಪನೆ. ಕನ್ನಡವನ್ನು ಮುಂದು ಮಾಡಿ, ಜನರನ್ನು ನಮ್ಮ ಕಡೆಗೆ ಬರಮಾಡಿಕೊಂಡು, ಜೊತೆಗೆ ದಲಿತರ ಸಮಸ್ಯೆಗಳು, ರೈತರ ಸಮಸ್ಯೆಗಳು, ಕಾರ್ಮಿಕರ ಸಮಸ್ಯೆಗಳು ಎಲ್ಲ ಬರಬೇಕು. ಈ ಪರ್ಯಾಯ ರಾಜಕಾರಣದೊಳಗೆ ಕಾರ್ಮಿಕರಿಗೆ ಸ್ಥಾನ ಇಲ್ಲವಾದರೆ ಅದು ಪರಿಪೂರ್ಣವಾಗುವುದಿಲ್ಲ. ದುಡಿಯುವ ವರ್ಗ ಅದು. ಅವರನ್ನೂ ಸಹಿತ ಇದರಲ್ಲಿ ಮತ್ತೊಂದು ಆಯಾಮವಾಗಿ ಜೋಡಿಸಿಕೊಂಡರೆ, ಈ ಪರ್ಯಾಯ ರಾಜಕಾರಣಕ್ಕೆ ಒಂದು ಹೊಸ ಗತಿ, ಹೊಸ ಬಲ ಬರಲು ಸಾಧ್ಯ. ಒಮ್ಮೆ ಇವರೆಲ್ಲ ಒಂದು ವೇದಿಕೆ ಮೇಲೆ ಬಂದಾಗ, ಒಂದು ಕಡೆ ಕುಳಿತು ಸಮಾಲೋಚನೆ ಮಾಡಿ ಅದು ಯಾವ ರೀತಿಯ ನೀತಿ ಸಂಹಿತೆಯನ್ನ ಅಳವಡಿಸಿಕೊಳ್ಳಬೇಕು, ಕಾರ್ಯಸೂಚಿ, ಅಜೆಂಡಾ ಏನು, ಎನ್ನುವುದರ ಬಗ್ಗೆ ಚರ್ಚೆ ಮಾಡಬಹುದು.

ಪರ್ಯಾಯ ರಾಜಕೀಯ ಶಕ್ತಿಯು ಕೂಡಲೇ ರಾಜಕೀಯ ಪಕ್ಷವಾಗಿ ಪರಿವರ್ತನೆ ಆಗುವುದು ಸದ್ಯಕ್ಕೆ ಸರಿಯಲ್ಲ. ಕನಿಷ್ಠ ಇನ್ನೂ ಐದು ವರ್ಷ ನಾವು ನೀವು ಕೂಡಿ ಹೋರಾಟ ಮಾಡಬಹುದು, ಪರಸ್ಪರ ತಿಳವಳಿಕೆ ಹೆಚ್ಚು ಮಾಡಿಕೊಳ್ಳಬಹುದು ಅನ್ನುವ ಭಾವನೆ ನಿರ್ಮಾಣ ಆದ ಮೇಲೆ ಇವತ್ತಿನ ಚುನಾವಣಾ ರಾಜಕೀಯದೊಳಗೆ ನಮ್ಮ ಬಲಾಬಲ ಏನು, ನಮ್ಮ ಲೆಕ್ಕಾಚಾರಗಳೇನು, ಜನರ ನೀರೀಕ್ಷೆಗಳೇನು ಎಂಬ ಬಗ್ಗೆ ಸಂಪೂರ್ಣ ಲೆಕ್ಕಾಚಾರ ಹಾಕಿ ಈ ಪಕ್ಷ ರಾಜಕೀಯಕ್ಕೆ ಇಳಿಯಬಹುದು.

ಈ ಹಿಂದೆ ನಡೆದ ರೈತಸಂಘದ ಚುನಾವಣಾ ರಾಜಕೀಯ, ಬೇರೆ ಬೇರೆ ಸಂಘಟನೆಗಳು ಚುನಾವಣೆಗೆ ನಿಂತು ವಿಫಲವಾದದ್ದು ನಮಗೆ ತಿಳಿದೇ ಇದೆ. ಆದ್ದರಿಂದ ಬಹಳ ಪ್ರಜ್ಞಾಪೂರ್ವಕವಾಗಿ ಮುಂದಿನ ಹೆಜ್ಜೆಗಳನ್ನು ಇಡುವುದು ಮುಖ್ಯ. □



ಮಹಿಳೆ

ಅತ್ತೆ - ಸೊಸೆಯರು ಅನ್ಯೋನ್ಯವಾಗಿರುವ ಪ್ರತಿನಿಧೀಕರಣಗಳು ಮಹಿಳಾ ಜನಪದ ಸಾಹಿತ್ಯದಲ್ಲಿ ಸಿಗುತ್ತವೆ. ಆದರೂ ಅವುಗಳ ಸಂಖ್ಯೆ ಬಹಳ ಕಡಿಮೆ. ಅತ್ತೆಯಾದವಳು 'ತನ್ನ ಮನೆ' ಎಂದು ಹಕ್ಕು ಚಲಾಯಿಸಲು ಪ್ರಯತ್ನಿಸಿದರೆ, ಸೊಸೆಯಾದವಳು ತನಗೂ ಈ ಮನೆಯಲ್ಲಿ ಹಕ್ಕಿದೆ ಎಂದು ನಿರೂಪಿಸಲು ಪ್ರಯತ್ನಿಸುತ್ತಾಳೆ. ಈ ಕಾರಣಕ್ಕಾಗಿಯೇ ಅತ್ತೆ-ಸೊಸೆಯರ ಮಧ್ಯದಲ್ಲಿ ಸದಾ ಕಲಹವಿರುತ್ತದೆ. ವ್ಯಂಗ್ಯವೆಂದರೆ ಅತ್ತೆಗಾಗಲಿ, ಸೊಸೆಗಾಗಲಿ ಕುಟುಂಬದಲ್ಲಿ ಯಾವುದೇ ಹಕ್ಕಿರುವುದಿಲ್ಲ. ಆದರೆ 'ಹುಸಿ ಹಕ್ಕಿಗಾಗಿ' ಅವರ ಮಧ್ಯೆ ಸದಾ ಪೈಪೋಟಿ ನಡೆದೇ ಇರುತ್ತದೆ.

○ ಡಾ॥ ಶೈಲಜ ಹಿರೇಮಠ

'ಅತ್ತೆ ಮನೆ' ಸುತ್ತ ಮುತ್ತ

ಅತ್ತೆ ಮನೇಲಿ ಹೆಂಗಿದ್ದಿ ಮಗಳೆ
ಅಂದ್ರೆ ಮುಳ್ಳಾಗೆ ಹಾದಿ ನಡೆದ್ಹಾಂಗೆ
ಮೊಳಕೈಗೆ ಚಿಲಕ ಹೊಡೆದ್ಹಾಂಗೆ

ಹೀಗೆ ಅತ್ತೆಯನ್ನು ನೇತ್ಯಾತ್ಮಕ ನೆಲೆಯಲ್ಲಿ ಪ್ರತಿನಿಧೀಕರಿಸುವ ತ್ರಿಪದಿಗಳು, ಕಥನ ಗೀತೆಗಳು, ಹೇರಳವಾಗಿ ದೊರೆಯುತ್ತವೆ. ಇವುಗಳು ಸೊಸೆಯ ಸಂಕಷ್ಟಕ್ಕೆ ಅತ್ತೆಯನ್ನೇ ಹೊಣೆಗಾರಳನ್ನಾಗಿಸುತ್ತ 'ಹೆಣ್ಣಿಗೆ ಹೆಣ್ಣೇ ಶತ್ರು' ಎನ್ನುವ ಅರ್ಥವನ್ನು ನೀಡುತ್ತವೆ. ಅತ್ತೆಯನ್ನು ಹೆಣ್ಣಿನ ನೆಲೆಯಲ್ಲಿಟ್ಟು ವಿಶ್ಲೇಷಿಸುವುದಕ್ಕಿಂತಲೂ ಪುರಷಾಧಿಕಾರದ ನೆಲೆಯಲ್ಲಿಟ್ಟು ವಿಶ್ಲೇಷಿಸಿದಾಗ ಅತ್ತೆಯ ಪ್ರತಿನಿಧೀಕರಣಗಳು ಅರ್ಥವಾಗುತ್ತವೆ. ಇಲ್ಲಿ 'ಅತ್ತೆ ಮನೆ' ಎನ್ನುವ ಪದವನ್ನು ವಿಶ್ಲೇಷಣೆಗೆ ಆಯ್ದುಕೊಳ್ಳಲಾಗಿದೆ. ಅತ್ತೆ ಮನೆಯು ನೇತ್ಯಾತ್ಮಕ ನೆಲೆಯಲ್ಲಿ ಗುರುತಿಸಿಕೊಂಡಿದೆ.

ಯಾವುದನ್ನು 'ಅತ್ತೆ ಮನೆ' ಎಂದು ಕರೆಯಲಾಗುತ್ತದೆಯೋ, ವಾಸ್ತವದಲ್ಲಿ ಅವಳು ಆ ಮನೆಗೆ ಹಕ್ಕುದಾರಳು ಆಗಿರುವುದೇ ಇಲ್ಲ. ಅಂದರೆ ಮನೆ, ಮನೆಯಲ್ಲಿರುವ ಸಂಪತ್ತು ಮತ್ತು ಮನೆತನಕ್ಕೆ ಸಂಬಂಧಿಸಿದ ಆಸ್ತಿಗೆ ಅವಳು ಒಡತಿಯಾಗಿರುವುದಿಲ್ಲ. ಅವುಗಳು ಆ ಮನೆತನದ ಪುರುಷರ ಒಡೆತನದಲ್ಲಿಯೇ ಇರುತ್ತವೆ. ಪುರುಷ ಪ್ರಭುತ್ವದಲ್ಲಿರುವ ಸ್ಥಿರಾಸ್ತಿಯನ್ನು ಕಾಪಾಡುವ ಮೇಲ್ವಿಚಾರಕಿಯ ಸ್ವರೂಪದಲ್ಲಿ ಅತ್ತೆಯಾದವಳು ಪ್ರತಿನಿಧೀಕರಣಗೊಂಡಿರುವಳು. ಪುರುಷ ಪ್ರಧಾನ ವ್ಯವಸ್ಥೆಯು ಕಟ್ಟಿಕೊಟ್ಟ ಮೌಲ್ಯಗಳನ್ನು ನಿಷ್ಠೆಯಿಂದ ಸಂರಕ್ಷಿಸುತ್ತಾ, ಅವುಗಳನ್ನು ಯಥಾಸ್ಥಿತಿಯಲ್ಲಿಡಲು ಅತ್ತೆಯಾದವಳು ಪ್ರಯತ್ನಿಸುತ್ತಿರುತ್ತಾಳೆ. ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯದ ಸ್ಥಳವನ್ನು 'ಅತ್ತೆ ಮನೆ' ಎಂದು ಗುರುತಿಸಲಾಗಿದೆ. 'ಅತ್ತೆಮನೆ' ಎನ್ನುವುದು ಮೇಲ್ನೋಟಕ್ಕೆ ಸ್ತ್ರೀವಾಚಕ ಪದವಾಗಿ ಕಂಡು ಬಂದರೂ, ಅದು ಪುರುಷ ನಿಷ್ಠ ವ್ಯವಸ್ಥೆಯನ್ನು ಸಮರ್ಥಿಸುವ ಪದವಾಗಿದೆ. 'ಪಿತೃಸ್ಥಾನೀಯ ವ್ಯವಸ್ಥೆಯನ್ನು ಅಂದರೆ ಗಂಡನ ಮನೆಗೆ ವಧು ಹೋಗುವ ವ್ಯವಸ್ಥೆಯನ್ನು ಈ ಸಮಾಜದಲ್ಲಿ ರೂಢಿಸಲಾಗಿದೆ. ಆದರೂ ಹಿಂಸೆಯ ವಿಷಯ ಬಂದಾಗ ಅದು 'ಗಂಡನ ಮನೆ' ಅಥವಾ 'ಮಾವನ ಮನೆ' ಆಗದೆ ಸಾಮಾನ್ಯವಾಗಿ ಅತ್ತೆ ಮನೆಯಾಗುವುದು ಕುತೂಹಲಕರವಾಗಿದೆ.

ಆ ಮನೆಯಲ್ಲಿ ಸೊಸೆಯಾಗಿ ಹೋಗುವವಳ ದೃಷ್ಟಿಯಿಂದ ಅತ್ತೆಯ ಸ್ಥಾನದಲ್ಲಿರುವ ವ್ಯಕ್ತಿ ಬಹುಮುಖ್ಯ ಹಾಗೂ ನಿರ್ಣಾಯಕ ಪಾತ್ರವನ್ನು ಸೊಸೆಯ ಜೀವನದಲ್ಲಿ ಆಕೆ ವಹಿಸುತ್ತಾಳೆ ಎಂಬುದೂ ಕೂಡ ಈ ಅತ್ತೆ ಮನೆ ಎಂಬ ಪ್ರಯೋಗದಲ್ಲಿ ಸೂಚಿತವಾಗಿದೆ. 'ಅತ್ತಿ ಮನಿ ಇಗ್ಗರ ಭಾಳ ಇರಲಾರೆ' ಎನಿಸಿದರೂ ಅವಳು ಅದನ್ನು ತೊರೆದರೆ ಬದುಕಲು ಜಾಗವೆಲ್ಲಿದೆ ಎಂಬ ಪ್ರಶ್ನೆಗೆ ನಮ್ಮಲ್ಲಿ ಅನೇಕ ಮಹಿಳೆಯರಿಗೆ ಉತ್ತರವಿಲ್ಲ. ಅತ್ತೆ ಸೊಸೆಯರ ಸಂಬಂಧ ಅತ್ಯಂತ ಸಂಕೀರ್ಣವಾದದ್ದು. ಅದರ ಘರ್ಷಣೆ ಅತ್ಯಂತ ಪುರಾತನವಾದದ್ದು. ಇತಿಹಾಸದುದ್ದಕ್ಕೂ ಮುರುಟುತ್ತಾ, ಹತ್ತಿಕ್ಕಲ್ಪಡುತ್ತಾ ಬಂದ ಹೆಣ್ಣಿನ ಬದುಕು ವಿಕೃತಗೊಂಡ ಅತ್ತೆಯರ ಬದುಕಿನಲ್ಲಿ ಪ್ರತಿಫಲಿತವಾದ ಹಾಗೆ ಮತ್ತೆಲ್ಲಿಯೂ ಆಗಿಲ್ಲವೋ ಏನೋ! ಬೇರಾವ ಅಭಿವ್ಯಕ್ತಿ ಹಕ್ಕಿನ ಕ್ಷೇತ್ರವಾಗಲಿ ಆಸಕ್ತಿಗಳ ರೂಢನೆಯಾಗಲಿ ಕಾರ್ಯಕ್ಷೇತ್ರವಾಗಲಿ ಇಲ್ಲದೆ ಮದುವೆ ಮಕ್ಕಳಿಗೆ ಅಂಟಿಕೊಂಡ ಬದುಕು ಗಂಡುಮಕ್ಕಳ ಬದುಕಿನೊಂದಿಗೆ ಅನಾರೋಗ್ಯಕರವಾಗಿ, ಮಿತಿಮೀರಿ ಹತ್ತಿಕೊಂಡಿದ್ದರ ಫಲವನ್ನು ಘರ್ಷಣೆಯಲ್ಲಿ ಕಾಣಬಹುದು. ಈ ಅದುಮುವಿಕೆ, ತುಳಿತದ ಫಲ ಮತ್ತೊಂದು ಹೆಣ್ಣನ್ನೇ ಬಲಿಯಾಗಿಸಿಕೊಳ್ಳುವುದು ದುರಂತದಲ್ಲಿ ದುರಂತ' (ವಿಜಯಾದಬ್ಬೆ ೧೯೯೭, ಪು. ೧೭೨)

'ಅತ್ತಿಯ ಮನಿಯಾಗ ಮುತ್ತಾಗ ಇರಬೇಕು, ಹೊತ್ತಾಗಿ ನೀಡಿದರ ಉಣಬೇಕು', 'ಅತ್ತೆ ಮಾವರಿಗಂಜಿ ಮತ್ತೆ ನಾದುನಿಯರಿಗಂಜಿ ನಡೆಯಬೇಕು', 'ಗಂಡನಪಾದ ದೇವರೆಂದೆರಿಗಿಕೊ' ಎನ್ನುವ ಮಾನಸಿಕ

ತರಬೇತಿಯನ್ನು ತವರಿನಲ್ಲಿಯೇ ಪಡೆದುಕೊಂಡು ಬಂದ ಹೆಣ್ಣು ಗಂಡನ ಮನೆಯಲ್ಲಿ ಪ್ರಯೋಗಕ್ಕೆ ಒಳಪಡುತ್ತಾಳೆ. 'ಅತ್ತಿ ಕೈಯಾಗ ಅರಿಬೇಕು, ನಾದಿನಿ ಕೈಯಾಗ ನುರಿಬೇಕು' ಎನ್ನುವ ಗಾದೆ ಮಾತು, ಮಹಿಳೆ ಮಹಿಳೆಯರಿಂದಲೇ ಅನುಭವಿಸುವ ಕಷ್ಟಗಳನ್ನು ಬಯಲುಪಡಿಸುತ್ತದೆ.

ಸೊಸೆಯಾದವಳು ಅನುಭವಿಸುವ ಹಿಂಸೆಗಳಿಗೆ ನೇರವಾಗಿ ಅತ್ತೆ-ನಾದಿನಿಯರು ಕಾರಣರು ಎನ್ನುವುದು ಮೇಲ್ನೋಟಕ್ಕೆ ಕಂಡುಬಂದರೂ, ಆಳದಲ್ಲಿ ಅದು ಬೇರೆಯದೇ ಸತ್ಯಗಳನ್ನು ಮುಚ್ಚಿಟ್ಟುಕೊಂಡಿರುತ್ತದೆ. ಗಂಡನ ಮನೆಯು ಪಿತೃ ಪ್ರಧಾನ ವ್ಯವಸ್ಥೆಗೆ ಹೆಣ್ಣನ್ನು ಪಳಗಿಸುವ ಗರಡಿ ಮನೆಯಾಗಿದೆ. ಟಿ.ಎಸ್. ರಾಜಪ್ಪ ಅವರು ಸಂಗ್ರಹಿಸಿದ ಉತ್ತರದೇವಿ ಕಥನಗೀತೆಯಲ್ಲಿ ಗಂಡ ಹೆಂಡತಿಗೆ ಹೇಳಿದ ಮಾತುಗಳನ್ನು ಗಮನಿಸಬೇಕು; 'ಆಗ ತಂದವನಲ್ಲ, ಈಗ ಕಳಿಗವನಲ್ಲಿ ಹೋಗೀರು, ನಿನ್ನ ತವರಿಗೆ.' (ಉದ್ಧೃತ : ದೇವೇಂದ್ರಕುಮಾರ ಹಕಾರಿ. ೧೯೮೫, ಪು. ೨೭೩)

ಈ ಮಾತುಗಳು ಹೆಂಡತಿಗೆ ಗಂಡನ ಸಂಬಂಧಕ್ಕಿಂತಲೂ, ಗಂಡನ ಮೊದಲ ರಕ್ತ ಸಂಬಂಧವೇ ಮುಖ್ಯವಾದದ್ದು ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಸಾಮಾನ್ಯವಾಗಿ ಸಾಂಪ್ರದಾಯಿಕ ಕುಟುಂಬಗಳಲ್ಲಿ ಗಂಡು ಹೆಣ್ಣಿನ ಮದುವೆಯನ್ನು ನಿರ್ಧರಿಸುವವರು ಹಿರಿಯರು. ಹೀಗಾಗಿ ಹೆಂಡತಿಯಾಗಿ ಗಂಡನೊಂದಿಗೆ ಬಾಳುವ ಸಂಬಂಧಕ್ಕಿಂತಲೂ, ಸೊಸೆಯಾಗಿ ಅತ್ತೆ, ಮಾವ, ನಾದುನಿ, ಮೈದುನರ ಜೊತೆ ಕಾಯ್ದುಕೊಳ್ಳುವ ಸಂಬಂಧವು ಪ್ರಮುಖವಾಗಿ ಕಾಣುತ್ತದೆ. ಮದುವೆಯಾಗುವ ಹುಡುಗನ ಇಷ್ಟಾನಿಷ್ಟಗಳನ್ನು ಕಡೆಗಣಿಸಿ ಹೆತ್ತವರೇ ನಿರ್ಧರಿಸಿ ಮಾಡಿದ ಮದುವೆ ಸಂಬಂಧಗಳಲ್ಲಿ ಹೆತ್ತವರು ಪ್ರಬಲರಾಗಿರುತ್ತಾರೆ. ಹಿರಿಯರ ಅಣತೆಯಂತೆ ತಾಳಿ ಕಟ್ಟಿದವನು ಬಹಳ ದುರ್ಬಲನಾಗಿರುತ್ತಾನೆ. ತಾಳಿ ಕಟ್ಟುವುದು ಅವನ ಸಮ್ಮತಿಯಿಂದ ನಡೆದದ್ದಲ್ಲ, ಹೆಂಡತಿಯನ್ನು ಮನೆಯಿಂದ ಹೊರ ಹಾಕುವುದು ಕೂಡ ಅವನ ಇಚ್ಛೆಯಿಂದ ನಡೆದುದಾಗಿರುವುದಿಲ್ಲ. ಇಂತಹ ಕುಟುಂಬಗಳಲ್ಲಿ ಸೊಸೆಯ ಭವಿಷ್ಯವನ್ನು ನಿರ್ಧರಿಸುವವರು ಅತ್ತೆ, ಮಾವ, ನಾದುನಿ, ಭಾವ ಮೈದುನರೇ ಆಗಿರುತ್ತಾರೆ.

ಉತ್ತರದೇವಿ ಕಥನಗೀತೆಯಲ್ಲಿ (ಪರಮಶಿವಯ್ಯ, ಜೀ.ಶಂ. ೧೯೯೬, ಪು. ೯-೧೭) ಸೊಸೆಯ ಪಾತಿವ್ರತ್ಯವನ್ನು ಸಂಶಯಿಸಿದ ಅತ್ತೆ ಆಕೆಯನ್ನು ಮನೆಯಿಂದ ಹೊರಹಾಕುತ್ತಾಳೆ. ಗಂಡನಿಂದ ಅವಳಿಗೆ ನೈತಿಕ ಬೆಂಬಲವು ದೊರೆಯುವುದಿಲ್ಲ, ಕೊನೆಗೆ ಉತ್ತರದೇವಿ ಹೊಳೆಗೆ ಹಾರಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವಳು. ಈ ಒಟ್ಟು ಕಥನಗೀತೆಯು ಸೊಸೆಯ ಸಾವಿಗೆ ಅತ್ತೆಯನ್ನು ಕಾರಣಳನ್ನಾಗಿಸುತ್ತದೆ. ಅತ್ತೆ ಶೀಲ ಶಂಕಿಸುವುದಕ್ಕೆ ಅವಕಾಶ ಕಲ್ಪಿಸಿದ ಸೊಸೆಯು ತನ್ನ ಸಾವಿಗೆ ತಾನೇ ಹೊಣೆಗಾರಳಾಗುವಂತೆ ಕಾವ್ಯದಲ್ಲಿ ಪ್ರತಿನಿಧೀಕರಿಸಲಾಗಿದೆ. ಇವೆರಡರ ಮಧ್ಯೆ ಈ ಸನ್ನಿವೇಶಕ್ಕೆ ಕಾರಣವಾದ ಪುರುಷಶಾಹಿ ಮೌಲ್ಯಗಳ ಅರ್ಭಟವು ತಣ್ಣಗೆ ತೆರೆಯ ಮರೆಯಲ್ಲಿ ನಿಂತುಕೊಂಡು ಬಿಡುತ್ತವೆ. ಪಾತಿವ್ರತ್ಯದ ಪರಿಕಲ್ಪನೆ, ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎನ್ನುವ ನಂಬಿಕೆ, ಇವೆಲ್ಲವುಗಳೂ ಪುರುಷಶಾಹಿ ಮೌಲ್ಯಗಳೇ ಆಗಿವೆ. ವೈವಾಹಿಕ ಚೌಕಟ್ಟಿನಿಂದ ಹೊರದೂಡಲ್ಪಟ್ಟಂತಹ ಉತ್ತರೆಯು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬದುಕಿನ ಆಯ್ಕೆ ಮತ್ತು ಬದುಕುವ ಅವಕಾಶಗಳನ್ನು ಕಳೆದುಕೊಳ್ಳುತ್ತಾಳೆ. ಈ ಎಲ್ಲಾ ಪುರುಷಶಾಹಿ ಮೌಲ್ಯಗಳು ಬರ್ಬರವಾಗಿ ನಡೆಸಿದ ದಾಳಿಯಿಂದಾಗಿ ಉತ್ತರೆ ಸಾವಿಗೀಡಾಗುತ್ತಾಳೆ. ಆದರೆ ಇವುಗಳು ನೇರವಾಗಿ ಲೋಕಕ್ಕೆ ಕಾಣಿಸುವುದಿಲ್ಲ. ಉತ್ತರ ದೇವಿಯಂಥ ನಿದರ್ಶನಗಳನ್ನು ನೀಡಿ, ಹೆಣ್ಣಿನ ಶೋಷಣೆಗೆ ಹೆಣ್ಣೇ ಕಾರಣವೆನ್ನುವುದನ್ನು ಸಾಬೀತು ಪಡಿಸಲು ಪುರುಷ ಪ್ರಧಾನ ವ್ಯವಸ್ಥೆಸದಾ ಪ್ರಯತ್ನಿಸುತ್ತಲೇ ಇರುತ್ತದೆ. ಸಾಮಾನ್ಯ ಬದುಕಿನ ವಾಡಿಕೆಯಲ್ಲಿಯೂ 'ಅತ್ತೆ' ಎನ್ನುವುದು ಕೆಟ್ಟ ಪ್ರತಿಮೆಯಾಗಿಯೇ ಬಳಕೆಗೊಳ್ಳುತ್ತದೆ.

ಕೆಟ್ಟ ಮಾವನ ಸುತ್ತ ಹೆಣೆದುಕೊಂಡ ಮಹಿಳಾ ಜನಪದ ಸಾಹಿತ್ಯವು ದೊರೆಯುವುದು ಬಹಳ ಅಪರೂಪ. ಸಾಮಾಜಿಕ ವ್ಯವಹಾರದಲ್ಲಿಯೂ 'ಕೆಟ್ಟ ಮಾವ' ಎನ್ನುವ ಪ್ರತಿಮೆ ಬಳಕೆಗೊಳ್ಳುವುದು ತೀರ ಅಪರೂಪ. ಮಾವಂದಿರು ಸೊಸೆಯ ಮೇಲೆ ನಡೆಸುವ ದೌರ್ಜನ್ಯವನ್ನು ಕೆರೆಗೆ ಹಾರ, ಅಣಜಿ ಹೊನ್ನಮ್ಮ, ಒಡ್ಡರ ಬೋಯಿಯಂಥ ಕಥನಗೀತೆಗಳು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತವೆ. ನೀರು ಬರದ ಕೆರೆಗೆ ಮಾವನ ಅಣತಿಯಂತೆ 'ಪೂಜೆ ಮಾಡಿದ ಒಡ್ಡರ ಬೋಯಿಗೆ, ಮಾವಯ್ಯ ಹಿಂದಕ್ಕೆ ತಿರುಗೆಂದ, ಮುಂದಕ್ಕೆ ನೂಕ್ಯಾನೆ' (ಕರಾಕೃ ಸಂ. ೧೯೭೨ ಪು. ೧೯೨) ಇಂತಹ ನಿರ್ದಯಿ ಮಾವಂದಿರ ಚಿತ್ರಣಗಳು ಬಲಿ ಕುರಿತಿರುವ ಕಥನ ಗೀತೆಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಅಣಜಿ ಹೊನ್ನಮ್ಮ ಕಥನಗೀತೆಯ ಮೂಲಕ ಮಾವಂದಿರು ಸೊಸೆಯಂದಿರ ಮೇಲೆ ನಡೆಸುವ ದೌರ್ಜನ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಸೊಸೆಯ ಬಲಿ ಕೊಡಲು ನಿರ್ಧರಿಸಿದ ಹೊನ್ನೇಗೌಡರು ಐದು ದಿನಗಳವರೆಗೆ ಅವಳಿಗೆ ಒಂದ್ಹೊತ್ತು ಇರಲು ಹೇಳುತ್ತಾನೆ. 'ನಾ ಕೂಸಿನ ತಾಯಯ್ಯ ನಾನ್ಹೆಂಗೆ ಒಂದೊತ್ತಿರಲೋ, ಮಾವ! ಹೊಳಲವ್ವ ಇರುತಾಳೆ' (ಕರಾಕೃ, ೧೯೬೪, ಪು. ೨೭-೨೮) ಎಂದು ಹೇಳಿದರೂ ಆತನ ಮನಸ್ಸು ಕರಗುವುದಿಲ್ಲ. ಗರ್ಭಿಣಿ ಹೆಂಗಸಾಗಲಿ, ಕೂಸಿನ ತಾಯಿಯಾಗಲಿ, ದೇವರ ಹೆಸರಿನಲ್ಲಿ ಒಂದ್ಹೊತ್ತು ಇರುವುದನ್ನು ಮತ್ತು ಉಪವಾಸ ಮಾಡುವುದನ್ನು ಪಾಪದ ಕೆಲಸವಾಗಿಯೇ ಪರಿಗಣಿಸಲಾಗಿದೆ. ಹಾಗೆ ಧರ್ಮದ ಹೆಸರಿನಲ್ಲಿ ಉಪವಾಸ ವ್ರತಗಳನ್ನು ಕೈಗೊಂಡವರಿಗೆ ನರಕ ಪ್ರಾಪ್ತಿಯಾಗುತ್ತದೆ ಎನ್ನುವುದು ಜನಪದ ನಂಬಿಕೆ.

> ಅತ್ತೆಯ ಸೇಡಿನಲ್ಲಿ ಪುರುಷಶಾಹಿ ಪರಂಪರೆಯ ಸಾತತ್ಯವನ್ನು ರಕ್ಷಿಸುವ ಗುಣವೇ ಪ್ರಧಾನವಾಗಿ ಕಂಡುಬರುತ್ತದೆ. ಹೆಣ್ಣಿನ ಕೆಲಸಗಳೆಂದೇ ಗುರುತಿಸಲ್ಪಟ್ಟ ಮನೆಗೆಲಸಗಳನ್ನು, ಹೊಲಗೆಲಸಗಳನ್ನು ತನ್ನ ಹೆಣ್ಣು ಮಕ್ಕಳಿಂದ ಹಾಗೂ ಸೊಸೆಯಂದಿರಿಂದ ಮಾಡಿಸುವುದನ್ನು ಮತ್ತು ಪಿತೃ ಪ್ರಧಾನ ವ್ಯವಸ್ಥೆಗೆ ವಿಧೇಯವಾಗಿರುವಂತೆ ತರಬೇತಿ ನೀಡುವುದನ್ನು ಅತ್ತೆಯಾದವಳು, ತಾಯಿಯಾದವಳು ಮಾಡುತ್ತಿರುತ್ತಾಳೆ. ಜನಪದ ಸಾಹಿತ್ಯವು ಸೊಸೆಯ ಮಾನಸಿಕ ಸ್ಥಿತಿಗಳನ್ನು ಹಾಗೂ ಕೌಟುಂಬಿಕ ಸ್ಥಾನಮಾನಗಳನ್ನು ಯಾಕೆ ಹೀಗೆ ಪ್ರತಿನಿಧೀಕರಿಸಿದೆ ಎಂಬುದನ್ನು ವಿಶ್ಲೇಷಿಸುವ ಜರೂರಿದೆ.

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಮನೆಯ ಯಜಮಾನನಾದ ಮತ್ತು ಊರಿಗೆ ನಾಯಕನಾದ ಹೊನ್ನೇಗೌಡನಿಗೆ ಈ ಬಗೆಯ ಸಾಮಾಜಿಕ ನಂಬಿಕೆಗಳು ಅಪರಿಚಿತವಾಗಿದ್ದವು ಎಂದು ಹೇಳಲಾಗುವುದಿಲ್ಲ. ಊರಿನ ಹಿತಾಸಕ್ತಿಯ ಮುಂದೆ ಈ ಬಗೆಯ ನಂಬಿಕೆ, ಆಚರಣೆಗಳು ಮಹತ್ವವನ್ನು ಪಡೆದುಕೊಳ್ಳುವುದಿಲ್ಲ. ಮಗಳು ಹೊಳಲವ್ವ ಉಪವಾಸ ಇರುವುದನ್ನು ಮತ್ತು ಆ ಮೂಲಕ ಅವಳ ಬಲಿಯನ್ನು ನಿರಾಕರಿಸಿ, ಸೊಸೆಯ ಬಲಿಯನ್ನು ಸಮರ್ಥಿಸಿದ ಹೊನ್ನೇಗೌಡ ಪಿತೃಪ್ರಧಾನ ಮೌಲ್ಯಗಳ ಯಜಮಾನನಾಗಿಯೇ ಪ್ರತಿನಿಧೀಕರಣಗೊಂಡಿದ್ದಾನೆ. ಅವನು ಸೊಸೆಯ ಮೇಲೆ ನಡೆಸುವ ದೌರ್ಜನ್ಯವು ಊರ ಉಪಕಾರದ ಹೆಸರಿನಲ್ಲಿ ಧಾರ್ಮಿಕ ಕಾರ್ಯವಾಗಿ ಕಾಣಿಸುತ್ತದೆ. ಕೆರೆಗೆ ಹಾರವಾಗಲು ಸಂಪ್ರದಾಯದಂತೆ ಎಡೆ ಪಟ್ಟಿಯನ್ನು ಹೊತ್ತುಕೊಂಡು ಒಡ್ಡೋಲಗದಿಂದ ಹೊರಟ ಹೊನ್ನಮ್ಮನಿಗೆ ನಡುದಾರಿಗೆ ಬರುವ ಹೊತ್ತಿಗೆ ಬಿಸಿಲ ಬೇಗೆಯಿಂದಾಗಿ ಕಾಲಲ್ಲಿ ಬೊಬ್ಬೆ ಎದ್ದಿವೆ. ಅದನ್ನು 'ಹೊನ್ನವ್ವ ಬ್ಯಾಸಿಗೆ ಬಿಸಿಲು ಮಾವ, ಕೂಸಿನ ತಾಯಿ ಮಾವ, ಅಂಗಾಲೆ ನಮಗೆ ಸುಡುತಾವೆ' (ಪು. ೩೫) ಎಂದು ಬಾಯಿ ಬಿಟ್ಟು ಅಂಗಲಾಚಿದರೂ ಅವನ ಹೃದಯ ಕರಗುವುದಿಲ್ಲ. ಸೊಸೆಯ ಸಂಬಂಧ ಒತ್ತಟ್ಟಿಗಿರಲಿ, ಕೂಸಿನ ತಾಯಿ, ಹಸಿ ಬಾಣಂತಿ ಎನ್ನುವ ಸಂಗತಿಗಳೂ ಅವನ ಅಂತರಂಗವನ್ನು ತಟ್ಟುವುದಿಲ್ಲ. ಶಿಶುವಿನ ಬೆಳವಣಿಗೆಯ ಸಂದರ್ಭದಲ್ಲಿ ತಾಯಿ ಮಗುವಿನ ಸಂಬಂಧದ ಗಾಢತೆಯನ್ನು ಹೇಳುವ ಸಮಾಜ ಆ ಶಿಶುವಿಗೆ ತಾಯಿಯ ಆರೈಕೆಯ ಅಗತ್ಯತೆಯ ಕುರಿತು ಕಾಳಜಿಯಿಂದ ಮಾತನಾಡುತ್ತದೆ.

'ಮಕ್ಕಳಿಗೆ ತಂದೆ ಸತ್ತರೂ ತಾಯಿ ಇರಬೇಕು' ಎನ್ನುವ ಸಾಮಾಜಿಕ ಅಭಿಪ್ರಾಯವೂ ಇದೆ. ಯಾಕೆಂದರೆ ತಾಯಿಯ ಆಶ್ರಯದಲ್ಲಿ ಬೆಳೆಯುವ ಮಕ್ಕಳು ಅನಾಥವಾಗುವುದಿಲ್ಲ. ಕಾರಣ ವಿಧುರನಿಗೆ ಮರು ಮದುವೆಯಾಗುವ ಸಾಮಾಜಿಕ ಅವಕಾಶ ಇದ್ದಂತೆ ವಿಧವೆಗೆ ಇರುವುದಿಲ್ಲ. ವಿಧುರನು ಮದುವೆಯಾಗಿ ತನ್ನ ಮಕ್ಕಳಿಗೆ ಮಲ ತಾಯಿಯನ್ನು ತರುವನು. ಮದುವೆಯಾದ ಹೊಸದರಲ್ಲಿ ಅವಳಿಗೆ ಮಲ ಮಕ್ಕಳು ತನ್ನ ಸುಖಕ್ಕೆ ಮತ್ತು ಗಂಡನೊಂದಿಗಿನ ಬೆಸುಗೆಗೆ ಅಡ್ಡಿಯಾಗಿ ಕಾಣುತ್ತವೆ. ಸ್ವತಃ ಅವಳು ತಾಯಿಯಾದ ಮೇಲೆ ಆಕೆ ಮತ್ತಷ್ಟು ಸ್ವಾರ್ಥಿಯಾಗುತ್ತಾಳೆ. ತನ್ನ ಗಂಡನ ಆಸ್ತಿಯ ಮೇಲೆ ಮಲ ಮಕ್ಕಳ ಹಕ್ಕುದಾರಿಕೆಯನ್ನು ಮಲ ತಾಯಿ ಸಹಿಸುವುದಿಲ್ಲ. ಹೀಗಾಗಿ ಮಲ ಮಕ್ಕಳನ್ನು ತೀವ್ರ ಹಿಂಸೆಗೊಳಪಡಿಸುವಳು. ಹಿಂಸೆ ತಾಳಲಾರದೆ ಆ ಮಕ್ಕಳೇ ಮನೆಯನ್ನು ತೊರೆಯಬೇಕು. ಇಲ್ಲದಿದ್ದರೆ ಆ ಮಲ ಮಕ್ಕಳ ಜೀವನಕ್ಕೆ ಸಂಚಕಾರ ತಂದಿಡುವಳು. ಇದೆಲ್ಲವನ್ನು ತಂದೆಯಾದವನು ನೋಡಿದರೂ ಮೌನಿಯಾಗಿರುತ್ತಾನೆ. ಮೊದಲ ಹೆಂಡತಿಯ ಮಕ್ಕಳಿಗೆ ಆಕೆ ಮಲ ತಾಯಿಯಾದರೆ, ಗಂಡನಿಗೆ ದುಷ್ಟ ಮತ್ತು ಸ್ವಾರ್ಥ ಹೆಂಡತಿಯಾಗಿರುವಳು. ಮಲ ತಾಯಿ ಮತ್ತು ಮಕ್ಕಳಿದ್ದೂ ಎರಡನೆ ಮದುವೆಯಾದ ತಂದೆಯ ಕುರಿತು ಈ ಬಗೆಯ ಅಭಿಪ್ರಾಯಗಳು ಜನಸಮುದಾಯಗಳಲ್ಲಿ ಹೆಣೆದುಕೊಂಡಿವೆ.

ಮಗ ಇಲ್ಲವೆ ತಮ್ಮ ಕುಟುಂಬ ಮತ್ತು ಸೊಸೆಯ ಜೀವದ ಆಯ್ಕೆಯ ಪ್ರಶ್ನೆ ಬಂದಾಗ ಯಜಮಾನನ ಮನಸ್ಸು ತನ್ನ ಕರಳು ಬಳ್ಳಿ ಸಂಬಂಧದತ್ತ ಮಿಡಿಯುತ್ತದೆ. ಆಗ ಸೊಸೆಯು ಹಸಿಗೂಸಿನ ತಾಯವ್ವನಾದರೂ, ಅವಳ ತಾಯ್ತನ ಅವಳನ್ನು ಕಾಪಾಡುವುದಿಲ್ಲ. ಊರ ಹಿತಾಸಕ್ತಿಯ ಮುಂದೆ ತಾಯಿ ಮಕ್ಕಳ ಸಂಬಂಧದ ಕುರಿತು ಹೆಣೆದುಕೊಂಡ ಸಾಮಾಜಿಕ

ಸೊಸೆಯಂದಿರನ್ನು ಕೊಲೆಮಾಡಲು ಯತ್ನಿಸಿದ ಅತ್ತೆಯರು ನಿಂದನೆಗೊಳಗಾದಂತೆ, ಸೊಸೆಯಂದಿರನ್ನು ಬಲಿ ನೀಡಿದ ಮಾವಂದಿರು ದೂಷಣೆಗೆ, ತಿರಸ್ಕಾರಕ್ಕೆ ಒಳಗಾಗುವುದಿಲ್ಲ, ಯಾಕೆಂದರೆ ಈ ಎರಡೂ ಪ್ರಕ್ರಿಯೆಗಳು ಭಿನ್ನ - ಭಿನ್ನ ನೆಲೆಗಳಲ್ಲಿ ಪ್ರತಿನಿಧೀಕರಿಸಲ್ಪಟ್ಟಿವೆ. ಸೊಸೆಯ ಮೇಲೆ ದೌರ್ಜನ್ಯ ಎಸಗುವ ಅತ್ತೆಯು ವಿಕಾರವಾಗಿ ಪ್ರತಿನಿಧೀಕರಿಸಲ್ಪಟ್ಟಿರುವಳು. ಸೊಸೆಯ ಮೇಲೆ ಹಲ್ಲೆ ನಡೆಸುವ ಮಾವನು ಧಾರ್ಮಿಕ ವ್ಯಕ್ತಿಯಾಗಿ, ಊರಿನ ನಾಯಕನಾಗಿ ಪ್ರತಿನಿಧೀಕರಿಸಲ್ಪಟ್ಟಿರುವನು.

ನಂಬಿಕೆಗಳು ಗೌಣವಾಗಿ ಬಿಡುತ್ತವೆ. ಹೊನ್ನಮ್ಮ ತನ್ನ ಎಳೆ ಶಿಶುವಿನ ಕುರಿತು ವಿಚಾರಿಸಿ, ಗಾಜೇನ ಕಂಬ ಹಿಡಿದು ಬೋರು ಬೋರಾಡಿ ಅತ್ತರೂ ಮಾವನಿಗದು ಅರ್ಥವಾಗುವುದೇ ಇಲ್ಲ. ಗಂಗೆಯ ಪೂಜಾ ವಿಧಿ ವಿಧಾನಗಳನ್ನೆಲ್ಲಾ ಪೂರೈಸಿದ ಹೊನ್ನಮ್ಮ ಹಸಿವಿನ ಸಂಕಟದಿಂದ 'ನಾನು ಒಂದ್ಹೊತ್ತು ಬಿಡುತೀನಿ' ಎಂದು ಹೇಳಿದರೂ ಅವನಲ್ಲಿಯ ಮಾನವೀಯತೆ ಸ್ವಲ್ಪವೂ ಜಾಗೃತಗೊಳ್ಳುವುದಿಲ್ಲ. ಬೆಳ್ಳಿ ಬಟ್ಟಲನ್ನು ಮರೆತು ಬಂದಂತೆ ಮಾಡಿದ ಹೊನ್ನೇಗೌಡ ಕೆರೆಯ ಒಳಗೆ ಹೋಗಿ ಅದನ್ನು ತರುವಂತೆ ಸೊಸೆಗೆ ಒತ್ತಾಯಿಸುವನು. 'ಹೆಂಗೆ ಹೋಗಲಿ ಮಾವ, ನನ್ನ ಕುತ್ತಿಗೆಗೆ ಬಂದಾವು ನೀರು' ಎಂದರೂ 'ಓಡೋಡಿ ಹೋಗವ್ವ, ನೀನು ಗಾಢನೆ ಬಾರೆ ಹೊನ್ನವ್ವ' ಎಂದು ನಿರ್ದಾಕ್ಷಿಣ್ಯವಾಗಿ ಹೇಳುವನು.

ತನ್ನ ಮನೆಯ ಸೊಸೆ, ಮಗನ ಮುದ್ದಿನ ಹೆಂಡತಿ, ಮುದ್ದು ಮೊಮ್ಮಗುವಿನ ತಾಯಿ ತನ್ನ ಎದುರಿಗೆ ಸಾವಿನ ದವಡೆಯಲ್ಲಿ ಸಿಲುಕಿ ಒದ್ದಾಡುತ್ತಿದ್ದರೂ, ಸ್ವತಃ ಆಕೆ ಸಾವಿನ ದವಡೆಯಿಂದ ಹೊರಬರಲು ಮಾವನ ಅನುಮತಿಗಾಗಿ ಅಂಗಲಾಚಿದರೂ, ಆತನ ಮನಸ್ಸು ಕ್ಷಣವೂ ಹೊಯ್ದಾಡುವುದಿಲ್ಲ. ಹೊನ್ನಮ್ಮ ತನ್ನ ಬಲಿ ನಿರ್ಧಾರವಾದಾಗಿನಿಂದ ಬಲಿಯಾಗುವ ಹಂತದವರೆಗೆ ಮಾವನ ಮನಃ ಪರಿವರ್ತನೆಗಾಗಿ ಸಾಕಷ್ಟು ಹೋರಾಟ ನಡೆಸಿರುವಳು. ಮನುಷ್ಯತ್ವದ ಮೌಲ್ಯಗಳನ್ನು ಮುಂದಿಡುತ್ತ ಮಾವನನ್ನು ಮನುಷ್ಯನಾಗಿ ಆಲೋಚಿಸಲು ಅನೇಕ ಸಂದರ್ಭಗಳನ್ನು ಸೃಷ್ಟಿಸಿ, ಅರ್ಥೈಸಲು ಪ್ರಯತ್ನಿಸುತ್ತಾಳೆ. ಆದರೂ, ಅವುಗಳಾವುವೂ ಸಫಲವಾಗುವುದಿಲ್ಲ.

ಸಾವಿನ ಕೊನೆಯಂಚಿನಲ್ಲಿದ್ದ ಹೊನ್ನಮ್ಮ 'ಧೂಳು ಸಂಜೆ ಹೊತ್ತು, ಒಬ್ಬಾನೆ ನಮ್ಮ ಮಾವ, ನಾನೇ ಹೋಗುತೀನಿ, ನೀನು ಹೋಗು ಮಾವ' (ಪು.೩೯) ಎಂದೆನ್ನುವಳು. 'ಧೂಳು ಸಂಜೆ ಹೊತ್ತು' ಸಾಯಂಕಾಲದ ಸನ್ನಿವೇಶವನ್ನು ಹೇಳುವಂತೆ, ವಯಸ್ಸಿನ ಕೊನೆಯಂಚಿನಲ್ಲಿದ್ದ ಮಾವನ ಮುಪ್ಪನ್ನು ಧ್ವನಿಸುತ್ತದೆ. ವಯಸ್ಸಾದ ಮಾವನಿಗೆ ಸಂಜೆ ಹೊತ್ತಿನಲ್ಲಿ ಮನೆಗೆ ವಾಪಸ್ಸಾಗುವುದು ಕಷ್ಟವಾಗುತ್ತದೆ. ಜೀವದ ಮನೆಗೆ ನೀನು ಹೋಗು, ಸಾವಿನ ಮನೆಗೆ ನಾನು ಹೋಗುತ್ತೇನೆ ಎನ್ನುವಂತೆ 'ನಾನೇ ಹೋಗುತೀನಿ ನೀನು ಹೋಗು ಮಾವ' ಎನ್ನುವಳು. ಅವಳು ಹೇಳುವ ಈ ಮಾತುಗಳು ಕೂಡ ಹೊನ್ನೇಗೌಡನ ಮೇಲೆ ಯಾವುದೇ ಪರಿಣಾಮಗಳನ್ನು ಬೀರುವುದಿಲ್ಲ. ಕೆರೆಯ ಏರಿಯ ಮೇಲೆ ಕುಳಿತುಕೊಂಡು ಅವಳು ಸಾಯುವುದನ್ನು ತಣ್ಣಗೆ ನೋಡುತ್ತಿರುತ್ತಾನೆ. ಅವಳು ಬಲಿಯಾದದ್ದನ್ನು ಸ್ಪಷ್ಟಪಡಿಸಿಕೊಂಡ ನಂತರ

ಏನವ್ವ ಹೊನ್ನವ್ವ
ನೀರಿನೊಳಗೆ ಹೋದೇವು

....

ಮಗನೆ ದೇವೇಂದ್ರನ ನೋಡಲಿಲ್ಲಾ ನನ ಸೊಸೆಯ
ಮಗನೇನೆ ಮಲ್ಲಣ್ಣ ಬರಲಿಲ್ಲ ಹೊನ್ನವ್ವ
ದೇವ್ರಾಗಿ ನೀನು ಹೋದೆವ್ವ ನೀನು

(ಪು. ೩೯)

ಎಂದು ಬೋರಾಡಿ ಅಳುವನು. ಅವಳು ಬಲಿಯಾದ ನಂತರ ಮೊಮ್ಮಗುವಿನ ಅನಾಥತೆಯನ್ನು, ಮಗನ ಒಂಟಿತನವನ್ನು ನೆನಪಿಸಿಕೊಂಡು ಕಣ್ಣೀರಿಡುವನು. ಕಾವ್ಯದಲ್ಲಿ ಬರುವ ಒಟ್ಟು ಸನ್ನಿವೇಶಗಳನ್ನು ಗಮನಿಸಿದಾಗ ಹೊನ್ನೇಗೌಡನಿಗೆ ಕಣ್ಣೀರು ಅಂತಃಕರಣ ಕಲಕಿ ಬಂದದ್ದಲ್ಲವೆನಿಸುತ್ತದೆ. ಕುಟುಂಬದ ವ್ಯಕ್ತಿಗಳು ತೀರಿಕೊಂಡಾಗ ಸಂಬಂಧಿಕರು ಕಣ್ಣೀರಿಡುವುದು ಸಾಂಪ್ರದಾಯಿಕ ನಡವಳಿಕೆ.

ಹೆಣದ ಮುಂದೆ ಕುಳಿತು ಬೋರಾಡಿ ಅತ್ತಷ್ಟು ಅದಕ್ಕೆ ಕಳೆ ಬರುತ್ತದೆ ಎಂದು ನಂಬಲಾಗಿದೆ. ಈ ಪ್ರಕ್ರಿಯೆಯನ್ನು 'ಹೆಣದ ಸಿಂಗಾರ' ಎಂದೇ ಕರೆಯುವರು. 'ಅತ್ತರೆ ಹೆಣ ಚಂದ, ನಕ್ಕರೆ ಮದವಿ ಚೆಂದ' ಎನ್ನುವ ಗಾದೆ ಮಾತೇ ಇದೆ. ಸತ್ತ ಘಳಿಗೆಯಲ್ಲಿ ಸಂಬಂಧಿಕರಾದವರು ಅಳದಿದ್ದರೆ, ಅವರ ಕುರಿತು ಸಮಾಜವು ಕೆಟ್ಟದಾಗಿ ಆಡಿಕೊಳ್ಳುತ್ತದೆ. ಸಮಾಜದ ಬಾಯಿಗೆ ಆಡಿಕೊಳ್ಳುವ ವಸ್ತುವಾಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ಕೆಲವರು ಅಳುವರು. ಶಿಷ್ಟಾಚಾರಕ್ಕೆ ಅತ್ತ ಹೊನ್ನೇಗೌಡನ ದುಃಖವನ್ನು ಸೊಸೆಯನ್ನು ಬಲಿಕೊಟ್ಟಿದ್ದಕ್ಕಾಗಿ ಅತ್ತನು ಎಂದು ಹೇಳಲಾಗುವುದಿಲ್ಲ. ಬಲಿಕೊಡುವ ಮುಂಚೆ ಅವಳ ಬದುಕಿನ ಕುರಿತು ಕಿಂಚಿತ್ತು ವಿಚಾರಿಸುವುದಿಲ್ಲ. ಅವಳು ಹಾಕುವ ಕಣ್ಣೀರು ಮತ್ತು ಜೀವ ಉಳಿಸಿಕೊಳ್ಳುವುದಕ್ಕಾಗಿ ಆಕೆ ಜೀವ ಕಳೆದುಕೊಳ್ಳುವವರೆಗೂ ದೈನಾಸದಿಂದ ಬೇಡಿಕೊಂಡ ಸನ್ನಿವೇಶಗಳು ಯಾವುವೂ ಮಾವನ ಕಣ್ಣಿಂದ ಒಂದು ಹನಿ ಕಣ್ಣೀರು ಜಿನುಗಿಸುವುದಿಲ್ಲ.

'ಮಗ ಸತ್ತರೆ ಮನೆ ಹಾಳು, ಸೊಸೆ ಸತ್ತರೆ ಸೋಬಾನ' ಎಂದು ಬಲಿಗೆ ಸಿದ್ಧತೆ ನಡೆಸಿದ ಹೊನ್ನೇಗೌಡನಂತಹ ಮಾವಂದಿರು ತಮ್ಮ ಸೊಸೆಯಂದಿರ ಮೇಲೆ ನಡೆಸಿದ ಭೀಕರ ದೌರ್ಜನ್ಯಗಳನ್ನು ಧಾರ್ಮಿಕ ಮುಸುಕಿನಲ್ಲಿ ಗೌರವಿಸಲಾಗುತ್ತಿದೆ.

ಅಣಜಿ ಹೊನ್ನಮ್ಮನಂಥ ಕಥನಗೀತೆಗಳಲ್ಲಿ ವ್ಯಕ್ತಗೊಂಡ ಮಾವಂದಿರ ವಿಕಾರತೆ ಹಾಗೂ ಕ್ರೂರತೆಗಳು ದಿಗಿಲು ಹುಟ್ಟಿಸುತ್ತವೆ. ಅತ್ತೆ ಸೊಸೆಯನ್ನು ಜೀತದಾಳಿನಂತೆ

ನಡೆಸಿಕೊಂಡ ಕಥೆಗಳಿವೆ. ಗಂಡ ಹೆಂಡಿರ ಸಂಬಂಧವನ್ನು ಒಡೆದು ಹಾಕಿದ ಉತ್ತರದೇವಿಯಂತಹ ಕಥೆಗಳು ಕಥನಗೀತೆಗಳು ಹೇರಳವಾಗಿವೆ. ಅದರಾಚೆ ಅತ್ತೆಯಾದವಳು ಸೊಸೆಯ ಮೇಲೆ ದೌರ್ಜನ್ಯವೆಸಗಲಾರಳು ಎನ್ನುವುದು ನನ್ನ ಊಹೆ.

ಘಾಟಿ ಸೊಸೆ ಕಥೆಯ ಮೂಲಕ ಅತ್ತೆಯರು, ಸೊಸೆಯಂದಿರ ಮೇಲೆ ನಡೆಸುವ ದೌರ್ಜನ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. 'ಘಾಟಿ ಸೊಸೆ' ಕಥೆಯಲ್ಲಿ ಸೊಸೆಯು ಅತ್ತೆಗೆ 'ನೀವು ನನ್ನನ್ನು ಸುಟ್ಟ ಮೇಲೆ ಯಮದೂತರು ನನ್ನನ್ನು ಯಮಲೋಕಕ್ಕೆ ಕರೆದೊಯ್ದರು... ಅವನು ನನ್ನನ್ನು ನೋಡಿದ ಕೂಡಲೆ ಇವಳನ್ನು ಹಿಂದಕ್ಕೆ ಕಳುಹಿಸಿ, ಇವಳ ಅತ್ತೆ ಕಡುಪಾಪಿ, ಅವಳನ್ನು ಇಲ್ಲಿಗೆ ಎಳೆದು ತನ್ನಿ. ಕಬ್ಬಿಣದ ಕಾಗೆ ಅವಳನ್ನು ಕುಕ್ಕಿಕುಕ್ಕಿ ಚಿಂದಿ ಚಿಂದಿ ಮಾಡಲಿ. ಅವಳನ್ನು ಕೊತಕೊತನೆ ಕುದಿಯುವ ಎಣ್ಣೆ ಕಡಾಯಿಯಲ್ಲಿ ಮುಳುಗಿಸಿ' ಎಂದು ಗುಡುಗಿದ. ನಾನು ಅವನ ಕಾಲಿಗೆ ಬಿದ್ದು ನನ್ನ ಅತ್ತೆಗೆ ಹೀಗೆ ಶಿಕ್ಷೆ ಕೊಡಬೇಡಿ. ನನಗೆ ನೀವು ಏನು ಬೇಕಾದರೂ ಶಿಕ್ಷೆ ಕೊಡಿ. ಅತ್ತೆ ನಿಜವಾಗಿಯೂ ಒಳ್ಳೆಯವಳು. ಅವಳನ್ನು ಬಿಟ್ಟುಬಿಡು' ಎಂದು ಬೇಡಿಕೊಂಡೆ. ಅವನು ಮುಗಳ್ನಕ್ಕು ನೀನೀಗ ಹೋಗಬಹುದು. ನಾನು ನೀನು ಹೇಳಿದಂತೆ ಮಾಡುತ್ತೇನೆ. ಆದರೆ ನಿನ್ನ ಅತ್ತೆ ಇನ್ನು ಮುಂದೆ ನಿನಗೇನಾದರೂ ಕಷ್ಟಕೊಟ್ಟರೆ ಅವಳನ್ನು ಎಳೆದು ತಂದು ಶಿಕ್ಷಿಸುತ್ತೇನೆ. ನಿನ್ನ ಅತ್ತೆ ಮಾಡುವುದೆಲ್ಲವನ್ನೂ ನನ್ನ ದೂತರು ನೋಡುತ್ತಿರುತ್ತಾರೆ ಎಂದು ಹೇಳಿದ. ಅತ್ತೆ ಗಾಬರಿಯಿಂದ ನಡುಗುತ್ತ ಸೊಸೆಯನ್ನು ತಬ್ಬಿಕೊಂಡಳು. ಇನ್ನು ಮೇಲೆ ನೀನು ಹೇಳಿದಂತೆ ಕೇಳುತ್ತೇನೆ ಮನ್ನಿಸು ಎಂದು ಕ್ಷಮೆ ಬೇಡಿದಳು. ಅವಳ ಅತ್ತೆ ಮತ್ತು ಗಂಡ, ಅವಳ ಇಷ್ಟಕ್ಕೆ ಅನುಸಾರವಾಗಿ ನಡೆದುಕೊಂಡರು' (ರಾಮಾನುಜನ್ ಎ.ಕೆ.ಸಂ ೨೦೦೦, ಪು. ೪೧)

ಹಿಗೆ ಜೀವ ವಿರೋಧಿಯಾದ ಪುರುಷನಿಷ್ಠ ಮೌಲ್ಯಗಳ ರಕ್ಷಕಿಯಾಗಿ ನಡೆದುಕೊಳ್ಳುವ ಅತ್ತೆ ಕೊನೆಯಲ್ಲಿ ಸೊಸೆ ಹೇಳಿದ ಜೀವ ಪರ ಮೌಲ್ಯಗಳ ಕಡೆಗೆ ವಾಲುವಂತೆ ಪ್ರತಿನಿಧೀಕರಿಸಲ್ಪಟ್ಟಿದ್ದಾಳೆ. ತನ್ನ ತಪ್ಪಿನ ಅರಿವಾದ ನಂತರ ತಾನು ನಂಬಿದ್ದ ಹಾಗೂ ಆರಾಧಿಸುತ್ತಿದ್ದ ಪುರುಷ ನಿಷ್ಠ ಮೌಲ್ಯಗಳನ್ನು ಮತ್ತೆಂದೂ ಆಕೆ ನೆನಪಿಸಿಕೊಳ್ಳುವುದಿಲ್ಲ. ಅತ್ತೆಯ ಎದುರು ಸುಲಭವಾಗಿ ಜಯ ಸಾಧಿಸಿ, ಅವಳನ್ನು ತನ್ನ ಆಶಯಕ್ಕೆ ಬಗ್ಗಿಸಿಕೊಳ್ಳುವ ಸೊಸೆಯಂದಿರ ಪ್ರತಿನಿಧೀಕರಣಗಳು ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ಆದರೆ ಸಮಾಜ ಕಲ್ಯಾಣದ ಹೆಸರಿನಲ್ಲಿ ಬಲಿಕೊಡಲು ನಿರ್ಧರಿಸಿದ ಮಾವಂದಿರ ಮನಃ ಪರಿವರ್ತನೆಗಾಗಿ ಸೊಸೆಯಂದಿರು ಎಷ್ಟೇ ಪ್ರಯತ್ನಿಸಿದರೂ ಅವರು ಸಫಲರಾಗುವುದೇ ಇಲ್ಲ. ಬಲಿಯ ಹೆಸರಿನಲ್ಲಿ ನೀಡುವ ಮರಣ ದಂಡನೆಯಿಂದ ಅವರಿಗೆ ತಪ್ಪಿಸಿಕೊಳ್ಳಲಾಗುವುದೇ ಇಲ್ಲ. ಸೊಸೆಯಂದಿರ ಅಳಲುಗಳು ಮಾವಂದಿರ ಮನವನ್ನು ಪರಿವರ್ತಿಸುವುದಿಲ್ಲ. ನಿರ್ಧಾರವನ್ನು ಸಡಿಲಗೊಳಿಸುವುದಿಲ್ಲ.

ಸೊಸೆಯನ್ನು ಕೊಂದಂಥ ಅತ್ತೆಯ ಪ್ರತಿನಿಧೀಕರಣಗಳು ಮಹಿಳಾ ಜನಪದ ಸಾಹಿತ್ಯದಲ್ಲಿ ದೊರೆಯುತ್ತವೆಯಾದರೂ, ಅವು ಬಹಳ ವಿರಳ. ಅತ್ತೆಯರೆ ನೇರವಾಗಿ ಸೊಸೆಯನ್ನು ಕೊಲೆ ಮಾಡಿರುವುದಿಲ್ಲ. ಅವರು ಮಗನ ಇಲ್ಲವೆ ಗಂಡನ ಇಲ್ಲವೆ ತಮ್ಮ ಹೆಣ್ಣುಮಕ್ಕಳ ಸಹಾಯವನ್ನು ತೆಗೆದುಕೊಂಡಿರುತ್ತಾರೆ. ಕುತೂಹಲದ ಸಂಗತಿಯೆಂದರೆ ಇಂತಹ ಅತ್ತೆಯರು ಸೊಸೆಯನ್ನು ತಾವು ಕೊಲೆಮಾಡಿದ್ದೇವೆ ಎಂದು ನಂಬಿರುತ್ತಾರೆ. ಆದರೆ ಸೊಸೆಯಂದಿರು ಇಂತಹ ಸಾವಿನಿಂದ ಅದ್ಯಾವ ಮಾಯದಿಂದಲೋ ತಪ್ಪಿಸಿಕೊಂಡು ಮತ್ತೆ ಗಂಡನ ಮನೆಗೆ ಬಂದು ಅತ್ತೆಯ ಮನ ಪರಿವರ್ತಿಸಿ ಜೊತೆಗೂಡಿ ಬಾಳುತ್ತಾರೆ. ಈ ಬಗೆಯ ಕಥೆಗಳು ಅತ್ತೆಯು ಸೊಸೆಯನ್ನು ಕೊಲೆ ಮಾಡಲು ಹವಣಿಸಿದ ಪ್ರಯತ್ನಗಳನ್ನು ಹೇಳುತ್ತವೆಯೇ ಹೊರತು, ನಿಜವಾಗಿಯೂ ಸೊಸೆಯ ಜೀವವನ್ನು ಹಿಚುಕಿ ಹಾಕಿದ ಅತ್ತೆಯನ್ನು ಪ್ರತಿನಿಧೀಕರಿಸುವುದಿಲ್ಲ.

ಒಡ್ಡರ ಬೋಯಿ, ಅಣಜಿ ಹೊನ್ನಮ್ಮನಂತಹ ಕಥನಗೀತೆಗಳಲ್ಲಿ ಅಭಿವ್ಯಕ್ತಿಗೊಂಡ ಮಾವಂದಿರ ಸ್ವರೂಪವು ಕೆಟ್ಟ ಅತ್ತೆಯರ ಸ್ವರೂಪಕ್ಕಿಂತಲೂ ಭಿನ್ನವಾಗಿದೆ. ಸೊಸೆಯಂದಿರು ತುಂಬು ಗರ್ಭಿಣಿಯಾಗಿರಬಹುದು, ಹಸುಕಂದಮ್ಮನಿಗೆ ಹಾಲುಣಿಸುವ ಬಾಣಂತಿಯರಾಗಿರಬಹುದು, ಇಲ್ಲವೆ ದಾಂಪತ್ಯ ಬದುಕಿನ ಕುರಿತು ಬಣ್ಣಬಣ್ಣದ ಕನಸುಗಳನ್ನು ಕಾಣುತ್ತಿರುವ ನವ ವಿವಾಹಿತೆಯರಾಗಿರಬಹುದು. ಈ ಯಾವ ಸಂಗತಿಗಳು ಸೊಸೆಯಂದಿರನ್ನು ಬಲಿಕೊಡಲು ತೀರ್ಮಾನಿಸಿದ ಮಾವನ ನಿರ್ಧಾರವನ್ನು ಸಡಿಲಗೊಳಿಸುವುದಿಲ್ಲ. ಇಂತಹ ಸೊಸೆಯಂದಿರನ್ನು ಬಲಿ ಕೊಡುವಾಗ ಮಾವಂದಿರು ಯಾವುದೇ ರೀತಿಯ ತಳಮಳ ತಲ್ಲಣಗಳನ್ನೆದುರಿಸುವುದಿಲ್ಲ. ಅವರ ಈ ಕ್ರೂರತೆಯು ಸಮಾಜ ಕಲ್ಯಾಣದ ಮುಸುಕಿನಲ್ಲಿ ಗೌರವಿಸಲ್ಪಡುತ್ತದೆ.

ಸೊಸೆಯಂದಿರನ್ನು ಕೊಲೆಮಾಡಲು ಯತ್ನಿಸಿದ ಅತ್ತೆಯರು ನಿಂದನೆಗೊಳಗಾದಂತೆ, ಸೊಸೆಯಂದಿರನ್ನು ಬಲಿ ನೀಡಿದ ಮಾವಂದಿರು ದೂಷಣೆಗೆ, ತಿರಸ್ಕಾರಕ್ಕೆ ಒಳಗಾಗುವುದಿಲ್ಲ. ಯಾಕೆಂದರೆ ಈ ಎರಡೂ ಪ್ರಕ್ರಿಯೆಗಳು ಭಿನ್ನ - ಭಿನ್ನ ನೆಲೆಗಳಲ್ಲಿ ಪ್ರತಿನಿಧೀಕರಿಸಲ್ಪಟ್ಟಿವೆ. ಸೊಸೆಯ ಮೇಲೆ ದೌರ್ಜನ್ಯ ಎಸಗುವ ಅತ್ತೆಯು ವಿಕಾರವಾಗಿ ಪ್ರತಿನಿಧೀಕರಿಸಲ್ಪಟ್ಟಿರುವಳು. ಸೊಸೆಯ ಮೇಲೆ ಹಲ್ಲೆ ನಡೆಸುವ ಮಾವನು ಧಾರ್ಮಿಕ ವ್ಯಕ್ತಿಯಾಗಿ, ಊರಿನ ನಾಯಕನಾಗಿ ಪ್ರತಿನಿಧೀಕರಿಸಲ್ಪಟ್ಟಿರುವನು.

ಮಗ ಎಷ್ಟೇ ದೊಡ್ಡವನಾದರೂ, ಚಿಕ್ಕವನಂತೆ ಸದಾ ತನ್ನ ಸುತ್ತಲೆ ಗಿರಿಕಿ ಹೊಡೆಯುತ್ತಿರಬೇಕೆಂದು ಬಹಳಷ್ಟು ತಾಯಿಯರು ಅಪೇಕ್ಷಿಸುತ್ತಾರೆ. ಇಂಥವರನ್ನು ಇಲ್ಲಿ 'ಪಾರಂಪರಿಕ ತಾಯಂದಿರು' ಎಂದು ಗುರುತಿಸಲಾಗಿದೆ. ಹೆಂಡತಿಯ ಜೊತೆ ಮಗನು ಆಪ್ತನಾಗುತ್ತ ಹೋದಂತೆಲ್ಲ ಪಾರಂಪರಿಕ ತಾಯಂದಿರು, ಸೊಸೆಯು ತಮ್ಮ ಮಗನನ್ನು ಕಿತ್ತುಕೊಳ್ಳುತ್ತಿದ್ದಾಳೆ ಎಂದು ಭಾವಿಸುವರು. ಅದಕ್ಕಾಗಿಯೇ 'ಸೊಸೆ ಬಂದು ಮಗನ ಕಸಗೊಂಡು ಬಾಳ್ವಾಗ ಮುಗಿಲಿಗೆ ಬಾಯಿ ಬಿಡುತಾಳ' ಎನ್ನುವಂತಹ ಪ್ರತಿನಿಧೀಕರಣಗಳು ಮಹಿಳಾ ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ಅತ್ತೆ ಸೊಸೆಯ ಮೇಲೆ, ಸೊಸೆ ಅತ್ತೆಯ ಮೇಲೆ ಪೈಪೋಟಿ ನಡೆಸುವುದು ಆರ್ಥಿಕವಾಗಿ ಅಭದ್ರತೆಯಿಂದಾಗಿ.

ಆರ್ಥಿಕ ಅಸುರಕ್ಷತೆಯಲ್ಲಿ ಹೊಯ್ದಾಡುವ ಅತ್ತೆಗಾಗಲಿ, ಸೊಸೆಗಾಗಲಿ ಕುಟುಂಬದ ಯಾವ ಆಸ್ತಿಯ ಮೇಲೂ ಅವರ ಹಕ್ಕಿರುವುದಿಲ್ಲ. ಆಸ್ತಿ ಹಕ್ಕಿನ ಒಡೆತನವಿಲ್ಲದ ಹಾಗೂ ಆರ್ಥಿಕ ಉತ್ಪಾದನೆಯಿಲ್ಲದ ಅತ್ತೆ-ಸೊಸೆಯರಿಗೆ ಕುಟುಂಬ ಸಂಬಂಧದಲ್ಲಿ ಯಾವ ಅಧಿಕಾರ ವಿಲ್ಲವಾದರೂ ಪರೋಕ್ಷವಾಗಿ ಅದನ್ನು ಚಲಾಯಿಸಲು ಇಷ್ಟಪಡುತ್ತಾರೆ. ಅತ್ತೆ-ಸೊಸೆಯರಲ್ಲಿಯ ಈ ಧೋರಣೆಗಳು ಅವರಲ್ಲಿ ಸ್ಪರ್ಧೆಯನ್ನು ಬೆಳೆಸುತ್ತವೆ. ಸೊಸೆಯನ್ನು 'ಅನ್ಯ'ವಾಗಿಯೇ ಪರಿಗಣಿಸುವ ಅತ್ತೆಯು ಸೊಸೆಯಾಗಿದ್ದಾಗ ತಾನು ಅನುಭವಿಸಿದ ಸಂಕಷ್ಟಗಳನ್ನು ಹಾಗೂ ಹಿಂಸೆಗಳನ್ನು ತನ್ನ ಸೊಸೆಗೆ ವರ್ಗಾಯಿಸುತ್ತಾಳೆ.

ಗಂಡು ಮಕ್ಕಳು ವಯೋಮಾನಕ್ಕೆ ಬರುವವರೆಗೆ ಗಂಡನನ್ನು ಅವಲಂಬಿಸಿದ ಹೆಣ್ಣು ಗಂಡನ ದುಡಿಮೆ ನಿಂತ ತಕ್ಷಣ ಮಗನ ಕಡೆಗೆ ವಾಲುತ್ತಾಳೆ. ಅವಳಿಗೆ ಸಂಪಾದಿಸುವ ಮಗನು ಹೆಚ್ಚು ಪ್ರಬಲನಾಗಿ ಕಾಣುತ್ತಾನೆ. ಹೀಗಾಗಿ ದುಡಿಯುವ ಮಗನನ್ನು ಹೆಚ್ಚು ಅವಲಂಬಿಸಿರುತ್ತಾಳೆ. ಒಂದೆಡೆ ಸ್ಥಗಿತವಾದ ಗಂಡನ ಸಂಪಾದನೆಯು ಅವಳಲ್ಲಿ ಅಭದ್ರತೆಯನ್ನು ಉಂಟು ಮಾಡಿದರೆ, ಮತ್ತೊಂದೆಡೆ ಆ ಮನೆಗೆ ದೀರ್ಘಾವಧಿಯವರೆಗೆ ತಾನು ಸಲ್ಲಿಸಿದ ಸೇವೆಯಿಂದಾಗಿ ಅದರ ಮೇಲೆ ಯಜಮಾನಿಕೆಯ ಮನೋಭಾವವು ಬೆಳೆದು ಬಂದಿರುತ್ತದೆ. ತನ್ನಿಂದಾಗಿಯೇ ಮನೆತನ ಉದ್ಧಾರವಾಯಿತು, ತಾನೇ ಮನೆತನವನ್ನು ಮೇಲಕ್ಕೆ ತಂದೆ ಎನ್ನುವ ಅವಳ ಮನೋಭಾವವು, ಆ ಮನೆತನಕ್ಕೆ ಹೊಸದಾಗಿ ಬಂದ ಸೊಸೆಯ ಮೇಲೆ ಅಧಿಕಾರ ಚಲಾಯಿಸಲು ಕಾರಣವಾಗುತ್ತದೆ.

ಬಹಳ ದಿನಗಳ ಪರಿಶ್ರಮದಿಂದ ಪಡೆದುಕೊಂಡ ಯಜಮಾನಿಕೆಯ ಅಭಾಧಿತವಾಗಿ ಸಾಗಲು ಸೊಸೆ ಅಡ್ಡಿಯಾಗಿ ಕಾಣುತ್ತಾಳೆ. ಅದೇ ತಾನೆ ಮನೆ ಪ್ರವೇಶಿಸಿದ ಸೊಸೆಯು ತನ್ನ ಅಧಿಕಾರವನ್ನು ಆಕ್ರಮಿಸಿಕೊಂಡು ಬಿಡುತ್ತಾಳೋ ಏನೋ ಎನ್ನುವ ಆತಂಕವನ್ನು ಎದುರಿಸಲು ಪ್ರಾರಂಭಿಸುತ್ತಾಳೆ. ಮನೆಗೆ ಆಧಾರವಾದ ಮಗನು ಹೆಂಡತಿಯತ್ತ ವಾಲಿದರೆ ತನ್ನ ಗತಿ ಏನು ಎಂದು ಆಲೋಚಿಸುತ್ತಾಳೆ. ಇಳಿ ವಯಸ್ಸಿನಲ್ಲಿಯೂ ಆರ್ಥಿಕ ಪ್ರಾಬಲ್ಯವನ್ನು ಗಂಡನು ಕಾಯ್ದುಕೊಂಡಿದ್ದರೆ ಅಂಥವಳು ಮಗ ಹಾಗೂ ಸೊಸೆ ಇವರಿಬ್ಬರ ಮೇಲೆ ಸರ್ವಾಧಿಕಾರವನ್ನು ಚಲಾಯಿಸಲು ಯತ್ನಿಸುತ್ತಾಳೆ. ಅವಳಿಗೆ 'ಸೊಸೆ' ಆತಂಕವಾಗಿ ಕಾಡುವುದಿಲ್ಲ.

ಆರ್ಥಿಕ ಅಸುರಕ್ಷತೆಯಲ್ಲಿ ಹೊಯ್ದಾಡುವ ಅತ್ತೆಗಾಗಲಿ, ಸೊಸೆಗಾಗಲಿ ಕುಟುಂಬದ ಯಾವ ಆಸ್ತಿಯ ಮೇಲೂ ಅವರ ಹಕ್ಕಿರುವುದಿಲ್ಲ. ಆಸ್ತಿ ಹಕ್ಕಿನ ಒಡೆತನವಿಲ್ಲದ ಹಾಗೂ ಆರ್ಥಿಕ ಉತ್ಪಾದನೆಯಿಲ್ಲದ ಅತ್ತೆ-ಸೊಸೆಯರಿಗೆ ಕುಟುಂಬ ಸಂಬಂಧದಲ್ಲಿ ಯಾವ ಅಧಿಕಾರವಿಲ್ಲವಾದರೂ ಪರೋಕ್ಷವಾಗಿ ಅದನ್ನು ಚಲಾಯಿಸಲು ಇಷ್ಟಪಡುತ್ತಾರೆ. ಅತ್ತೆ-ಸೊಸೆಯರಲ್ಲಿಯ ಈ ಧೋರಣೆಗಳು ಅವರಲ್ಲಿ ಸ್ಪರ್ಧೆಯನ್ನು ಬೆಳೆಸುತ್ತವೆ. ಸೊಸೆಯನ್ನು 'ಅನ್ಯ'ವಾಗಿಯೇ ಪರಿಗಣಿಸುವ ಅತ್ತೆಯು ಸೊಸೆಯಾಗಿದ್ದಾಗ ತಾನು ಅನುಭವಿಸಿದ ಸಂಕಷ್ಟಗಳನ್ನು ಹಾಗೂ ಹಿಂಸೆಗಳನ್ನು ತನ್ನ ಸೊಸೆಗೆ ವರ್ಗಾಯಿಸುತ್ತಾಳೆ.

ಅತ್ತೆಯ ಸೇಡಿನಲ್ಲಿ ಪುರುಷಶಾಹಿ ಪರಂಪರೆಯ ಸಾತತ್ಯವನ್ನು ರಕ್ಷಿಸುವ ಗುಣವೇ ಪ್ರಧಾನವಾಗಿ ಕಂಡುಬರುತ್ತದೆ. ಹೆಣ್ಣಿನ ಕೆಲಸಗಳೆಂದೇ ಗುರುತಿಸಲ್ಪಟ್ಟ ಮನೆಗೆಲಸಗಳನ್ನು ಹೊಲಗೆಲಸಗಳನ್ನು ತನ್ನ ಹೆಣ್ಣುಮಕ್ಕಳಿಂದ ಹಾಗೂ ಸೊಸೆಯಂದಿರಿಂದ ಮಾಡಿಸುವುದನ್ನು ಮತ್ತು ಪಿತೃ

[illegible] ವ್ಯವಸ್ಥೆಗೆ ವಿಧೇಯವಾಗಿರುವಂತೆ ತರಬೇತಿ ನೀಡುವುದನ್ನು ಅತ್ತೆಯಾದವಳು, ತಾಯಿಯಾದವಳು ಮಾಡುತ್ತಿರುತ್ತಾಳೆ. ಜನಪದ ಸಾಹಿತ್ಯವು ಸೊಸೆಯ ಮಾನಸಿಕ ಸ್ಥಿತಿಗಳನ್ನು ಹಾಗೂ ಕೌಟುಂಬಿಕ ಸ್ಥಾನಮಾನಗಳನ್ನು ಯಾಕೆ ಹೀಗೆ ಪ್ರತಿನಿಧೀಕರಿಸಿದೆ ಎಂಬುದನ್ನು ವಿಶ್ಲೇಷಿಸುವ ಜರೂರಿದೆ.

ವಿವಾಹಕ್ಕೊಳಗಾದ ಹೆಣ್ಣು ತನ್ನ ಗಂಡನ ಆಶ್ರಯದಲ್ಲಿರುವುದನ್ನೇ ನ್ಯಾಯೋಚಿತವೆಂದು ಭಾವಿಸಲಾಗಿದೆ. ಹೀಗಾಗಿ ಅವಳು ಗಂಡನ ಒಲವನ್ನು ಹಾಗೂ ನಂಬುಗೆಯನ್ನು ಸಂಪಾದಿಸಲು ಅವಿರತವಾಗಿ ಪರಿಶ್ರಮಿಸುತ್ತಾಳೆ. ಸೊಸೆಯಾದವಳು ತನ್ನ ಪತ್ನಿತ್ವದ ಮೂಲಕ ಗಂಡನನ್ನು ವಿಶ್ವಾಸಕ್ಕೆ ತಂದುಕೊಳ್ಳಲು ಪ್ರಯತ್ನಿಸಿದರೆ, ಅತ್ತೆಯಾದವಳು ತನ್ನ ಮಾತೃತ್ವದ ಹೆಚ್ಚಳಿಕೆಯಿಂದ ಮಗನನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಾಳೆ. ಅತ್ತೆ-ಸೊಸೆಯರ ಮಧ್ಯೆ ನಡೆಯುವ ಈ ಹೊಯ್ಕಯ್ ಹಣಾಹಣಿಗಳು ಪಿತೃಪ್ರಧಾನ ಮೌಲ್ಯಗಳು ಹೆಣ್ಣಿಗೆ ಸೃಷ್ಟಿಸಿದ ಆರ್ಥಿಕ ಅಭದ್ರತೆ ಹಾಗೂ ಸಾಂಸ್ಕೃತಿಕ ಕೀಳರಿಮೆಗಳೇ ಪ್ರಧಾನ ಕಾರಣಗಳು. ವಿವಾಹದ

ಪಿತೃಪ್ರಧಾನ ಸಮಾಜವು ಹೆಣ್ಣನ್ನು ಗಂಡಿನ ಪ್ರತಿಸ್ಪರ್ಧಿಯಾಗಿ ಪರಿಗಣಿಸುವುದಿಲ್ಲ. ಕುಟುಂಬದ ಆಗು ಹೋಗುಗಳ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳುವನು ಅವನೇ ಆಗಿರುತ್ತಾನೆ. ತವರಿನ ಮೇಲಿನ ಹಕ್ಕನ್ನು ಕಳೆದುಕೊಂಡು ಗಂಡನ ಮನೆಯಲ್ಲಿ ಅತಂತ್ರವಾಗಿ ಹಾಗೂ ಅತ್ಯಂತ ಕುಬ್ಜವಾಗಿ ಬದುಕುತ್ತಿರುವ ಚಿಕ್ಕ ವಯಸ್ಸಿನ ಸೊಸೆಗೆ ಕೌಟುಂಬಿಕ ಅಧಿಕಾರದ ಬೃಹತ್ ಸ್ವರೂಪಿಯಾಗಿ ಗುರುತಿಸಲ್ಪಡುವ ಯಜಮಾನನು ಹೇಗೆ ಪ್ರತಿಸ್ಪರ್ಧಿಯಾಗುವನು? ಇಂತಹ ಅಸಾಧ್ಯವೆನಿಸಿದ ವಸ್ತು ವಿಷಯಕ್ಕಾಗಿ ತಡಕಾಡುವುದು ಮೂರ್ಖತನವಾಗುತ್ತದೆ.

ಬಳಿಕವೂ ಗಂಡು ಸ್ವಕುಟುಂಬದಲ್ಲಿ ಉಳಿಯುತ್ತಾನೆ. ಆರ್ಥಿಕ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಗಂಡು ಸ್ವಕುಟುಂಬದಲ್ಲಿಯೇ ಇರುವುದರಿಂದ ಅವನು ತನ್ನ ಹೆಂಡತಿಯಂತೆ ಸಮಸ್ಯೆಗಳನ್ನು ಎದುರಿಸಬೇಕಾಗಿ ಬರುವುದಿಲ್ಲ.

ಗಂಡನ ಮನೆಯವರಿಗೆ ಸೊಸೆಯು ಅಪರಿಚಿತಳಾಗಿರುವಂತೆ ಸೊಸೆಗೆ ಗಂಡ, ಮತ್ತು ಆತನ ಕುಟುಂಬದವರು ಅಪರಿಚಿತರಾಗಿರುತ್ತಾರೆ. ಹೀಗಾಗಿ ಒಬ್ಬರನ್ನೊಬ್ಬರು ಪರಸ್ಪರ ಸಂಶಯಿಸುವುದು, ಅವಿಶ್ವಾಸದಿಂದ ನೋಡುವುದು ಇದು ಅತ್ತೆ-ಸೊಸೆಯರ, ಅತ್ತಿಗೆ-ನಾದುನಿಯರ ಮನಸ್ತಾಪಕ್ಕೆ ಕಾರಣವಾಗುತ್ತದೆ. ಆವಾಗ ಒಬ್ಬರಿಗೊಬ್ಬರು ದೂಷಿಸಲು ಪ್ರಾರಂಭಿಸುತ್ತಾರೆ. ಅತ್ತೆ-ಸೊಸೆಯಂದಿರನ್ನು ಪರಸ್ಪರ ವಿರೋಧಿಗಳಂತೆ ಪ್ರತಿನಿಧೀಕರಿಸುವ ಮಹಿಳಾ ಜನಪದ ಸಾಹಿತ್ಯವು ಹೇರಳವಾಗಿ ಸಿಗುವಂತೆ, ಸೊಸೆ-ಮಾವಂದಿರನ್ನು ವಿರೋಧಿಗಳನ್ನಾಗಿ ಪ್ರತಿನಿಧೀಕರಿಸಿದ ಉದಾಹರಣೆಗಳು ಸಿಗುವುದು ತೀರ ಅಪರೂಪ.

ಪಿತೃಪ್ರಧಾನ ಸಮಾಜವು ಹೆಣ್ಣನ್ನು ಗಂಡಿನ ಪ್ರತಿಸ್ಪರ್ಧಿಯಾಗಿ ಪರಿಗಣಿಸುವುದಿಲ್ಲ. ಗಂಡು ಶ್ರೇಷ್ಠವಾಗಿದ್ದುದರಿಂದ ಹೆಣ್ಣು ಕನಿಷ್ಠವಾಗಿದ್ದುದರಿಂದ ಇವರಿಬ್ಬರ ಮಧ್ಯೆ ಪರಸ್ಪರ ಸ್ಪರ್ಧೆ ಏರ್ಪಡುವುದು ಹೇಗೆ ಸಾಧ್ಯ? ಕುಟುಂಬದಲ್ಲಿ ಯಜಮಾನನು ಬಹಳ ಪ್ರಬಲನಾಗಿರುತ್ತಾನೆ. ಕುಟುಂಬದ ಆಗು ಹೋಗುಗಳ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳುವನು ಅವನೇ ಆಗಿರುತ್ತಾನೆ.

ತವರಿನ ಮೇಲಿನ ಹಕ್ಕನ್ನು ಕಳೆದುಕೊಂಡು ಗಂಡನ ಮನೆಯಲ್ಲಿ ಅತಂತ್ರವಾಗಿ ಹಾಗೂ ಅತ್ಯಂತ ಕುಬ್ಜವಾಗಿ ಬದುಕುತ್ತಿರುವ ಚಿಕ್ಕ ವಯಸ್ಸಿನ ಸೊಸೆಗೆ ಕೌಟುಂಬಿಕ ಅಧಿಕಾರದ ಬೃಹತ್ ಸ್ವರೂಪಿಯಾಗಿ ಗುರುತಿಸಲ್ಪಡುವ ಯಜಮಾನನು ಹೇಗೆ ಪ್ರತಿಸ್ಪರ್ಧಿಯಾಗುವನು? ಇಂತಹ ಅಸಾಧ್ಯವೆನಿಸಿದ ವಸ್ತು ವಿಷಯಕ್ಕಾಗಿ ತಡಕಾಡುವುದು ಮೂರ್ಖತನವಾಗುತ್ತದೆ.

ಮತ್ತೊಂದು ಗಮನಿಸಬೇಕಾದ ಸಂಗತಿಯೆಂದರೆ ಅತ್ತೆಯಾಗಲಿ, ಸೊಸೆಯಾಗಲಿ ಯಾವುದನ್ನು 'ಅಧಿಕಾರ', 'ಯಜಮಾನಿಕೆ' ಎಂದು ಪರಿಭಾವಿಸಿ ಕೊಂಡಿರುತ್ತಾರೋ, ಮೂಲಭೂತವಾಗಿ ಅದು ಪುರುಷಾಧಿಕಾರ ನಿರ್ವಚಿಸಿದ ಅಧಿಕಾರದ 'ಯಜಮಾನಿಕೆ'ಯಾಗಿರುವುದಿಲ್ಲ. ಇವರಿಬ್ಬರೂ 'ಯಜಮಾನಿಕೆ' ಎಂದು ಭಾವಿಸಿಕೊಂಡಿರುವುದು Super wiser ಕೆಲಸವಾಗಿರುತ್ತದೆ. Super wiser ಮೇಲೆ ನಿಗಾ ಇಡಲು, ಮಾರ್ಗದರ್ಶನ ಮಾಡಲು ಹಾಗೂ ಅವರ ಕೆಲಸಗಳನ್ನು ನಿಯಂತ್ರಣದಲ್ಲಿಡಲು ಕುಟುಂಬದ ಯಜಮಾನನಿರುತ್ತಾನೆ. ಅವನಿಗಿರುವ ವಿಶೇಷ ಅಧಿಕಾರ, ಹಕ್ಕುಗಳು ಅತ್ತೆ - ಸೊಸೆಯರಿಗೆ ಇರುವುದಿಲ್ಲ.

ಅತ್ತೆ - ಸೊಸೆಯರು ಅನ್ಯೋನ್ಯವಾಗಿರುವ ಪ್ರತಿನಿಧೀಕರಣಗಳು ಮಹಿಳಾ ಜನಪದ ಸಾಹಿತ್ಯದಲ್ಲಿ ಸಿಗುತ್ತವೆ. ಆದರೂ ಅವುಗಳ ಸಂಖ್ಯೆ ಬಹಳ ಕಡಿಮೆ. ಅತ್ತೆಯಾದವಳು 'ತನ್ನ ಮನೆ' ಎಂದು ಹಕ್ಕು ಚಲಾಯಿಸಲು ಪ್ರಯತ್ನಿಸಿದರೆ, ಸೊಸೆಯಾದವಳು ತನಗೂ ಈ ಮನೆಯಲ್ಲಿ ಹಕ್ಕಿದೆ ಎಂದು ನಿರೂಪಿಸಲು ಪ್ರಯತ್ನಿಸುತ್ತಾಳೆ. ಈ ಕಾರಣಕ್ಕಾಗಿಯೇ ಅತ್ತೆ-ಸೊಸೆಯರ ಮಧ್ಯದಲ್ಲಿ ಸದಾ ಕಲಹವಿರುತ್ತದೆ. ವ್ಯಂಗ್ಯವೆಂದರೆ ಅತ್ತೆಗಾಗಲಿ, ಸೊಸೆಗಾಗಲಿ ಕುಟುಂಬದಲ್ಲಿ ಯಾವುದೇ ಹಕ್ಕಿರುವುದಿಲ್ಲ. ಆದರೆ 'ಹುಸಿ ಹಕ್ಕಿಗಾಗಿ' ಅವರ ಮಧ್ಯೆ ಸದಾ ಪೈಪೋಟಿ ನಡೆದೇ ಇರುತ್ತದೆ.

ಉಲ್ಲೇಖಗಳು

೧. ಕರಾಕೃ (ಸಂ) ೧೯೬೪, ಅಣಜಿ ಹೊನ್ನಮ್ಮ ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು.

೨. ಕರಾಕೃ (ಸಂ) ೧೯೬೨, ಜಾನಪದ ಕಥನ ಗೀತೆಗಳು, ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು

೩. ಉದ್ಧೃತ : ದೇವೇಂದ್ರಕುಮಾರ್ ಹಕಾರಿ. ೧೯೮೫, ಜಾನಪದ : ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ಪರಮಶಿವಯ್ಯ ಜೀ.ಶಂ. (ಸಂ) ೧೯೯೬, ಜನಪದ ಖಂಡ ಕಾವ್ಯ, ಚೇತನ ಬುಕ್ ಹೌಸ್, ಮೈಸೂರು.

೫. ರಾಮಾನುಜನ್ ಎ. ಕೆ. (ಸಂ) ೨೦೦೦, ಭಾರತೀಯ ಜನಪದ ಕಥೆಗಳು ಮಹಾಬಲೇಶ್ವರರಾವ್ (ಅನು) ನ್ಯಾಷಿನಲ್ ಬುಕ್ ಟ್ರಸ್ಟ್, ದೆಹಲಿ.

೬. ವಿಜಯಾ ದಬ್ಬೆ ೧೯೯೭ ನಾರಿ : ದಾರಿ - ದಿಗಂತ ರಚನಾ ಪ್ರಕಾಶನ, ಮೈಸೂರು. □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ನಾಗರಿಕತೆಯ ಬೇರು ಹುಡುಕುತ್ತಾ...

ಪುಸ್ತಕ ಅವಲೋಕನ

'ರೂಟ್ಸ್' ಕೃತಿಯನ್ನು ಜಗತ್ತಿಗೆ ನೀಡಿದ ಅಲೆಕ್ಸ್ ಹೇಲಿ ಈ ಅದ್ಭುತ ಕಥನದ ಇತ್ತೀಚಿನ ಒಂದು ಕೊಂಡಿಯಾದುದರಿಂದ ಈ ಕಥನ ಒಂದು ವಿಶೇಷ ಸಾಂಸ್ಕೃತಿಕ ಕಥನವಾಗಿ ಬೆಳೆದು ನಿಂತಿದೆ. ಹೇಲಿ ಈ ಕಥೆಯನ್ನು ಬರೆಯಲು ೧೨ ವರ್ಷಗಳ ಕಾಲ ಮೂರು ಖಂಡಗಳಲ್ಲಿ ೫ ಲಕ್ಷ ಕಿ.ಮೀ. ದೂರದ ದಾರಿ ಸವೆಸಿ ೫೦ಕ್ಕಿಂತ ಹೆಚ್ಚು ಗ್ರಂಥಾಲಯಗಳ ದಾಖಲೆಗಳನ್ನು ತಿರಿವಿ ಹಾಕಿದ್ದಾರೆ. ಅನೇಕ ಪ್ರಾಚೀನ ಪತ್ರ ಭಂಡಾರಗಳನ್ನು, ಪುರಾತನ ವಸ್ತು ಸಂಗ್ರಹಾಲಯಗಳನ್ನು ಪರೀಕ್ಷಿಸಿದ್ದಾರೆ. 'ರೂಟ್ಸ್' ಕೃತಿ ಒಂದು ಸತ್ಯ ಕಥೆ. ಇದು ಪ್ರಪಂಚದ ಇತಿಹಾಸವು ಹೌದು.

○ ಎಂ. ವೆಂಕಟಸ್ವಾಮಿ

ಭೂಮಿ, ವಿಶ್ವದ ಜೊತೆಗೆ ಸಾವಿರಾರು ಕಿ.ಮೀ.ಗಳ ವೇಗದಲ್ಲಿ ಸಾಗುತ್ತ ತನ್ನ ಸುತ್ತಲು ತಾನೇ ಗಿರಗಿರ ತಿರುಗುತ್ತಿದೆ. ಪ್ರಸ್ತುತ ಭೂಮಿಯ ಮೇಲಿರುವ ಭೂಖಂಡಗಳು (ಫಲಕಗಳು) ಒಂದು ಕಾಲದಲ್ಲಿ ಮರಿ ಕೋಳಿಗಳಂತೆ ದಕ್ಷಿಣ ಧ್ರುವದ ಅಂಟಾರ್ಟಿಕಾದಲ್ಲಿ ಅಡಗಿ ಕುಳಿತುಕೊಂಡಿದ್ದವು. ಭೂಮಿಯ ಮೇಲೆ ಮತ್ತು ಒಳಗೆ ನಡೆಯುವ ಪ್ರಕ್ರಿಯೆಗಳ ಜೊತೆಗೆ ಅಯಸ್ಕಾಂತದ ಆಕರ್ಷಣೆಗೆ ಒಳಗಾದ ಫಲಕಗಳೆಲ್ಲ ಉತ್ತರದ ಕಡೆಗೆ ಸಾಗುತ್ತಿವೆ.



ತಲೆಮಾರು
ಲೇ. ಅಲೆಕ್ಸ್ ಹೇಲಿ
ಅನು : ಡಾ|| ಬಂಜಗೆರೆ ಜಯಪ್ರಕಾಶ
ಪ್ರಕಾಶನ : ಆನಂದಕಂದ ಗ್ರಂಥಮಾಲೆ,
ಮಲ್ಲಾಡಿ ಹಳ್ಳಿ – ೫೭೭ ೫೫೧
ಪುಟ : ೨೭೬, ಬೆಲೆ : ರೂ. ೧೫೦/-

ಈ ನಡುವೆ ಆಫ್ರಿಕಾ ಮತ್ತು ಇಂಡಿಯಾ ಫಲಕಗಳು ಉತ್ತರ-ಪೂರ್ವಕ್ಕೆ ಸಾಗುತ್ತಲೆ ಸೀಳಿಕೊಂಡು ಬೇರ್ಪಟ್ಟವು. ಇವೆರಡನ್ನು ಅಕ್ಕಪಕ್ಕದಲ್ಲಿಟ್ಟು ನೋಡಿದರೆ ಉದ್ದಕ್ಕೂ ಹರಿದಿರುವ ಬಣ್ಣದ ಕಸೂತಿಯಾಕಿರುವ ಬಟ್ಟೆಯಂತೆ ಕಾಣಿಸುತ್ತದೆ. ಜೊತೆಗೆ ಅನೇಕ ರೀತಿಯ ಸಾಮ್ಯತೆಗಳು ಕಾಣಿಸುತ್ತವೆ. ಅದರಲ್ಲೂ ವಿಶೇಷವಾಗಿ ಜೀವವಿಕಾಸಕ್ಕೆ ಸಂಬಂಧಪಟ್ಟ ಎಲ್ಲಾ ರೀತಿಯ ಪ್ರಾಣಿ ಮತ್ತು ಸಸ್ಯ ಸಂಕುಲದ ಪಳೆಯುಳಿಕೆಗಳು ದೊರಕಿವೆ. ಹಾಗೆ ಬೆಟ್ಟಗುಡ್ಡಗಳ ಬಾಹ್ಯರೂಪವು ಹೊಂದಿಕೊಳ್ಳುತ್ತದೆ.

ಇಂಡಿಯಾ ಮೂಲದ ಅಸ್ಪೃಶ್ಯರು ಮತ್ತು ಆಫ್ರಿಕಾದ ನೀಗ್ರೋಗಳ ನಡುವೆ ಹಲವು ಸಾಮ್ಯತೆಗಳು ಇರುವುದನ್ನು ಇಲ್ಲಿ ಗಮನಿಸಬಹುದು. ಆಫ್ರಿಕಾದಲ್ಲಿ ವರ್ಣಭೇದವಿದ್ದರೆ ಇಂಡಿಯಾದಲ್ಲಿ ಜಾತಿ, ಅಸ್ಪೃಶ್ಯತೆಗಳೆಂಬ ಭೂತಗಳಿವೆ. ಬಣ್ಣದಲ್ಲಿ ಇಬ್ಬರೂ ಕಪ್ಪು, ಆಫ್ರಿಕಾದ ಮೂಲ ಜನರು ಮೊದಲ ಬಾರಿಗೆ ನೀರಿನ ಮೂಲಕ ದಕ್ಷಿಣ ಭಾರತ ತಲುಪಿದರು, ಎನ್ನುವ ಸಂಕೇತಗಳನ್ನು ಮಾನವ ಶಾಸ್ತ್ರಜ್ಞರು ಕೈಬೆರಳು ಮಾಡಿ ತೋರಿಸುತ್ತಾರೆ.

ಭೂಮಿಯ ಮೇಲೆ ಮೊದಲಿಗೆ ಆದಿಮಾನವ ಕಾಣಿಸಿಕೊಂಡ ಪ್ರದೇಶಗಳಲ್ಲಿ ಆಫ್ರಿಕಾ ಖಂಡ ಮುಖ್ಯ. ಇನ್ನು ಭರತ ಖಂಡದಲ್ಲಿ ದ್ರಾವಿಡ ಜನಾಂಗಗಳು ಎಂದು ಕರೆಯುವ ಕಪ್ಪು ಮೈಬಣ್ಣದ ಮೂಲಸ್ಥರು ಆಫ್ರಿಕಾದ ನೀಗ್ರೋ ಜನಾಂಗಗಳು ಎನ್ನುವುದನ್ನು ಸಾಕಷ್ಟು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಆರ್ಯರು ಭರತ ಖಂಡವನ್ನು ಪ್ರವೇಶಿಸುವುದಕ್ಕಿಂತ ಮುಂಚೆಯೇ ಭರತ ಖಂಡ ಎಲ್ಲಾ ರೀತಿಯಲ್ಲೂ ನಾಗರಿಕತೆಯ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು ಎನ್ನುವುದಕ್ಕೆ ಹರಪ್ಪ ಮಹೆಂಜೋದಾರೊ ನಾಗರಿಕ ತೊಟ್ಟಿಲುಗಳು ನಮ್ಮ ಮುಂದೆ ಸಾಕ್ಷಿಯಾಗಿ ನಿಂತಿವೆ.

ಈ ನೆಲದ ಮಹಾಕಾವ್ಯಗಳೆಂದು ಹೇಳುವ ರಾಮಾಯಣ, ಮಹಾಭಾರತ ನಡೆದ ಕಾಲದಲ್ಲಿ, ಬೌದ್ಧ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಮತ್ತು ಕ್ರೈಸ್ತಯುಗದಲ್ಲಿ ಭರತ ಖಂಡ ಬೌದ್ಧಿಕವಾಗಿ ಮತ್ತು ವೈಜ್ಞಾನಿಕವಾಗಿ ಅಪಾರವಾಗಿ ಬೆಳೆದುನಿಂತಿತ್ತು. ಭರತ ಖಂಡದ ಜೊತೆಗೆ ಪ್ರಪಂಚದ ಇತರ ನಾಗರಿಕ ತೊಟ್ಟಿಲುಗಳು ಸಂಬಂಧ ಹೊಂದಿದ್ದ ಪುರಾವೆಗಳಿವೆ. ಭರತ ಖಂಡದಿಂದ ಚಿನ್ನ ಬೆಳ್ಳಿ ವಜ್ರ ವೈಢೂರ್ಯ, ಮಸಾಲೆ ಪದಾರ್ಥಗಳು, ಆನೆದಂತ, ನವಿಲುಗಳನ್ನು ರಫ್ತು ಮಾಡುತ್ತಿದ್ದ ವಿಷಯ ಮತ್ತು ಪ್ರಪಂಚದ ಇತರ ಭಾಗಗಳಿಂದ ಭರತ ಖಂಡಕ್ಕೆ ಆಮದಾಗುತ್ತಿದ್ದ ವಸ್ತುಗಳ ಬಗ್ಗೆ ಚರಿತ್ರೆಯಲ್ಲಿ ಉಲ್ಲೇಖವಾಗಿದೆ.

ದಕ್ಷಿಣ-ಮಧ್ಯ ಏಷಿಯಾ ಪ್ರದೇಶಗಳಿಂದ ಹಿಮಾಲಯ ಮೂಲಕ ಸಿಂಧೂ ಕಣಿವೆಯ ಕಡೆ ಆಗಮಿಸಿದ ಆರ್ಯ ಮತ್ತು ಸ್ಥಳೀಯ ದ್ರಾವಿಡ ಜನಾಂಗಗಳ ನಡುವೆ ಘರ್ಷಣೆಗಳು ಪ್ರಾರಂಭಗೊಂಡವು. ಈ ಘರ್ಷಣೆಗಳು ನೂರಾರು ವರ್ಷಗಳು ನಡೆದ ನಂತರ ಸ್ಥಳೀಯರಾದ ದ್ರಾವಿಡರು, ಆರ್ಯ ಜನಾಂಗಕ್ಕೆ ಸೋತುಹೋದರು. ಇಲ್ಲಿಂದ ಆರ್ಯರು, ದ್ರಾವಿಡ ಜನಾಂಗಗಳನ್ನು ಎಲ್ಲಾ ರೀತಿಯಲ್ಲೂ ವಂಚನೆಗೆ ಒಳಪಡಿಸಿದರು. ದ್ರಾವಿಡ ಮೂಲ ಕಥೆಗಳಾದ ರಾಮಾಯಣ, ಮಹಾಭಾರತಗಳನ್ನು ಅನೇಕ ರೀತಿಯಲ್ಲಿ ತಿರುಚಿ ದ್ರಾವಿಡ ನಾಯಕರನ್ನು ಖಳನಾಯಕರನ್ನಾಗಿಸಿ ಇಲ್ಲಿನ ಮಾತ್ರ ಪ್ರಧಾನ ದೇವತೆಗಳನ್ನು ಅವರ ತೊತ್ತುಗಳಂತೆ ಹೀನವಾಗಿ ಚಿತ್ರಿಸಿದರು. ರಾವಣ, ಬಲಿಚಕ್ರವರ್ತಿಯಂಥವರನ್ನು ಮೋಸದಿಂದ ಸೋಲಿಸಿದರೆ, ಏಕಲವ್ಯ ಶಂಭೂಕರಂಥವರನ್ನು ಉಪಾಯದಿಂದ ಮುಗಿಸಿಹಾಕಿದರು.

ದ್ರಾವಿಡರ ನಾಯಕರಾದ ಶ್ರೀಕೃಷ್ಣನ ಬಾಯಿಂದಲೇ ಉಪಾಯವಾಗಿ ಗೀತೆಯ ಉಪದೇಶ ಮಾಡಿ ವರ್ಣಾಶ್ರಮಕ್ಕೆ ನಾಂದಿ ಹಾಡಿದರು. ಇಲ್ಲಿಂದ ಜಾತಿ ಆಧಾರದ ಸಮಾಜಗಳು ಸೃಷ್ಟಿಯಾಗತೊಡಗಿದವು. ಬಿಳಿಯರು ಇಂಥದೇ ಮೋಸಗಾರಿಕೆಯಿಂದ ಪ್ರಪಂಚದ ಅನೇಕ ಭಾಗಗಳಲ್ಲಿ ಕಪ್ಪು ಜನಾಂಗಗಳು, ಬುಡಕಟ್ಟುಗಳನ್ನು ಹೀನ ಸ್ಥಿತಿಗೆ ತಲುಪಿಸಿದರು. ಅಮೇರಿಕಾದ ರೆಡ್ ಇಂಡಿಯನ್ನರು, ಹವಾಯನರು, ಆಸ್ಟ್ರೇಲಿಯಾದ ಬುಡಕಟ್ಟು ಜನರು, ವೆಸ್ಟ್ ಇಂಡೀಸ್‌ನ ನೀಗ್ರೋಗಳು ಪೂರ್ಣವಾಗಿ ಹೇಳ ಹೆಸರಿಲ್ಲದೆ ಅಳಿಸಿಹೋದರು, ಇಲ್ಲ ಇವರ ನಡುವೆ ಲೀನವಾಗಿ ಹೋದರು. ಆದರೆ ಇಂಡಿಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಕಪ್ಪು ಜನಾಂಗಗಳ ಸಂಖ್ಯೆ ಹೆಚ್ಚಾಗಿದ್ದು ಅವರನ್ನು ಆರ್ಯರು ಪೂರ್ಣವಾಗಿ ನಾಶಮಾಡಲಾಗದೆ ಹೋದರೂ, ಅವರನ್ನು ಅತ್ಯಂತ ಹೀನ ಸ್ಥಿತಿಗೆ ತಂದು ನಿಲ್ಲಿಸಿದರು.

ಈ ಎರಡು ಖಂಡಗಳ ಕಪ್ಪು ಜನರು ನೂರಾರು ವರ್ಷಗಳಿಂದ ಎಂತಹ ವಿಪತ್ತುಗಳು ಬಂದರೂ ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಉಳಿಸಿಕೊಳ್ಳುತ್ತಲೇ ಬಂದಿದ್ದಾರೆ. ಈ ನಿಟ್ಟಿನಲ್ಲಿ 'ರೂಟ್ಸ್' ಕೃತಿ ನಮಗೆ ಒಂದು ಅದ್ಭುತ ಮೌಖಿಕ ಕಥನವಾಗುವುದರ ಜೊತೆಗೆ ಕಪ್ಪು ಜನಾಂಗಗಳು ಹೇಗೆ ಉಳಿದುಕೊಂಡು ಬಂದವು ಎನ್ನುವುದನ್ನು ಎತ್ತಿ ತೋರಿಸುತ್ತದೆ.

ವೈದಿಕರು ಒಂದು ಕಾಲಕ್ಕೆ ದಕ್ಷಿಣ ಭಾರತದ ಅನೇಕ ಬುಡಕಟ್ಟು ನಾಯಕರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಂಡರು. ಈ ನಾಯಕರು ಮುಂದೆ ಬ್ರಾಹ್ಮಣರಾಗಿ ಪರಿವರ್ತನೆಯಾದರೂ ಗೋತ್ರಗಳ ಮೂಲದಿಂದ ಇವರನ್ನು ಪ್ರತ್ಯೇಕವಾಗಿ ಇಡಲಾಯಿತು. ಉದಾ : ಇಂದು ಸಪ್ತಋಷಿಗಳೆಂದು ಕರೆಯುವ ವಿಶ್ವಾಮಿತ್ರ, ಕಶ್ಯಪ, ಅತ್ರಿ, ಭಾರದ್ವಾಜ, ಗೌತಮ, ಜಮದಗ್ನಿ, ವಸಿಷ್ಠರು ಅಂದು ದ್ರಾವಿಡ ಜನಾಂಗಗಳ ನಾಯಕರು. ಇವರ ಕೆಳಗಿನ ಸಮುದಾಯಗಳನ್ನು ವೈಶ್ಯ ಮತ್ತು ಕ್ಷತ್ರಿಯರ ಕೆಳಗೆ ಸೇರಿಸಲಾಯಿತು. ಅವರಿಗಿಂತ ಕೆಳಗಿನ ಸಮುದಾಯಗಳನ್ನು ಶೂದ್ರರ ಕೆಳಗಿಡಲಾಯಿತು. ಇವು ಮುಂದೆ ನೂರಾರು ಕೆಳವರ್ಗದ

ಜಾತಿಗಳಾಗಿ ಪರಿವರ್ತನೆಗೊಂಡವು. ಅಂದರೆ ನಾಯಕರೆನಿಸಿಕೊಂಡ ಒಂದೇ ಜನಾಂಗದವರು ಅವರ ಸಮುದಾಯದವರಿಗಿಂತ ದೊಡ್ಡ ಜಾತಿಗಳಾಗಿ ಮಾರ್ಪಟ್ಟರು. ಮುಂದಿನ ದಿನಗಳಲ್ಲಿ ಈ ಪ್ರಕ್ರಿಯೆಗಳನ್ನು ಶೂದ್ರ ಜಾತಿಗಳು ಕಟ್ಟುನಿಟ್ಟಾಗಿ ಪಾಲಿಸತೊಡಗಿದವು.

ನೀಗ್ರೋಗಳನ್ನು ಗುಲಾಮಗಿರಿಯ ಕೆಳಗೆ ಮಣಿಸಿದರೆ, ದ್ರಾವಿಡರನ್ನು ಜಾತಿಗಳ ಕೆಳಗೆ ಕೀಳರಿಮೆಗೆ ಒಳಪಡಿಸಲಾಯಿತು. ಅಮೇರಿಕಾ, ಆಫ್ರಿಕಾದಲ್ಲಿ ಒಬ್ಬ ನೀಗ್ರೋ ಮಾತ್ರ ಗುಲಾಮನಾದರೆ, ಭಾರತದಲ್ಲಿ ಹುಟ್ಟಿನಿಂದಲೇ ಜನಾಂಗಗಳೇ ಅಸ್ಪೃಶ್ಯ ಸಮಾಜಗಳಾದವು. ಆದರೆ ಎರಡೂ ಪ್ರಕ್ರಿಯೆಗಳು ಬಲಾತ್ಕಾರದಿಂದ ಕೂಡಿದವೆ ಆಗಿವೆ. ಅಮೇರಿಕಾ, ಆಫ್ರಿಕಾದಲ್ಲಿ ನೀಗ್ರೋಗಳು ಇಂದಿಗೂ ಘೆಟ್ಟೋಗಳಲ್ಲಿ, ಜೈಲುಗಳಲ್ಲಿ ಅಪರಾಧಿಗಳಾಗಿ, ಗೇಸಾಗಿ, ವೈಶ್ಯರಾಗಿ ಮಾದಕ ವ್ಯಸನಿಗಳಾಗಿ ಜೀವನ ನಡೆಸುತ್ತಿದ್ದಾರೆ. ಇತ್ತೀಚೆಗೆ ಕೆಲವರು ತಮ್ಮ ದೈಹಿಕ ಸಾಮರ್ಥ್ಯದಿಂದ ಕ್ರೀಡೆಗಳಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದರೆ ಇನ್ನೂ ಕೆಲವರು ಪಾಪ್ ಗಾಯಕರಾಗಿ ಮೆರೆಯುತ್ತಿದ್ದಾರೆ. ಆದರೆ ಇವರ ಅಭಿಮಾನಿಗಳೆಲ್ಲ ಘೆಟ್ಟೋಗಳಲ್ಲಿ ವಾಸಿಸುವ ಜನರೆ ಆಗಿದ್ದಾರೆ. ಇವರ ಸಂಗೀತ ಕ್ಲಾಸಿಕ್ ಸಂಗೀತವಾಗಲೇ ಇಲ್ಲ. ಭಾರತದಲ್ಲಿ ಇದಕ್ಕೆ ಸರಿಹೊಂದುವಂತಹ ಬಹುಜನರ ಯಾವುದೇ ಕಲೆ ಮತ್ತು ಸಂಗೀತವನ್ನು ಕ್ಲಾಸಿಕ್ ಎಂದು ಪರಿಗಣಿಸುವುದೇ ಇಲ್ಲ.

ಅಮೇರಿಕಾದಲ್ಲಿ ಜನಸಾಮಾನ್ಯರು ಸೌಜನ್ಯಕ್ಕಾದರೂ ಗುಲಾಮಗಿರಿ ಮತ್ತು ವರ್ಣಬೇಧ ಇರಬಾರದು ಎನ್ನುತ್ತಾರೆ. ಆದರೆ ಭಾರತದ ಹಿಂದೂಗಳು ಮಾತ್ರ ಜಾತಿಗಳನ್ನು ಬಿಟ್ಟು ಜೀವನ ನಡೆಸಲಾರರು. ಇಷ್ಟೆಲ್ಲ ನಡೆದರೂ ಅಮೇರಿಕಾ, ಆಫ್ರಿಕಾ ಮತ್ತು ಭರತ ಖಂಡಗಳಲ್ಲಿರುವ ಕಪ್ಪು ಜನಾಂಗಗಳು ಈ ಖಂಡಗಳನ್ನು ಎಂದೆಂದಿಗೂ ಚಲನಶೀಲ ಮತ್ತು ಚೈತನ್ಯವಾಗಿಸಿದ್ದಾರೆ. ಇವರ ಶ್ರಮದಿಂದಲೆ ಈ ಖಂಡಗಳು ಬಲಶಾಲಿಯಾಗಿ ನಿಂತಿವೆ.

ಆರ್ಯರು ಇಡೀ ಪ್ರಪಂಚವನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ದಿವಾಳಿ ಎಬ್ಬಿಸಿದ್ದಾರೆ. ಈಗ ಅದಕ್ಕೆ ಎಲ್‌ಪಿಜಿ ಎಂಬ ಹೊಸ ಹೆಸರು ಕೊಟ್ಟಿದ್ದಾರೆ. ಇದು ಹೊಸ ಬಾಟಲ್‌ನಲ್ಲಿ ಹಳೆ ವಿಸ್ಕಿ. 'ರೂಟ್ಸ್' ಕೃತಿಯಲ್ಲಿ ಏಳು ತಲೆಮಾರುಗಳ ಕಪ್ಪು ಜನರ ಕಥನಗಳು ಅನಾವರಣಗೊಂಡಿವೆ. ಭಾರತದ ಬಗ್ಗೆ ಮಾತನಾಡುವುದೆಂದರೆ ಮರಾಠಿ ಮತ್ತು ಇತ್ತೀಚೆಗೆ ಕನ್ನಡದಲ್ಲಿ ಬೆರಳೆಣಿಕೆಯಲ್ಲಿ ಬಂದಿರುವ ಆತ್ಮಕಥೆಗಳನ್ನು ಹೆಸರಿಸಬಹುದು. 'ರೂಟ್ಸ್' ಕೃತಿಯ ಕುಂಟಾಕಿಂಟೆ ಪಾತ್ರ ನಮಗೆ ವಿಶೇಷವಾದ ಒಂದು ಕಥನವನ್ನು ಹೇಳಿಕೊಡುತ್ತದೆ. ನೂರಾರು ವರ್ಷಗಳಿಂದ ವಂಚನೆಗೆ ಒಳಗಾದ ಜನಾಂಗಗಳು ಈಗ ಏನು ಮಾಡಬೇಕಾಗಿದೆ ಎನ್ನುವುದನ್ನು ಈ ಪಾತ್ರ ತಿಳಿಸಿಕೊಡುತ್ತದೆ.

ಆರ್ಯರು ಭರತ ಖಂಡದಲ್ಲಿ ರಾಮಾಯಣ, ಮಹಾಭಾರತ ಇತ್ಯಾದಿ ಗ್ರಂಥಗಳನ್ನು ತಿರುಚಿ ಅನೇಕ ಕಟ್ಟುಕಥೆಗಳನ್ನು ಕಟ್ಟಿ ದ್ರಾವಿಡರನ್ನು ಹೇಗೆ ವಂಚಿಸಿದರೊ, ಅದೇ ರೀತಿಯಲ್ಲಿ ಬಿಳಿಯರು ನೀಗ್ರೋಗಳನ್ನು ಕ್ರಿಶ್ಚಿಯನ್ ಧರ್ಮದ ಹೆಸರಿನಲ್ಲಿ ವಂಚಿಸಿದರು. ಬಿಳಿಯರ ವಂಚನೆಗಳನ್ನು ನಿಧಾನವಾಗಿ ಅರಿತುಕೊಂಡ ನೀಗ್ರೋಗಳು ಈಗ ಬೈಬಲ್ ಗ್ರಂಥಗಳನ್ನು ಹಿಂದಕ್ಕೆ ಕೊಡುತ್ತ ತಮ್ಮನ್ನು ತಮ್ಮ ಪಾಡಿಗೆ ಬಿಟ್ಟುಬಿಡುವಂತೆ ಹೇಳುತ್ತಿದ್ದಾರೆ. ಭಾರತದ ದಲಿತ ಕ್ರೈಸ್ತರು, ದಲಿತ ಮುಸ್ಲಿಮರು, ನವಬೌದ್ಧರು ಪ್ರಸ್ತುತ ಇದೇ ರೀತಿಯ ಗೊಂದಲಕ್ಕೆ ಸಿಲುಕಿಕೊಂಡಿದ್ದಾರೆ. ಬಹುಜನರೆಲ್ಲ ತಮ್ಮ ಹಿಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಮತ್ತೊಮ್ಮೆ ಉಚ್ಛ್ರಾಯ ಸ್ಥಿತಿಗೆ ತಲುಪಿಸಬೇಕಿದೆ. ಅಂತಹ ಪ್ರಯತ್ನದಲ್ಲಿ ಆತ್ಮಕಥೆಗಳದು ಒಂದು ರೂಪ. 'ರೂಟ್ಸ್' ಕೃತಿ ಪ್ರಕಟವಾದ ಸಂದರ್ಭದಲ್ಲಿ ಪ್ರತಿಯೊಬ್ಬ ನೀಗ್ರೋ 'ರೂಟ್ಸ್' ಕೃತಿಯನ್ನು ಕೊಂಡುಕೊಂಡು ತಮ್ಮ ಮುಂದಿನ ಜನಾಂಗಗಳಿಗಾಗಿ ಜೋಪಾನ ಮಾಡಿಟ್ಟರು. ಇಷ್ಟಕ್ಕೂ ಈ 'ರೂಟ್ಸ್' ಕೃತಿಯಲ್ಲಿ ಏನಿದೆ...?

ಈ ಪುಟ ನೋಡಿ : 'ತಮ್ಮಾ! ಈ ಬಿಳಿಯರು ಎಲ್ಲಿಗೆ ಹೋದರೂ ಕೋರ್ಟ್‌ಗಳನ್ನು ಕಟ್ಟುತ್ತಾರೆ. ಯಾಕೆ...? ತಮಗೆ ಬೇಕಾದಂತೆ ಶಾಸನಗಳನ್ನು ಮಾಡುವುದಕ್ಕೆ ಅನಂತರ ಚರ್ಚ್‌ಗಳನ್ನು ಕಟ್ಟುತ್ತಾರೆ. ಯಾಕೆಂದು ಗೊತ್ತಾ...? ತಾವು ಕ್ರಿಶ್ಚಿಯನ್ನರೆಂದು ಸಾಬೀತು ಮಾಡುವುದಕ್ಕೆ. ನಿಗ್ಗರ್‌ಗಳನ್ನು ಹಿಂಡಿ ಹಿಪ್ಪೆ ಮಾಡುವುದಕ್ಕೆ ಅವರು ಈ ಶಾಸನಗಳನ್ನೆಲ್ಲ ಬರೆದಿದ್ದಾರೆ.

ನಿಗ್ಗರ್ ಬಂದೂಕು ಹಿಡಿದುಕೊಳ್ಳುವುದು ಅಪರಾಧ. ಕಡೆಗೆ ದೊಣ್ಣೆ ಆಗಬಲ್ಲ ಕಟ್ಟಿಗೆಯನ್ನು ಕೂಡ ಹಿಡಿದುಕೊಳ್ಳಬಾರದು. ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಬೇಕೆಂದರೆ ಪಾಸ್ ಇರಬೇಕು. ಪಾಸಿಲ್ಲದೆ ಸಿಕ್ಕಿಬಿದ್ದರೆ ಇಪ್ಪತ್ತು ಚಾವಟಿ ಏಟು. ಬಿಳಿಯನ ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಹತ್ತು ಚಾವಟಿ ಏಟು. ಬಿಳಿಯರ ಮೇಲೆ ಕೈ ಎತ್ತಿದರೆ ಮೂವತ್ತು ಏಟು. ನೀನು ಸುಳ್ಳು ಹೇಳಿದೆ ಎಂದು ಬಿಳಿಯ ಆಣೆ ಇಟ್ಟು ಹೇಳಿದರೆ ನಿನ್ನ ಕಿವಿ ಕೊಯ್ದು ಹಾಕು ಎನ್ನುತ್ತದೆ ಕಾನೂನು. ನೀನು ಎರಡು ಸಲ ಸುಳ್ಳು ಹೇಳಿದೆ ಎಂದು ಬಿಳಿಯರವನು ಹೇಳಿದರೆ ನಿನ್ನ ಎರಡೂ ಕಿವಿಗಳಿಗೆ ಕಂಟಕ ಬರುತ್ತದೆ. ಬಿಳಿಯರನ್ನು ಕೊಂದರೆ ನೇಣುಗಂಬ. ಕರಿಯನನ್ನು ಕೊಂದರೆ ಕೊಂಪೆ ಏನೂ ಮುಳುಗುವುದಿಲ್ಲ. ಒಂದಿಷ್ಟು ಚಾವಟಿ ಏಟು ತಿಂದರೆ ಸಾಕು.

ಬಿಳಿಯರು, ಕಪ್ಪುಜನರ ಕೈಕಾಲುಗಳನ್ನು ಕಟ್ಟಿ ಪ್ರಾಣಿಗಳಂತೆ ಸಂತೆಗಳಲ್ಲಿ ಗುಲಾಮರೆಂದು ಮಾರುತ್ತಾರೆ. ಅವರನ್ನು ಪ್ರಾಣಿಗಳಂತೆ ಹೊಲಗದ್ದೆ ಮನೆಗಳಲ್ಲಿ ದುಡಿಸಿಕೊಳ್ಳುತ್ತಾರೆ. ಅವರಿಗೆ ಹುಟ್ಟಿದ ಮಕ್ಕಳನ್ನು ಅವರ ಎದುರಿಗೆ ಸಂತೆಗಳಲ್ಲಿ ಹರಾಜಾಕುತ್ತಾರೆ. ಇದು ಅಮೇರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ಕಾನೂನು ತರುವವರೆಗೆ ಅಂದರೆ ಕ್ರಿ.ಶ. ೧೮೬೩ ರವರೆಗೂ ಮುಂದುವರಿದಿತ್ತು. ಆಫ್ರಿಕಾ ಮತ್ತು ಇಂಡಿಯಾದಲ್ಲಿ ಕಾನೂನುಗಳು ಬಂದರು ವರ್ಣಭೇದ ಮತ್ತು ಅಸ್ಪೃಶ್ಯತೆ ನಾಶವಾಗಲಿಲ್ಲ. ಮನುಷ್ಯ ನಾಗರಿಕನಾಗಿ ಯೋಚಿಸುವವರೆಗೂ ಇದು ಹೀಗೆ ಸಾಗುತ್ತದೆ. ಜಗತ್ತಿನ ಐತಿಹಾಸಿಕ ಪ್ರಕ್ರಿಯೆಯಲ್ಲಿ ಬಿಳಿಯರು ಕಪ್ಪುಜನರ ವಿರುದ್ಧ ವೈದಿಕರು ದಲಿತರ ವಿರುದ್ಧ ನಡೆಸಿದ ಕ್ರೌರ್ಯ ಮಾನವ ಮಾನವನಿಗೆ ಎಸಗಿದ ಘನಘೋರ ದ್ರೋಹವಾಗಿದೆ.

ನಿಗ್ಗರ್ ಓದುವುದಕ್ಕೆ ಬರೆಯುವುದಕ್ಕೆ ಕಲಿತುಕೊಳ್ಳುವುದು ಅಪರಾಧ. ಜೊತೆಯ ನಿಗ್ಗರು ಯಾರಿಗಾದರೂ ಪುಸ್ತಕಗಳನ್ನು ಓದುವುದಕ್ಕೆ ಕೊಡುವುದು ಅಪರಾಧ. ಆಫ್ರಿಕಾದ ಮಾದರಿಯಲ್ಲಿ ಯಾರಾದರೂ ನಿಗ್ಗರು ಡೋಲು ಬಾರಿಸಿದರೆ ಅವನ ಡೊಳ್ಳು ಸೀಳಿ ಡೋಲು ಕಟ್ಟಬೇಕೆಂದು ಶಾಸನದ ಆಜ್ಞೆ. ಕೈಕಾಲುಗಳನ್ನು ಕತ್ತರಿಸಿ ಹಾಕಿದ್ದಾರೆ, ಬೀಜಗಳನ್ನು ಕೊಯ್ದು ಹಾಕಿದ್ದಾರೆ. ಬಾಳು ಹಾಳಾಗಿಹೋದ ಅಂತಹ ನಿಗ್ಗರಗಳು ಅನೇಕ ಮಂದಿಯನ್ನು ನಾನು ಬಲ್ಲೆ. ಮೂಳೆಗೆ ಕಚ್ಚಿಕೊಂಡಿರುವ ಮಾಂಸ ಕಳಚಿ ಬರುವವರೆಗೂ ನಿಗ್ಗರ್‌ಗಳನ್ನು ಹೊಡೆದಿರುವುದು ನನಗೆ ಗೊತ್ತು. ತುಂಬು ಗರ್ಭಿಣಿಯರಾದ ನೀಗ್ರೋ ಹೆಂಗಸರನ್ನು ಹೊಟ್ಟೆಯ ಕೆಳಗೆ ಗುಂಡಿ ತೋಡಿ ಬೋರಲು ಮಲಗಿಸಿ ಚಾವಟಿಗಳಲ್ಲಿ ಹೊಡೆಯುತ್ತಾರೆ. ಬಂಡಾಯದ ಮಾತು ಬಾಯಲ್ಲಿ ಕೇಳಿದರೆ ಸಾಕು ಆ ನೀಗ್ರೋನನ್ನು ಕೆಂಡಗಳ ಮೇಲೆ ನಾಟ್ಯವಾಡಿಸುತಾರೆ.'

ತೇಟ್ ಮನುಧರ್ಮದ ನಿಯಮಗಳಂತೆ ತೋರುವ ಈ ಕಟ್ಟುಪಾಡುಗಳನ್ನು ಕಪ್ಪು ಜನರಾದ ನೀಗ್ರೋಗಳ ವಿರುದ್ಧ ನೂರಾರು ವರ್ಷಗಳ ಕಾಲ ಪಾಲಿಸಿಕೊಂಡು ಬಂದವರು ಬಿಳಿಯರು. 'ರೂಟ್ಸ್' ಕೃತಿಯನ್ನು ಓದುತ್ತಾ ಹೋದಂತೆ ಏಳು ತಲೆಮಾರುಗಳ ನೀಗ್ರೋ ಜನರ ಕಥನವು ನಮ್ಮನ್ನು ಗಾಢವಾಗಿ ಆವರಿಸಿಕೊಳ್ಳುತ್ತಾ ಹೋಗುತ್ತದೆ.

ಆಫ್ರಿಕಾದ ಕಪ್ಪು ಜನಾಂಗಗಳು ಅನುಭವಿಸಿದ ಅನಾಗರಿಕ ಹಿಂಸೆಗಳು, ಅವುಗಳನ್ನು ತಪ್ಪಿಸಿಕೊಳ್ಳಲು ನೀಗ್ರೋಗಳು ನಡೆಸಿದ ಹೋರಾಟಗಳು ಓದುಗರನ್ನು ತಲ್ಲಣಗೊಳಿಸುತ್ತದೆ. ಬಿಳಿಯರು ಕಪ್ಪು ಜನರ ವಿರುದ್ಧ ನಡೆಸಿದ ಕ್ರೌರ್ಯ ಅತ್ಯಂತ ಘೋರವಾದುದು.

'ರೂಟ್ಸ್' ಕೃತಿಯಲ್ಲಿ ಮೂಲ ಪುರುಷನಾಗಿ ಕಾಣಿಸಿಕೊಳ್ಳುವ ಕುಂಟಾಕಿಂಟೆ ಪಾತ್ರ ಬಿಳಿಯರ ಎದುರಿಗೆ ಹೋರಾಡುತ್ತಲೆ ತನ್ನ ಬೇರುಗಳ ಮೂಲ ಅಳಿಸಿಹೋಗದಂತೆ ತನ್ನ ಮುಂದಿನ ಜನಾಂಗಕ್ಕೆ ಮೌಖಿಕ ಕಥನವನ್ನು ಸಾಗಿಸುತ್ತಾ ಹೋಗುತ್ತದೆ. ತನ್ನ ವಂಶದಲ್ಲಿ ಹುಟ್ಟುವ ಪ್ರತಿ ಶಿಶುವನ್ನು ಮೊದಲ ದಿನವೆ ಬಯಲಿಗೆ ಎತ್ತಿಕೊಂಡು ಹೋಗಿ ಆಕಾಶದ ಕಡೆಗೆ ಬೆರಳು ಮಾಡಿ ನಕ್ಷತ್ರಗಳನ್ನು ತೋರಿಸುತ್ತ ಕಿವಿಯಲ್ಲಿ ಶಿಶುವಿನ ಹೆಸರನ್ನು ಉಸಿರುತ್ತಾನೆ. ಅನಂತರ ಶಿಶು ಬೆಳೆಯುತ್ತ ಹೋದಂತೆ ತನ್ನ ಪೂರ್ವಜರ ಕಥನವನ್ನು ತಿಳಿಸುತ್ತಾ ಹೋಗುತ್ತಾನೆ. ಅದು ತಲೆಮಾರುಗಳವರೆಗೆ ಮುಂದುವರಿಯುತ್ತ ಮುಂದಿನ ಜನಾಂಗಗಳಲ್ಲಿ ಒಂದು ಸಾಂಸ್ಕೃತಿಕ ಚರಿತ್ರೆಯಾಗಿ ಬೆಳೆದುನಿಲ್ಲುತ್ತದೆ.

ಬಿಳಿಯರು, ಕಪ್ಪುಜನರ ಕೈಕಾಲುಗಳನ್ನು ಕಟ್ಟಿ ಪ್ರಾಣಿಗಳಂತೆ ಸಂತೆಗಳಲ್ಲಿ ಗುಲಾಮರೆಂದು ಮಾರುತ್ತಾರೆ. ಅವರನ್ನು ಪ್ರಾಣಿಗಳಂತೆ ಹೊಲಗದ್ದೆ ಮನೆಗಳಲ್ಲಿ ದುಡಿಸಿಕೊಳ್ಳುತ್ತಾರೆ. ಅವರಿಗೆ ಹುಟ್ಟಿದ ಮಕ್ಕಳನ್ನು ಅವರ ಎದುರಿಗೆ ಸಂತೆಗಳಲ್ಲಿ ಹರಾಜಾಕುತ್ತಾರೆ. ಇದು ಅಮೇರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ಕಾನೂನು ತರುವವರೆಗೆ ಅಂದರೆ ಕ್ರಿ.ಶ. ೧೮೬೩ ರವರೆಗೂ ಮುಂದುವರಿದಿತ್ತು. ಆಫ್ರಿಕಾ ಮತ್ತು ಇಂಡಿಯಾದಲ್ಲಿ ಕಾನೂನುಗಳು ಬಂದರು ವರ್ಣಭೇದ ಮತ್ತು ಅಸ್ಪೃಶ್ಯತೆ ನಾಶವಾಗಲಿಲ್ಲ. ಮನುಷ್ಯ ನಾಗರಿಕನಾಗಿ ಯೋಚಿಸುವವರೆಗೂ ಇದು ಹೀಗೆ ಸಾಗುತ್ತದೆ.

ಬಿಳಿಯರ ಹಿಂಸೆಗಳನ್ನು ತಪ್ಪಿಸಿಕೊಳ್ಳಲು ಕರಿಯರು ನಡೆಸುವ ಪ್ರತಿಯೊಂದು ಹೋರಾಟವು ನಮ್ಮನ್ನು ಅಲುಗಾಡಿಸಿಬಿಡುತ್ತದೆ. ಜಗತ್ತಿನ ಐತಿಹಾಸಿಕ ಪ್ರಕ್ರಿಯೆಯಲ್ಲಿ

ಬಿಳಿಯರು ಕಪ್ಪುಜನರ ವಿರುದ್ಧ ವೈದಿಕರು ದಲಿತರ ವಿರುದ್ಧ ನಡೆಸಿದ ಕ್ರೌರ್ಯ ಮಾನವ ಮಾನವನಿಗೆ ಎಸಗಿದ ಘನಘೋರ ದ್ರೋಹವಾಗಿದೆ.

'ರೂಟ್ಸ್' ಕೃತಿಯನ್ನು ಜಗತ್ತಿಗೆ ನೀಡಿದ ಅಲೆಕ್ಸ್ ಹೇಲಿ ಈ ಅದ್ಭುತ ಕಥನದ ಇತ್ತೀಚಿನ ಒಂದು ಕೊಂಡಿಯಾದುದರಿಂದ ಈ ಕಥನ ಒಂದು ವಿಶೇಷ ಸಾಂಸ್ಕೃತಿಕ ಕಥನವಾಗಿ ಬೆಳೆದು ನಿಂತಿದೆ ಎನ್ನುವುದು ಒಂದು ವಾದ. ಕುಂಟಾಕಿಂಟೆ ಕಂಡಿದ್ದ ದೂರದೃಷ್ಟಿ ಎರಡುನೂರು ವರ್ಷಗಳ ಕಾಲ ಸಾಗುತ್ತ ಹೋಗಿ ಅಲೆಕ್ಸ್ ಹೇಲಿ ಮೂಲಕ ಪ್ರಪಂಚದ ಕಣ್ಣಲ್ಲಿ ತೆರೆದುಕೊಳ್ಳುತ್ತದೆ. ಹೇಲಿ ಈ ಕಥೆಯನ್ನು ಬರೆಯಲು ೧೨ ವರ್ಷಗಳ ಕಾಲ ಮೂರು ಖಂಡಗಳಲ್ಲಿ ೫ ಲಕ್ಷ ಕಿ.ಮೀ. ದೂರದ ದಾರಿ ಸವೆಸಿ ೫೦ಕ್ಕಿಂತ ಹೆಚ್ಚು ಗ್ರಂಥಾಲಯಗಳ ದಾಖಲೆಗಳನ್ನು ತಿರಿವಿ ಹಾಕಿದ್ದಾರೆ. ಅನೇಕ ಪ್ರಾಚೀನ ಪತ್ರ ಭಂಡಾರಗಳನ್ನು, ಪುರಾತನ ವಸ್ತು ಸಂಗ್ರಹಾಲಯಗಳನ್ನು ಪರೀಕ್ಷಿಸಿದ್ದಾರೆ.

'ರೂಟ್ಸ್' ಕೃತಿ ಒಂದು ಸತ್ಯ ಕಥೆ. ಇದು ಪ್ರಪಂಚದ ಇತಿಹಾಸವು ಹೌದು. ರಾಜಮಹಾರಾಜರಿಂದ, ಜಮೀನುದಾರರಿಂದ, ಉಚ್ಚವರ್ಗಗಳಿಂದ ಪ್ರಪಂಚದ ಯಾವ ದೇಶಗಳೂ ಬೆಳೆದುನಿಂತಿಲ್ಲ. ಆದರೆ ಅವರನ್ನೇ ಕೊಂಡಾಡಿದ ಕಥೆಗಳು ಮಾತ್ರ ಪ್ರಪಂಚದಾದ್ಯಂತ ದಾಖಲೆಯಾಗಿರುವ ಸುಳ್ಳು ಪುರಾವೆಗಳಾಗಿವೆ. ನಿಜವಾಗಿ ದೇಶಗಳನ್ನು ಕಟ್ಟಿದವರು ಜನಸಾಮಾನ್ಯರು.

> **ನೀಗ್ರೋಗಳನ್ನು ಗುಲಾಮಗಿರಿಯ ಕೆಳಗೆ ಮಣಿಸಿದರೆ, ದ್ರಾವಿಡರನ್ನು ಜಾತಿಗಳ ಕೆಳಗೆ ಕೀಳರಿಮೆಗೆ ಒಳಪಡಿಸಲಾಯಿತು. ಅಮೇರಿಕಾ, ಆಫ್ರಿಕಾದಲ್ಲಿ ಒಬ್ಬ ನೀಗ್ರೋ ಮಾತ್ರ ಗುಲಾಮನಾದರೆ, ಭಾರತದಲ್ಲಿ ಹುಟ್ಟಿನಿಂದಲೇ ಜನಾಂಗಗಳೇ ಅಸ್ಪೃಶ್ಯ ಸಮಾಜಗಳಾದವು. ಆದರೆ ಎರಡೂ ಪ್ರಕ್ರಿಯೆಗಳು ಬಲಾತ್ಕಾರದಿಂದ ಕೂಡಿದವೆ ಆಗಿವೆ.**

ಕನ್ನಡಕ್ಕೆ ಈ ಕಥನವನ್ನು ಕರೆದು ತಂದವರು ಡಾ|| ಬಂಜಗೆರೆ ಜಯಪ್ರಕಾಶ ಅವರು. ಜಯಪ್ರಕಾಶ ಸಾಹಿತ್ಯದ ಜೊತೆಜೊತೆಗೆ ಜನಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ತಲೆಮಾರು ಕೃತಿಯಲ್ಲಿ ಬರುವ ಕನ್ನಡ ಭಾಷೆ ಈ ಕೃತಿಗಾಗಿಯೆ ರೂಪುಗೊಂಡಿತೇನೋ ಎನ್ನುವಂತಿದ್ದು ಅವರ ಪ್ರಯತ್ನ ಸಫಲ ಮತ್ತು ಶ್ಲಾಘನೀಯ ವಾಗಿದೆ. ಅದೇ ರೀತಿ ಇಂತಹ ಕೃತಿಯನ್ನು ಹೊರತಂದಿರುವ ಆನಂದ ಗ್ರಂಥಮಾಲೆಗೆ ಹಿರಿಮೆಯ ಒಂದು ಗರಿ ಮೂಡಿದೆ.

ಸಾಹಿತ್ಯ ಚರಿತ್ರೆಯಲ್ಲಿ ಕೆಲವು ಕೃತಿಗಳು ಅಮರವಾಗಿ ಉಳಿದುಬಿಡುತ್ತವೆ. 'ರೂಟ್ಸ್' ಕೃತಿ ಪ್ರಪಂಚದ ಅನೇಕ ಭಾಷೆಗಳಲ್ಲಿ ತರ್ಜುಮೆಗೊಂಡು ಪ್ರಪಂಚದ ಒಂದು ಅದ್ಭುತ ಕಥನವಾಗಿ ಬೆಳೆದು ನಿಂತಿದೆ. ಮೂಲದಲ್ಲಿ ೬೫೦ ಪುಟಗಳಿರುವ ಈ ಕೃತಿ ಕನ್ನಡದಲ್ಲಿ ೨೭೬ ಪುಟಗಳಲ್ಲಿ ಸಂಗ್ರಹವಾಗಿದೆ. ತಲೆಮಾರು ಕೃತಿಯನ್ನು ಪುಸ್ತಕ ಪ್ರೇಮಿಗಳು, ಬುದ್ಧಿಜೀವಿಗಳು ಮತ್ತು ಮುಖ್ಯವಾಗಿ ದಲಿತ ಬಹುಜನರು ಓದಲೇಬೇಕಿದೆ. □

ಕರ್ತವ್ಯ



○ ಹೆಚ್.ಡಿ. ಉಮಾಶಂಕರ

ಭರವಸೆಗಳ
ಜೀವ ಹಿಂಡಿ
ಬರೀ
ತಮದ ಬಸಿರಿನೊಳಗೆ
ಅವಿತುಕೊಳ್ಳಲು ಬಯಸುವ
ಈ ಮನ
ಅದೆಂತಹ ಬದುಕಿಗಾಗಿ
ಹಂಬಲಿಸುತ್ತಿದೆ.

ಪದವಿಗಳ ಅಂಕಪಟ್ಟಿಯ
ನಡುವೆ
ನಿರುದ್ಯೋಗದ ಬಿಸಿ
ತಾಂಡವವಾಡುತ್ತಿರುವಾಗ
ಬದುಕಿನ
ಕನಸುಗಳಿಗೆಲ್ಲಿ ಬೆಲೆ ?

ಕಪ್ಪುಗಳ ನಡುವೆ
ಕುಣಿದಾಡುವ ನಮಗೆ
ಸಮಾಜದಲ್ಲೆಲ್ಲಿದೆ ನೆಲೆ ?

ಬದುಕ ಅಳಿಸಿ
ಅಂತಿಮ ಯಾತ್ರೆ ಕೈಗೊಳ್ಳಬೇಕು
ಎನ್ನುವುದರ ಹಿಂದೆಯೇ
ಮುಂದಿನ
ತಲೆಮಾರುಗಳ ತಳಮಳ
ಕಣ್ಣೆದುರು ನಿಲ್ಲುತ್ತಿದೆಯಲ್ಲ.....

ಅಂದ ಮೇಲೆ
ನನ್ನ ಕರ್ತವ್ಯ ಈ ಭೂಮಿ ಮೇಲೆ
ಏನೋ ಇರಲೇಬೇಕಲ್ಲವೇ...?

ಮೆಕಾಲೆ ಮಹಾತ್ಮೆ

ದಲಿತ್ ಡೈರಿ

ದ್ವಿಜರು/ಶ್ರೀಮಂತರು ಮೆಕಾಲೆಯ ಶಿಕ್ಷಣ ವ್ಯವಸ್ಥೆಯಿಂದ ಮೊದಲು ಅನುಕೂಲ ಪಡೆದು ನಂತರ ಆತನನ್ನೇ ವಿರೋಧಿಸಿದ್ದು ಏಕೆಂದು ಗ್ರಹಿಸಲು ಕಷ್ಟವೇನೂ ಅಲ್ಲ. ಆದರೆ ಈಗ ನಮಗೆ ಗೊತ್ತಾಗುತ್ತಿರುವ ಸತ್ಯವೇ ಬೇರೆ. ಇಂಗ್ಲಿಷ್ ಮೂಲಕ ನಾಗರಿಕತೆಯನ್ನು ಅಥವಾ ಪಾಶ್ಚಾತ್ಯ ಶಿಕ್ಷಣ ಕ್ರಮವನ್ನು ಆತ ನಿರ್ಮಿಸಿದ. ಲಾರ್ಡ್ ಮೆಕಾಲೆ ದೇಶಿ ಶಿಕ್ಷಣವನ್ನು ನಾಶಪಡಿಸಲು ಬಯಸಿದ್ದಲ್ಲದೆ, ಅದನ್ನು ಎರಡು ವಿಧಾನಗಳ ಮೂಲಕ ಮಾಡಿದ. ಇದರ ತಾರ್ಕಿಕ ಕೊನೆಯೆಂದರೆ ದೇಶಿ ಶಿಕ್ಷಣದ ಸಾವು. ಅಕಸ್ಮಾತ್ತಾಗಿ ೧೮೩೫ರಲ್ಲಿ ದೇಶಿ ಶಿಕ್ಷಣದ ವಿರುದ್ಧದ ಹೋರಾಟದಲ್ಲಿ ಮೆಕಾಲೆ ಏನಾದರೂ ಸೋತಿದ್ದರೆ ಏನಾಗುತ್ತಿತ್ತು? ಅಂಥ ದೇಶಿ ಶಿಕ್ಷಣದಲ್ಲಿ ದಲಿತರ ಪಾಲೆಷ್ಟಿರುತ್ತಿತ್ತು?

○ ಅನು : ಡಿ. ಡೊಮಿನಿಕ್



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

೧೯೭೭ರಲ್ಲಿ ಕಾಲೇಜ್ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷನಾಗಿದ್ದ ನಾನು ಅರೆಬರೆ ತಿಳುವಳಿಕೆಯಿಂದ ಜಿಲ್ಲಾಧಿಕಾರಿ ಕಛೇರಿಯ ವಿರುದ್ಧ ಪ್ರತಿಭಟನೆಯ ಮುಂದಾಳತ್ವ ವಹಿಸಿದ್ದೆ. ಶ್ರೀಮಂತ ಪರವಾಗಿದ್ದ ಮೆಕಾಲೆಯ ಇಂಗ್ಲಿಷ್ ಶಿಕ್ಷಣದ ವಿರುದ್ಧ ನಮ್ಮ ಪ್ರತಿರೋಧ ಅದಾಗಿತ್ತು. ಅಲ್ಲದೆ ಅಂದಿನ ದಿನಗಳಲ್ಲಿ ನಮ್ಮ ಶಿಕ್ಷಣದಲ್ಲಿನ ಎಲ್ಲಾ ಸಮಸ್ಯೆಗಳಿಗೆ ಮೆಕಾಲೆಯೇ ಮೂಲ ಕಾರಣವೆಂದು ಭಾವಿಸುವುದು ಒಂದು ಫ್ಯಾಶನ್ ಆಗಿತ್ತು. ಆದ್ದರಿಂದ ಶಿಕ್ಷಣದ ವಿರುದ್ಧ ಯಾವುದೇ ಪ್ರತಿಭಟನೆಯೂ ಸಹ ಮೆಕಾಲೆಯನ್ನು ಗುರಿಯಾಗಿಸಲೇಬೇಕಿತ್ತು.

ಅಂದಿನವರೆಗೆ ಮೆಕಾಲೆ ಬಗ್ಗೆ ನಾವು ಕಲಿತದ್ದೇ ಅಂಥದ್ದು. ಮೆಕಾಲೆ ಬಗ್ಗೆ ನಾನು ಮತಿಹೀನನಂತೆ ಕಲಿತ ಪಾಠವೆಂದರೆ 'ರಕ್ತ ಮತ್ತು ಬಣ್ಣದಲ್ಲಿ ಭಾರತೀಯರಾಗಿದ್ದಲ್ಲಿ, ಅಭಿರುಚಿಯಲ್ಲಿ ಬ್ರಿಟಿಷಿನವರಾಗಿರತಕ್ಕದ್ದು...' 'ಬ್ರಿಟಿಷರ ಆಡಳಿತಕ್ಕೆ ಗುಮಾಸ್ತರನ್ನು ಸೃಷ್ಟಿಸುವುದೇ ಮೆಕಾಲೆಯ ಮುಖ್ಯ ಉದ್ದೇಶವಾಗಿತ್ತು'. ಭಾರತೀಯರು ಸಾಮ್ರಾಜ್ಯದ ಬೌದ್ಧಿಕ ಗುಲಾಮರಾಗಿದ್ದು ಕೆಳವರ್ಗದವರ ಮೇಲೆ ಮೇಲ್ವರ್ಗ (ಬ್ರಾಹ್ಮಣರು) ಸೇರಲು ಇಷ್ಟಪಡುವ ವರ್ಗವೊಂದನ್ನು ತಯಾರು ಮಾಡುವುದೇ ಆಗಿತ್ತು... ಇತ್ಯಾದಿ... ಸರ್ವೇ ಸಾಮಾನ್ಯ!

ನಮ್ಮ ಶಿಕ್ಷಣದಲ್ಲಿ ಅಸಮಾನತೆಯ ಬೀಜ ಬಿತ್ತಿದವನೆಂದರೆ ಮೆಕಾಲೆಯೇ ಆಗಿದ್ದನೆಂದು ಆ ದಿನಗಳಲ್ಲಿ ನಾವು ಯೋಚಿಸುತ್ತಿದ್ದೆವು.

ಸಮಾಜದಲ್ಲಿ ಪ್ರಬಲ ದ್ವಿಜರಾಗಿ ಗೋಚರಿಸುತ್ತಿದ್ದ ನನ್ನ ಉಪಾಧ್ಯಾಯರುಗಳು ಕಲಿಸಿದ್ದೇನೆಂದರೆ ಮತ್ತು ನಾನು ಮೂರ್ಖನಾಗಿ ಅವರ ಮಾರ್ಗದರ್ಶನದ ಮೂಲಕ ಸಂಶೋಧನೆ ನಡೆಸಿ ನಂಬುವಂತೆ ಅಂಬೇಡ್ಕರವರು ಬ್ರಿಟಿಷ್ ಪರವಾಗಿದ್ದರೆಂದು ಸೂಕ್ಷ್ಮವಾಗಿ ಸೂಚಿಸುತ್ತಿದ್ದರು.

ನಾನು ಇನ್ನೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿರುವಾಗಲೇ ನನ್ನ ಗ್ರಾಮದ ಹಿರಿಯರು 'ಡಾ॥ ಅಂಬೇಡ್ಕರ್ ಕೀರ್ತಿ ಕ್ಲಬ್'ನ್ನು ಆರಂಭಿಸಿದ್ದರಿಂದ ನನಗಾಗಲೇ ಅಂಬೇಡ್ಕರರ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿದವನಾಗಿದ್ದು ಅವರ ಬಗ್ಗೆ ಗೌರವ ತಾಳಿದ್ದೆ. ಆದ್ದರಿಂದ ಮೆಕಾಲೆಯ ಬ್ರಿಟಿಷ್ ರಾಜ್‌ನನ್ನು ದೂಷಿಸುವುದರಿಂದ ನಾನು ಹಿಂದೆ ಸರಿದಿದ್ದೆ.

ದ್ವಿಜರು/ಶ್ರೀಮಂತರು ಮೆಕಾಲೆಯ ಶಿಕ್ಷಣ ವ್ಯವಸ್ಥೆಯಿಂದ ಮೊಟ್ಟ ಮೊದಲ ಅನುಕೂಲ ಪಡೆದು ಆ ನಂತರದಲ್ಲಿ ಆತನನ್ನೇ ವಿರೋಧಿಸಿದ್ದು ಏಕೆಂದು ಗ್ರಹಿಸಲು ಕಷ್ಟವೇನೂ ಅಲ್ಲ. ಆದರೆ ಈಗ ನಮಗೆ ಗೊತ್ತಾಗುತ್ತಿರುವ ಸತ್ಯವೇ ಬೇರೆ. ಮೆಕಾಲೆ ಇಂಗ್ಲಿಷ್ ಶಿಕ್ಷಣದ ರೂವಾರಿಯೆಂದು ಹೇಳುವುದು ದಡ್ಡತನದ ಪರಮಾವಧಿಯೇ ಸರಿ. ಸತ್ಯ ಸಂಗತಿಯೆಂದರೆ ಇಂಗ್ಲಿಷ್ ಮೂಲಕ ನಾಗರಿಕತೆಯನ್ನು ಅಥವಾ ಪಾಶ್ಚಾತ್ಯ ಶಿಕ್ಷಣ ಕ್ರಮವನ್ನು ಆತ ನಿರ್ಮಿಸಿದ. ಲಾರ್ಡ್ ಮೆಕಾಲೆ ದೇಶಿ ಶಿಕ್ಷಣವನ್ನು ನಾಶಪಡಿಸಲು ಬಯಸಿದ್ದಲ್ಲದೆ, ಅದನ್ನು ಎರಡು ವಿಧಾನಗಳ ಮೂಲಕ ಮಾಡಿದ; ೧. ಸರ್ಕಾರಿ ಆಡಳಿತಾತ್ಮಕ ಹುದ್ದೆಗಳಿಗೆ ಇಂಗ್ಲಿಷ್ ಶಿಕ್ಷಣ ಅಗತ್ಯವೆಂದು ಸಾರಿದ್ದು. ೨. ಅದಕ್ಕೆ ಪೂರಕವಾಗಿ ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಯನ್ನು ಸೃಷ್ಟಿಸಿದ್ದು. ಇದರ ತಾರ್ಕಿಕ ಕೊನೆಯೆಂದರೆ ದೇಶಿ ಶಿಕ್ಷಣದ ಸಾವು.

ಅಕಸ್ಮಾತ್ತಾಗಿ ೧೮೩೫ರಲ್ಲಿ ದೇಶಿ ಶಿಕ್ಷಣದ ವಿರುದ್ಧದ ಹೋರಾಟದಲ್ಲಿ ಮೆಕಾಲೆ ಏನಾದರೂ ಸೋತಿದ್ದರೆ ಏನಾಗುತ್ತಿತ್ತು? ಅಂಥ ದೇಶಿ ಶಿಕ್ಷಣದಲ್ಲಿ ದಲಿತರ ಪಾಲೆಷ್ಟಿರುತ್ತಿತ್ತು? ನಾವು ಉತ್ತರವನ್ನು ಕಂಡುಕೊಂಡಾಕ್ಷಣ ನಮ್ಮ ಮೂರ್ಖತನದಿಂದ ನಾವು ಮುಕ್ತಿಯನ್ನು ಪಡೆಯಬಹುದು.

೧೮೧೩ ರಲ್ಲಿ ಬ್ರಿಟಿಷ್ ಪಾರ್ಲಿಮೆಂಟು ದೇಶಿ ಜನರ ಶಿಕ್ಷಣಕ್ಕಾಗಿ ಒಂದು ಲಕ್ಷ ರೂ ಮೀಸಲಿಡುವಂತೆ ಆದೇಶ ನೀಡಿತು. ಈ ನಿರ್ದೇಶನದ ಮೇರೆಗೆ ಕಂಪನಿಯು ಅನೇಕ ದಾರಿಗಳನ್ನು ಹುಡುಕಲಾರಂಭಿಸಿತು. ಅದರ ಮೊದಲ ಹೆಜ್ಜೆಯೆಂದರೆ ದೇಶಿ ಶಿಕ್ಷಣ ಪದ್ಧತಿಯನ್ನು ಅರ್ಥೈಸುವುದೇ ಆಗಿತ್ತು. ಅದಕ್ಕಾಗಿ ಅನೇಕ ಸಮೀಕ್ಷೆಗಳನ್ನು ಕೈಗೊಳ್ಳಲಾಯಿತು.

ದಲಿತರ ದೃಷ್ಟಿಯಲ್ಲಿ ಕಮ್ಮಿಯೆಂದರೂ ಮೂರು ವರದಿಗಳನ್ನು ಗಮನಿಸಲೇಬೇಕಾಗುತ್ತದೆ.

ಮದ್ರಾಸ್ಸಿನ ಗೌರ್ನರ್ ಆಗಿದ್ದ ಸರ್ ಥಾಮಸ್ ಮನ್ರೋ ತನ್ನ ಪ್ರಾಂತ್ಯದಲ್ಲಿ ಬೃಹತ್ ರೀತಿಯಲ್ಲಿ ಸಮೀಕ್ಷೆಯನ್ನು ಕೈಗೊಂಡಿದ್ದ. ೧೮೨೨ರ ಜೂನ್‌ನಲ್ಲಿ ಅದರ ಫಲಿತಾಂಶವನ್ನು ಪ್ರಕಟಿಸಲಾಯಿತು. ಅದರ ಅನೇಕ ಸಂಗತಿಗಳಲ್ಲಿ ಮುಖ್ಯವಾದುದೆಂದರೆ ಒಬ್ಬೇ ಒಬ್ಬ ದಲಿತ/ಆದಿವಾಸಿಯೂ ಸಹ ದೇಶಿ ಶಿಕ್ಷಣದಲ್ಲಿ ಪ್ರವೇಶ ಪಡೆದಿರಲಿಲ್ಲ. ೧೮೨೫ರಲ್ಲಿ ಇಂಥದ್ದೇ ಸಮೀಕ್ಷೆಯನ್ನು ಬಾಂಬೆಯ ಗೌರ್ನರ್ ಮೌರಿಟ್ ಸ್ಟುವರ್ಟ್ ಎಲ್ಫಿನ್‌ಸ್ಟನ್ ಕೈಗೊಂಡ. ಅಲ್ಲಿಯೂ ಸಹ ದೇಶಿ ಶಿಕ್ಷಣದಲ್ಲಿ ದಲಿತ / ಆದಿವಾಸಿಗಳ್ಯಾರೂ ಪ್ರವೇಶ ಪಡೆದಿರಲಿಲ್ಲ. ಹಾಗೆಯೇ ಗೌರ್ನರ್‌ನ ಅಪ್ಪಣೆ ಪಡೆದು ಒಬ್ಬ ಮಿಶನರಿ ಬಂಗಾಳ ಮತ್ತು ಬಿಹಾರ್ ನಲ್ಲಿ ಸಮೀಕ್ಷೆ ನಡೆಸಿದ. ಅಲ್ಲಿ ಆತ ಕೆಲವು ಅಸ್ಪೃಶ್ಯ ವಿದ್ಯಾರ್ಥಿಗಳು ಮತ್ತು ಕೆಲವು ಉಪಾಧ್ಯಾಯರನ್ನು ಕಂಡಿದ್ದನಷ್ಟೆ.

ಬಾಂಬೆ ಪ್ರಾಂತ್ಯದ ದಕ್ಷಿಣ ಕೊಂಕಣ ಜಿಲ್ಲೆಯಲ್ಲಿ ಒಟ್ಟು ೮೬ ಶಾಲೆಗಳಿದ್ದವು. ಅವುಗಳಲ್ಲಿ ೨೫ ಶಾಲೆಗಳನ್ನು ದೇವಸ್ಥಾನಗಳಲ್ಲಿ ಮತ್ತು ಉಪಾಧ್ಯಾಯರ ಮನೆಗಳಲ್ಲಿ ನಡೆಸಲಾಗುತ್ತಿತ್ತು. ಅವರೆಲ್ಲಾ ಬ್ರಾಹ್ಮಣರೇ ಆಗಿದ್ದರು. ಅಲ್ಲದೆ ನನ್ನ ಗ್ರಹೀತವೆಂದರೆ ಇಂಥ ದೇಶಿ ಶಾಲೆಗಳು ನಡೆಯುತ್ತಿದ್ದ ಮಸೀದಿ, ಮನೆ ಅಥವಾ ದೇವಸ್ಥಾನಗಳಲ್ಲಿ ಎಂದರೆ ತಪ್ಪಾಗಲಾರದು.

೧೮೫೪ರಲ್ಲಿ ಇಂಗ್ಲಿಷ್ ಶಿಕ್ಷಣ ಪದ್ಧತಿಯನ್ನು ಆರಂಭಿಸಲಾಗುತ್ತದೆ. ಕೇವಲ ನಾಲ್ಕು ದಶಕಗಳಲ್ಲಿ ಮದ್ರಾಸ್ ಪ್ರಾಂತ್ಯವೊಂದರಲ್ಲೇ ೨೪,೬೧೮ ಮಂದಿ ಅಸ್ಪೃಶ್ಯರು ಹಾಗೂ ೮೧೫ ಮಂದಿ ಆದಿವಾಸಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು. ಬ್ರಿಟಿಷರು ಭಾರತವನ್ನು ಬಿಡುವ ವೇಳೆಗೆ ೧೭.೪ ಲಕ್ಷ ಅಸ್ಪೃಶ್ಯರು / ಆದಿವಾಸಿಗಳು ಶಿಕ್ಷಣವನ್ನು ಪಡೆಯುತ್ತಿದ್ದರು.

ಈ ಸಂಗತಿಗಳು ತಾವೇ ಮಾತನಾಡುತ್ತವೆ. ನಮ್ಮ ಮೂರ್ಖತನ ಮತ್ತು ಅಜ್ಞಾನವನ್ನು ಇನ್ನಾದರೂ ಕಳಚಿಬಿಟ್ಟು ಸತ್ಯವನ್ನು ಒಪ್ಪಿಕೊಳ್ಳಬಹುದಲ್ಲವೇ?

ರಾಜಾರಾಮ್ ಮೋಹನ್‌ರಾಯ್ : ಒಬ್ಬ ಸಾಮ್ರಾಜ್ಯಶಾಹಿ



ಈತನೊಬ್ಬ ಸಾಮ್ರಾಜ್ಯಶಾಹಿಯೇ ? ಲಾರ್ಡ್ ಮೆಕಾಲೆಯನ್ನು ಭಾರತೀಯ ಮುಖ್ಯವಾಹಿನಿ ಅರ್ಥೈಸುವಂತೆ ಓದಿಕೊಂಡಲ್ಲಿ ರಾಯ್ ಸಹ ಬ್ರಿಟಿಷರ ಶಿಬಿರದಲ್ಲಿ ಕಾಣಿಸಿಕೊಳ್ಳುತ್ತಾರೆ.

ಕಲ್ಕತ್ತಾದಲ್ಲಿ ಕಂಪನಿಯು ಒಂದು ಸಂಸ್ಕತ ಶಾಲೆಯನ್ನು ತೆರೆಯಲು ನಿರ್ಧರಿಸಿದಾಗ, ಅದರಿಂದ ಬಹು ವಿಚಲಿತನಾದ ರಾಯ್, ವಿಲ್ಲಿಯಂ ಪಿಟ್‌ನಿಗೆ ಅದರ ವಿರುದ್ಧ ಒಂದು ಮನವಿಯನ್ನು ಅರ್ಪಿಸುತ್ತಾನೆ. ತನ್ನ ಮನವಿಯನ್ನು ಭಾರತದ ಗೌರ್ನರ್ ಜನರಲ್‌ನ ಮುಂದೆ ಪ್ರಸ್ತಾವಿಸಬೇಕೆಂದು ಕೋರುತ್ತಾನೆ. ಭಾರತದಲ್ಲಿ ಬ್ರಿಟಿಷ್ ಮಾದರಿಯ ವಿಜ್ಞಾನ ಆಧಾರಿತ ಶಿಕ್ಷಣ ಬೇಕೆಂದು ಲಾರ್ಡ್ ಮೆಕಾಲೆ ವಾದಿಸುವಾಗ, ರಾಯ್‌ನ ಮನವಿಯ ಸಂಗತಿಗಳನ್ನು ಉಲ್ಲೇಖಿಸುತ್ತಾನೆ. ೧೧-೧೨-೧೮೨೩ರಲ್ಲಿ ರಾಯ್ ತನ್ನ ಮನವಿಯನ್ನು ಅಂದರೆ ಮೆಕಾಲೆ ಬರೆದ ತನ್ನ ಪ್ರಸಿದ್ಧ 'ಮಿನಿಟ್ಸ್'ಗಿಂತ ೧೨ ವರ್ಷ ಮೊದಲೇ ಸಲ್ಲಿಸಿದ್ದ.

ರಾಯ್ ಸಲ್ಲಿಸಿದ್ದ ಮನವಿಯ ತುಣುಕುಗಳು ಇಂತಿವೆ :

'ಭಾರತೀಯ ಅಧೀನ ಪ್ರಜೆಗಳ ಶಿಕ್ಷಣಕ್ಕೆಂದು ಇಂಗ್ಲೆಂಡ್ ಸರ್ಕಾರ ಸಾಕಷ್ಟು ದೊಡ್ಡ ಮೊತ್ತವನ್ನೇ ಮೀಸಲಿಟ್ಟಿರುವುದೆಂದು ನಮಗೆ ತಿಳಿದಿದೆ. ಈ ಮೊತ್ತದಿಂದಾಗಿ ಯೂರೋಪಿನ ಪ್ರತಿಭಾನ್ವಿತ ಸಭ್ಯ ವ್ಯಕ್ತಿಗಳನ್ನು ನೇಮಿಸಿ, ಭಾರತದ ಮೂಲ ನಿವಾಸಿಗಳಿಗೆ ಗಣಿತ, ಸ್ವಾಭಾವಿಕ ತತ್ವಶಾಸ್ತ್ರ ರಾಸಾಯನಶಾಸ್ತ್ರ ಜೀವಶಾಸ್ತ್ರ ಹಾಗೂ ಇತರೆ ವಿಜ್ಞಾನಗಳನ್ನು ಕಲಿಸುವುದಾದರೆ ಜಗತ್ತಿನ ಇತರ ಭಾಗದಲ್ಲಿರುವ ಜನರಿಗಿಂತಲೂ ಶ್ರೇಷ್ಠರಾದ ಜನಾಂಗವನ್ನು ಯೂರೋಪ್‌ನ ರಾಷ್ಟ್ರಗಳು ಮಾಡಿದಂತಾಗುವುದು ಎಂದು ನಾವು ಭರವಸೆಯಿಂದ ಎದುರು ನೋಡುತ್ತಿದ್ದೇವೆ.'

'ಆಧುನಿಕ ಯೂರೋಪಿನ ಕಲೆ ಮತ್ತು ವಿಜ್ಞಾನಗಳನ್ನು ಏಷ್ಯಾದಲ್ಲಿ ಬೇರೂರಿಸಲು ಪ್ರಯತ್ನಪಟ್ಟ ಪಶ್ಚಿಮ ರಾಷ್ಟ್ರಗಳ ಮಹತ್ವಾಕಾಂಕ್ಷಿ ವ್ಯಕ್ತಿಗಳ ಬಗ್ಗೆ ನಾವು ಈಗಾಗಲೇ ನಮನಗಳನ್ನು ದೈವಕ್ಕೆ ಸಲ್ಲಿಸಿಯಾಗಿದೆ.'

'ಮೇಲಿನ ಎಲ್ಲಾ ಪರಿಸ್ಥಿತಿಗಳನ್ನು ಪರಿಗಣಿಸುವುದಾದರೆ, ತಾವು ಮೀಸಲಿಟ್ಟಿರುವ ನಿಧಿಯನ್ನು ಕೇವಲ ಉತ್ತಮ ವ್ಯಾಕರಣ ಅಥವಾ ಸಂಸ್ಕೃತ ವ್ಯಾಕರಣ ಕಲಿಯಲು ಯುವಜನ ಡಜನ್ ವರ್ಷಗಳನ್ನು ಹಾಳು ಮಾಡಿಕೊಳ್ಳುವುದಕ್ಕೆ ಉಪಯೋಗವಾಗುವುದು ಸರಿಯಲ್ಲ. ಇದರಿಂದ ಯಾವುದೇ ಪ್ರಯೋಜನವಿಲ್ಲವಾದ್ದರಿಂದ ತಮ್ಮ ಲಾರ್ಡ್‌ಶಿಪ್‌ಗೆ ಮರ್ಯಾದೆ ತರುವಂಥದ್ದೇನೂ ಅಲ್ಲ. ಭಾರತದ ದೇಶಿ ಜನಕ್ಕೆ ಶಿಕ್ಷಣ ಒದಗಿಸಬೇಕೆನ್ನುವ ಬ್ರಿಟಿಷ್ ಸರ್ಕಾರದ ಉದ್ದೇಶ ಈಡೇರದಂತಾಗಿ ಬಿಡುತ್ತದೆ.' 'ಈಗಾಗಲೇ ಭಾರತದಲ್ಲಿರುವ ಜ್ಞಾನವನ್ನು ಹಿಂದೂ ಪಂಡಿತರು ಬೋಧಿಸಲು ಒಂದು ಸಂಸ್ಕೃತ ಶಾಲೆಯನ್ನು ಸರ್ಕಾರ ಸ್ಥಾಪಿಸಲು ಹೊರಟಿರುವುದು ನಮಗೆ ತಿಳಿದಿದೆ.

> 'ಭಾರತೀಯ ಅಧೀನ ಪ್ರಜೆಗಳ ಶಿಕ್ಷಣಕ್ಕೆಂದು ಇಂಗ್ಲೆಂಡ್ ಸರ್ಕಾರ ಸಾಕಷ್ಟು ದೊಡ್ಡ ಮೊತ್ತವನ್ನೇ ಮೀಸಲಿಟ್ಟಿರುವುದೆಂದು ನಮಗೆ ತಿಳಿದಿದೆ. ಈ ಮೊತ್ತದಿಂದಾಗಿ ಯೂರೋಪಿನ ಪ್ರತಿಭಾನ್ವಿತ ಸಭ್ಯ ವ್ಯಕ್ತಿಗಳನ್ನು ನೇಮಿಸಿ, ಭಾರತದ ಮೂಲ ನಿವಾಸಿಗಳಿಗೆ ಗಣಿತ, ಸ್ವಾಭಾವಿಕ ತತ್ವಶಾಸ್ತ್ರ ರಾಸಾಯನಶಾಸ್ತ್ರ ಜೀವಶಾಸ್ತ್ರ ಹಾಗೂ ಇತರೆ ವಿಜ್ಞಾನಗಳನ್ನು ಕಲಿಸುವುದಾದರೆ ಜಗತ್ತಿನ ಇತರ ಭಾಗದಲ್ಲಿರುವ ಜನರಿಗಿಂತಲೂ ಶ್ರೇಷ್ಠರಾದ ಜನಾಂಗವನ್ನು ಯೂರೋಪ್‌ನ ರಾಷ್ಟ್ರಗಳು ಮಾಡಿದಂತಾಗುವುದು ಎಂದು ನಾವು ಭರವಸೆಯಿಂದ ಎದುರು ನೋಡುತ್ತಿದ್ದೇವೆ.'
>
> 'ಆಧುನಿಕ ಯೂರೋಪಿನ ಕಲೆ ಮತ್ತು ವಿಜ್ಞಾನಗಳನ್ನು ಏಷ್ಯಾದಲ್ಲಿ ಬೇರೂರಿಸಲು ಪ್ರಯತ್ನಪಟ್ಟ ಪಶ್ಚಿಮ ರಾಷ್ಟ್ರಗಳ ಮಹತ್ವಾಕಾಂಕ್ಷಿ ವ್ಯಕ್ತಿಗಳ ಬಗ್ಗೆ ನಾವು ಈಗಾಗಲೇ ನಮನಗಳನ್ನು ದೈವಕ್ಕೆ ಸಲ್ಲಿಸಿಯಾಗಿದೆ'
>
> 'ಸಂಸ್ಕೃತ ಭಾಷೆಯನ್ನು ಸಂಪೂರ್ಣ ಕಲಿಯಬೇಕೆಂದರೆ ಇಡೀ ಜೀವಾವಧಿಯೇ ಬೇಕಾಗುತ್ತದೆಯಲ್ಲದೆ, ಗೊತ್ತಿರುವ ಸತ್ಯವೆಂದರೆ ಆ ಭಾಷೆಯ ಮೂಲಕ ಜ್ಞಾನ ಪ್ರಸರಣೆ ಶತಮಾನಗಳಿಂದಲೂ ಕಷ್ಟಸಾಧ್ಯವಾಗಿದೆ.'
>
> – ರಾಜಾರಾಮ್ ಮೋಹನ್‌ರಾಯ್

ದಲಿತ್ ಡೈರಿ

ಲಾರ್ಡ್ ಬೇಕನ್‌ರಿಗಿಂತ ಹಿಂದೆ ಇದ್ದಂತಹ ಸೆಮಿನರಿಯನ್ನು ಸ್ಥಾಪಿಸುವುದೆಂದರೆ ಯುವ ಮನಸ್ಸಿನ ಮೇಲೆ ವ್ಯಾಕರಣ ಮತ್ತು ಪಾರಮಾರ್ಥಿಕ ಶಾಸ್ತ್ರಗಳನ್ನು ಹೇರಿದಂತಾಗಿ, ಅದರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ. ಇಂಥ ವಿದ್ಯಾರ್ಥಿಗಳು ಯಾವುದೇ ಬೆಳವಣಿಗೆಯಿಲ್ಲದೆ, ನರಳುತ್ತಿರುವುದನ್ನು ಭಾರತದಾದ್ಯಂತ ನಾವು ಈಗ ನೋಡುತ್ತಿದ್ದೇವೆ.'

'ಸಂಸ್ಕೃತ ಭಾಷೆಯನ್ನು ಸಂಪೂರ್ಣ ಕಲಿಯಬೇಕೆಂದರೆ ಇಡೀ ಜೀವಾವಧಿಯೇ ಬೇಕಾಗುತ್ತದೆಯಲ್ಲದೆ, ಗೊತ್ತಿರುವ ಸತ್ಯವೆಂದರೆ ಆ ಭಾಷೆಯ ಮೂಲಕ ಜ್ಞಾನ ಪ್ರಸರಣೆ ಶತಮಾನಗಳಿಂದಲೂ ಕಷ್ಟಸಾಧ್ಯವಾಗಿದೆ.'

'ವೇದಾಂತಿಗಳು ಸೂಚಿಸುತ್ತಿರುವ ಈ ಕೆಳಗಿನ ತರ್ಕಗಳಿಂದ ಏನೂ ಬೆಳವಣಿಗೆ ಕಾಣದು : ಆತ್ಮವು ದೈವದೊಂದಿಗೆ ತಲ್ಲೀನತೆ ಪಡೆಯುವುದು ಹೇಗೆ ? ದೈವ ಸತ್ಯದೊಂದಿಗೆ ಅದಕ್ಕಿರುವ ಸಂಬಂಧ ಏನು ? ವಾಸ್ತವದಲ್ಲಿ ಕಾಣುವುದೆಲ್ಲಾ ಮಾಯಾ ಎನ್ನುವ ವೇದಾಂತ ಸತ್ಯಗಳಿಂದ ಯುವಜನ ಸಮಾಜದ ಉತ್ತಮ ಪ್ರಜೆಗಳಾಗಲಾರರು.'

'ಅಲ್ಲದೆ, ವೇದ ಪಠಣದಿಂದ ಮೇಕೆಯನ್ನು ಕೊಲ್ಲುವ ವ್ಯಕ್ತಿ ನಿರಪರಾಧಿಯಾಗುತ್ತಾನೆ ಮತ್ತು ವೇದ ಶ್ಲೋಕಗಳಿಂದಾಗುವ ಶ್ರೇಯಸ್ಸು ಮುಂತಾದ ಮೀಮಾಂಸೆಯಿಂದ ವಿದ್ಯಾರ್ಥಿಗಳಿಗೆ ಏನೂ ಅನುಕೂಲವಿಲ್ಲ.'

'ಅಲ್ಲದೆ, ವಿಶ್ವದಲ್ಲಿ ಎಷ್ಟು ವಸ್ತುಗಳು ವರ್ಗೀಕರಣಗೊಂಡಿದೆ ಮತ್ತು ಆತ್ಮ ಮತ್ತು ದೇಹಕ್ಕಿರುವ ಸಂಬಂಧ, ಕಣ್ಣು-ಕಿವಿಗಿರುವ ಸಂಬಂಧ... ಇತ್ಯಾದಿ ತಿಳಿದುಕೊಂಡಿರುವ ನ್ಯಾಯಶಾಸ್ತ್ರದ ವಿದ್ಯಾರ್ಥಿ ತನ್ನ ಮನಸ್ಸನ್ನು ವೃದ್ಧಿಪಡಿಸಿಕೊಂಡಿದ್ದಾನೆಂದು ಹೇಳಲಾಗುವುದಿಲ್ಲ'.

'ಇಂಥ ಕಪೋಲಕಲ್ಪಿತ ಕಲಿಕೆಯ ಅನುಕೂಲವನ್ನು ನೀವು ಮೆಚ್ಚುವುದಾದರೆ, ಲಾರ್ಡ್ ಬೇಕನ್‌ಗಿಂತ ಮುಂಚಿನ ಯೂರೋಪಿನ ವಿಜ್ಞಾನ ಮತ್ತು ಸಾಹಿತ್ಯವನ್ನು ಹೋಲಿಸಿ ನೋಡಬೇಕು. ಅಲ್ಲದೆ, ಬೇಕನ್ ಅನಂತರದಲ್ಲಿ ವಿಜ್ಞಾನದ ಪ್ರಗತಿಯ ಬಗ್ಗೆ ಬರೆದದ್ದನ್ನು ಗಮನಿಸಲೇಬೇಕಾಗುತ್ತದೆ.'

'ಅಜ್ಞಾನವನ್ನು ಮುಂದುವರೆಸುತ್ತಿದ್ದ ಅಂದಿನ ಶಾಲಾ ಪದ್ಧತಿಯನ್ನು ಪರಿವರ್ತನೆ ಮಾಡಿದ ಬೇಕನ್ ಫಿಲಾಸಫಿಯನ್ನು ತಡೆದದ್ದೇ ಆಗಿದ್ದಲ್ಲಿ ಬ್ರಿಟಿಷ್ ರಾಷ್ಟ್ರ ನೈಜಜ್ಞಾನದಿಂದ ದೂರ ಉಳಿಯಬೇಕಾಗುತ್ತಿತ್ತು.' 'ಇದೇ ರೀತಿಯಲ್ಲಿ ಸಂಸ್ಕೃತ ಶಿಕ್ಷಣವೂ ಸಹ ಈ ದೇಶವನ್ನು ಕತ್ತಲಲ್ಲಿಡುತ್ತದೆ ಎನ್ನದೆ ಬೇರೆ ರೀತಿ ಪರಿಗಣಿಸಲಾಗದು.'



ಶ್ರೇಷ್ಠ ಉದಾರವಾದಿ

ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ ಒಬ್ಬ ಅದ್ವಿತೀಯ ವ್ಯಕ್ತಿ. ೧೮೦೦ ಅಕ್ಟೋಬರ್ ೨೫ ರಂದು ಹುಟ್ಟಿದ ಈತ, ತನ್ನ ೫ನೇ ವಯಸ್ಸಿನಲ್ಲೇ ವಿಶ್ವ ಚರಿತ್ರೆಯ ಬಗ್ಗೆ ಬರೆದಿದ್ದ. ಅನಂತರದಲ್ಲಿ ಆತ ಕಾವ್ಯ ಬರೆಯಲು ಆರಂಭಿಸಿದ. ಆತನ ತಂದೆ ಜಕಾರಿಯಾ ಮೆಕಾಲೆ ಗುಲಾಮಗಿರಿಯ ವಿರುದ್ಧ ಹೋರಾಟ ಮಾಡಿದವನಾಗಿದ್ದರಿಂದ ಪ್ರಭಾವ ಮೆಕಾಲೆಗೆ ಇತ್ತು. ಒಂದು ಖಾಸಗೀ ಶಾಲೆಯಲ್ಲಿ ಶಿಕ್ಷಣ ಆರಂಭಿಸಿ ಅನಂತರದಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಟ್ರನಿಟಿ ಕಾಲೇಜಿನಲ್ಲಿ ೧೮೧೮ರಲ್ಲಿ ಪ್ರವೇಶ ಪಡೆದು, ಕಾನೂನು ಅಧ್ಯಯನ ಮಾಡಿದ. ಅಲ್ಲಿ ಆತ ಮೂರನೇ ವಿಲಿಯಂ ಬಗ್ಗೆ ಪ್ರಬಂಧವೊಂದನ್ನು ರಚಿಸಿ, ಬಹುಮಾನ ಗಳಿಸಿದ್ದ. ಅಲ್ಲದೆ ಆತನ ಕವನಗಳೂ ಸಹ ಆತನಿಗೆ ಬಹುಮಾನ ದೊರಕಿಸಿದ್ದವು. ಆತ ಗ್ರೀಕ್ ಹಾಗೂ ಲ್ಯಾಟಿನ್ ಕ್ಲಾಸಿಕ್‌ಗಳಲ್ಲಿ ಪ್ರಾವಿಣ್ಯ ಸಾಧಿಸಿದ್ದ. ೧೮೨೫ರಲ್ಲಿ ಮಿಲ್ಟನ್ ಮೇಲೆ ಬರೆದ ಪ್ರಬಂಧವು ಆತನನ್ನು ಬೌದ್ಧಿಕ ವಲಯದ ತಾರೆಯನ್ನಾಗಿಸಿತು. ಎಡಿನ್‌ಬರ್ಗ್ ಪತ್ರಿಕೆಯಲ್ಲಿ ಆತ ಸ್ವಾತಂತ್ರ್ಯಪರ ವಿಶ್ಲೇಷಣೆಗಳನ್ನು ಬರೆಯಲಾರಂಭಿಸಿದ.

೧೮೨೫ ಜನವರಿಯಲ್ಲಿ ಪ್ರಕಟಪಡಿಸಿದ ಮೊದಲ ಲೇಖನದಲ್ಲೇ ವೆಸ್ಟ್ ಇಂಡೀಸ್‌ನಲ್ಲಿದ್ದ ಗುಲಾಮಗಿರಿ ಮತ್ತು ವಸಾಹತುಶಾಹಿಯನ್ನು ಪ್ರತಿಭಟಿಸಿದ್ದ. ೧೮೨೯ರಲ್ಲಿ ಆತ ಜೇಮ್ಸ್ ಮಿಲ್ ಮತ್ತು ಆತ ಪ್ರಯೋಜನಕಾರಿ ತತ್ವಗಳನ್ನು (Utility Principles) ವಿಮರ್ಶೆಗೊಡ್ಡಿ ಬುದ್ಧಿ ಜೀವಿ ವರ್ಗದಲ್ಲಿ ಒಂದು ಸ್ಥಾನವನ್ನು ಪಡೆದಿದ್ದ. ಇದರಿಂದ ಪ್ರಭಾವಿತನಾದ ಲಾರ್ಡ್ ಲ್ಯಾನ್ಸ್‌ಡೌನ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಸದಸ್ಯತ್ವವನ್ನು ಮೆಕಾಲೆಗೆ ನೀಡಿದ್ದ.

೧೮೩೦ರಲ್ಲಿ ಬ್ರಿಟಿಷ್ ಪಾರ್ಲಿಮೆಂಟನ್ನು ಮೆಕಾಲೆ ಪ್ರವೇಶಿಸಿದ್ದ. ಈ ದಶಕದಲ್ಲಿ ಆತನ ಯುಗ ಪ್ರವರ್ತನಾ ನೀತಿಗಳಿಂದ ಬ್ರಿಟಿಷ್ ಪಾರ್ಲಿಮೆಂಟ್‌ನ ಘನತೆಯನ್ನು ಹೆಚ್ಚಿಸಿದ್ದ.

ಆತನು ಗುಲಾಮಗಿರಿಯ ವಿರುದ್ಧ ಆಂದೋಲನದಲ್ಲಿ ತೊಡಗಿದ್ದ. ಕೆಲವೇ ಜನ ಅನುಕೂಲಸ್ಥರ ಹಕ್ಕಾಗಿದ್ದ 'vote'ನ್ನು ಎಲ್ಲಾ ಮಧ್ಯಮ ವರ್ಗಗಳಿಗೆ ನೀಡಲು ಹೋರಾಟ ಮಾಡಿದ್ದ. ಮಹಿಳೆಯರು ಆಸ್ತಿಯ ಹಕ್ಕನ್ನು ಹೊಂದಲು ಪ್ರಚಾರ ನಡೆಸಿದ್ದ.

ಅಲ್ಲದೆ, ಯಹೂದಿ ಜನರ ವಿರುದ್ಧವಿದ್ದ ಕಾನೂನು ತೆಗೆಯಲು ವಾದಿಸಿದ್ದ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದಿದ್ದನಲ್ಲದೆ, ರೈತರಿಗೆ ಸಬ್ಸಿಡಿ ನೀಡುವುದನ್ನು ವಿರೋಧಿಸಿದ್ದ. ಇಂಡಿಯಾ ಆ್ಯಕ್ಟ್‌ನ್ನು ಸಮರ್ಥಿಸಿಕೊಂಡು ಬಂಡವಾಳಶಾಹಿಗಳನ್ನು ವಿರೋಧಿಸಿದ್ದ. ೧೮೩೨ರ ಈ ಇಂಡಿಯಾ ಆ್ಯಕ್ಟ್ ಮೊದಲ ವಸಾಹತು ಕಾನೂನು ಸಮಿತಿಯನ್ನು ಭಾರತದಲ್ಲಿ ಸ್ಥಾಪಿಸಲು ಪ್ರಯತ್ನಿಸಿತ್ತು. ಯಾವ ಕಾನೂನು ಭಾರತದ ಜನರನ್ನು ಕಾಯುತ್ತಿತ್ತೋ, ಅದೇ ಕಾನೂನಿನಡಿ ಬ್ರಿಟಿಷ್ ಅಧಿಕಾರಿಗಳನ್ನು ತರಲು ಮೆಕಾಲೆ ವಾದಿಸಿದ್ದ.

> ೧೮೩೦ರಲ್ಲಿ ಬ್ರಿಟಿಷ್ ಪಾರ್ಲಿಮೆಂಟನ್ನು ಪ್ರವೇಶಿಸಿದ ಮೆಕಾಲೆ ತನ್ನ ಯುಗ ಪ್ರವರ್ತನಾ ನೀತಿಗಳಿಂದ ಅದರ ಘನತೆಯನ್ನು ಹೆಚ್ಚಿಸಿದ್ದ. ಗುಲಾಮಗಿರಿಯ ವಿರುದ್ಧ ಆಂದೋಲನದಲ್ಲಿ ತೊಡಗಿದ್ದ. ಕೆಲವೇ ಜನ ಅನುಕೂಲಸ್ಥರ ಹಕ್ಕಾಗಿದ್ದ 'vote'ನ್ನು ಎಲ್ಲಾ ಮಧ್ಯಮ ವರ್ಗಗಳಿಗೆ ನೀಡಲು ಹೋರಾಟ ಮಾಡಿದ್ದ. ಮಹಿಳೆಯರು ಆಸ್ತಿಯ ಹಕ್ಕನ್ನು ಹೊಂದಲು ಪ್ರಚಾರ ನಡೆಸಿದ್ದ. ಯಾವ ಕಾನೂನು ಭಾರತದ ಜನರನ್ನು ಕಾಯುತ್ತಿತ್ತೋ, ಅದೇ ಕಾನೂನಿನಡಿ ಬ್ರಿಟಿಷ್ ಅಧಿಕಾರಿಗಳನ್ನು ತರಲು ಮೆಕಾಲೆ ವಾದಿಸಿದ್ದ. ಹಿಂದೂಧರ್ಮ, ಬ್ರಾಹ್ಮಣರು ಮತ್ತು ಜಾತಿ ಪದ್ಧತಿಯನ್ನು ವಿರೋಧಿಸಿದ್ದವರಲ್ಲಿ ಈತ ಮೊದಲ ಬ್ರಿಟಿಷ್‌ನವನಾಗಿದ್ದ. ಅಲ್ಲದೆ ಅಸ್ಪೃಶ್ಯ/ಕೆಳಜಾತಿಯವರು ಭಾರತದಲ್ಲಿ ಉನ್ನತ ಹುದ್ದೆಗಳನ್ನು ಹೊಂದಬಹುದೆಂದು ಮಾತನಾಡಿದವರಲ್ಲೂ ಈತನೇ ಮೊದಲಿಗನೆಂದು ಹೇಳಬಹುದು. ಇವತ್ತಿನ ಆಫ್ಘಾನಿಸ್ತಾನ ಮತ್ತು ನೇಪಾಳ ದೇಶದಂತೆ ಭಾರತ ಆಗಲು ತಡೆದ ಮೆಕಾಲೆ ಅಂದು ಭಾರತದ ಸ್ವಾತಂತ್ರ್ಯ ಮತ್ತು ವೈಜ್ಞಾನಿಕ ಶಿಕ್ಷಣ ಸೈದ್ಧಾಂತಿಕ ತಳಹದಿಯನ್ನು ಹಾಕಿದ್ದ.

ಕೈಗಾರಿಕಾ ಕ್ರಾಂತಿಯನ್ನು ಮೆಕಾಲೆ ಎತ್ತಿ ಹಿಡಿದಿದ್ದ. ಹಿಂದೂಧರ್ಮ, ಬ್ರಾಹ್ಮಣರು ಮತ್ತು ಜಾತಿ ಪದ್ಧತಿಯನ್ನು ವಿರೋಧಿಸಿದ್ದವರಲ್ಲಿ ಈತ ಮೊದಲ ಬ್ರಿಟಿಷ್‌ನವನಾಗಿದ್ದ. ಅಲ್ಲದೆ ಅಸ್ಪೃಶ್ಯ/ಕೆಳಜಾತಿಯವರು ಭಾರತದಲ್ಲಿ ಉನ್ನತ ಹುದ್ದೆಗಳನ್ನು ಹೊಂದಬಹುದೆಂದು ಮಾತನಾಡಿದವರಲ್ಲೂ ಈತನೇ ಮೊದಲಿಗನೆಂದು ಹೇಳಬಹುದು. ಇವತ್ತಿನ ಆಫ್ಘಾನಿಸ್ತಾನ ಮತ್ತು ನೇಪಾಳ ದೇಶದಂತೆ ಭಾರತ ಆಗಲು ತಡೆದ ಮೆಕಾಲೆ ಅಂದು ಭಾರತದ ಸ್ವಾತಂತ್ರ್ಯ ಮತ್ತು ವೈಜ್ಞಾನಿಕ ಶಿಕ್ಷಣ ಸೈದ್ಧಾಂತಿಕ ತಳಹದಿಯನ್ನು ಹಾಕಿದ್ದ.

೧೮೩೩ ಜುಲೈ ೨೬ ರಂದು ಜಗತ್ತಿನಾದ್ಯಂತ ಸ್ವಾತಂತ್ರ್ಯ ಪ್ರಿಯರಿಗೆ ಸ್ಮರಣೀಯ ದಿನ. ಅಂದು ಸಂಜೆ ಮೆಕಾಲೆಯ ಗುರು ಮತ್ತು ಆಧುನಿಕ ಭಾರತದ ಪಿತಾಮಹನೆನಿಸಿದ ವಿಲಿಯಂ ವಿಲ್ಬರ್ ಫೋರ್ಸ್‌ನ ಸಾವು ಸಮೀಪಿಸುತ್ತಿತ್ತು. ಮೆಕಾಲೆ ಕೂಡಲೇ ಪಾರ್ಲಿಮೆಂಟ್‌ನಿಂದ ಆತನತ್ತ ಧಾವಿಸಿದ್ದ. '೧೮೩೩ರ ಗುಲಾಮಗಿರಿ ಪದ್ಧತಿ ರದ್ಧತಿ ಕಾನೂನು' ಅಂಗೀಕಾರವಾಗಿತ್ತೆಂದು ಮೆಕಾಲೆ ಆತನಿಗೆ ತಿಳಿಸಿದ. ಈ ಅಧಿನಿಯಮ ಬ್ರಿಟಿಷ್ ಸಾಮ್ರಾಜ್ಯದಾದ್ಯಂತ ಗುಲಾಮಗಿರಿ/ಗುಲಾಮರ ಮಾರಾಟವನ್ನು ನಿಷೇಧಿಸಿತ್ತು. ವಿಲ್ಬರ್ ಫೋರ್ಸ್ ಆಶ್ಚರ್ಯದಿಂದ ಉದ್ಗರಿಸಿದ್ದ. 'ದೇವರಿಗೆ ವಂದನೆಗಳು! ಇಂಗ್ಲೆಂಡ್ ಗುಲಾಮಗಿರಿಯ ರದ್ಧತಿಗಾಗಿ ೨೦ ಮಿಲಿಯನ್ ಪೌಂಡನ್ನು ನೀಡಲು ಒಪ್ಪಿರುವ ದಿನವನ್ನು ನಾನು ಕಣ್ಣಾರೆ ಕಾಣಲು ಜೀವಿಸಿದ್ದು ಸಾರ್ಥಕ.' ಅನಂತರ ಮೂರು ದಿನಗಳಲ್ಲೇ ಆತ ತೀರಿಕೊಂಡ.

ಈ ಬಿಲ್‌ನ ಬಗ್ಗೆ ಚರ್ಚೆಗಳು ನಡೆಯುತ್ತಿದ್ದಾಗ ಮೆಕಾಲೆ ಒಂದು ದ್ವಂದ್ವ ಸ್ಥಿತಿಯನ್ನು ಎದುರಿಸಬೇಕಾಯಿತು. ಸರ್ಕಾರವೇನೋ ಗುಲಾಮಗಿರಿಯನ್ನು ನಿಷೇಧಿಸಿ ಕಾನೂನು ಹೊರಡಿಸಿತ್ತು. ಆದರೆ ಅದಕ್ಕೊಂದು ಉಪಬಂಧವನ್ನು ಸೇರಿಸಿತ್ತು. ಅಂದರೆ ೧೨ ವರ್ಷಗಳ ಪ್ರಯೋಗಶೀಲ ಅಥವಾ ಸಂಕ್ರಮಣ ಕಾಲ ಎಂದು. ಆದರೆ, ಅದನ್ನು ಸಂಪೂರ್ಣ ನಿಷೇಧಿಸಬೇಕೆಂದು ಆ ಬಿಲ್ ಪರ ಇದ್ದವರು ಬಯಸಿದ್ದರು. ಮೆಕಾಲೆ ಅದನ್ನು ಬೆಂಬಲಿಸಿದ್ದಲ್ಲಿ ತನ್ನ ಸದಸ್ಯತ್ವ ಕಳೆದುಕೊಳ್ಳಬೇಕಾಗಿತ್ತು. ತತ್ವಬದ್ಧ ವ್ಯಕ್ತಿಯಾಗಿದ್ದ ಆತ, ಲಾರ್ಡ್ ಆಲ್ಥೋಪ್‌ನಿಗೆ ರಾಜೀನಾಮೆ ಸಲ್ಲಿಸಿ, ಬಿಲ್‌ನಲ್ಲಿದ್ದ '೧೨ ವರ್ಷ'ದ ಉಪಬಂಧವನ್ನು ವಿರೋಧಿಸಿದ. ಸರ್ಕಾರ ಭಯಪಟ್ಟು ಆ ಉಪಬಂಧವನ್ನು ೬ ವರ್ಷಗಳಿಗೆ ಇಳಿಸಿತು. ಮೆಕಾಲೆ ತನ್ನ ರಾಜೀನಾಮೆಯನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಲಾಯಿತು. ಬ್ರಿಟೀಷ್ ಪಾರ್ಲಿಮೆಂಟ್ ಚರಿತ್ರೆಯಲ್ಲಿ ಇದೊಂದು ವಿಶಿಷ್ಟ ಘಟನೆಯೆಂದೇ ಹೇಳಬೇಕು. ಏಕೆಂದರೆ ಒಬ್ಬ ವಿತ್ತ ಸಚಿವಾಲಯದ ಸದಸ್ಯ ಬಿಲ್ಲನ್ನು ವಿರೋಧಿಸಿದ ಹೊರತಾಗಿಯೂ, ಸದಸ್ಯನಾಗಿ ಮುಂದುವರೆದಿದ್ದ.

ಭಾರತೀಯರು ಆತನನ್ನು ಪ್ರತಿಪಾದಿಸಿರುವಂತೆ ಆತ ಎಂದೂ ಇಂಗ್ಲಿಷ್ ರಾಷ್ಟ್ರವಾದಿಯಾಗಿರಲಿಲ್ಲ. ಆಹಾರ ಪದಾರ್ಥಗಳ ಆಮದಿನ ಮೇಲೆ ಅಧಿಕ ಸುಂಕ ವಿಧಿಸುತ್ತಿದ್ದ 'ಕಾರ್ನ್ ಲಾ' ವನ್ನು ತೆಗೆದುಕೊಳ್ಳಲು ಮೆಕಾಲೆ ಒತ್ತಾಯಿಸಿದ್ದರಲ್ಲೇ ಆತ ತಾನು ರಾಷ್ಟ್ರೀಯ ವಾದಿಯಾಗಿರಲಿಲ್ಲ ಎಂದು ತಿಳಿಯುತ್ತದೆ.

ಜನಸಾಮಾನ್ಯರು ರೊಟ್ಟಿಗಾಗಿ ಅಧಿಕ ಬೆಲೆ ತೆರಬೇಕಾಗಿತ್ತು. ಮೆಕಾಲೆಯ ಬೆಂಬಲದಿಂದಾಗಿ 'ಕಾರ್ನ್ ಲಾ' ನಿಷೇಧಗೊಂಡು ಅಮೇರಿಕಾದಿಂದ ಗೋಧಿಯನ್ನು ಆಮದು ಮಾಡಿಕೊಳ್ಳುವಂತಾಯ್ತು. ೧೮೪೫ ಡಿಸೆಂಬರ್ ೨ ರಂದು ಆತ ಗುಡುಗಿದ. 'ಕೃಷಿಗೆ ರಕ್ಷಣೆ ನೀಡುವುದು ಯಾವಾಗಲೂ ವಿಷ ಚಕ್ರವಿದ್ದಂತೆ.' ಇಂಗ್ಲಿಷ್ ಭೂಮಾಲೀಕರು ಮೆಕಾಲೆ ವಿರುದ್ಧ ಕೆಂಡ ಕಾರಿದರು. ಆದರೂ ಮೆಕಾಲೆ ಬಂಡವಾಳಶಾಹಿಗಳ ವಿರುದ್ಧ ಮಾತನಾಡಿ, 'ಸಾವಿರಾರು ಜನ ಮೂಲಭೂತ ಅಗತ್ಯಗಳಿಂದ ವಂಚಿತರಾಗಿರುವಾಗ ಕೆಲವರೇಕೆ ಬೀಯರ್ ಕುಡಿದು ಕುದುರೆ ಗಾಡಿಗಳಲ್ಲಿ ಸಾಗಬೇಕು?' (ಜಿಮ್ ಪಾವೆಲ್, ತನ್ನ ಪ್ರಸಿದ್ಧ ಲೇಖನ : ಬಿ.ಡಿ. ಮೆಕಾಲೆ : ಸ್ವಾತಂತ್ರ್ಯಕ್ಕಾಗಿ ಉಲ್ಲೇಖ)

೧೮೨೮ರಲ್ಲಿ ತನ್ನ ತಂದೆಯ ವ್ಯಾಪಾರ ಕುಸಿದಾಗ ಮೆಕಾಲೆ ತನ್ನ ಬದುಕಿನ ಬಹುಪಾಲನ್ನು ಬಡತನದಲ್ಲೇ ಕಳೆದಿದ್ದ. ಅವಿವಾಹಿತನಾದ ಈತ ತನ್ನ ಕೌಟುಂಬಿಕ ಸಾಲವನ್ನು ತೀರಿಸಲು ಭಾರತದಲ್ಲಿ ಉದ್ಯೋಗವನ್ನು ಸ್ವೀಕರಿಸಿದ್ದ. ಆತ ೧೮೫೯ ಡಿಸೆಂಬರ್ ೨೮ ರಂದು ತೀರಿಕೊಂಡ. ಆತನ ಕೃತಿ 'ಇಂಗ್ಲೆಂಡಿನ ಚರಿತ್ರೆ' ೧೯ನೇ ಶತಮಾನದುದ್ದಕ್ಕೂ ಅತ್ಯಂತ ಹೆಚ್ಚು ಮಾರಾಟವಾದ ಕೃತಿಯೆನಿಸಿದೆ.

ದಲಿತ್ ಡೈರಿ

ಭಾರತದ ನಿಗೂಢ ಸತ್ಯಗಳು

ದಲಿತ್ ಡೈರಿ

ನಮ್ಮ ಭೂತವನ್ನು ನಮಗೆ ಬೇಕಾದಂತೆ ತಿಳಿಯಬೇಕೆ ಅಥವಾ ಅದು ಇದ್ದಂತೆ ಗ್ರಹಿಸಬೇಕೆ ? ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಕಥೆ ಹೇಳುವುದಕ್ಕೂ ಮತ್ತು ಚರಿತ್ರೆ ಬರೆಯುವುದಕ್ಕೂ ವ್ಯತ್ಯಾಸವಿದೆಯಾ ? ಯಾರು ಮೆಕಾಲೆಯ ಶಿಕ್ಷಣವನ್ನು ತಪ್ಪು ಎಂದು ಪರಿಗಣಿಸುತ್ತಾರೋ ಅವರು ಹಿಂದಿನ ಶಿಕ್ಷಣದ ಬಗ್ಗೆ ಏನೂ ಹೇಳುವುದಿಲ್ಲ. ಮೆಕಾಲೆ ವಿರೋಧಿಸಿ ಪರಿವರ್ತನೆ ಮಾಡಿದ ಶಿಕ್ಷಣ ಪದ್ಧತಿ ಯಾವುದಿತ್ತು?

ಪ್ರಸ್ತುತ ಲೇಖಕ ಉತ್ತಮ ಕಥೆಗಾರನಲ್ಲದಿದ್ದರೂ ರಾಷ್ಟ್ರೀಯ ಪುರಾತತ್ವ ಇಲಾಖೆಯಲ್ಲಿ ಧೂಳು ತಿನ್ನುತ್ತಿರುವ ದಾಖಲೆಗಳತ್ತ ಸ್ವಲ್ಪ ಕಣ್ಣಾಡಿಸಿದರೆ ಸಾಕು, ಭಾರತೀಯ ಶ್ರೇಷ್ಠ ಕಥೆಗಾರರು ಮುಚ್ಚಿಟ್ಟ ಸತ್ಯಗಳು ಹೊರಬೀಳುತ್ತವೆ. ಮೆಕಾಲೆಯ ಹೊಡೆತವನ್ನು ತಾಳಿಕೊಂಡ ಮದ್ರಸಗಳಲ್ಲಿ ಏನು ಕಲಿಸಲಾಗುತ್ತಿದೆಯೆಂದು ಏನೂ ಹೇಳಬೇಕಾಗಿಲ್ಲ. ಆದರೆ ಮೆಕಾಲೆ ಪೂರ್ವದಲ್ಲಿದ್ದ ಅನೇಕ ಸಂಸ್ಕೃತ ಶಾಲೆಗಳು ಈಗ ನಶಿಸಿಹೋಗಿದ್ದು, ನಮ್ಮ ಭೂತವನ್ನು ಶೋಧಿಸಲು ಸಾಧ್ಯವಾಗುತ್ತಿಲ್ಲ. ಮೆಕಾಲೆಯ ಪೂರ್ವ ಭಾರತದಲ್ಲಿ ಎರಡು ರೀತಿಯ ಶಿಕ್ಷಣ ಕ್ರಮಗಳಿದ್ದವು. ಅವನ್ನ ದೇಶಿ ಪದ್ಧತಿಗಳು ಎಂದು ಕರೆಯುವುದು. ಆ ಪದ್ಧತಿಗಳ ವಿಷಯವೆಂದರೆ ಹಿಂದೂ/ಮುಸ್ಲಿಂ ದೈವಶಾಸ್ತ್ರವಾಗಿತ್ತು. ಅಲ್ಲದೆ, ಅದರ ಕಲಿಕಾ ಮಾಧ್ಯಮ ಸಂಸ್ಕೃತ / ಅರೇಬಿಕ್ / ಪರ್ಶಿಯನ್ ಭಾಷೆಗಳಲ್ಲಿತ್ತು. ೧೭೯೧ರಲ್ಲಿ ಬನಾರಸ್ ಸಂಸ್ಕೃತ ಕಾಲೇಜನ್ನು ಜೋನಾಥನ್ ಡಂಕನ್ ಕಂಪನಿಯ ರೆಸಿಡೆಂಟ್‌ನಾಗಿದ್ದಾಗ ಆರಂಭಿಸಿದ ಉದಾಹರಣೆಯನ್ನು ಗಮನಿಸೋಣ.

ಜನವರಿ ೩೧, ೧೮೩೫ರಲ್ಲಿ ಕಂಪನಿಯ ಅಧಿಕಾರಿಯಾಗಿದ್ದ ಎ. ಟ್ರೋಯರ್ ಈ ಕಾಲೇಜಿನ ಬಗ್ಗೆ ಪ್ರಗತಿ ವರದಿಯನ್ನು ನೀಡಿದ. (ಪು. ೪೦, ಆಯ್ದ ಶಿಕ್ಷಣ ವರದಿಗಳು, ೧೭೮೧-೧೮೩೯) ತನ್ನ ವರದಿಯಲ್ಲಿ ಆತ ೧೮೧ ವಿದ್ಯಾರ್ಥಿಗಳ ಪಟ್ಟಿಯನ್ನು ನೀಡಿ ಅವರು ಅಧ್ಯಯನ ಮಾಡುತ್ತಿದ್ದ ವಿಷಯಗಳ ಪ್ರಕಾರ ವರದಿ ಮಾಡಿದ್ದಾನೆ:

ವಿಷಯ	ವಿದ್ಯಾರ್ಥಿಗಳು
ಸಂಸ್ಕೃತ ವ್ಯಾಕರಣ	೭೮
ಸಂಸ್ಕೃತ ಸಾಹಿತ್ಯ	೨೮
ಸಂಸ್ಕೃತ ಶೈಲಿ	೧೬
ಸಂಸ್ಕೃತ ಗಣಿತ	೧೨
ಸಂಸ್ಕೃತ ತರ್ಕ	೦೭
ಸಂಸ್ಕೃತ ಕಾನೂನು	೨೧
ಸಂಸ್ಕೃತ ವೈದ್ಯ	೧೩

ಕಾಲೇಜು ಸ್ಥಾಪಿಸಿದಾಕ್ಷಣ, ಆದರ ಸ್ಥಾಪಕ ಜೋನಾಥನ್ ಡಂಕನ್ ೧೭೯೨, ಜನವರಿ ೧ ರಂದು ಕಾಲೇಜಿನ ನಿಯಮಾವಳಿಯನ್ನು ಪ್ರತಿಪಾದಿಸಿ, ಅದಕ್ಕೆ ಒಪ್ಪಿಗೆಯನ್ನು ಪಡೆಯುತ್ತಾನೆ.

೧. ಕೌನ್ಸಿಲ್‌ನ ಗೌರ್‍ನರ್ ಬಾಹ್ಯ ವೀಕ್ಷಕ ಮತ್ತು ರೆಸಿಡೆಂಟ್ ಆತನ ಡೆಪ್ಯುಟಿ.

೨. ರೆಸಿಡೆಂಟ್‌ನ ಹಸ್ತದ ಮೂಲಕವೇ ವಿದ್ಯಾರ್ಥಿ ಭತ್ಯೆ ನೀಡುವುದು; ಆದರೆ ರೆವಿನ್ಯೂ ಸಂಗ್ರಹದಲ್ಲಿ ಪಂಡಿತರು ಹಸ್ತಕ್ಷೇಪ ಮಾಡಬಾರದು.

೩. ೯ ಮಂದಿಗೆ ವಿದ್ಯಾರ್ಥಿ ವೇತನ ನೀಡಿ (ಅಥವಾ ೧೮ ಮಂದಿಗೆ ನೀಡಬಹುದು) ಕಲಿಸುವುದು; ಇವರ ಪೋಷಕರು ಶಿಕ್ಷಣಕ್ಕೆ ಹಣ ನೀಡಲಾರದವರಾದಲ್ಲಿ ಅಂತಹವರನ್ನು ಆಯ್ಕೆ ಮಾಡುವುದು. ಉಳಿದಂತೆ ಇತರ ಎಲ್ಲಾ ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಗೆ ಶುಲ್ಕ ನೀಡತಕ್ಕದ್ದು.

೪. ಪರಿವೀಕ್ಷಕ ಬರುವ ವೇಳೆ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ತಮ್ಮ ಜಾಗದಲ್ಲಿರತಕ್ಕದ್ದು.

೫. ದೂರುಗಳಿದ್ದಲ್ಲಿ ಮೊದಲು ರೆಸಿಡೆಂಟರಲ್ಲಿ ಸಲ್ಲಿಸುವುದು. ಅನಂತರ ತೀರ್ಮಾನಕ್ಕಾಗಿ ಪರಿವೀಕ್ಷಕರಲ್ಲಿ ಹೋಗತಕ್ಕದ್ದು.

೬. ವೈದ್ಯಕೀಯ ಶಾಸ್ತ್ರ ಕಲಿಸುವವ 'ವೈದ್ಯ' ನಾಗಿರಬೇಕು. ಹಾಗೆಯೇ ವ್ಯಾಕರಣ ಶಿಕ್ಷಕನೂ ಸಹ. ಆದರೆ ಪಾಣಿನಿಯನ್ನು ಕಲಿಸುವವ ವೈದ್ಯನನ್ನು ಹೊರತುಪಡಿಸಿ ಬ್ರಾಹ್ಮಣನಾಗಿರಲೇಬೇಕು.

೭. ಮುಖ್ಯಸ್ಥರಾಗುವಲ್ಲಿ ಅಪರಿಚಿತರನ್ನು ಹೊರತುಪಡಿಸಿ, ಬ್ರಾಹ್ಮಣ ಶಿಕ್ಷಕರೇ ಆಗಬೇಕು. ಮತ್ತು ವಿದ್ಯಾರ್ಥಿಗಳು ಪ್ರೊಫೆಸರ್‌ಗಳಾಗುವಾಗ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು.

೮. ಪವಿತ್ರವೆಂದು ಭಾವಿಸಿರುವ ಕೆಲವು ಶಿಸ್ತುಗಳನ್ನು ಬ್ರಾಹ್ಮಣರೆದುರಲ್ಲಿ ಮಾತ್ರ ರೆಸಿಡೆಂಟ್‌ನ ಹಾಜರಾತಿಯಲ್ಲಿ ವಿದ್ಯಾರ್ಥಿಗಳಿಗೆ ವರ್ಷದಲ್ಲಿ ನಾಲ್ಕು ಬಾರಿ ಪರೀಕ್ಷೆ ನಡೆಸುವುದು.

೯. ಪ್ರತಿಯೊಬ್ಬ ಪ್ರಾಧ್ಯಾಪಕನೂ ಸಹ ವರ್ಷಕ್ಕೊಮ್ಮೆ ತನ್ನ ಆಯಾ ವಿಜ್ಞಾನದಲ್ಲಿ ಒಂದು ಉಪನ್ಯಾಸವನ್ನು ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸತಕ್ಕದ್ದು. ಅಂತಹ ಪ್ರತಿಗಳನ್ನು ಕಾನೂನು ರೀತ್ಯ ರೆಸಿಡೆಂಟನಿಗೆ ಒಪ್ಪಿಸುವುದು.

೧೦. ರೆಸಿಡೆಂಟನು ನೇಮಿಸಿದ ಬ್ರಾಹ್ಮಣ ಸಮಿತಿಯು ರಹಸ್ಯ ಶಿಸ್ತುಗಳಲ್ಲಿ ವಿದ್ಯಾರ್ಥಿಗಳಿಗೆ ವರ್ಷದಲ್ಲಿ ನಾಲ್ಕು ಬಾರಿ ಪರೀಕ್ಷೆ ನಡೆಸುವುದು.

೧೧. ಪ್ರತಿಯೊಂದು ಶಿಸ್ತಿನ ಬೋಧನಾ ಕ್ರಮವನ್ನು ಅನೇಕ ಪ್ರಾಧ್ಯಾಪಕರು ಕೂಡ ಸಿದ್ಧಪಡಿಸುವುದು.

೧೨. ಕಾಲಕ್ರಮೇಣ ಕಾಲೇಜಿನ ಬಳಕೆಗಾಗಿ ಒಂದು ಒಳ್ಳೆಯ ಲೈಬ್ರರಿ ಸ್ಥಾಪಿಸುವ ಸಲುವಾಗಿ, ವಿದ್ಯಾರ್ಥಿಗಳು ಪುಸ್ತಕಗಳನ್ನು ಪ್ರತಿಮಾಡಿಕೊಡತಕ್ಕದ್ದು.

೧೩. ಶಿಕ್ಷಣದ ಕ್ರಮದಲ್ಲಿ ಕಾಲೇಜಿನ ಶಿಸ್ತು ಎಲ್ಲಾ ರೀತಿಯಲ್ಲೂ ಧರ್ಮ ಶಾಸ್ತ್ರದ ಪ್ರಕಾರ ಇರುವಂಥದ್ದು. ಮನುವಿನ ಎರಡನೇ ಪುಸ್ತಕ ಶಿಸ್ತನ್ನು ಒಳಗೊಂಡಿದೆ.

ಈ ಸಂಗತಿಗಳ ಮೇರೆಗೆ ಲಾರ್ಡ್ ಮೆಕಾಲೆ ಯಾವ ವಿಧದಲ್ಲಿ ತಪ್ಪು ಎಂದು ನಮ್ಮ ಶ್ರೇಷ್ಠ ಕಥೆಗಾರರು ಹೇಳುವರೇ? ಅಥವಾ ಮೆಕಾಲೆ ಇಲ್ಲದೆ, ೧೯೪೭ ಆಗಸ್ಟ್ ೧೫ರ ತನಕ ಇದ್ದ ದೇಶೀ ಶಿಕ್ಷಣ 'ಭವಿಷ್ಯದ' ಮೇಲೆ ಬೀರಿದ ಪರಿಣಾಮವಾದರೂ ಎಂಥದ್ದು? ಇಂಥ ಅನೇಕ ನಿಗೂಢ ಸತ್ಯಗಳನ್ನು ದಲಿತ್ ಡೈರಿ ಬಯಲುಗೊಳಿಸಲು ಇಚ್ಛಿಸುತ್ತದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು – ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಚಿತ್ರ ಅವಲೋಕನ

ಯುದ್ಧೋತ್ಪಾದಕರಾದ ಅಮೆರಿಕದಂತಹ ರಾಷ್ಟ್ರಗಳಿಗೆ ಭಯೋತ್ಪಾದಕರ ಹಾಗೂ ಆ್ಯಕ್ಟಿವಿಸ್ಟ್‌ಗಳ ನಡುವಿನ ಅಂತರವೇ ತಿಳಿಯದಾಗಿದೆ. ಆದ್ದರಿಂದ ಈ ಸೈದ್ಧಾಂತಿಕ ತಿಳುವಳಿಕೆ ಇಲ್ಲವಾಗಿ ಯಾವ ಪಾತಕವನ್ನೂ ಮಾಡದ ಅನೇಕ ಹೋರಾಟಗಾರರನ್ನು ಹತ್ತಿಕ್ಕಲಾಗುತ್ತಿದೆ. ಇವತ್ತಿನ ತೀರ ಸರಳ ಸತ್ಯವೆಂದರೆ ಜಡ ಜೀವ ವಿರೋಧಿ ವ್ಯವಸ್ಥೆಯನ್ನು ಪ್ರಶ್ನಿಸುವುದೇ ಭಯೋತ್ಪಾದಕತೆಯಾಗಿ ಬಿಡುತ್ತಿದೆ. ಉಳ್ಳವರ ಪರ ಇರುವ ಕೆಲ ಸುದ್ದಿ ಮಾಧ್ಯಮಗಳೂ ಅವರನ್ನೇ ವೈಭವೀಕರಿಸಿ ಪ್ರಚಾರ ಮಾಡುತ್ತವೆ. ಆಗ ಕಂಫರ್ಟ್ ಝೋನಿನಲ್ಲಿ ನಿಂತ 'ಶಾಂತಿ' ವ್ಯಸನಿಗಳು ಸುಳ್ಳನ್ನೇ ಸತ್ಯವೆಂದು ನಂಬಿ ತಮ್ಮ ಸೃಜನಶೀಲ ಕ್ರಿಯೆಗೆ ಮುಂದಾಗುತ್ತಾರೆ.

○ ಪ್ರೊ॥ ಶಿವರಾಮಯ್ಯ

ಸಾಮಾನ್ಯ ಚಿತ್ರಕ್ಕೆ ಚಿನ್ನದ ಚೌಕಟ್ಟು

ಬರಗೂರು ರಾಮಚಂದ್ರಪ್ಪನವರ ಚಲನಚಿತ್ರ 'ಶಾಂತಿ' ಎಂಬುದು ಬಂದೂಕಿನ ನಳಿಗೆಯಲ್ಲಿ ಪಾರಿವಾಳ ಗೂಡುಕಟ್ಟಬೇಕು ಎಂಬ ಬಂಡಾಯ ಚಳವಳಿಯ ಆಶಯಕ್ಕೆ ಬದ್ಧವಾಗಿದ್ದಂತೆ ತೋರಿಬಂದರೂ ಒಟ್ಟು ಪರಿಣಾಮದಲ್ಲಿ ಮಾತ್ರ ಆ ಆಶಯ ಕೈಜಾರಿ ಹೋಗಿ, ಪುನಃ ಜಾಗತಿಕ ಜಡ ವ್ಯವಸ್ಥೆಯನ್ನೇ ಓಲೈಸುವತ್ತ ಮುಖ ಮಾಡಿರುವಂತೆ ಕಂಡುಬರುತ್ತದೆ. ಈ ಮಾತಿನ ಸಮರ್ಥನೆಗೆ ಚಿತ್ರದ ಆರಂಭ ಮತ್ತು ಮುಕ್ತಾಯಗಳನ್ನು ನಾವು ಸೂಕ್ಷ್ಮವಾಗಿ ಗ್ರಹಿಸಬೇಕಾಗಿದೆ. ಚಿತ್ರಕಲಾವಿದೆ ಶಾಂತಿಯು ವಿಶ್ವಸಂಸ್ಥೆ ಪ್ರತಿವರ್ಷ ಆಚರಿಸುವ 'ಶಾಂತಿ' ದಿನಾಚರಣೆಯ ಅಂಗವಾಗಿ ತನ್ನ ಚಿತ್ರಪ್ರದರ್ಶನಕ್ಕೆ ಅವಕಾಶ ಸಿಕ್ಕಿತೆಂದು ಸಂಭ್ರಮಿಸುವುದು; ಆದಕ್ಕೆಂದು ತಯಾರಿ ನಡೆಸಲು ನಿಬಿಡಾರಣ್ಯದ ನಡುವಿನ ರೆಸಾರ್ಟ್ ಒಂದರಲ್ಲಿ ಏಕಾಂಗಿಯಾಗಿ ಹೋಗಿ ತಂಗುವುದು; ಅಲ್ಲಿ ಬುದ್ಧ, ಗಾಂಧಿ ಮುಂತಾದ ಚಿತ್ರಗಳನ್ನು ರಚಿಸುವುದು; ಅದೃಶ್ಯ ಅಭಿಮಾನಿ ನರಸಿಂಹನ ಹೊಗಳಿಕೆಗೆ ಹಿಗ್ಗುವುದು; ಆಮೇಲೆ ಭಯೋತ್ಪಾದಕರ ಗೃಹ ಬಂಧನಕ್ಕೆ ಸಿಲುಕಿ ಪೇಚಾಡುವುದು; ಕಡೆಗೆ ತನ್ನ ಅಭಿಮಾನಿ ತಲುಪಿಸಿದ ಪಿಸ್ತೂಲು ಮತ್ತು ಪಾರಿವಾಳದ ಸಮೇತ ಅಲ್ಲಿಂದ ತಪ್ಪಿಸಿಕೊಳ್ಳುವುದು; ತನ್ನ ಕಾರ್ ಛೇಸ್ ಮಾಡಿಕೊಂಡು ಬರುತ್ತಿದ್ದ ಭಯೋತ್ಪಾದಕರ ಕಾರನ್ನು ಪಂಕ್ಚೇರ್ ಮಾಡಿ ಬಚಾವಾಗಿ ನಗರಕ್ಕೆ ಹಿಂತಿರುಗುವುದು; ಅಂತಿಮವಾಗಿ ತನ್ನ ಅಭೀಷ್ಟದಂತೆ ಅಮೆರಿಕದ ಫ್ಲೈಟ್ ಹತ್ತಿ ಗಮಿಸುವುದು - ಇದಿಷ್ಟು ಚಿತ್ರ ಕಥೆಯ ಹಂದರ.

ಇಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆಗಳೆಂದರೆ ಸೈದ್ಧಾಂತಿಕವಾಗಿ ಯುದ್ಧೋತ್ಪಾದಕರು ಹಾಗೂ ಭಯೋತ್ಪಾದಕರು ಎಂದರೆ ಯಾರು ? ಅವರ ಚಹರೆ ಪಟ್ಟಿಗಳೇನಾದರೂ ಉಂಟೆ? ಇದಕ್ಕೆ ಅನುಷಂಗಿಕವಾಗಿ ನಮ್ಮ ವಿಶ್ವಸಂಸ್ಥೆ ಎಂಬುದು ಯಾರ ಪರ? ಅಲ್ಲಿ ಪ್ರತಿವರ್ಷ ಆಚರಿಸಲ್ಪಡುವ 'ವಿಶ್ವ ಶಾಂತಿ' ದಿನಾಚರಣೆಗೆ ಏನಾದರೂ ಅರ್ಥ ಉಂಟೆ? ಅಲ್ಲಿ ತನ್ನ ಚಿತ್ರ ಪ್ರದರ್ಶನ ಮಾಡಿದ ಮಾತ್ರಕ್ಕೆ ಕಲಾವಿದನ ಜನ್ಮ ಸಾರ್ಥಕವಾಗುವುದೆ? ಇತ್ಯಾದಿ. ಈ ಕಾರಣಕ್ಕಾಗಿ ನಾವು ಅಂತರರಾಷ್ಟ್ರೀಯ ವಿದ್ಯಮಾನಗಳನ್ನು ಕುರಿತು ಅನಿವಾರ್ಯವಾಗಿ ಸ್ವಲ್ಪ ಪರಾಮರ್ಶನ ಮಾಡಬೇಕಾಗಿದೆ. ಈ ಚಿತ್ರದಲ್ಲಿ ಸೂಚಿತವಾಗಿರುವಂತೆ ಯುದ್ಧೋತ್ಪಾದಕರು ಮತ್ತು ಭಯೋತ್ಪಾದಕರು ಬೇರೆ ಬೇರೆ ಅಲ್ಲ, ಬೀಜ ವೃಕ್ಷ ನ್ಯಾಯವೆಂಬಂತೆ, ಒಂದೇ ನಾಣ್ಯದ ಎರಡು ಮುಖಗಳೆಂಬಂತೆ ಅವರ ಚಹರೆ ಪಟ್ಟಿಗಳಿವೆ.

ಪ್ರಸ್ತುತ ಜಾಗತಿಕ ಸಂದರ್ಭದಲ್ಲಿ ಉದಾಹರಣೆ ನೀಡುವುದಾದರೆ ಪ್ರೊ॥ ನೋಮ್ ಚಾಮ್‌ಸ್ಕಿ ಎಂಬ ಅಮೆರಿಕದ ಭಾಷಾತಜ್ಞ ಚಿಂತಕರು ಹೇಳಿರುವಂತೆ ಅಮೆರಿಕವೇ ಜಗತ್ತಿನ ಅತ್ಯಂತ ಬಲಿಷ್ಠ ಭಯೋತ್ಪಾದಕ ರಾಷ್ಟ್ರ. ಇನ್ನು ಒಸಾಮ ಬಿನ್ ಲಾಡೆನ್ ಅಂತೂ ಅಂತರರಾಷ್ಟ್ರೀಯ ಭಯೋತ್ಪಾದಕನೇ ಸರಿ. ಇದು ಜಾಗತಿಕ ಸತ್ಯ. ಹೀಗಿರುವಾಗ ಅವರು ಯಾರನ್ನು ಈಗ ಭಯೋತ್ಪಾದಕರು ಎಂದು ಕರೆಯುತ್ತಾರೋ ಆ ಲಾಡೆನ್ ಮತ್ತು ಸದ್ದಾಂರಂತಹ ಲೋಕಕಂಟಕ ತಳಿಗಳನ್ನು ಸಂಕರಗೊಳಿಸಿ ಹುಟ್ಟುಹಾಕಿ ಬೆಳೆಸಿದ್ದು ಯಾರು? ಎಂದರೆ ಅದಕ್ಕೆ ಪೂರ್ಣ ಜವಾಬ್ದಾರಿ ಅಮೆರಿಕವೇ ಎಂಬುದೂ ಜಗಜ್ಜಾಹೀರಾದ ಸತ್ಯ.

ಆದರೆ ೨೦೦೧ನೆ ಸೆಪ್ಟೆಂಬರ್ ಹನ್ನೊಂದರ ಘಟನೆಯನ್ನು ನೆಪ ಮಾಡಿಕೊಂಡ ಅಮೆರಿಕ 'ವಾರ್ ಅಂಡ್ ಟೆರರಿಸಂ' ವಿರುದ್ಧ ಅಧಿಕೃತ ಫರ್ಮಾನು ಹೊರಡಿಸಿ, ಅವರನ್ನು ಮಟ್ಟಹಾಕಲು ವಿಶ್ವ ರಾಷ್ಟ್ರಗಳ ಅಭಿಪ್ರಾಯ ರೂಪಿಸಲು ಅಂತರರಾಷ್ಟ್ರೀಯ ಮಾಧ್ಯಮಗಳನ್ನು ಗುತ್ತಿಗೆ ಪಡೆಯಿತು. ಅವು ಇದರ ಮೂಗಿನ ನೇರಕ್ಕೆ ಕಹಳೆ ಮೊಳಗಿಸಿದವು. ಈ ಮೊದಲು ಆಫ್‌ಘಾನಿಸ್ಥಾನದ ಪುಂಡ ತಾಲೀಬಾನರನ್ನು ಮಣಿಸಿದ ಅಮೆರಿಕ ಮಿತ್ರ ಪಡೆಗಳು, ಕಳೆದ ವರ್ಷ (೨೦೦೩) ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಪರವಾನಿಗೆಯನ್ನೂ ಲೆಕ್ಕಕ್ಕಿಡದೆ ಒಂದು ಸಾರ್ವಭೌಮ ರಾಷ್ಟ್ರವಾದ ಇರಾಕಿನ ನೆತ್ತಿಯ ಮೇಲೆ ತನ್ನ ಬೂಟು ಕಾಲಿಕ್ಕಿ ತುಳಿದವು. ಹೀಗೆ ಭಯೋತ್ಪಾದಕತೆಯ ಬೀಜಮಂತ್ರ ಅಮೆರಿಕ ಮತ್ತು ಅದರ ಬಾಲಂಗೋಚಿ ಬ್ರಿಟನ್ನಿನ ಬಳಿ ಇದ್ದರೂ ಸಹ ಲೋಕ

ಸಮುಜಾಯಿಷಿಗಾಗಿ ಭಯೋತ್ಪಾದನೆಯ ನಿರ್ಮೂಲನೆ ಹಾಗೂ ಜನತಂತ್ರ ಸ್ಥಾಪನೆ ಎಂಬ ಡೋಂಗಿ ಮಾತುಗಳನ್ನೇ ಆಡುತ್ತ ಬರುತ್ತಿವೆ. ಇದನ್ನೇ ಪರಮ ಸತ್ಯವೆಂದೂ ಅಮೆರಿಕದಿಂದ ಉಪಕೃತರಾದ ರಾಷ್ಟ್ರಗಳು ನಂಬಿ ತಲೆಹಾಕಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಸಾರಾಂಶವೆಂದರೆ ಯುದ್ಧವೆಂಬುದು ಭಯೋತ್ಪಾದಕರ ನಡುವಿನ ಜಗಳ ಮಾತ್ರ ಎಂದಾಯಿತು. ಇದನ್ನು ಕುರಿತು ಇನ್ನಷ್ಟು ವಿವರಿಸಬಹುದು.

ಅಮೆರಿಕದ ಈ ಬಗೆಯ ದುಂಡಾವರ್ತನೆಗೆ ಮೂಲ ಕಾರಣ ವಿಶ್ವಯುದ್ಧದ ನಂತರ ಉದ್ಭವಿಸಿದ ಅದರ ಆರ್ಥಿಕ ಬಿಕ್ಕಟ್ಟು. ತನ್ನ ಯುದ್ಧೋದ್ಯಮಕ್ಕೆ ಗಿರಾಕಿಗಳು ಬೇಕು; ತಾನು ತಯಾರಿಸುವ ಯುದ್ಧಾಸ್ತ್ರಗಳಿಗೆ ವಿವಿಧ ಖನಿಜ ಸಂಪನ್ಮೂಲಗಳು ಬೇಕು; ಅದಕ್ಕಾಗಿ ಪೆಟ್ರೋಲಿಯಂ ಉತ್ಪನ್ನಗಳು ಬೇಕು; ಇದರಿಂದ ತನ್ನ ಆರ್ಥಿಕ ಬಿಕ್ಕಟ್ಟನ್ನು ಸರಿದೂಗಿಸಿಕೊಳ್ಳಬೇಕು. ಆದ್ದರಿಂದ ಅಮೆರಿಕದ ಸಿಐಎ ಏಜೆಂಟರು ವಿಶ್ವ ರಾಷ್ಟ್ರಗಳಲ್ಲಿ ಅಂತರ್ ಯುದ್ಧಗಳನ್ನು ಹುಟ್ಟುಹಾಕಿದರು.

ಜನ ಪ್ರತಿನಿಧಿಗಳಿಂದ ಆಯ್ಕೆಗೊಂಡ ಅನೇಕ ಸರ್ಕಾರಗಳನ್ನು ಮೂಲೆ ಗುಂಪು ಮಾಡಿ ತಮ್ಮ ಕೈಗೊಂಬೆ ಸರ್ಕಾರಗಳನ್ನು ಅಧಿಕಾರದಲ್ಲಿ ನಿಲ್ಲಿಸಿದರು. ಇಂಥ ಅನ್ಯಾಯಗಳನ್ನು ಕಂಡು ಸಹಿಸದೆ ಪ್ರತಿಭಟಿಸಿದ ಪ್ರಗತಿಪರ ಹೋರಾಟಗಾರರನ್ನೂ ಭಯೋತ್ಪಾದಕರು ಎಂದೇ ಬಣ್ಣಿಸಿ ಕೊಲ್ಲುತ್ತಾ ಬಂದರು. ಎರಡನೇ ವಿಶ್ವಯುದ್ಧದ ತರುವಾಯ ಹೀಗೆ ಕೊಂದವರ ಸಂಖ್ಯೆ ಲಕ್ಷಾಂತರ ಮೀರಿದೆ. ಕಮ್ಯೂನಿಸ್ಟ್ ಪರ ವಾಲುತ್ತಿದ್ದ ವಿಯೆಟ್ನಾಂ, ಇಂಡೋನೇಷಿಯಾ, ಲ್ಯಾಟಿನ್ ಅಮೆರಿಕ, ಆಫ್ರಿಕಾ ಹಾಗೂ ಅರಬ್ ರಾಷ್ಟ್ರಗಳಲ್ಲಿ ಅಂತರ್ ಯುದ್ಧಗಳನ್ನು ಹುಟ್ಟು ಹಾಕಿ ಅಲ್ಲಿ ತಲೆ ಎತ್ತುತ್ತಿದ್ದ ಜನತಂತ್ರಗಳನ್ನು ಹೊಸಕಿ ಹಾಕುತ್ತಾ ಬಂತು ಅಮೆರಿಕ.

ಅದರ ಕೆಂಗಣ್ಣು ಕ್ಯೂಬಾದಂತಹ ಪುಟ್ಟ ದ್ವೀಪದ ಮೇಲೂ ಬಿದ್ದಿದೆ. ಜೊತೆಗೆ ಆರ್ಥಿಕ ಸಾಮ್ರಾಜ್ಯದಲ್ಲಿ ತಾನೇ ಚಕ್ರವರ್ತಿಯಂತೆ ವಿರಾಜಿಸುವ ಅಮೆರಿಕವನ್ನು ಯೂರೋಪಿಯನ್ ರಾಷ್ಟ್ರಗಳೂ ಸಹ ಓಲೈಸುತ್ತ ಬಂದವು. ವಿಶ್ವಬ್ಯಾಂಕ್, ಡಬ್ಲ್ಯೂಟಿಒ ಮತ್ತು ಐಎಮ್‌ಎಫ್‌ಗಳ ಬಡ್ಡಿದರಗಳೂ ಕೂಡ ಬರು ಬರುತ್ತಾ ಅಮೆರಿಕಾದ ಬೊಕ್ಕಸವನ್ನು ತುಂಬುತ್ತಾ ಬಂದವು; ಎಮ್‌ಎನ್‌ಸಿಗಳು ಕೊಬ್ಬಿದವು.

ಹೀಗಾಗಿ ಸೋವಿಯತ್ ರಷ್ಯಾ ಮಗ್ಗಲು ಮಲಗಿದ ಮೇಲೆ ಅಮೆರಿಕದ ಕತ್ತಿಗೆ ಎದುರೇ ಇಲ್ಲವೆಂಬಂತಾಯಿತು. ವಿಪರ್ಯಾಸವೆಂದರೆ ತಾನು ಹಿಡಿದ ಮೊಲಕ್ಕೆ ಎರಡು ಕೊಂಬುಗಳುಂಟು ಎಂಬಂತೆ ಈ ಬಲಾಢ್ಯ ರಾಷ್ಟ್ರಗಳ ಜಾಗತಿಕ ಶೋಷಣೆಗೆ ಅಡ್ಡಿಯೇ ಇಲ್ಲದಂತಾಯಿತು. ಆದರೂ ಅನಿವಾರ್ಯವಾಗಿ ಆ ಶೋಷಕರನ್ನು ಪ್ರತಿಭಟಿಸಿದ, ದಮನಿತರ ಪರ ದನಿ ಎತ್ತಿದ, ಸಮ ಸಮಾಜದ ಕನಸು ಕಾಣುವ ಪ್ರಜಾ ವಿಮೋಚನಾ ಸಂಘಟನಾಕಾರರನ್ನು ಸಾರಾಸಗಟಾಗಿ ಭಯೋತ್ಪಾದಕರೆಂದೇ ಪರಿಗಣಿಸಿ ಅಣಗಿಸುವ ಯತ್ನ ನಡೆಯುತ್ತಲೇ ಇದೆ.

ಯದ್ಧೋತ್ಪಾದಕರಾದ ಅಮೆರಿಕದಂತಹ ರಾಷ್ಟ್ರಗಳಿಗೆ ಭಯೋತ್ಪಾದಕರ ಹಾಗೂ ಆ್ಯಕ್ಟಿವಿಸ್ಟ್‌ಗಳ ನಡುವಿನ ಅಂತರವೇ ತಿಳಿಯದಾಗಿದೆ. ಆದ್ದರಿಂದ ಈ ಸೈದ್ಧಾಂತಿಕ ತಿಳುವಳಿಕೆ ಇಲ್ಲವಾಗಿ ಯಾವ ಪಾತಕವನ್ನೂ ಮಾಡದ ಅನೇಕ ಹೋರಾಟಗಾರರನ್ನು ಹತ್ತಿಕ್ಕಲಾಗುತ್ತಿದೆ. ಫ್ಯಾಸಿಸ್ಟ್ ಪ್ರಭುತ್ವಗಳು ಅವರ ಮೇಲೆ ಮುಗಿಬಿದ್ದು ಎನ್‌ಕೌಂಟರ್ ನೆಪದಲ್ಲಿ ಮುಗಿಸಿಬಿಡುತ್ತಿವೆ. ಇವತ್ತಿನ ತೀರ ಸರಳ ಸತ್ಯವೆಂದರೆ ಜಡ ಜೀವ ವಿರೋಧಿ ವ್ಯವಸ್ಥೆಯನ್ನು ಪ್ರಶ್ನಿಸುವುದೇ ಭಯೋತ್ಪಾದಕತೆಯಾಗಿಬಿಡುತ್ತಿದೆ. ಉಳ್ಳವರ ಪರ ಇರುವ ಕೆಲ ಸುದ್ದಿ ಮಾಧ್ಯಮಗಳೂ ಅವರನ್ನೇ ವೈಭವೀಕರಿಸಿ ಪ್ರಚಾರ ಮಾಡುತ್ತವೆ. ಆಗ ಕಂಫರ್ಟ್ ಝೋನಿನಲ್ಲಿ ನಿಂತ 'ಶಾಂತಿ' ವ್ಯಸನಿಗಳು ಸುಳ್ಳನ್ನೇ ಸತ್ಯವೆಂದು ನಂಬಿ ತಮ್ಮ ಸೃಜನಶೀಲ ಕ್ರಿಯೆಗೆ ಮುಂದಾಗುತ್ತಾರೆ.

ಒಂದು ಸಣ್ಣ ಜನಪದದ ಕಥೆಯ ಮೂಲಕ ಇದನ್ನು ಸ್ಪಷ್ಟಪಡಿಸಬಹುದು. ಪ್ರವಾಹದ ಸೆಳೆವಿಗೆ ಸಿಕ್ಕಿದ ಬಡ ನರಿಯೊಂದು ಪ್ರಪಂಚ ಹಾಳಾಯ್ತೆಂದು ಬೊಬ್ಬೆ ಇಡುತ್ತಿತ್ತು. ಆದರೆ ಕ್ಷೇಮ ದಡದಲ್ಲಿ ನಿಂತಿದ್ದ ಜನ 'ಎಲ್ಲಿ ಹಾಳಾಯ್ತು? ಏ ಮೂರ್ಖ ನರಿ ಎಲ್ಲ ಇದ್ದಂತೆಯೇ ಇದೆಯಲ್ಲ? ನೀನು ಬಾಯ್ಮುಚ್ಚು' ಎಂದು ಗದರಿಬಿಡುತ್ತಾರೆ. ಆದರೆ ಆ ಬಡಪಾಯಿ ನರಿ ದೀನ ಸ್ವರದಲ್ಲಿ 'ಅಯ್ಯೋ ನನ್ನ ಪಾಲಿಗಂತೂ ಹಾಳಾಗಿ ಹೋಯ್ತು' ಎಂದುಸುರುತ್ತಾ ಪ್ರವಾಹದಲ್ಲಿ ಕೊಚ್ಚಿ ಹೋಯ್ತು. ನಮ್ಮ ವ್ಯವಸ್ಥೆ ಹೀಗಿದ್ದು ಹಿಂಸೆ ಕೂಡದು ಎಂದು ಮಾತನಾಡುವ ಮಂದಿ ತಮ್ಮ ಅರಿವೇ ಇಲ್ಲದೆ ಫ್ಯಾಸಿಸ್ಟ್ ಹಿಂಸೆಯ ಪರ ವಕಾಲತ್ತು ವಹಿಸುತ್ತಾರೆ. ಪಾಪ ! ಈ ನರಿಯಂಥ ಬಡಪಾಯಿ ಜನರ ಕಷ್ಟ ಅವರಿಗೆ ಹೇಗೆ ತಟ್ಟಬೇಕು ?

ಈಗ ನನ್ನ ಆರಂಭದ ಪ್ರಶ್ನೆಗಳಿಗೆ ಉತ್ತರ ದೊರೆತಿರಬೇಕು. ಪರಿಸ್ಥಿತಿ ಇಂತಿರುವಾಗ ವಿಶ್ವ ರಾಷ್ಟ್ರ ಸಂಸ್ಥೆ ಎಂಬುದು ಆ ಬಲಾಢ್ಯ ರಾಷ್ಟ್ರಗಳ ಕೈ ಬೊಂಬೆಯಾಗಿದೆಯಲ್ಲದೆ ಅದಕ್ಕೆ ಸ್ವತಂತ್ರ ಅಸ್ತಿತ್ವ ಇಲ್ಲ. ಹೀಗಾಗಿ ಅದು ಆಚರಿಸುವ 'ಶಾಂತಿ' ದಿನಾಚರಣೆಗೆ ಏನಾದರೂ ಅರ್ಥವುಂಟೆ ? ವರ್ಷಕ್ಕೊಮ್ಮೆ ಅದು ಆಚರಿಸುವ ಶಾಂತಿ ದಿನಾಚರಣೆ ಎಂಬುದು ಜಾಗತಿಕ ದಮನಿತರ ಶ್ರಾದ್ಧದಂತೆ ಕಂಡುಬರುತ್ತಿದೆಯಲ್ಲವೇ ? ಅಂಥಾದ್ದರಲ್ಲಿ ಹೋಗಿ ಭಾಗವಹಿಸಲು ಸಂಭ್ರಮಿಸುವ ಶಾಂತಿ ಚಲನಚಿತ್ರದ ನಾಯಕಿಯ 'ಶಾಂತಿ' ಪರಿಕಲ್ಪನೆಯು ಈ ಪ್ರತಿಗಾಮಿ ವ್ಯವಸ್ಥೆಯ ಪರವೇ ಆಗಿದೆಯೆಂದು ಭಾಸವಾಗುತ್ತದೆ. ಆದ ಪ್ರಯುಕ್ತ ಈ ಚಿತ್ರ ಪ್ರೇಕ್ಷಕನ ಅಂತರ್ಯಕ್ಕೆ ಇಳಿಯದೇ ಹೋಗುವುದು. ಅದಕ್ಕಾಗಿ ಇಷ್ಟೆಲ್ಲಾ ಹೇಳಬೇಕಾಯಿತು.

ವಿಶ್ವ ಸಂಸ್ಥೆ ಎಂಬುದು ಬಲಾಢ್ಯ ರಾಷ್ಟ್ರಗಳ ಕೈ ಬೊಂಬೆಯಾಗಿದೆಯಲ್ಲದೆ ಅದಕ್ಕೆ ಸ್ವತಂತ್ರ ಅಸ್ತಿತ್ವ ಇಲ್ಲ. ಹೀಗಾಗಿ ಅದು ಆಚರಿಸುವ 'ಶಾಂತಿ' ದಿನಾಚರಣೆಗೆ ಏನಾದರೂ ಅರ್ಥವುಂಟೆ ? ವರ್ಷಕ್ಕೊಮ್ಮೆ ಅದು ಆಚರಿಸುವ ಶಾಂತಿ ದಿನಾಚರಣೆ ಎಂಬುದು ಜಾಗತಿಕ ದಮನಿತರ ಶ್ರಾದ್ಧದಂತೆ ಕಂಡುಬರುತ್ತಿದೆಯಲ್ಲವೇ ? ಅಂಥಾದ್ದರಲ್ಲಿ ಹೋಗಿ ಭಾಗವಹಿಸಲು ಸಂಭ್ರಮಿಸುವ ಶಾಂತಿ ಚಲನಚಿತ್ರದ ನಾಯಕಿಯ 'ಶಾಂತಿ' ಪರಿಕಲ್ಪನೆಯು ಈ ಪ್ರತಿಗಾಮಿ ವ್ಯವಸ್ಥೆಯ ಪರವೇ ಆಗಿದೆಯೆಂದು ಭಾಸವಾಗುತ್ತದೆ. ಆದ ಪ್ರಯುಕ್ತ ಈ ಚಿತ್ರ ಪ್ರೇಕ್ಷಕನ ಅಂತರ್ಯಕ್ಕೆ ಇಳಿಯದೇ ಹೋಗುವುದು.

ಈ ಚಿತ್ರದ ಮತ್ತೊಂದು ಎದ್ದು ಕಾಣುವ ನ್ಯೂನತೆಯೆಂದರೆ ಚಿತ್ರ ಕಲಾವಿದನೊಬ್ಬ ತನ್ನ ಸ್ಫೂರ್ತಿಯನ್ನು ಅರಸಿ ಇಷ್ಟು ದುಬಾರಿ ನಿಸರ್ಗ ತಾಣಕ್ಕೆ ಹೋಗುವ ಅವಶ್ಯಕತೆ ಉಂಟೇ ಎಂಬುದು.

ಈ ಚಿತ್ರದ ಮತ್ತೊಂದು ಎದ್ದು ಕಾಣುವ ನ್ಯೂನತೆಯೆಂದರೆ ಚಿತ್ರ ಕಲಾವಿದನೊಬ್ಬ ತನ್ನ ಸ್ಫೂರ್ತಿಯನ್ನು ಅರಸಿ ಇಷ್ಟು ದುಬಾರಿ ನಿಸರ್ಗ ತಾಣಕ್ಕೆ ಹೋಗುವ ಅವಶ್ಯಕತೆ ಉಂಟೇ ಎಂಬುದು. ಯಾಕೆಂದರೆ ಪ್ಯಾಬ್ಲೋ ಪಿಕಾಸೋ ಅಂತಹ ಜಗದ್ವಿಖ್ಯಾತ ಕಲಾವಿದ ತನ್ನ ಪ್ರಖ್ಯಾತ ಚಿತ್ರ 'ಗರ್ನಿಕಾ' ಎಂಬುದನ್ನು ರಚಿಸಲು ಕುಂಚವನ್ನು ಕೈಗೆತ್ತಿಕೊಂಡದ್ದು ಯಾವಾಗೆಂದರೆ ನಾಝಿಗಳು ಸ್ಪೇನಿನ 'ಗರ್ನಿಕಾ' ನಗರದ ಮೇಲೆ ಬಾಂಬ್ (೧೯೩೭) ಸುರಿದುದನ್ನು ಪ್ರತಿಭಟಿಸಲು ಪ್ಯಾರಿಸ್ ನಗರದ ಬೀದಿ ಬೀದಿಗಳಲ್ಲಿ ಸುಮಾರು ಹತ್ತು ಲಕ್ಷ ಜನರು ರ್‍ಯಾಲಿಯಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ.

ಇದರಿಂದ ತಿಳಿದು ಬರುವುದೇನೆಂದರೆ ನಿಜವಾದ ಕಲಾವಿದನಿಗೆ ಸಾಮಾಜಿಕ ಬದ್ಧತೆ ಮುಖ್ಯವೇ ಹೊರತು ಶ್ರೀಮಂತ ನಿಸರ್ಗ ತಾಣ ಅಲ್ಲವೆಂಬುದು. ಎಂದರೆ ಈ ಚಿತ್ರ ಕಲಾವಿದೆಯು ಇಷ್ಟೊಂದು ದುಬಾರಿ ಬೆಲೆ ತೆತ್ತು ಸ್ಫೂರ್ತಿ ಪಡೆಯಬೇಕಾಗಿರಲಿಲ್ಲ. ಇದೆಲ್ಲ ಶ್ರೀಮಂತ ರಾಷ್ಟ್ರಗಳ ರೆಸಾರ್ಟ್ ಸಂಸ್ಕೃತಿಯ ಲಕ್ಷಣದಂತಿದೆಯಲ್ಲವೇ? ಅದಕ್ಕೆ ಪೂರ್ವ ಪೀಠಿಕೆ ಆಗುವುದಿಲ್ಲವೆ ? ಇನ್ನು ಹೆಚ್ಚು ಹೇಳಬೇಕಾಗಿಲ್ಲ.

ಯಾಕೆಂದರೆ ಬಂಡಾಯವೇ ಉಸಿರಾದ ಬರಗೂರು ರಾಮಚಂದ್ರಪ್ಪನವರಂಥ ಪ್ರಯೋಗಶೀಲ ನಿರ್ದೇಶಕರಿಗೆ ಇದೆಲ್ಲ ತಿಳಿಯದ ವಿಚಾರವೇನೂ ಅಲ್ಲ. ಆದರೆ ಅವರು ಎರಡು ದೋಣಿಗಳಲ್ಲಿ ಕಾಲಿಟ್ಟ ಪಯಣಿಗನ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಎಂದರೆ ಮೇಲೆ ವ್ಯವಸ್ಥೆ ಹುಟ್ಟುಹಾಕಿದ ಸೆನ್ಸಾರ್ ತೂಗು ಕತ್ತರಿ, ಅವರೊಳಗೆ ಬಂಡಾಯದ ಅದಮ್ಯ ತುಡಿತ ! ಇವುಗಳನ್ನು ಬ್ಯಾಲೆನ್ಸ್ ಮಾಡಲು ಹೊರಟ ನಮ್ಮ ನಿರ್ದೇಶಕರ ಜಾಣ ಪ್ರತಿಭೆ ನಾಯಕಿಯ ಒಂದು ಕೈಗೆ ಪಿಸ್ತೂಲನ್ನೂ, ಆ ಇನ್ನೊಂದು ಕೈಗೆ ಪಾರಿವಾಳವನ್ನೂ ಇಟ್ಟು ಈ ಕಾವ್ಯಾತ್ಮಕ ಸಂಕೇತಗಳ ಮೂಲಕ ರಾಜಿ ಮಾಡಿಕೊಂಡು ಬಿಡುತ್ತದೆ. ಹೀಗಾಗಿ 'ಶಾಂತಿ' ಚಲನಚಿತ್ರವು 'ವಿಶ್ವ ಶಾಂತಿ ದಿನಾಚರಣೆ'ಯ ಸಂದರ್ಭಕ್ಕೆ ತಯಾರಿಸಿದ ಒಂದು ಜಾಹಿರಾತು ಚಿತ್ರದಂತಾಗಿ ಅದರಲ್ಲಿ ಮಾನವೀಯ ಮುಖದ ಗೈರು ಹಾಜರಿ ಎದ್ದು ಕಾಣುತ್ತದೆ.

ಕಡೆಯದಾಗಿ, ಶಾಂತಿ ಚಿತ್ರದ ಫಿನಿಷಿಂಗ್ ಬಗ್ಗೆ ಯಾರೂ ಚಕಾರ ಎತ್ತುವಂತಿಲ್ಲ. ಫೋಟೋಗ್ರಫಿ, ಸೌಂಡ್ ರೆಕಾರ್ಡಿಂಗ್ ಹಾಗೂ ಸಂಗೀತ ಸಂಯೋಜನೆ, ಈ ಮೂರೂ ಮುಪ್ಪುರಿಗೊಂಡು ನಿರ್ದೇಶನ ತಂಡದ ಕಲಾಭಿರುಚಿಗೆ ಕೋಡು ಮೂಡಿಸಿದೆ. ಮೈಮಾಟದಲ್ಲಿ ವಿಶ್ವ ಸುಂದರಿಯರನ್ನೂ ನಾಚಿಸುವಂತಿರುವ ನಟಿ ಭಾವನಾ ತನ್ನ ಅಭಿನಯದಿಂದಲೂ ಭರವಸೆಯನ್ನು ಮೂಡಿಸುತ್ತಾರೆ. ಫೋಟೋಗ್ರಾಫರ್ ನಾಗರಾಜ ಅದವಾನಿಯವರ ಕ್ಯಾಮರವು ನಾಯಕನಿಲ್ಲದ ಈ ಚಿತ್ರಕ್ಕೆ ನಾಯಕನೋ ಎಂಬಂತಿದೆ. ಅದು ಸಹಸ್ರಾಕ್ಷನಂತೆ ಮಲೆನಾಡಿನ ನಿಸರ್ಗ

ಸಿರಿಯನ್ನು ಸೆರೆಹಿಡಿಯುವ ಮೂಲಕ ಕಂಗಳ ಸಿರಿಯಾಗಿದೆ. ನಾಯಕಿಯ ಏಕಮಾತ್ರ ಸಂಗಾತಿಯಂತಿರುವ ಪಾರಿವಾಳ ಚಿತ್ರದ ಮನಾಟಸಿಯನ್ನು ನಿವಾರಿಸಲು ಸ್ವಲ್ಪ ಮಟ್ಟಿಗೆ ಸಹಕಾರಿಯಾಗಿದೆ. ಅದು ಬೆಚ್ಚಿ ಪಟ ಪಟನೆ ರೆಕ್ಕೆ ಬಡಿದರೆ ನೋಟಕರ ಎದೆಯ ಬಡಿತವೂ ಹೆಚ್ಚುತ್ತದೆ.

ಇನ್ನು ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳಾದ ಫೋನು, ಪಿಸ್ತೂಲು, ರೈಫಲ್ಸ್, ಕ್ಯಾಮರಾ ಮುಂತಾದ ಪರಿಕರಗಳ ಬಳಕೆಯ ಸಾಧ್ಯತೆಯನ್ನು ಈ ಚಿತ್ರ ಸೂರೆಗೊಂಡಿದೆ. ಇದೆಲ್ಲ ಅತ್ಯಂತ ವಿನೂತನ ಟೆಕ್‌ನಿಕ್ ಎಂಬುದರಲ್ಲಿ ಎರಡು ಮಾತಿಲ್ಲ. ಈ ವಸ್ತು ಪರಿಕರಗಳ

ಒಟ್ಟಾರೆ ಈ ಅದ್ದೂರಿಯ ಕಲಾತ್ಮಕತೆಯನ್ನು ಗಮನಿಸಿದರೆ, ಸಾಮಾಜಿಕ ನ್ಯಾಯಕ್ಕೆ ಬೆನ್ನು ಕೊಟ್ಟು ಪಲಾಯನ ಗೈಯ್ಯಲು ಹವಣಿಸುತ್ತಿರುವ ಸಾಮಾನ್ಯ ಚಿತ್ರಕ್ಕೆ ಹಾಕಲ್ಪಟ್ಟ ಸುವರ್ಣದ ಚೌಕಟ್ಟು ಎಂದು ಕರೆದರೆ ಹೆಚ್ಚು ಸಮಂಜಸವಾದೀತು. ಯಾಕೆಂದರೆ ಚಿತ್ರದ ಆಶಯವಾದ ಬಂದೂಕಿನ ನಳಿಗೆಯಲ್ಲಿ ಪಾರಿವಾಳಗಳು ಗೂಡು ಕಟ್ಟಬೇಕು ಎಂಬ ಬಂಡಾಯದ ಮಾತು ಘೋಷಣೆಯ ಮಟ್ಟದಲ್ಲಿಯೇ ಉಳಿದು ನಮ್ಮ 'ಶಾಂತಿ' ಪರಿಕಲ್ಪನೆಯನ್ನು ಚಿತ್ರ ಹುಸಿಗೊಳಿಸುತ್ತದೆಯಾದ್ದರಿಂದ.

ಧ್ವನಿಗ್ರಹಣ ಮಾತ್ರದಿಂದಲೇ ಅವುಗಳನ್ನು ಹಿಡಿದಿರುವ, ಬಳಸುತ್ತಿರುವ ವ್ಯಕ್ತಿಗಳ ರೂಪ ಸ್ವರೂಪ ಚಹರೆಗಳು ನಮ್ಮ ಕಣ್ಣು ಮುಂದೆ ಸುಳಿಯುತ್ತವೆ. ಎಂದರೆ ಪ್ರತ್ಯಕ್ಷ ವ್ಯಕ್ತಿಗಳಿಗೆ ಪರ್ಯಾಯವೆಂಬಂತೆ ಈ ವಸ್ತುಗಳ ಜೀವಂತ ಬಳಕೆಯಾಗಿದೆ. ಒಟ್ಟಾರೆ ಈ ಅದ್ದೂರಿಯ ಕಲಾತ್ಮಕತೆಯನ್ನು ಗಮನಿಸಿದರೆ, ಸಾಮಾಜಿಕ ನ್ಯಾಯಕ್ಕೆ ಬೆನ್ನು ಕೊಟ್ಟು ಪಲಾಯನ ಗೈಯ್ಯಲು ಹವಣಿಸುತ್ತಿರುವ ಸಾಮಾನ್ಯ ಚಿತ್ರಕ್ಕೆ ಹಾಕಲ್ಪಟ್ಟ ಸುವರ್ಣದ ಚೌಕಟ್ಟು ಎಂದು ಕರೆದರೆ ಹೆಚ್ಚು ಸಮಂಜಸವಾದೀತು. ಯಾಕೆಂದರೆ ಚಿತ್ರದ ಆಶಯವಾದ ಬಂದೂಕಿನ ನಳಿಗೆಯಲ್ಲಿ ಪಾರಿವಾಳಗಳು ಗೂಡು ಕಟ್ಟಬೇಕು ಎಂಬ ಬಂಡಾಯದ ಮಾತು ಘೋಷಣೆಯ ಮಟ್ಟದಲ್ಲಿಯೇ ಉಳಿದು ನಮ್ಮ 'ಶಾಂತಿ' ಪರಿಕಲ್ಪನೆಯನ್ನು ಚಿತ್ರ ಹುಸಿಗೊಳಿಸುತ್ತದೆಯಾದ್ದರಿಂದ. □

ಕಲ್ಲು ಬಿರುಕಿನಲಿ ಹುಟ್ಟಿದ ಆಲ



ಬೋಳು ಬಂಡೆಯ ಮೇಲೆ
ಕಲ್ಲ ಬಿರುಕಿನ ಒಳಗೆ
ತಾನೊಂದೆ ಹುಟ್ಟಿದೆ

ಬೇರಿಗೆ ಮರೆಯಿಲ್ಲ
ಚಿಗುರಿಗೆ ನೆರಳಿಲ್ಲ
ಬದುಕುವ ಛಲವಿದ್ದಿತಲ್ಲ

ಬೇಸಗೆಯಲಿ ಬೆಂದು
ಚಳಿಯಲ್ಲಿ ಉದುರಿ
ಅಂತಃಶಕ್ತಿಯಲಿ ಉಳಿದು
ಕಡೆಗೂ ಚಿಗುರಿತ್ತು ಮುಂಗಾರಿನಲಿ

ಬಂಡೆಯ ಮೇಲೆ ಎರಡೆಲೆಯ ಕಂಡು
ನಕ್ಕವರೆಷ್ಟೋ ಹೊಸಕಿದವರೆಷ್ಟೋ

ಕಲ್ಲ ಕಣಕಣವ ಬಿಡಿಸಿ
ಮುಂದೆ ನುಗ್ಗುವ ಮಂತ್ರವೊಂದನೆ ಜಪಿಸಿ
ದಾರದೆಳೆಯ ಬೇರ ಹೊರಡಿಸಿ
ಆತ್ಮ ಬಲವ ಸಾರಿತ್ತು
ತಂತು ಬೇರಾಗಿ, ಖಾಂಡವಾಗಿ, ಪುಖಾಂಡವಾಗಿ
ಆಲದ ಮರ ಹೆಮ್ಮರವಾಗಿತ್ತು
ಕಡೆಗೂ ಬಂಡೆ ಬಿರಿದಿತ್ತು

ಮರಕೆ ಬಂಡೆ ನೆಲೆಯಾಗಿ
ಬಂಡೆಗೆ ಮರ ಆಸರೆಯಾಗಿ
ಬದುಕಿತ್ತು ಬದುಕೇ ಬದುಕಿತ್ತು
ಬದುಕಲು ಕಲಿಸಿತ್ತು

○ ಡಾ|| ವಸು ಎಂ.ವಿ



'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
❖ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦
❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೮೭೨ ❖ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೩೦೨
❖ ಕೆ.ಎಸ್.ರಾವ್ ರಸ್ತೆ, ಮಂಗಳೂರು-೧, ☎ : ೨೪೪೧೦೦೬ ❖ ರಾಮಸ್ವಾಮಿ ವೃತ್ತ, ಮೈಸೂರು-೨೪, ☎ : ೨೪೨೪೯೯೪
☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦
☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಪ್ಲಾಟ್ ಫಾರ್ಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು





ಹೊಸ ಪುಸ್ತಕ

ಶಿಕ್ಷಣ ಸಿರಿ

ಸಂ. ಶಿವಶಂಕರ ಹಿರೇಮಠ, ಅನ್ನದಾನಿ ಹಿರೇಮಠ ಮತ್ತು ರಾಮಚಂದ್ರ ಪಾಟೀಲ

ಬೆಲೆ : ರೂ. ೧೦೦/-

ಶ್ರೀ ವೀ.ವೀ. ಗಡಾದ ಅಭಿವಂದನ ಗ್ರಂಥವಾದ ಇದರಲ್ಲಿ ಅನೇಕ ಪ್ರಾಥಮಿಕ ಶಾಲಾ ಶಿಕ್ಷಕರು ಮಕ್ಕಳಿಗಾಗಿ ರಚಿಸಿರುವ ಕಥೆ, ಕವನ, ಲೇಖನ, ನಾಟಕ ಇತ್ಯಾದಿ ಪ್ರಕಾರಗಳಿವೆ. ಹಾಗೆಯೇ ಅವರ ಕಿರು ಪರಿಚಯಗಳೂ ಇವೆ. ಸಾಹಿತ್ಯಾಸಕ್ತರಿಗೆ ೨೦ನೆಯ ಶತಮಾನದ ಕಿತ್ತೂರು ಪ್ರಾಥಮಿಕ ಶಿಕ್ಷಕ ಬರಹಗಾರರ ಪರಂಪರೆಯನ್ನು ಗುರುತಿಸಿ ಅವರ ಕ್ಷಣ ದರ್ಶನವನ್ನು ನೀಡುವ ಪ್ರಯತ್ನ ಇಲ್ಲಿದೆ.

ಪ್ರಕಾಶಕರು : ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ ಹಾಗೂ ಶ್ರೀ ವೀ.ವೀ. ಗಡಾದ ಅಭಿನಂದನ ಸಮಿತಿ, ಗದಗ.



ಪಂಜರ

ಲೇ. ಸಾರಾ ಅಬೂಬಕ್ಕರ್

ಬೆಲೆ : ರೂ. ೯೦/-

ಅವಿವಾಹಿತ ತಾಯಿಯೋರ್ವಳು ತನ್ನ ಮಗುವಿನೊಡನೆ ನಮ್ಮ ಸಮಾಜಗಳಲ್ಲಿ ಬದುಕಿ ಬಾಳಬೇಕೆಂದಾಗ ಆಕೆ ಎದುರಿಸಬೇಕಾದ ಸಮಸ್ಯೆಗಳು ನೂರಾರು. ತನ್ನ ಮಗು ತನ್ನ ಕಣ್ಣೆದುರಿಗಿದ್ದರೂ 'ಅದು ನನ್ನ ಮಗು' ಎಂದು ಹೇಳಿಕೊಳ್ಳಲಾಗ ದಂತಹ ಪರಿಸ್ಥಿತಿ ಆಕೆಯದು. ಈ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹ ಕಾದಂಬರಿ ಇದು. ಸಾಮಾಜಿಕ ಸಮಸ್ಯೆಯ ಕೆಲವು ಮುಖಗಳನ್ನು ಲೇಖಕರು ಇದರಲ್ಲಿ ಪರಿಚಯಿಸಿದ್ದಾರೆ.

ಪ್ರಕಾಶಕರು : ಚಂದ್ರಗಿರಿ ಪ್ರಕಾಶನ, ೨-೨೧-೧೬೩೧/೨, ಸೂಕ್ಷ್ಮ ತರಂಗ ನಿಲಯ ರಸ್ತೆ, ಮಂಗಳೂರು - ೫೭೫ ೦೦೬



ಕಾಳಾಮುಖ ದರ್ಶನ

ಲೇ. ಎಸ್.ಎಸ್. ಹಿರೇಮಠ

ಬೆಲೆ : ರೂ. ೪೫/-

ದರ್ಶನಗಳು ಈ ನೆಲದ ದೇಶೀಯ ಚಿಂತನಾಕ್ರಮಗಳು. 'ಕಾಳಾಮುಖರು' ಎಂದೋ ಇದ್ದಿರಬಹುದಾದ ಇಂಥದೇ ಸಾಂಘಿಕ ಪಂಥದ ಸಾಧಕರು. ದಕ್ಷಿಣ ಭಾರತಕ್ಕೆ ಮಾತ್ರ ಸೀಮಿತವಾಗಿದ್ದ ಈ ಪಂಥ ಭವ್ಯ ಶೈವ ದೇವಾಲಯಗಳ ನಿರ್ಮಿತಿ ಹಾಗೂ ವೀರಶೈವ ಚಳವಳಿಯ ಹಿಂದೆ ಅದಕ್ಕೆ ಒಂದು ನೆಲೆಯನ್ನು ನಿರ್ಮಿಸುತ್ತಿದ್ದ ರೋಚಕ ಕತೆಯಾಗಿದೆ. ಸಿಗುವ ಕಡಿಮೆ ಆಕರಗಳಲ್ಲಿ ಅವರ ಚಿಂತನ ದರ್ಶನದ ಬಗ್ಗೆ ಕಲ್ಪನೆಗೆ ಕಡೆಗೋಲು ಹಚ್ಚುವ ಕೆಲಸ ಇಲ್ಲಿದೆ.

ಪ್ರಕಾಶಕರು : ಸಮತಾ ಪ್ರಕಾಶನ, ಹರಪನಹಳ್ಳಿ.

ಸಮಾಜವಾದವೇ ಪರ್ಯಾಯ

ಸಂ. ಬಿ. ಎನ್. ಶಾರದಾ

ಬೆಲೆ : ರೂ. ೧೦೦/-

'ಸಮಾಜವಾದವೇ ಪರ್ಯಾಯ' ಎಂಬ ಈ ಸಂಪಾದನಾ ಕೃತಿಯಲ್ಲಿ ಖ್ಯಾತ ಸಮಾಜವಾದಿ ಚಿಂತಕರ ಲೇಖನಗಳ ಸಂಗ್ರಹ ವಿದೆ. ಕಿಶನ್ ಪಟ್ನಾಯಕ್‌ರ 'ಸೋಷಲಿಸ್ಟ್ ಇಂಟರ್‌ನ್ಯಾಷನಲ್', ಮೇಧಾ ಪಾಟ್ಕರ್‌ರ 'ಸ್ವಾತಂತ್ರ್ಯವನ್ನು ಅರ್ಥಪೂರ್ಣಗೊಳಿಸಲು ಸಂಘರ್ಷ' ಮತ್ತು ಮಂಗ್ಳೂರು ವಿಜಯರ 'ಸಮಾಜವಾದಿ ಧೀಮಂತ ಲೋಹಿಯಾ' ಹಾಗೂ ಇನ್ನೂ ಹಲವಾರು ಲೇಖಕರ ಲೇಖನಗಳಿವೆ.

ಪ್ರಕಾಶಕರು : ಸಂಬುದ್ಧ ಪ್ರಕಾಶನ, ವಿ. ನಾಗನಹಳ್ಳಿ, ಬೆಂಗಳೂರು - ೫೬೦ ೦೩೨



ಸುಮಯ್ಯಾ

ಲೇ. ಸಾರಾ ಅಬೂಬಕ್ಕರ್

ಬೆಲೆ : ರೂ. ೪೫/-

ಮುಸ್ಲಿಂ ಜನಪದ ಕತೆಗಳು ಕನ್ನಡ ಭಾಷೆಯಲ್ಲಿ ಬೆಳಕು ಕಂಡದ್ದು ಅಪರೂಪ. ಲೇಖಕರು ಈ ಕೃತಿಯಲ್ಲಿ ಅಂತಹ ಒಂದು ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಪ್ರವಾದಿಗಳ ಕಾಲದಲ್ಲಿ ಅವರ ಅನುಯಾಯಿಯೊಬ್ಬರು ಇಸ್ಲಾಂ ಧರ್ಮ ಸ್ವೀಕರಿಸುವ ಮೊದಲು ತಮ್ಮ ಬದುಕಿನಲ್ಲಿ ನಡೆದ ಘಟನೆಯನ್ನು ಪ್ರವಾದಿಗಳಿಗೆ ವಿವರಿಸಿದಂತಹ ಒಂದು ವಿವರಣೆಯನ್ನು 'ಸುಮಯ್ಯಾ' ಎಂಬ ಈ ನೀಳ್ಗತೆಯಲ್ಲಿ ರಚಿಸಿದ್ದಾರೆ.

ಪ್ರಕಾಶಕರು : ಚಂದ್ರಗಿರಿ ಪ್ರಕಾಶನ, ೨-೨೧-೧೬೩೧/೨, ಸೂಕ್ಷ್ಮ ತರಂಗ ನಿಲಯ ರಸ್ತೆ, ಮಂಗಳೂರು - ೫೭೫ ೦೦೬



ಧರ್ಮ, ಮೂಲಭೂತವಾದ ಮತ್ತು ರಾಷ್ಟ್ರಹಿತ

ಲೇ. ಕಿಶನ್ ಪಟ್ನಾಯಕ್ ಮತ್ತು ಡಾ॥ ರಹಮತ್ ತರೀಕೆರೆ

ಬೆಲೆ : ರೂ. ೧೫/-

ಗುಜರಾತ್ ಹತ್ಯಾಕಾಂಡದ ಹಿನ್ನೆಲೆಯಲ್ಲಿ ಸಮಾಜವಾದಿ ಚಿಂತಕರಾದ ದಿ॥ ಕಿಶನ್ ಪಟ್ನಾಯಕ್ ಅವರು 'ಧರ್ಮ, ಮೂಲಭೂತವಾದ ಮತ್ತು ರಾಜಕಾರಣ' ಎಂಬ ಲೇಖನವನ್ನು ಹಾಗೂ ಕೋಮುವಾದಿಗಳು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಯತ್ನಿಸುತ್ತಿರುವ ಬಾಬಾಬುಡನ್‌ಗಿರಿಯ ಕುರಿತಾದ, ಡಾ॥ ರಹಮತ್ ತರೀಕೆರೆ ಅವರು ಬರೆದಿರುವ 'ಬಾಬಾಬುಡುನ್‌ಗಿರಿ ಮತ್ತು ಅವಧೂತ ಪರಂಪರೆ' ಎಂಬ ಲೇಖನವನ್ನು ಈ ಕೃತಿ ಒಳಗೊಂಡಿದೆ.

ಪ್ರಕಾಶಕರು : ನೆಲಸಿರಿ ಪ್ರಕಾಶನ, ನಂ. ೩೭, ೨ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು - ೫೬೦ ೦೩೨

ವಿವೇಕಾನಂದರ ವಿಚಾರಗಳು

ನಮ್ಮ ಸಂಘವಿರುವುದು ಅನಾಥರಿಗೆ, ದೀನರಿಗೆ, ನಿರಕ್ಷರಸ್ಥರಾದ ಬೇಸಾಯಗಾರರಿಗೆ ಮತ್ತು ಕೂಲಿಕಾರರಿಗೆ ಮೊದಲು ಅವರಿಗೆ ಎಲ್ಲವನ್ನೂ ಮಾಡಿ ಆದಮೇಲೆ ಕಾಲ ಸಿಕ್ಕಿದರೆ ನಂತರ ಮೇಲು ವರ್ಗದವರಿಗೆ. ರೈತಾಪಿ ಜನರ ಕೆಲವು ಬಾಲಕ ಬಾಲಕಿಯರಿಗೆ ಸ್ವಲ್ಪ ಓದು ಬರಹವನ್ನು ಕಲಿಸಿ ಅವರ ತಲೆಗೆ ಕೆಲವು ಮಹತ್ತರವಾದ ವಿಷಯಗಳನ್ನು ತುಂಬಿ, ಅನಂತರ ಪ್ರತಿ ಹಳ್ಳಿಯ ರೈತರೂ ಕೂಡ ಚಂದಾ ಎತ್ತಿ ತಮ್ಮ ಹಳ್ಳಿಯಲ್ಲೇ ಇಂತಹ ಒಂದು ಶಾಲೆಯನ್ನು ತೆರೆಯುವರು. ತನ್ನಿಂದ ತಾನೇ ಉದ್ಧಾರವಾಗಬೇಕು. ಇದು ಎಲ್ಲಾ ಕ್ಷೇತ್ರದಲ್ಲೂ ಸಲ್ಲುತ್ತದೆ.

ಸಂಗ್ರಹ:
ಜ.ಹೊ. ನಾರಾಯಣಸ್ವಾಮಿ

ಭಾರತೀಯರು ಸ್ವಾರ್ಥಮೂರ್ತಿಗಳು

ಅಯ್ಯೋ ! ಯಾರೂ ದೇಶದ ಬಡಬಗ್ಗರ ವಿಚಾರವಾಗಿ ಯೋಚಿಸುವುದಿಲ್ಲ. ಅವರೇ ಪಟ್ಟಣದ ಮೂಲಾಧಾರ. ಅವರ ಶ್ರಮದಿಂದ ಆಹಾರ ಉತ್ಪತ್ತಿಯಾಗುತ್ತಿದೆ. ಈ ಬಡಜನರು, ಗುಡಿಸುವವರು, ಕೂಲಿಕಾರರು ಒಂದು ದಿನ ಕೆಲಸವನ್ನು ನಿಲ್ಲಿಸಲಿ, ಇಡೀ ಪಟ್ಟಣವೇ ಹಾಹಾಕಾರವೇಳುವುದು. ಆದರೆ ಯಾರೂ ಅವರ ಬಗ್ಗೆ ಕನಿಕರಿಸುವುದಿಲ್ಲ, ಅವರ ಕಷ್ಟಗಳಲ್ಲಿ ಸಂತೈಸುವವರಿಲ್ಲ... ಹಿಂದೂಗಳು ಸಹಾನುಭೂತಿ ತೋರದುದರ ಫಲವಾಗಿ ಮದ್ರಾಸಿನಲ್ಲಿ ಸಾವಿರಾರು ಜನ ಹೊಲೆಯರು ಕ್ರೈಸ್ತರಾಗುತ್ತಿದ್ದಾರೆ. ಇದಕ್ಕೆ ಕೇವಲ ಹಸಿವೇ ಮುಖ್ಯ ಕಾರಣವಲ್ಲ, ನಮ್ಮಿಂದ ಅವರಿಗೆ ಕೊಂಚವೂ ಸಹಾನುಭೂತಿ ದೊರಕದುದೇ ಇದಕ್ಕೆ ಕಾರಣ.

ಹಗಲೂ ರಾತ್ರಿ ನಾವು ಅವರಿಗೆ 'ಮುಟ್ಟಬೇಡಿ, ಮುಟ್ಟಬೇಡಿ' ಎಂದು ಕೂಗುತ್ತಿದ್ದೇವೆ. ದೇಶದಲ್ಲಿ ಕೊಂಚವಾದರೂ ಕನಿಕರ, ಸಹಾನುಭೂತಿ ಉಳಿದಿರುವುದೇನು ! ಮುಟ್ಟಬೇಡಿ ಎಂಬ ಒಂದು ಪಂಗಡದ ಜನ ಅಂತಹ ಪದ್ಧತಿಯನ್ನೆಸೆದಿದ್ದಾರೆ. ಒಮ್ಮೊಮ್ಮೆ ನನಗೆ ಈ 'ಮುಟ್ಟಬೇಡಿ' ಎಂಬ ಧರ್ಮದ ಎಲ್ಲೆಯನ್ನು ಕತ್ತರಿಸಿ ಹೊರಗೆ ನಿಂತು ಎಲ್ಲರಿಗೂ 'ಯಾರು ಬಡವರೋ, ದುಃಖಿಗಳೋ, ದೀನರೋ, ದಲಿತರೋ, ಎಲ್ಲರೂ ಬನ್ನಿ' ಎಂದು ಕರೆದು ಎಲ್ಲರನ್ನೂ ಶ್ರೀ ರಾಮಕೃಷ್ಣರ ಹೆಸರಿನಲ್ಲಿ ಒಂದುಗೂಡಿಸಬೇಕೆನ್ನಿಸುವುದು. ಇವರಿಗೆಲ್ಲಾ ಹೊಟ್ಟೆಬಟ್ಟೆಗಾಗುವಷ್ಟನ್ನೂ ನಾವು ಮಾಡಲಾರದೆ ಹೋದೆವು ! ನಾವೇನು ಮಾಡಿದ್ದೇವೆ ? ಅಯ್ಯೋ, ಇವರಿಗೆ ಪ್ರಾಪಂಚಿಕತೆ ಎಂಬುದೇ ಗೊತ್ತಿಲ್ಲ, ಅದಕ್ಕೆ ರಾತ್ರಿ ಹಗಲೂ ದುಡಿದರೂ ಸಾಕಾಗುವಷ್ಟು ಅಹಾರ ಬಟ್ಟೆ ಹೊಂದಲು ಶಕ್ತರಾಗಿಲ್ಲ.

ನಾವು ಅವರು ಕಣ್ತೆರೆಯುವಂತೆ ಮಾಡೋಣ... ಇಡೀ ದೇಹದಲ್ಲೆಲ್ಲಾ ರಕ್ತ ಸಂಚರಿಸದ ಹೊರತು ಯಾವ ದೇಶ ಯಾವ ಕಾಲದಲ್ಲಿ ಮುಂದುವರೆದಿದೆ? ಒಂದು ಅಂಗಕ್ಕೆ ಪಾರ್ಶ್ವ ವಾಯು ಬಂದರೆ ಉಳಿದ ಎಲ್ಲಾ ಅಂಗಗಳು ಸರಿಯಾಗಿದ್ದರೂ ಆ ದೇಹದಿಂದ ಹೆಚ್ಚೇನೂ ಮಾಡಲಾಗುವುದಿಲ್ಲ, ಇದನ್ನು ಚೆನ್ನಾಗಿ ತಿಳಿ.

ನಮ್ಮ ಸಂಘವಿರುವುದು ಅನಾಥರಿಗೆ, ದೀನರಿಗೆ, ನಿರಕ್ಷರಸ್ಥರಾದ ಬೇಸಾಯಗಾರರಿಗೆ ಮತ್ತು ಕೂಲಿಕಾರರಿಗೆ ಮೊದಲು ಅವರಿಗೆ ಎಲ್ಲವನ್ನೂ ಮಾಡಿ ಆದಮೇಲೆ ಕಾಲ ಸಿಕ್ಕಿದರೆ ನಂತರ ಮೇಲು ವರ್ಗದವರಿಗೆ. ರೈತರು ಮತ್ತು ಕೂಲಿಯವರನ್ನು ಪ್ರೀತಿಯಿಂದ ಜಯಿಸಬಹುದು. ಅನಂತರ ಸ್ವಲ್ಪ ಹಣವನ್ನು ಚಂದಾ ಎತ್ತಿ ನಮ್ಮ ಹಳ್ಳಿಯಲ್ಲೇ ಸಂಘವನ್ನು ಸ್ಥಾಪಿಸುವವರಾಗುವರು. ಕ್ರಮೇಣ ಅವರ ಗುಂಪಿನಿಂದಲೇ ಪ್ರಚಾರಕರು ಕೂಡ ಮುಂದೆ ಬರುವರು.

ರೈತಾಪಿ ಜನರ ಕೆಲವು ಬಾಲಕ ಬಾಲಕಿಯರಿಗೆ ಸ್ವಲ್ಪ ಓದು ಬರಹವನ್ನು ಕಲಿಸಿ ಅವರ ತಲೆಗೆ ಕೆಲವು ಮಹತ್ತರವಾದ ವಿಷಯಗಳನ್ನು ತುಂಬಿ, ಅನಂತರ ಪ್ರತಿ ಹಳ್ಳಿಯ ರೈತರೂ ಕೂಡ ಚಂದಾ ಎತ್ತಿ ತಮ್ಮ ಹಳ್ಳಿಯಲ್ಲೇ ಇಂತಹ ಒಂದು ಶಾಲೆಯನ್ನು ತೆರೆಯುವರು. ತನ್ನಿಂದ ತಾನೇ ಉದ್ಧಾರವಾಗಬೇಕು. ಇದು ಎಲ್ಲಾ ಕ್ಷೇತ್ರದಲ್ಲೂ ಸಲ್ಲುತ್ತದೆ.

ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದು ಉಚಿತ ಪಾಠಶಾಲೆಯನ್ನು ತೆರೆಯುವುದಕ್ಕೆ ಸಾಧ್ಯವಾದರೂ ಕೂಡ, ಬಡಹುಡುಗರು ತಮ್ಮ ಜೀವನೋಪಾಯಕ್ಕೆ ಹೊಲಕ್ಕೆ ಹೋಗುವರೇ ಹೊರತು ಶಾಲೆಗೆ ಕಲಿಯಲು ಬರುವುದಿಲ್ಲ, ನಮ್ಮಲ್ಲಿ ಹಣವೂ ಇಲ್ಲ ಅಥವಾ ಅವರನ್ನು ವಿದ್ಯಾಭ್ಯಾಸಂಗಕ್ಕೆ ಬರುವಂತೆ ಮಾಡಲೂ ಆಗುವುದಿಲ್ಲ, ಸಮಸ್ಯೆ ಕಠಿಣವಾಗಿದೆ. ನನಗೆ ಒಂದು ದಾರಿ ತೋರಿದೆ. ಅದೇ ಇದು. ಮಹಮ್ಮದನ ಸಮೀಪಕ್ಕೆ ಬೆಟ್ಟ ಬಾರದೇ ಇದ್ದರೆ, ಬೆಟ್ಟದ ಸಮೀಪಕ್ಕೆ ಮಹಮ್ಮದನು ಬರಬೇಕು. ಬಡವರು ವಿದ್ಯಾಭ್ಯಾಸಂಗಕ್ಕೆ ಶಾಲೆಗೆ ಬರದೇ ಇದ್ದರೆ, ವಿದ್ಯಾಭ್ಯಾಸಂಗ ಅವರು ಉಳುವಲ್ಲಿ, ಕಾರ್ಖಾನೆಯಲ್ಲಿ, ಬೇರೆ ಕಡೆ ಕೆಲಸ ಮಾಡುವ ಕಡೆಗಳಲ್ಲಿ, ಅವರು ಎಲ್ಲಿದ್ದರೆ ಅಲ್ಲಿ ಹೋಗುವಂತೆ ಮಾಡಬೇಕು. ಇದು ಹೇಗೆ ಸಾಧ್ಯ ? ನೀವು ನನ್ನ ಗುರುಭಾಯಿಗಳನ್ನು ನೋಡಿರುವಿರಿ. ಅಂತಹ ನಿಸ್ವಾರ್ಥಪರರೂ, ವಿದ್ಯಾವಂತರೂ, ಶೀಲವಂತರೂ ಆದ ನೂರಾರು ಮಂದಿ ಭರತ ಖಂಡದಲ್ಲಿ ಸಿಕ್ಕುವರು. ಇಂತಹ ಯುವಕರು ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಮಾಡಲಿ. ಪ್ರತಿಯೊಬ್ಬನ ಮನೆಯ ಬಾಗಿಲಿಗೆ ಧರ್ಮವನ್ನು ಮಾತ್ರವಲ್ಲ, ವಿದ್ಯೆಯನ್ನೂ ಹಂಚಲಿ. ಹೆಂಗಸರಿಗೆ ಶಿಕ್ಷಣ ಕೊಡುವುದಕ್ಕಾಗಿ ವಿಧವೆಯರಿಗೆ ತರಬೇತು ಕೊಡುವ ಒಂದು ಕೇಂದ್ರವೂ ನಮ್ಮಲ್ಲಿದೆ.

ತಮ್ಮ ದಿವಸದ ಕೆಲಸವಾದ ಮೇಲೆ ಗ್ರಾಮಸ್ಥರು ಬಂದು ಒಂದು ಮರದ ಕೆಳಗೋ ಎಲ್ಲೋ ಕುಳಿತು ಬೀಡಿ ಸೇದುತ್ತಾ ಕಾಡುಹರಟೆ ಹೊಡೆಯುತ್ತಾ ಕಾಲವನ್ನು ಕಳೆಯುವರು. ವಿದ್ಯಾವಂತರಾದ ಇಬ್ಬರು ಸನ್ಯಾಸಿಗಳು ಅಂತಹ ಜನಗಳ ಹತ್ತಿರ ಹೋಗಿ ಮಾಯಾಲಾಂದ್ರದ ಮೂಲಕ, ಭೂಗೋಳ, ಚರಿತ್ರೆ ಮುಂತಾದುವುಗಳಿಂದ ಚಿತ್ರವನ್ನು ತೋರಿಸಬೇಕು. ಗೋಳಗಳು, ಭೂಪಟಗಳು ಮತ್ತು ಇನ್ನೂ ಇಂತಹ ಸಲಕರಣೆಗಳ ಮೂಲಕ ಬರಿಯ ಬಾಯಿ ಮಾತಿನಲ್ಲಿ ಎಷ್ಟೋ ಕೆಲಸ ಮಾಡಬಹುದು. ದಿವಾನ್ ಸಾಹೇಬರೆ! ಜ್ಞಾನಕ್ಕೆ ಕಣ್ಣೊಂದೆ ಬಾಗಿಲಲ್ಲ, ಕಿವಿಯಿಂದ ಕೇಳಿಯೂ ಜ್ಞಾನವನ್ನು ಶೇಖರಿಸಬಹುದು. ಇವುಗಳಿಂದ ಅವರಿಗೆ ವಿಷಯ ಸಂಗ್ರಹವಾಗುತ್ತದೆ. ನೀತಿ ಎಂದರೆ ಏನು ? ಇದರಿಂದ ಮುಂದೆ ಉತ್ತಮರಾಗಬಹುದೆಂಬ ನಂಬಿಕೆ ಹುಟ್ಟುತ್ತದೆ. ಇಲ್ಲಿಗೆ ನಮ್ಮ ಕೆಲಸ ಮುಗಿಯುತ್ತದೆ. ಉಳಿದುದನ್ನು ಅವರೇ ಮಾಡಲಿ. ಇಂತಹ ಒಂದು ತ್ಯಾಗ ಮಾಡುವುದಕ್ಕೆ, ಇಂತಹ ಒಂದು ಮಹಾಕಾರ್ಯಕ್ಕೆ ಸನ್ಯಾಸಿಗಳನ್ನು ಯಾವುದು ಪ್ರೇರೇಪಿಸುವುದು ? ಧಾರ್ಮಿಕ ಉತ್ಸಾಹ.

ಕನ್ಯಾಕುಮಾರಿಯಲ್ಲಿ ಭರತವರ್ಷದ ಕೊನೆಯ ಕಲ್ಲುಬಂಡೆಯ ಮೇಲೆ ಕುಳಿತಾಗ ನನಗೆ ಒಂದು ಆಲೋಚನೆ ಹೊಳೆಯಿತು. ನಮ್ಮಂತೆ ಅನೇಕ ಸನ್ಯಾಸಿಗಳು ಸಂಚಾರ ಮಾಡುತ್ತ ಜನರಿಗೆ ತತ್ವ ಬೋಧನೆಯನ್ನು ಮಾಡುತ್ತೇವೆ, ಅಲ್ಲವೆ ! ಇದೆಲ್ಲ ಹುಚ್ಚುತನ ! 'ಹಸಿದವರಿಗೆ ಧರ್ಮ ಹಿಡಿಯದು' ಎಂದು ನಮ್ಮ ಗುರುದೇವನು ಹೇಳುತ್ತಿರಲಿಲ್ಲವೆ! ಬಡವರು ಪಶುಗಳಂತೆ ಜೀವಿಸುತ್ತಿರುವರು. ಇದಕ್ಕೆ ಅಜ್ಞಾನವೇ ಕಾರಣ. ಅನೇಕ ಶತಮಾನಗಳಿಂದ ನಾವು ಅವರ ರಕ್ತವನ್ನು ಹೀರುತ್ತಿರುವೆವು. ಅವರನ್ನು ಕಾಲಿನಿಂದ ತುಳಿಯುತ್ತಿರುವೆವು.

ಪರಹಿತವನ್ನು ಬಯಸುವ, ಸ್ವಾರ್ಥ ಶೂನ್ಯರಾದ ಕೆಲವು ಸನ್ಯಾಸಿಗಳು ಗ್ರಾಮಸಂಚಾರ ಹೊರಟು, ವಿದ್ಯಾ ಪ್ರಚಾರ ಮಾಡುತ್ತಾ ಭೂಪಟ, ಕೃತಕಗೋಳ ಇವೇ ಮೊದಲಾದ ಉಪಕರಣಗಳ ಮೂಲಕ, ಉತ್ತಮರಿಂದ ಹಿಡಿದು ಚಂಡಾಲರವರೆಗೆ ತಿಳಿವಳಿಕೆಯನ್ನು ಹರಡುತ್ತ ಸಕಲರ ಮೇಲ್ಮೆಗಾಗಿ ಪ್ರಯತ್ನ ಪಟ್ಟಲ್ಲಿ ಅದರಿಂದ ಕಾಲಾನುಕಾಲಕ್ಕೆ ಕಲ್ಯಾಣ ಉಂಟಾಗುವುದು.

ಭರತಖಂಡದ ಜನರು ದುಡ್ಡನ್ನು ಖರ್ಚು ಮಾಡುತ್ತಾರೆಂದು ತಿಳಿದಿರುವಿರೇನು ? ಸ್ವಾರ್ಥಮೂರ್ತಿಗಳು ಅವರು. ಏನಾದರೂ ಖರ್ಚು ಮಾಡುವರೆ? ಅದಕ್ಕೋಸ್ಕರವೇ ನಾನೇ ಹಣವನ್ನು ಸಂಪಾದನೆ ಮಾಡುವುದಕ್ಕಾಗಿ ಅಮೆರಿಕಾ ದೇಶಕ್ಕೆ ಬಂದಿರುವೆನು.

ದಿವಾಳಿಯಾದ ಸರ್ಕಾರ ಯಾವುದನ್ನೂ ಮಾಡಲಾರದು. ಮತ್ತು ಶಕ್ಯವಿದ್ದರೂ ಮಾಡುವುದಿಲ್ಲ. ಆದ ಕಾರಣ ಅಲ್ಲಿಂದ ಯಾವ ಸಹಾಯವನ್ನೂ ನಿರೀಕ್ಷಿಸಬೇಡಿ. ಪೂಜೆಯ ಖರ್ಚನ್ನೂ ತಿಂಗಳಿಗೆ ಎರಡು ರೂಪಾಯಿಗಳಿಗೆ ಇಳಿಸು. ಜನರು ಉಪವಾಸದಿಂದ

ನರಳುತ್ತಿರುವರು. ನೀರು ಮತ್ತು ತುಳಸಿದಳದಿಂದ ಮಾತ್ರ ಪೂಜಿಸು. ದೇವರ ನೈವೇದ್ಯಕ್ಕೆ ಕೊಡುವ ಹಣ್ಣನ್ನು ದೀನನಲ್ಲಿರುವ ಜೀವಂತ ದೇವರಿಗೆ ಕೊಡಿ. ಆಗ ಅವನ ದಯೆ ಎಲ್ಲರ ಮೇಲೂ ಬರುವುದು.

ಹಣವಂತರು ರಾಜ ಶಾಸನವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುವರು. ಪ್ರಜೆಗಳನ್ನು ಲೂಟಿ ಮಾಡಿ ಅವರ ರಕ್ತವನ್ನು ಹೀರುತ್ತಿರುವರು. ಜನಗಳನ್ನು ಸಿಪಾಯಿಗಳಂತೆ ದೇಶದೇಶಾಂತರಗಳಿಗೆ ಸಾಯುವುದಕ್ಕೆ ಕಳುಹಿಸುವರು. ಅವರು ಗೆದ್ದರೆ ಜೀತರಾಷ್ಟ್ರಗಳಿಂದ ಬರುವ ಧನ ಧಾನ್ಯ ಇವರಿಗೆ ದೊರಕುವುದು. ಆದರೆ ಆಶ್ರಿತ ರಾಷ್ಟ್ರಗಳು! ಅವರ ಹಣೆಯ ಬರಹವೆ ಸಾಯುವುದು. ಮಿತ್ರರೇ! ನೀವು ಗಾಬರಿಯಾಗಬೇಡಿ. ಆಶ್ಚರ್ಯಚಕಿತರಾಗಬೇಡಿ.

ಈ ಒಂದು ವಿಚಾರವನ್ನು ಆಲೋಚಿಸಿ ನೋಡಿ. ಮನುಷ್ಯನು ನಿಯಮವನ್ನು ಮಾಡುವನೋ ಅಥವಾ ನಿಯಮ ಮನುಷ್ಯನನ್ನು ಮಾಡುವುದೋ ? ಮನುಷ್ಯ ಹಣವನ್ನು ಮಾಡುವನೋ ಅಥವಾ ಹಣ ಮನುಷ್ಯನನ್ನು ಮಾಡುವುದೋ ? ಮನುಷ್ಯ ಕೀರ್ತಿಗೌರವಗಳನ್ನು ಗಳಿಸುತ್ತಾನೆಯೋ ಅಥವಾ ಕೀರ್ತಿಗೌರವಗಳು ಮನುಷ್ಯನನ್ನು ಮಾಡುವವೋ ?

ಮಿತ್ರರೆ, ಮೊದಲು ಮನುಷ್ಯರಾಗಿ. ಆಗ ಉಳಿದುದೆಲ್ಲ ನಿಮ್ಮನ್ನು ಅನುಸರಿಸುವುದನ್ನು ನೋಡುವಿರಿ. ಪರಸ್ಪರ ದ್ವೇಷಾಸೂಯೆಯನ್ನು ತೊರೆದು ಸದುದ್ದೇಶ, ಸದುಪಾಯ, ಸತ್ ಸಹಾಯ ಮತ್ತು ಸತ್‌ವೀರ್ಯವನ್ನು ಅವಲಂಬಿಸಿ. ನೀವು ಮನುಷ್ಯರಾಗಿ ಹುಟ್ಟಿದ ಮೇಲೆ ಯಾವುದಾದರೂ ಕೀರ್ತಿಯನ್ನು ಇಲ್ಲಿ ಬಿಟ್ಟು ಹೋಗಿ.

ಒಮ್ಮೆ ನಾನು ಆಗ್ರಾದಿಂದ ಪೂನಾಕ್ಕೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದೆ. ನನ್ನಲ್ಲಿ ಒಂದು ಬಿಡಿಗಾಸೂ ಇರಲಿಲ್ಲ. ಬೃಂದಾವನಕ್ಕೆ ಇನ್ನೂ ಒಂದೆರಡು ಮೈಲಿ ದೂರವಿತ್ತು. ಹಾದಿಯ ಪಕ್ಕದಲ್ಲಿ ಒಬ್ಬ ಮನುಷ್ಯ ಗುಡಿ ಗುಡಿ ಸೇದುತ್ತಾ ಕುಳಿತಿದ್ದ. ಆ ತಕ್ಷಣ ನನಗೂ ಸೇದಬೇಕೆಂಬ ಆಸೆಯಾಯಿತು. ನಾನು ಆ ಮನುಷ್ಯನಿಗೆ 'ನಿನ್ನ ಚಿಲುಮೆಯಲ್ಲಿ ಒಮ್ಮೆ ಸೇದಲು ನನಗೆ ಅವಕಾಶ ಕೊಡುವೆಯಾ ?' ಎಂದೆ. ಆ ಮನುಷ್ಯ ನನಗೆ ಅದನ್ನು ಕೊಡಲು ತುಂಬಾ ಹಿಂಜರಿಯುತ್ತಾ 'ನಾನು ಜಲಗಾರ' ಎಂದ. ಇನ್ನೂ ನನ್ನಲ್ಲಿ ಹಿಂದಣ ಸಂಸ್ಕಾರದ ಪ್ರಭಾವವಿತ್ತು- ನಾನು ತಕ್ಷಣ ಹಿಂದೆ ಸರಿದು ಸೇದದೆ ಮುಂದಕ್ಕೆ ಹೊರಟೆ.

ಕೊಂಚ ದೂರ ಹೋಗುವಷ್ಟರಲ್ಲಿಯೇ ನನಗೆ ನೆನಪಿಗೆ ಬಂತು. ನಾನೊಬ್ಬ ಸನ್ಯಾಸಿ, ಜಾತಿ, ಮತ, ಸಂಸಾರ, ಗೌರವ ಎಲ್ಲವನ್ನೂ ತ್ಯಜಿಸಿದವನು. ಆದರೂ ಆ ಮನುಷ್ಯ ಗುಡಿಸುವ ಜಾಡಮಾಲಿ ಎಂದ ಕೂಡಲೇ ಹಿಂದಕ್ಕೆ ಸರಿದೆ. ಅವನು ಮುಟ್ಟಿದ ಗುಡಿಗುಡಿಯನ್ನು ಸೇದದೆ ಹೊರಟು ಬಂದೆ ಎಂಬುದು ನೆನಪಿಗೆ ಬಂದಿತು. ಈ ಯೋಚನೆ ನನ್ನ ಮನಸ್ಸನ್ನು ಕ್ಷುಬ್ಧಗೊಳಿಸಿತು. ನಾನಾಗಲೇ ಅರ್ಧ ಮೈಲಿ ದೂರ ಬಂದಿದ್ದೆ. ಪುನಃ ನಾನು, ಹಿಂತಿರುಗಿ ಆ ಜಲಗಾರನಿದ್ದಲ್ಲಿಗೆ ಬಂದೆ. ಅವನಿನ್ನೂ ಅಲ್ಲಿಯೇ ಕುಳಿತಿದ್ದ. ನಾನು ತಕ್ಷಣ ಅವನಿಗೆ 'ನನ್ನ ಪ್ರಿಯ ಗೆಳೆಯ, ದಯವಿಟ್ಟು ನನಗೊಂದು ಗುಡಿಗುಡಿಯನ್ನು ಸಿದ್ಧಪಡಿಸು' ಎಂದೆ. ಅವನು ಏನೇನು ಅಡ್ಡಿಗಳನ್ನು ಹೇಳಿದರೂ ಕೇಳದೆ ಅದನ್ನು ಕೊಟ್ಟೇ ತೀರಬೇಕೆಂದು ಹಠ ಹಿಡಿದೆ. ಆತ ನನಗೆ ಚಿಲುಮೆಯನ್ನು ಸಿದ್ಧಪಡಿಸಲೇಬೇಕಾಗಿ ಬಂತು. ನಂತರ ನಾನು ಸಂತೋಷದಿಂದ ಆ ಚಿಲುಮೆಯನ್ನು ಸೇದಿ ಬೃಂದಾವನಕ್ಕೆ ಹೊರಟೆ.

ಬಡವರಲ್ಲಿ ಅನುತಾಪವನ್ನೂ, ಹಸಿದ ಹೊಟ್ಟೆಗೆ ಹಿಟ್ಟನ್ನೂ ಜನ ಸಾಮಾನ್ಯಕ್ಕೆ ತಿಳಿವಳಿಕೆಯನ್ನು ಕೊಡುವಂತಹ ನೂತನ ಸಂಸ್ಥೆಯನ್ನು ಉಂಟುಮಾಡುವುದಕ್ಕಾಗಿಯೂ ನಿಮ್ಮ ಪೂರ್ವಿಕರ ಕಿರುಕುಳದಿಂದ ಪಶು ಸಮಾನಕ್ಕೆ ಇಳಿದವರನ್ನು ಮಾನವರನ್ನಾಗಿ ಮಾಡುವುದಕ್ಕಾಗಿಯೂ, ಪ್ರಾಣ ಹೋಗುವವರೆವಿಗೂ ಹಿಂಜರಿಯದೆ ಹೋರಾಡುವ. ಎಂದು ಹೃದಯದಲ್ಲಿ ಮಹಾವೇದನೆ ಉಂಟಾಗುವುದೋ, ಎಂದು ನಾಲ್ಕು ದಿಕ್ಕುಗಳಲ್ಲಿಯೂ ದುಃಖವೆಂಬ ಬಿರುಗಾಳಿ ಎದ್ದು ಬೀಸುವುದೋ, ಎಂದು ಬೆಳಕು ಕಾಣದೆ ಹೋಗುವಂತೆ ತೋರುವುದೋ, ಎಂದು ಆಸೆ ಮತ್ತು ಧೈರ್ಯ ಬತ್ತಿಹೋದಂತಿರುವುದೋ ಆಗ ತಾನೆ ಈ ಮಹಾ ಆಂತರಿಕ ಸ್ಫೂರ್ತಿ ಮಿನುಗುವುದು.

ಉಚ್ಚಜಾತಿ ತನ್ನ ಸಮಾಧಿಗೆ ತಾನೇ ಸಿದ್ಧವಾಗಬೇಕು. ಅದು ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು. ಕಾಲವಿಳಂಬ ಮಾಡಿದಷ್ಟೂ ಕೊಳೆಯುವುದು. ಅಷ್ಟು ಭಯಂಕರವಾಗುವುದು ಅದರ ಕೊನೆಗಾಲ. ಭರತಖಂಡದಲ್ಲಿ ಇತರರ ಮುಕ್ತಿಗೆ ಕೆಲಸಮಾಡುವುದು ಬ್ರಾಹ್ಮಣರ ಕರ್ತವ್ಯ. ಅವರು ಅದನ್ನು ಮಾಡಿದರೆ ಬ್ರಾಹ್ಮಣರು. ಮಾಡದೆ ಹೋದರೆ ಅವರು ಬ್ರಾಹ್ಮಣರಲ್ಲ.. ನೀವು ಈ ವಿಚಾರದಲ್ಲಿ ಜೋಪಾನವಾಗಿರಬೇಕು. ದ್ರವ್ಯಾರ್ಜನೆಯ ವೃತ್ತಿ ಯಾರಿಗೆ ಇಲ್ಲವೋ ಅವನೇ ಬ್ರಾಹ್ಮಣ.

ಹಲವು ಶತಮಾನಗಳಿಂದ ಸಂಗ್ರಹಿಸಿಟ್ಟ ಸಾಂಸ್ಕೃತಿಕ ನಿಧಿಗೆ ಬ್ರಾಹ್ಮಣ ಈಗ ರಕ್ಷಕನಾಗಿರುವನು. ಅದನ್ನು ಅವನು ಈಗ ಎಲ್ಲರಿಗೂ ದಾನಮಾಡಬೇಕು. ಅವನು ಜನರಿಗೆ ಕೊಡದೆ ಇದ್ದ ಕಾರಣ ಮಹಮ್ಮದೀಯರ ದಾಳಿ ಸಾಧ್ಯವಾಯಿತು. ಅವನು ಈ ಅನರ್ಘ್ಯ ರತ್ನರಾಶಿಯನ್ನು ಮೊದಲಿನಿಂದ ಜನರಿಗೆ ಕೊಡದ ಕಾರಣ ಕಳೆದ ಒಂದು ಸಾವಿರ ವರ್ಷದಿಂದಲೂ ಭರತಖಂಡಕ್ಕೆ ಬಂದ ಎಲ್ಲರ ಗುಲಾಮರಾಗಿರುವೆವು ನಾವು. ಇದರಿಂದಲೇ ನಾವು ಅಧೋಗತಿಗೆ ಬಂದುದು. ನಮ್ಮ ಪೂರ್ವಿಕರು ಸಂಗ್ರಹಿಸಿಟ್ಟ ಅನರ್ಘ್ಯರತ್ನರಾಶಿ ಇರುವ ಗುಹೆಯನ್ನು ಭೇದಿಸಿ ಹೊರಗೆ ತೆಗೆದು ಎಲ್ಲರಿಗೂ ದಾನಮಾಡುವುದು ನಮ್ಮ ಪ್ರಥಮ ಕರ್ತವ್ಯ.

ಭರತಖಂಡದ ದುರ್ದೆಶೆಗೆ, ಅವನತಿಗೆ ಮುಖ್ಯಕಾರಣ ಜನಾಂಗ ಕೂಪ ಮಂಡೂಕದಂತೆ ಸಂಕುಚಿತವಾದುದು... ಆಧ್ಯಾತ್ಮಿಕ ಪಿಪಾಸೆಯಿಂದ ನರಳುತ್ತಿರುವ ಅನಾರ್ಯರಿಗೆ ಜೀವದಾನ ಮಾಡುವಂತಹ ಅಮೃತವನ್ನು ಧಾರೆ ಎರೆಯಲಿಲ್ಲ. ನಾವು ಹೊರಗೆ ಹೋಗಲಿಲ್ಲ. ಇತರ ರಾಷ್ಟ್ರಗಳೊಂದಿಗೆ ಹೋಲಿಸಿ ನೋಡಲಿಲ್ಲ. ಇದೊಂದು ನಮ್ಮ ದೇಶದ ಅವನತಿಗೆ ಮುಖ್ಯ ಕಾರಣ... ಭರತಖಂಡದ ಹೊರಗೆ ನಮ್ಮ ಅತ್ಯಮೂಲ್ಯ ಧನಕ್ಕಾಗಿ ಜನರೆಷ್ಟು ಕಾತರಿಸುತ್ತಿರುವರು ಎಂಬುದು ನಿಮಗೆ ಗೊತ್ತಿಲ್ಲ. ನಾವಿಲ್ಲಿ ಬರೀ ಮಾತನಾಡುತ್ತೇವೆ; ಜಗಳ ಕಾಯುತ್ತೇವೆ. ಪವಿತ್ರವಾದುದನ್ನೆಲ್ಲ ಅಣಕಿಸುತ್ತೇವೆ. ಪರಮಪೂಜ್ಯ ವಸ್ತುವನ್ನು ಅಣಕಿಸುವುದೊಂದು ಜನಾಂಗದ ಬಾಳಿನ ಚಾಳಿಯಾಗಿ ಹೋಗಿದೆ. ನಾವು ಹೊರಗೆ ಹೋಗಬೇಕು. ಆಧ್ಯಾತ್ಮಿಕ ವಿದ್ಯೆಯನ್ನು ಅವರಿಗೆ ಕೊಟ್ಟು ಅವರ ವಿದ್ಯೆಯನ್ನು ನಾವು ಕಲಿಯುವ.

ಪಾಶ್ಚಾತ್ಯ ಜನಾಂಗದ ಸಹಾಯವಿಲ್ಲದೆ ನಾವು ಮುಂದೆ ಬರಲಾರೆವೆಂಬುದು ಅನೇಕ ಕಾಲದಿಂದ ಬೇರೂರಿದ ನನ್ನ ದೃಢಮತ. ಈ ದೇಶದಲ್ಲಿ ಯೋಗ್ಯತೆಗೆ ಪುರಸ್ಕಾರ ಮಾಡುವವರು ಇನ್ನೂ ಸಿಕ್ಕಿಲ್ಲ. ಯಾವ ಧನ ಸಹಾಯವೂ ಇಲ್ಲ. ಎಲ್ಲಕ್ಕಿಂತ ಬಹಳ ಶೋಚನೀಯವಾದುದು ಯಾವುದೆಂದರೆ ಸ್ವಲ್ಪವಾದರೂ ಕಾರ್ಯತಃ ಬುದ್ಧಿ ಓಡದು- ಒಂದು ಕಡೆ ಪೂರ್ವಾಚಾರ ಪರಾಯಣರಿಂದ ತುಂಬಿದ ಸಮಾಜ ಜಡವಸ್ತುವಿನ ರಾಶಿಯಂತಿದೆ. ಮತ್ತೊಂದು ಕಡೆ ಅವಿಚಾರಿಗಳಾದ, ದುಡುಕುವ, ಬೆಂಕಿಯ ಚೂರನ್ನು ಕಾರುವ ಸಮಾಜ ಸುಧಾರಕರು ಇರುವರು. ಹಿತಕ್ಕೆ ಹಾದಿ ಇವುಗಳ ಮಧ್ಯದಲ್ಲಿದೆ- ನೂರಾರು ಜನ ಸ್ತ್ರೀ ಪುರುಷರು ಜೀವನದ ಸುಖವನ್ನು ಅನುಭವಿಸಬೇಕೆಂಬ ಆಸೆಯೆಲ್ಲವನ್ನೂ ತೊರೆದು ಬಡತನ ಅಜ್ಞಾನ ಕೂಪದಲ್ಲಿ ದಿನ ಕಳೆದಂತೆಲ್ಲಾ ಆಳ ಆಳಕ್ಕೆ ಮುಳುಗುತ್ತಿರುವ ಅವರಿಗೆ ಲಕ್ಷಾಂತರ ಜನ ತಮ್ಮ ನಾಡಿನವರ ಹಿತಕ್ಕೋಸ್ಕರವಾಗಿ ಆತುರರಾಗಿ ಕೈಲಾದಮಟ್ಟಿಗೆ ಕಷ್ಟಪಡುವರೋ, ಆಗ ಮಾತ್ರ ಭರತಖಂಡ ಮೇಲೇಳುವುದು.

ಬಡವರಲ್ಲಿ ಅನುತಾಪವನ್ನೂ, ಹಸಿದ ಹೊಟ್ಟೆಗೆ ಹಿಟ್ಟನ್ನೂ ಜನ ಸಾಮಾನ್ಯಕ್ಕೆ ತಿಳಿವಳಿಕೆಯನ್ನು ಕೊಡುವಂತಹ ನೂತನ ಸಂಸ್ಥೆಯನ್ನು ಉಂಟುಮಾಡುವುದಕ್ಕಾಗಿಯೂ ನಿಮ್ಮ ಪೂರ್ವಿಕರ ಕಿರುಕುಳದಿಂದ ಪಶು ಸಮಾನಕ್ಕೆ ಇಳಿದವರನ್ನು ಮಾನವರನ್ನಾಗಿ ಮಾಡುವುದಕ್ಕಾಗಿಯೂ, ಪ್ರಾಣ ಹೋಗುವವರೆವಿಗೂ ಹಿಂಜರಿಯದೆ ಹೋರಾಡುವ.

ಎಂದು ಹೃದಯದಲ್ಲಿ ಮಹಾವೇದನೆ ಉಂಟಾಗುವುದೋ, ಎಂದು ನಾಲ್ಕು ದಿಕ್ಕುಗಳಲ್ಲಿಯೂ ದುಃಖವೆಂಬ ಬಿರುಗಾಳಿ ಎದ್ದು ಬೀಸುವುದೋ, ಎಂದು ಬೆಳಕು ಕಾಣದೆ ಹೋಗುವಂತೆ ತೋರುವುದೋ, ಎಂದು ಆಸೆ ಮತ್ತು ಧೈರ್ಯ ಬತ್ತಿಹೋದಂತಿರುವುದೋ ಆಗ ತಾನೆ ಈ ಮಹಾ ಆಂತರಿಕ ಸ್ಫೂರ್ತಿ ಮಿನುಗುವುದು. ಸುಖದಲ್ಲಿ ಹುಟ್ಟಿ ಹಂಸತೂಲಿಕಾತಲ್ಪದ ಮೇಲೆ ಮಲಗಿ, ಒಂದು ತೊಟ್ಟು ಕಣ್ಣೀರನ್ನೂ ಸುರಿಸದೆ, ಯಾರು ಬೆಳೆದು ದೊಡ್ಡವರಾಗಿರುವರು ?

ಜಗಳ ಕಾಯುವುದು, ಒಬ್ಬರು ಮತ್ತೊಬ್ಬರನ್ನು ನಿಂದಿಸುವುದು ನಮ್ಮ ಜನಾಂಗದ ಚಾಳಿಯಾಗಿದೆ... ನಾವು ಸೋಮಾರಿಗಳು, ನಿಷ್ಪ್ರಯೋಜಕರು, ಅಶ್ಲೀಲ ಸ್ವಭಾವದವರು, ಅಸೂಯಾಪರರು, ಹೇಡಿಗಳು ಮತ್ತು ಜಗಳಗಂಟಿಗಳು... ಅಜ್ಞಾನ ಮತ್ತು ಕೆಟ್ಟತನವನ್ನು ನಾಶಮಾಡಲು ನಾವು ನಮ್ಮ ಶಕ್ತಿಮೀರಿ ಪ್ರಯತ್ನಿಸಬೇಕು. ಒಳ್ಳೆಯತನ ನಮ್ಮಲ್ಲಿ ವಿಕಾಸವಾದಂತೆ ಕೆಟ್ಟತನ ನಾಶವಾಗುವುದೆಂಬುದನ್ನು ಮಾತ್ರ ನಾವು ಕಲಿಯಬೇಕು.

ಜಪಾನು ನಮಗೆ ಕೊಡುವ ಸಹಾಯದ ಹಿಂದೆ ದೊಡ್ಡ ಗೌರವ ಮತ್ತು ಸಹಾನುಭೂತಿ ಇರುವುದು. ಆದರೆ ಪಾಶ್ಚಾತ್ಯ ದೇಶಗಳಿಂದ ಬರುವ ಸಹಾಯದಲ್ಲಿಯಾದರೋ ಸಹಾನುಭೂತಿ ಇಲ್ಲ, ಧ್ವಂಸಾತ್ಮಕವಾದುದು ಅದು. ಇಂಡಿಯಾ ಮತ್ತು ಜಪಾನುಗಳ ಮಧ್ಯದಲ್ಲಿ ಒಂದು ಸಂಬಂಧವನ್ನು ಬೆಳೆಸುವುದು ಬಹಳ ಔಚಿತ್ಯವಾಗಿದೆ.

ವೇದಾಂತದ ಆದರ್ಶವನ್ನು ಪಾಪಿ ಮತ್ತು ಪುಣ್ಯವಂತ, ಪಂಡಿತ ಮತ್ತು ಪಾಮರ, ಬ್ರಾಹ್ಮಣ ಮತ್ತು ಚಂಡಾಲ ಎಲ್ಲರ ಜೀವನದಲ್ಲಿಯೂ ಕಾರ್ಯಕಾರಿಯಾಗುವಂತೆ ಮಾಡುವುದೇ ನನ್ನ ಉದ್ದೇಶ. □

'SAMVADA' Kannada Monthly, JANUARY-2005 RNI-KAR KAN/2002/9246 CPMG/KA/BGW-706/2003-05

ಸಂವಾದ

ವಾರ್ಷಿಕ ವಿಶೇಷಾಂಕ

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ತನ್ನೆಲ್ಲಾ ಇತಿ-ಮಿತಿಗಳನ್ನು ಮೀರಿಯೂ ತಪ್ಪದೇ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆಗೆ ಇದು ಮೂರನೇ ವರ್ಷದ ಹುಟ್ಟುಹಬ್ಬ. ಈ ಸಂಭ್ರಮದ ನೆನಪಿನಲ್ಲಿ 'ಸಂವಾದ' ವಿಶೇಷಾಂಕವಾಗಿ ಹೊರಬರುತ್ತಿದೆ. ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ದಲಿತರು ಮತ್ತು ಶೂದ್ರರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುಸಂಸ್ಕೃತಿಯ ಜತೆಗೆ ಈ ನಾಡಿನ ರೈತರು, ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಪರಿಕಲ್ಪನೆಗಳ ಸವಾಲುಗಳನ್ನು ಕುರಿತ ಲೇಖನಗಳು 'ವಿಶೇಷಾಂಕ'ದಲ್ಲಿ ಇವೆ. ಖ್ಯಾತ ಲೇಖಕರ ಕಥೆ, ಕವನ, ಸಂದರ್ಶನ, ವಿಶ್ಲೇಷಣೆಗಳನ್ನು ಒಳಗೊಂಡ 'ಸಂವಾದ ವಿಶೇಷಾಂಕ'ವನ್ನು ನಿಮ್ಮದಾಗಿಸಿಕೊಳ್ಳಿ.

ನಿಮ್ಮ ಪ್ರತಿಗಳಿಗಾಗಿ ಇಂದೇ ಬರೆಯಿರಿ

'ಸಂವಾದ' ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 23287943, 9448048306 ಇ-ಮೇಲ್ : samvaada@yahoo.co.in